ಮಂಗಳೂರು
ಶನಿವಾರ, 27 ಜೂನ್ 2026
ಸಂಪುಟ 48, ಸಂಚಿಕೆ 100 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ವಂದೇಮಾತರಂ ಭಾರತದ ಶಕ್ತಿ: ಶಾ | 0೨
ಅವಕಾಶ ಸೃಷ್ಟಿಗೆ ಎಐ ಮಹತ್ವ: ಮೋದಿ | 0೨
ಬಂಗಾಳದಲ್ಲೂ ಎನಾಸಂ ಶೀಘ್ರ | 0೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಅನುರಾಧೆ

ದಿನದ ಮಾತು

ಅಪಾಯದ ಪರಿಸ್ಥಿತಿಯಲ್ಲಿ ತೋರಿಸುವ ಧೈರ್ಯವೇ ಅರ್ಧ ಗೆಲುವನ್ನು ತಂದು ಕೊಡುತ್ತದೆ.

▲ ನಾಣ್ಣುಡಿ

ವಿಶುದ್ಧ ಚಕ್ರ ಮತ್ತು ನಾಯಕತ್ವ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ನಿರ್ಲಕ್ಷ್ಯ ತೋರದಿರಿ | ಅಧಿಕಾರಿಗಳಿಗೆ ಸಿಎಂ ಖಡಕ್ ಸೂಚನೆ

ತೆರಿಗೆ ಸೋರಿಕೆ ನಿಲ್ಲಿಸಿ

• **ಬೆಂಗಳೂರು:** ಯಾವುದೇ ಸರಕು ಸಾಗಣೆ ವಾಹನವು ಅಗತ್ಯ ದಾಖಲೆಗಳಿಲ್ಲದೆ ಚೆಕ್‌ಪೋಸ್ಟ್ ಅಥವಾ ರಾಜ್ಯದ ಗಡಿಯನ್ನು ದಾಟಬಾರದು. ತೆರಿಗೆ ಸೋರಿಕೆಗೆ ಯಾವುದೇ ಅವಕಾಶ ಇರಬಾರದು. ಇದರಲ್ಲಿ ಯಾವುದೇ ರೀತಿಯ ರಾಜಿ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದರು. ನಾನು ಎಲ್ಲವನ್ನೂ ಗಮನಿಸುತ್ತಿದ್ದೇನೆ. ರಾಜ್ಯದ ಎಲ್ಲ ವಲಯಗಳಿಂದಲೂ ನನಗೆ ನಿರಂತರ ಮಾಹಿತಿ ಬರುತ್ತದೆ. ಚಿಕ್ಕಪೇಟೆಯಿಂದ ಗಾಂಧಿನಗರದವರೆಗೆ, ಗಡಿ ಜಿಲ್ಲೆ ಗಳಿಂದ ರಾಜ್ಯದ ಎಲ್ಲ ಭಾಗ ಗಳಲ್ಲೂ ನನ್ನದೇ ಆದ ಸಂಪರ್ಕಗಳಿವೆ.



ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪ ಅಥವಾ ನಿರ್ಲಕ್ಷ್ಯ ನಡೆದರೂ ಅದು ನನ್ನ ಗಮನಕ್ಕೆ ಬರುತ್ತದೆ. ಆದ್ದರಿಂದ ನನಗೆ ಬರುತ್ತಿರುವ ಮಾಹಿತಿಯೂ ನಿಮ್ಮ ಕಾರ್ಯಕ್ಷಮತೆಯ ವರದಿಯೂ ಒಂದಕ್ಕೊಂದು ಹೊಂದಿಕೆಯಾಗಬೇಕು ಎಂದರು.

ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್ ಹಾಗೂ ಆರ್ಥಿಕ ಇಲಾಖೆ ಅವರ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರು ಇಲಾಖೆಯ ಕಾರ್ಯ ಕ್ಷಮತೆ ಹೆಚ್ಚಿಸಲು ಹಲವು ಸಲಹೆಗಳನ್ನು ನೀಡಿದ್ದಾರೆ. ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ. ಅಧಿಕಾರಿಗಳ ಮೇಲೆ ನನಗೆ ಪೂರ್ತಿ ಭರವಸೆ ಇದೆ. ನೀವೆಲ್ಲಾ ನನ್ನ ನಿರೀಕ್ಷೆ ಈಡೇರಿಸಲು ಶ್ರಮಿಸುತ್ತೀರಿ ಎನ್ನುವ ವಿಶ್ವಾಸವೂ ಇದೆ ಎಂದರು.

> **ಒಂದೇ ಒಂದು ಸರಕು ಸಾಗಣೆ ವಾಹನ ಕೂಡ ಸೂಕ್ತ ಲೆಕ್ಕಪತ್ರ, ದಾಖಲೆ ಮತ್ತು ಸಂಪೂರ್ಣ ಅಕೌಂಟಬಿಲಿಟಿ ಇಲ್ಲದೆ ಚೆಕ್‌ಪೋಸ್ಟ್ ಅಥವಾ ರಾಜ್ಯದ ಗಡಿ ದಾಟಬಾರದು. ಇದು ನಮ್ಮ ಇಲಾಖೆಯ ಕಾರ್ಯವೈಖರಿಯ ಮೂಲ ತತ್ವವಾಗಬೇಕು.**
> ■ ಡಿ.ಕೆ.ಶಿವಕುಮಾರ್, ಸಿಎಂ



360 ಡಿಗ್ರಿ ದೃಷ್ಟಿಕೋನದಲ್ಲಿ ತೆರಿಗೆದಾರರನ್ನು ವಿಶ್ಲೇಷಿಸಿ

ಪಕ್ಕದ ರಾಜ್ಯಗಳ ವಾಣಿಜ್ಯ ತೆರಿಗೆ ಇಲಾಖೆ ಮತ್ತು ಜಾರಿ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯ ಸಾಧಿಸಿ. ಮಾಹಿತಿ ಹಂಚಿಕೆ ಮತ್ತು ಜಂಟಿ ಕಾರ್ಯಾಚರಣೆಗಳ ಮೂಲಕ ತೆರಿಗೆ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕು. ಇಂದು ನಮ್ಮ ಬಳಿ ಸುಮಾರು 12 ಲಕ್ಷ ತೆರಿಗೆದಾರರ ಮಾಹಿತಿಯಿದೆ. ತಂತ್ರಜ್ಞಾನ ಮತ್ತು ಡೇಟಾ ಅನಾಲಿಟಿಕ್ಸ್ ಮೂಲಕ ಅವರನ್ನು 360 ಡಿಗ್ರಿ ದೃಷ್ಟಿಕೋನದಲ್ಲಿ ವಿಶ್ಲೇಷಿಸುವ ಸಾಮರ್ಥ್ಯ ನಿಮಗಿದೆ. ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡರೆ ನಿಮಗೆ ನೀಡಿರುವ ಗುರಿ ಸಾಧಿಸುವುದಷ್ಟೇ ಅಲ್ಲ, ಅದನ್ನು ಮೀರಿಸುವ ಸಾಮರ್ಥ್ಯವೂ ನಿಮ್ಮಿಂದ ಸಾಧ್ಯವಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸಿ

ನಮ್ಮ ಉದ್ದೇಶ ಯಾರಿಗೂ ಅನಗತ್ಯ ತೊಂದರೆ ನೀಡುವುದಲ್ಲ. ಪ್ರಾಮಾಣಿಕ ತೆರಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತೆರಿಗೆ ಪಾವತಿಸುವ ಪ್ರತಿ ನಾಗರಿಕನನ್ನೂ ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಜತೆಗೆ ಇಲಾಖೆ ಸಿಬ್ಬಂದಿಯನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬುದ್ಧಿವಂತಿಕೆಯಿಂದ ಕಾರ್ಯನಿರ್ವಹಿಸಿದರೆ ಗುರಿ ಮೀರಿದ ಸಾಧನೆ ಸಾಧ್ಯ. ಆದರೆ ತೆರಿಗೆ ವಂಚನೆಗೆ ಮಾತ್ರ ಯಾವುದೇ ಅವಕಾಶ ಇರಬಾರದು. ತೆರಿಗೆ ಸೋರಿಕೆ ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮುಂದಿನ ಪರಿಶೀಲನಾ ಸಭೆ ನಡೆಯುವ ವೇಳೆಗೆ ಇಂದು ನಾನು ನೀಡಿರುವ ಪ್ರತಿ ಸೂಚನೆಯೂ ಜಾರಿಯಾಗಿರಬೇಕು. ಮುಂದಿನ ಸಭೆಯಲ್ಲಿ ನಾನು ಸ್ವತಃ ಅನೇಕ ನೈಜ ಉದಾಹರಣೆಗಳೊಂದಿಗೆ ನಿಮ್ಮ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತೇನೆ ಎಂದರು.

574 ಸನ್ನದುಗಳ ಇ-ಹರಾಜಿಗೆ ಸೂಚನೆ

ಹೊಸದಾಗಿ 574 ಸನ್ನದುಗಳನ್ನು ಇ-ಹರಾಜು ಹಾಕಲು ಅಧಿಕಾರಿಗಳಿಗೆ ಸೂಚಿಸಿದ್ದು, ಪರವಾನಗಿ ನವೀಕರಣ ಮೊತ್ತವನ್ನು ಎರಡು ಕಂತುಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಶುಕ್ರವಾರ ನಡೆದ ಅಬಕಾರಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ನೀವು ಘನತೆ ಉಳಿಸಿಕೊಂಡರೆ ಸರ್ಕಾರದ ಘನತೆ ಹೆಚ್ಚುತ್ತದೆ. ನೀವು ಸರ್ಕಾರದ ಘನತೆಗೆ ಧಕ್ಕೆ ತರುವ ಕೆಲಸ ಮಾಡಿದರೆ ನಾವು ನೋಡುತ್ತಾ ಕೂರುವುದಿಲ್ಲ. ➡ಪುಟ ೪

ಚಂಪತ್ ರಾಯ್, ಮಿಶ್ರಾ ರಾಜೀನಾಮೆ

ದೇಣಿಗೆ ದುರ್ಬಳಕೆ 8 ಆರೋಪಿಗಳ ಸೆರೆ

• **ಲಖನೌ:** ಅಯೋಧ್ಯೆಯ ರಾಮ ಮಂದಿರಕ್ಕೆ ಭಕ್ತರು ನೀಡಿದ ನಗದು ಕಾಣಿಕೆಗಳ ದುರುಪಯೋಗದ ಆರೋಪದ ಹಿನ್ನೆಲೆ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಶುಕ್ರವಾರ ನೈತಿಕ ನೆಲೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಜತೆಗೆ ಟ್ರಸ್ಟ್‌ನ ಪ್ರಮುಖ ಸದಸ್ಯರಾದ ಅನಿಲ್ ಮಿಶ್ರಾ ಅವರೂ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾದ ಎಫ್ ಐಆರ್‌ನಲ್ಲಿ ಹೆಸರಿದ್ದ 8 ಆರೋಪಿಗಳನ್ನು ಪೊಲೀಸರು ಗುರುವಾರ ರಾತ್ರಿ ಬಂಧಿಸಿದ್ದಾರೆ. ಬಂಧಿತರಲ್ಲಿ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್, ಲವಕುಶ್ ಮಿಶ್ರಾ, ಅನುಕಲ್ಪ್ ಮಿಶ್ರಾ, ಮನೀಶ್ ಯಾದವ್, ಅವಿನಾಶ್ ಶುಕ್ಲಾ, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ ಹಾಗೂ ಸುಭಾಷ್ ಶ್ರೀವಾಸ್ತವ ಸೇರಿದ್ದಾರೆ.



ಇತ್ತೀಚೆಗೆ ನಡೆದ ದಾಳಿಯಲ್ಲಿ ಲವಕುಶ್ ಮಿಶ್ರಾ ಮತ್ತು ರಾಮಶಂಕರ್ ಯಾದವ್ ಮನೆಗಳಿಂದ ದೊಡ್ಡ ಪ್ರಮಾಣದ ನಗದು ಹಣ ವಶಪಡಿಸಿಕೊಳ್ಳಲಾಗಿತ್ತು. ತನಿಖೆ ಮುಂದುವರಿದಿರುವುದರಿಂದ ಇನ್ನಷ್ಟು ಮಂದಿ ಬಂಧನಕ್ಕೊಳಗಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

29ರವರೆಗೆ ನ್ಯಾಯಾಂಗ ಬಂಧನ: ಬಂಧಿತ 8 ಆರೋಪಿಗಳನ್ನು ಅಯೋಧ್ಯೆಯ ನ್ಯಾಯಾಲಯವು ಜೂ.29ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಶುಕ್ರವಾರ ಆರೋಪಿಗಳನ್ನು ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ➡ಪುಟ ೪

ಗಂಭೀರ ಆರೋಪ

ಬಂಧಿತರಿಗೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಕಲಂಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಳ್ಳತನ, ನಂಬಿಕೆ ದ್ರೋಹ, ಕಳುವಾದ ಆಸ್ತಿ ಸ್ವೀಕರಿಸುವುದು, ಅಪರಾಧ ಸಂಚು ರೂಪಿಸಿದ ಆರೋಪಗಳನ್ನು ಹೊರಿಸಲಾಗಿದೆ.



ಚಂಪತ್ ರಾಯ್, ಮಿಶ್ರಾ

ತಪ್ಪಿತಸ್ಥರನ್ನು ಬಿಡಲ್ಲ, ಕಠಿಣ ಕ್ರಮ ಖಚಿತ: ಸಿಎಂ ಯೋಗಿ

ಅಯೋಧ್ಯೆಯ ರಾಮ ಮಂದಿರಕ್ಕೆ ಬಂದ ದೇಣಿಗೆಯ ಹಣ ದುರುಪಯೋಗ ಪ್ರಕರಣದಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ವರದಿ ಸಲ್ಲಿಸಿದ ಕೂಡಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ. ದೇವರಿಯಾದಲ್ಲಿ ಮಾತನಾಡಿದ ಅವರು, ಪ್ರಕರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾದ ಯಾರನ್ನೂ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಎಫ್‌ಐಆರ್‌ನಲ್ಲಿ ಹೆಸರಿದ್ದ ಎಂಟು ಮಂದಿಯನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಸನಾತನ ಧರ್ಮದ ಭಕ್ತರ ಭಾವನೆಗಳೊಂದಿಗೆ ಆಟವಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು. ➡ಪುಟ ೪



ಕಿರುಸುದ್ದಿ

ಬಂಕಿಮ್ ಚಂದ್ರ ಜಯಂತಿ: ಮೋದಿ ನಮನ

• **ಹೊಸದಿಲ್ಲಿ:** 'ವಂದೇ ಮಾತರಂ' ರಾಷ್ಟ್ರೀಯ ಗೀತೆಯ ರಚನೆಕಾರ ಹಾಗೂ ಖ್ಯಾತ ಕಾದಂಬರಿಕಾರ–ಕವಿ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರ ಜನ್ಮ ಜಯಂತಿಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ.

• ಪುಟ ೨

ಬಂಡಿಪುರ, ನಾಗರಹೊಳೆ ಸಫಾರಿ ಪುನರಾರಂಭಕ್ಕೆ ಸರ್ಕಾರ ನಿರ್ಧಾರ

• **ಬೆಂಗಳೂರು:** ತಜ್ಞರು ಮತ್ತು ಅಧಿಕಾರಿಗಳ ತಾಂತ್ರಿಕ ಸಮಿತಿಯ ವರದಿ ಶಿಫಾರಸಿನ ಅನ್ವಯ ಬಂಡಿಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದ ಜಂಗಲ್ ಸಫಾರಿ (ಉದ್ಯಾನ ಪ್ರವಾಸ) ಪುನರಾರಂಭಿಸಲು ಸರ್ಕಾರ ನಿರ್ಧರಿಸಿದೆ. ➡ಪುಟ ೪

ಬೀದರ್: 9.41 ಕೋಟಿ ರೂ.ಮೊತ್ತದ ಡ್ರಗ್ಸ್ ನಾಶ

• **ಬೀದರ್:** ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಸುಮಾರು 9.41 ಕೋಟಿ ರೂ. ಮೌಲ್ಯದ ಅಕ್ರಮ ಗಾಂಜಾ, ಮಾದಕ ಗುಳಿಗೆಗಳು ಹಾಗೂ ಸಿರಪ್ ಬಾಟಲ್‌ಗಳನ್ನು ಶುಕ್ರವಾರ ಜಿಲ್ಲಾ ಡ್ರಗ್ಸ್ ಡಿಸ್ಪೋಸಲ್ ಕಮಿಟಿ ವತಿಯಿಂದ ನಾಶ ಮಾಡಲಾಯಿತು. ➡ಪುಟ ೪

ವೆನೆಜುವೆಲಾ ಭೂಕಂಪ ಸಾವಿನ ಸಂಖ್ಯೆ 589ಕ್ಕೆ

• ಪುಟ ೨

ಎಸ್‌ಐಆರ್‌ಗೆ ವರ್ಷ: ದೇಶದಲ್ಲಿ 6 ಕೋಟಿ ಮತದಾರರು ಔಟ್

• ಪುಟ ೨



ಅಂತರ್ಜಲ ಮರುಪೂರಣ ರಾಸಾಯನಿಕಕ್ಕೆ ಪೇಟೆಂಟ್

• ಪುಟ ೨

ಸುದ್ದಿ ಸಮಗ್ರ

ಹಿಂದು ಸಾಮ್ರಾಜ್ಯ ದಿನ, ಶಿಕ್ಷಣ ನೀತಿ ಸಮ್ಮೇಳನದಲ್ಲಿ ಭಾಗಿ

ಬೆಂಗಳೂರಿಗಿಂದು ಡಾ.ಭಾಗವತ್


• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಶನಿವಾರ ನಗರಕ್ಕೆ ಆಗಮಿಸಲಿದ್ದು, ಎರಡು ದಿನ ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಜೂ.27ರಂದು ಸಂಜೆ 6 ಗಂಟೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಪುಟ್ಟೇನಹಳ್ಳಿ ನಗರ, ಜಯನಗರ ಭಾಗ) ವತಿಯಿಂದ ಆರ್‌ಬಿಐ ಬಡಾವಣೆ ಆಟದ ಮೈದಾನದಲ್ಲಿ ಆಯೋಜಿಸಿರುವ ಹಿಂದು ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಡಾ. ಮೋಹನ್ ಭಾಗವತ್ ಅವರು ಬೌದ್ಧಿಕ್ ನೀಡಲಿದ್ದಾರೆ.



ಜೂ.28ರಂದು ಮಧ್ಯಾಹ್ನ 3 ಗಂಟೆಗೆ ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಭಾರತೀಯ ಶಿಕ್ಷಣ ಮಂಡಲ ಆಯೋಜಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಕಾರ್ಯನಿರ್ವಹಣೆ ಹಾಗೂ ಭಾರತೀಯ ಜ್ಞಾನ ಪದ್ಧತಿಯ ಸಂಯೋಜನೆ ಕುರಿತ ರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ ಮುಖ್ಯ ಭಾಷಣ ಮಾಡಲಿದ್ದಾರೆ.

ನಗರಕ್ಕೆ ಉಪರಾಷ್ಟ್ರಪತಿ

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಜೂ.27 ಮತ್ತು 28 ರಂದು ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಜೂ.27ರಂದು ಸಂಜೆ 6.30ಕ್ಕೆ ನಗರದ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿರುವ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ➡ಪುಟ ೪



ಅಡ್ಡ ಮತದಾನ: ಅಕ್ರಮದಲ್ಲಿ ಭಾಗಿಯಾಗಿಲ್ಲ–ವಿಜಯೇಂದ್ರ

ಹೊಂದಾಣಿಕೆ ರಾಜಕೀಯ ಮಾಡಿಲ್ಲ

• **ಧರ್ಮಸ್ಥಳ:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆದಾಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ತನ್ನ ನಡುವಿನ ಆತ್ಮೀಯತೆ ಹಾಗೂ ವ್ಯವಹಾರದ ಬಗ್ಗೆ ಸಾಕಷ್ಟು ಅಪಪ್ರಚಾರವಾಗಿತ್ತು. ತಮ್ಮ ಮಧ್ಯೆ ಯಾವುದೇ ಅವ್ಯವಹಾರ, ಯಾವುದೇ ಬಗೆಯ ಸಂಬಂಧವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನದಲ್ಲಿರುವ ಅವರಿಗೆ ಕೊಡಬೇಕಾದ ಗೌರವವನ್ನು ನಾನು ಕೊಟ್ಟಿದ್ದೇನೆ. ಯಾರು ಅಪಪ್ರಚಾರ ಮಾಡಿದ್ದಾರೋ ಅವರಿಗೆ ದೇವರು ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸಿದರು. ರಾಜ್ಯದಲ್ಲಿ ಜನರ ಅನೇಕ ಸಮಸ್ಯೆಗಳು ತಾಂಡವವಾಡುತ್ತಿವೆ. ಭ್ರಷ್ಟ ಕಾಂಗ್ರೆಸ್ ಸರ್ಕಾರದಲ್ಲಿ ಅನ್ಯಾಯ, ಅವ್ಯವಹಾರಗಳು ಅತಿಯಾಗುತ್ತಿವೆ. ಬಿಜೆಪಿ ಬಗ್ಗೆ ತನಗೆ ಭರವಸೆ ಇದ್ದು ಜನರು ಹಾಗೂ ಬಡವರ ವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಬುಡಸಮೇತ ಕಿತ್ತು ಹಾಕಿ, ಬಿಜೆಪಿ ಸರ್ಕಾರ ಮತ್ತೆ ಆಡಳಿತಕ್ಕೆ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.



ಈಶ್ವರಪ್ಪ ಹೇಳಿಕೆಗೆ ಪ್ರತಿಕ್ರಿಯೆ ಇಲ್ಲ: ಹಿಂದೆ 17 ಶಾಸಕರು ಯಡಿಯೂರಪ್ಪ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಪಕ್ಷ ತೊರೆದು ಬಂದಿದ್ದರು. ಆಗ ಒಳ್ಳೆಯ ಸರ್ಕಾರ ಇತ್ತು. • ಪುಟ ೧೨

ಆಪರೇಷನ್ ಸಿಂದೂರ್: ಹುತಾತ್ಮ ಆರು ಯೋಧರ ಹೆಸರು ಬಹಿರಂಗ

• **ಹೊಸದಿಲ್ಲಿ:** ಪಹಲ್ಗಾಮ್ ಉಗ್ರ ದಾಳಿಗೆ ಪ್ರತಿಯಾಗಿ ಭಾರತ ಕೈಗೊಂಡಿದ್ದ 'ಆಪರೇಷನ್ ಸಿಂದೂರ್' ವೇಳೆ ಹುತಾತ್ಮರಾದ 6 ಸಶಸ್ತ್ರ ಪಡೆಗಳ ಯೋಧರ ಹೆಸರುಗಳನ್ನು ಕೇಂದ್ರ ಸರ್ಕಾರ ಮೊದಲ ಬಾರಿಗೆ ಅಧಿಕೃತವಾಗಿ ಬಹಿರಂಗಪಡಿಸಿದೆ. ➡ಪುಟ ೪

ಹುತಾತ್ಮ ಯೋಧರಿವರು

- ಸುಬೇದಾರ್ ಮೇಜರ್ ಪವನ್ ಕುಮಾರ್
- ರೈಫಲ್‌ಮನ್ ಸುನೀಲ್ ಕುಮಾರ್, ವೀರ ಚಕ್ರ
- ಲಾನ್ಸ್ ನಾಯಕ್ ದಿನೇಶ್ ಕುಮಾರ್
- ವಾಯುಯಾನ ತಂತ್ರಜ್ಞ ಮುರಳಿನಾಯಕ್
- ಹವೀಲ್ದಾರ್ ಸುನೀಲ್ ಕುಮಾರ್ ಸಿಂಗ್
- ಸಾರ್ಜೆಂಟ್ ಸುರೇಂದ್ರ ಕುಮಾರ್, ವಾಯು ಪದಕ

ಇಂದು ಬೆಂಗಳೂರಲ್ಲಿ 12 ಗಂಟೆ ನಿರಂತರ ಕಾರ್ಯಕ್ರಮ

15 ಲಕ್ಷ ಸಸಿ ನೆಡುವ ಕಾರ್ಯ

• **ಬೆಂಗಳೂರು:** ನಗರದ ಕಾಂಕ್ರೀಟ್ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡುತ್ತಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಬೆಂಗಳೂರಿನ ಹಸಿರು ಹೊದಿಕೆ ಪ್ರಮಾಣ ಏರಿಸಿ ಹಸಿರು ವಲಯದ ಪುನಶ್ಚೇತನಕ್ಕೆ ಮಹತ್ವದ ಹೆಜ್ಜೆ ಇಟ್ಟಿದೆ. ಅದರ ಭಾಗವಾಗಿ ಶನಿವಾರ (ಜೂ.27) 15 ಲಕ್ಷ ಸಸಿ ನೆಡುವ ಮೂಲಕ ದಾಖಲೆ ನಿರ್ಮಿಸಲು ಬಿಡಿಎ ಜತೆಗೂಡಿ ಬೆಂಗಳೂರು ನಗರದ ಜನ ಸಜ್ಜಾಗಿದ್ದಾರೆ.

ನಗರದಲ್ಲಿ ಕಳೆದುಹೋಗುತ್ತಿರುವ ಹಸಿರು ಹೊದಿಕೆಯನ್ನು ಮರುಸ್ಥಾಪಿಸಲು, ನೂರಾರು ಎನ್‌ಜಿಒ ಹಾಗೂ 50 ಸಾವಿರ ಜನರ ಸಹಭಾಗಿತ್ವದೊಂದಿಗೆ ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ಬಿಡಿಎಯ ಬನಶಂಕರಿ, ನಾಡಪ್ರಭು ಕೆಂಪೇಗೌಡ ಬಡಾವಣೆ ಮತ್ತು ಡಾ. ಶಿವರಾಮಕಾರಂತ ಬಡಾವಣೆ ಸೇರಿದಂತೆ ನಗರದ ಕೆರೆ ದಂಡೆಗಳು, ರಾಜಕಾಲುವೆಗಳ ಇಕ್ಕೆಲಗಳು, ಉದ್ಯಾನವನಗಳು ಹಾಗೂ ವಿವಿಧ ಪರಿಸರ ವಲಯಗಳಲ್ಲಿ ಸ್ಥಳೀಯ ಜಾತಿಯ 15 ಲಕ್ಷ ಸಸಿ ನೆಡಲಾಗುತ್ತಿದೆ. ➡ಪುಟ ೪



243 ಎಕರೆ ಪ್ರದೇಶ

50,000 ಸಿಎಂ ಸೇರಿ 50 ಸಾವಿರ ಜನ ಭಾಗಿ


ಗಿನ್ನಿಸ್ ದಾಖಲೆ ಸಾಧ್ಯತೆ

ಎಸ್.ಎಂ. ಕೃಷ್ಣ ರಸ್ತೆ ಲೋಕಾರ್ಪಣೆ

ಮೈಸೂರು ರಸ್ತೆ, ಮಾಗಡಿ ರಸ್ತೆಯನ್ನು ಸಂಪರ್ಕಿಸುವ, ಬಹು ನಿರೀಕ್ಷಿತ ಎಸ್.ಎಂ. ಕೃಷ್ಣ 10 ಪಥಗಳ ರಸ್ತೆ ಶನಿವಾರ ಲೋಕಾರ್ಪಣೆಯಾಗಲಿದೆ. ಈ ಅತ್ಯಾಧುನಿಕ ಹೆದ್ದಾರಿಯು ನಗರದ ಪಶ್ಚಿಮ ಭಾಗದ ಸಂಚಾರ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದ್ದು, ಈ ಹಿಂದೆ ಸವಾರರು ಅನುಭವಿಸುತ್ತಿದ್ದ 1 ಗಂಟೆ ಟ್ರಾಫಿಕ್ ನರಕ ಇನ್ನು ಕೇವಲ 15 ನಿಮಿಷಗಳ ಸುಗಮ ಪ್ರಯಾಣವಾಗಿ ಬದಲಾಗಲಿದೆ. ➡ಪುಟ ೪

ಇಡಿ ದಾಳಿ ರಾಜಕೀಯ ಪ್ರೇರಿತ ಅಲ್ಲ

• **ಬೆಳಗಾವಿ:** ರಾಜ್ಯ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ.ವೈ.ಮಂಜುನಾಥ ಮೇಲಿನ ಇಡಿ ದಾಳಿ ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ಪ್ರೇರಿತ ಎಂದು ಹೇಳಲು ಸಾಧ್ಯವಿಲ್ಲ. ಇದರ ನಿಜವಾದ ಸತ್ಯಾಂಶ ಆರು ತಿಂಗಳ ಬಳಿಕ ಹೊರಬರಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರದ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ➡ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,28,000(2,23,400) ಅಪರಂಜಿ ಚಿನ್ನ 14,110(14,080) ಆಭರಣ ಚಿನ್ನ 12,980(12,955) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.41

ಮತದಾರರ ಪಟ್ಟಿ ಶುದ್ಧೀಕರಣಕ್ಕೆ ಒಂದು ವರ್ಷ

ದೇಶದಲ್ಲಿ 6 ಕೋಟಿ ಮತದಾರರು ಔಟ್

ಹೊಸದಿಲ್ಲಿ: ದೇಶದ ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಉದ್ದೇಶದಿಂದ ಚುನಾವಣಾ ಆಯೋಗ(ಇಸಿ) ಆರಂಭಿಸಿದ್ದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಅಭಿಯಾನಕ್ಕೆ ಒಂದು ವರ್ಷ ಪೂರ್ಣಗೊಂಡಿದೆ. ಈ ಅವಧಿಯಲ್ಲಿ ದೇಶಾದ್ಯಂತ ಸುಮಾರು 6 ಕೋಟಿ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ.

ಬಿಹಾರ ವಿಧಾನಸಭೆ ಚುನಾವಣೆಗೆ ಮುನ್ನ ಕಳೆದ ವರ್ಷ ಜೂ.24ರಂದು ಪ್ರಾಯೋಗಿಗ ಯೋಜನೆಯಾಗಿ ಎಸ್‌ಐಆರ್ ಆರಂಭಿಸಲಾಗಿತ್ತು. ಇದರ ಪರಿಣಾಮವಾಗಿ ಬಿಹಾರದಲ್ಲಿ ಸುಮಾರು 65 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಯಿತು. ಅಗತ್ಯ ದಾಖಲೆಗಳ ಕೊರತೆಯ ನೆಪದಲ್ಲಿ ನಾಗರಿಕರನ್ನು ಮತದಾನದ ಹಕ್ಕಿನಿಂದ ವಂಚಿಸಲಾಗುತ್ತಿದೆ ಎಂದು ವಿಪಕ್ಷಗಳು ಆರೋಪಿಸಿದ್ದವು. ಆದರೆ, ಈ ವರ್ಷದ ಮಾರ್ಚ್‌ನಲ್ಲಿ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗದ ಕ್ರಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡಿತ್ತು.

2ನೇ ಹಂತ: ಕಳೆದ ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಗುಜರಾತ್, ಮಧ್ಯಪ್ರದೇಶ, ಗೋವಾ ಸೇರಿದಂತೆ 12 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಎರಡನೇ ಹಂತ ಜಾರಿಗೊಂಡಿತ್ತು. ಈ ರಾಜ್ಯಗಳಲ್ಲಿ ಪರಿಷ್ಕರಣೆಗೆ ಮುನ್ನ 50.99 ಕೋಟಿ ಮತದಾರರು ಇದ್ದರೆ, ಪರಿಷ್ಕರಣೆ ಬಳಿಕ ಈ ಸಂಖ್ಯೆ 45.81 ಕೋಟಿಗೆ ಇಳಿದಿದೆ. ಅಂದರೆ 5.18 ಕೋಟಿ ಹೆಸರುಗಳು(10.2%) ತೆಗೆಯಲ್ಪಟ್ಟಿವೆ.

ಇವುಗಳಲ್ಲಿ 66.88 ಲಕ್ಷ ಮೃತ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಉತ್ತರ ಪ್ರದೇಶದಲ್ಲಿ 25.47 ಲಕ್ಷ ಹಾಗೂ ಪಶ್ಚಿಮ ಬಂಗಾಳದಲ್ಲಿ 24.16 ಲಕ್ಷ ಮೃತರ ಹೆಸರುಗಳು ಡಿಲೀಟ್ ಮಾಡಲಾಗಿದೆ. ಜತೆಗೆ ಆಕ್ಷೇಪಣೆಗಳು ಮತ್ತು ಪರಿಶೀಲನೆಗಳ ಬಳಿಕ 63.16 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ.

ಮೂರನೇ ಹಂತ: ಪ್ರಸ್ತುತ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ, ಪಂಜಾಬ್, ಒಡಿಶಾ ಸೇರಿದಂತೆ 16 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಮೂರನೇ ಹಂತ ನಡೆಯುತ್ತಿದೆ. ಸುಮಾರು 36.73 ಕೋಟಿ ಮತದಾರರನ್ನು ಒಳಗೊಂಡಿರುವ ಈ ಪ್ರಕ್ರಿಯೆ ಈ ವರ್ಷದ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.




ಎನ್‌ಸಿಇಆರ್‌ಟಿ ಪಠ್ಯಕ್ಕೆ ಎಸ್‌ಐಆರ್ ಸೇರ್ಪಡೆ

ಹೊಸದಿಲ್ಲಿ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಈಗ 9ನೇ ತರಗತಿಯ ಎನ್‌ಸಿಇಆರ್‌ಟಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಸೇರಿಸಲಾಗಿದೆ. ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಹಾಗೂ ಅನರ್ಹರು ಪಟ್ಟಿಗೆ ಸೇರ್ಪಡೆಯಾಗದಂತೆ ನೋಡಿಕೊಳ್ಳುವುದೇ ಎಸ್‌ಐಆರ್ ಉದ್ದೇಶ ಎಂದು ಪಠ್ಯಪುಸ್ತಕದಲ್ಲಿ ವಿವರಿಸಲಾಗಿದೆ. ಹೊಸ ಪಠ್ಯಪುಸ್ತಕದಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ನವೀಕರಿಸುವುದು, ಪರಿಶೀಲಿಸುವುದು ಹಾಗೂ ದೋಷಗಳನ್ನು ಸರಿಪಡಿಸುವ ಕಾರ್ಯವನ್ನು ನಿರ್ವಹಿಸುತ್ತದೆ ಎಂದು ತಿಳಿಸಲಾಗಿದೆ. 18 ವರ್ಷ ತುಂಬಿದ ಯುವ ಮತದಾರರನ್ನು ಪಟ್ಟಿಗೆ ಸೇರಿಸಲು ಎಸ್‌ಐಆರ್ ಸಹಕಾರಿಯಾಗಿದೆ ಎಂದೂ ಉಲ್ಲೇಖಿಸಲಾಗಿದೆ. ಮೃತಪಟ್ಟವರು, ವಾಸಸ್ಥಳ ಬದಲಿಸಿದವರು, ನಕಲಿ ನೋಂದಣಿಗಳು ಹಾಗೂ ಪತ್ತೆಯಾಗದವರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕುವ ಕಾರ್ಯವೂ ಈ ಪ್ರಕ್ರಿಯೆಯ ಭಾಗವಾಗಿದೆ. ಪರಿಷ್ಕೃತ ಪಟ್ಟಿಯ ಕುರಿತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದ ಬಳಿಕ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಪುಸ್ತಕದಲ್ಲಿ ಹೇಳಲಾಗಿದೆ.

ಡೆನ್ಮಾರ್ಕ್‌ನಲ್ಲಿ ಆಜಾನ್ ನಿಷೇಧ?

ಹೊಸದಿಲ್ಲಿ: ಡೆನ್ಮಾರ್ಕ್‌ನಲ್ಲಿ ಹೆಚ್ಚುತ್ತಿರುವ ಮುಸ್ಲಿಮ್ ಜನಸಂಖ್ಯೆಯಿಂದ ದೇಶವು ಇಸ್ಲಾಮೀಕರಣಗೊಳ್ಳುವ ಆತಂಕ ಸೃಷ್ಟಿಯಾದ ಹಿನ್ನೆಲೆ ಪ್ರಧಾನಿ ಮೆಟ್ಟೆ ಫ್ರೆಡರಿಕ್ಸನ್ ಅವರ ಸರ್ಕಾರವು ರಾಷ್ಟ್ರವ್ಯಾಪಿ ಆಜಾನ್ ನಿಷೇಧಕ್ಕಾಗಿ ರೂಪುರೇಷೆ ಸಿದ್ಧಪಡಿಸಿದೆ. ಹೆಚ್ಚುತ್ತಿರುವ ಇಸ್ಲಾಮೀಕರಣದಿಂದ ಡೆನ್ಮಾರ್ಕ್ ಎಲ್ಲಿ ಪಾಕಿಸ್ತಾನದಂತಾಗುವುದೋ ಎಂಬ ಭೀತಿ ಅಲ್ಲಿನ ನಾಗರಿಕರನ್ನು ಕಾಡುತ್ತಿದೆ. ಇದನ್ನು ಖುದ್ದು ಡೆನ್ಮಾರ್ಕ್ ವಲಸೆ ಸಚಿವ ಮಾರ್ಟಿನ್ ಬೊಡ್ಸ್ಕೊವ್, ದೇಶದ ಕೆಲವು ಭಾಗಗಳು ಇಸ್ಲಾಮಾಬಾದ್‌ನ ಉಪನಗರಗಳಂತೆ ಭಾಸವಾಗುತ್ತವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಸ್ಥಳೀಯ ಸುದ್ದಿ ವಾಹಿನಿಯೊಂದರಲ್ಲಿ ಮಾತನಾಡುವ ವೇಳೆ ಸಚಿವ ಮಾರ್ಟಿನ್ ಈ ಆತಂಕಕಾರಿ ವಿಷಯವನ್ನು ಉಲ್ಲೇಖಿಸಿದ್ದಾರೆ. ಡೇನಿಶ್ ಮನೆಗಳ ಮಹಡಿ ಮೇಲಿಂದ ಆಜಾನ್ ಶಬ್ದ ಕೇಳಬಾರದು ಎಂದು ಹೇಳಿದ್ದಾರೆ. ಆಡಳಿತದಲ್ಲಿರುವ ಸೋಶಿಯಲ್ ಡೆಮಾಕ್ರಾಟ್ಸ್ ಸರ್ಕಾರ ಇಸ್ಲಾಮೀಕರಣ ವಿರೋಧಿಸಿದೆ.



ನೀರು ಹೀರಿಕೊಳ್ಳುವ ಕಾಂಕ್ರೀಟ್‌ನ ಬಲ, ಬಾಳಿಕೆ ಹೆಚ್ಚಿಸುವ ರಾಸಾಯನಿಕ | ಮಳೆ ನೀರಿನ ಇಂಗುವಿಕೆಗಾಗಿ ಕಾಂಕ್ರೀಟ್ ವ್ಯವಸ್ಥೆ ವಿನ್ಯಾಸ

ಅಂತರ್ಜಲ ಮರುಪೂರಣ ರಾಸಾಯನಿಕಕ್ಕೆ ಪೇಟೆಂಟ್

ಮುಂಗಾರು ಮಳೆ ಕೊರತೆಯಾಗುತ್ತಿರುವ ಈ ಕಾಲದಲ್ಲಿ ಸಾಮಾನ್ಯ ಜನರಿಗೆ ನೀರಿನ ಪ್ರಾಮುಖ್ಯತೆ ನಿಧಾನವಾಗಿ ಅರ್ಥವಾಗುತ್ತಿದೆ. ಅಂತರ್ಜಲ ಮರುಪೂರಣ ಹಾಗೂ ಮಳೆ ನೀರಿನ ಇಂಗುವಿಕೆಗೆ ನೆರವಾಗುವ ಕಾಂಕ್ರೀಟ್ ವ್ಯವಸ್ಥೆ ವಿನ್ಯಾಸಗೊಳಿಸುವ ಉದ್ದೇಶದಿಂದ ಮಹಾರಾಷ್ಟ್ರದ ಪುಣೆಯ ನವೋದ್ಯಮಿ ರಾಜೇಶ್ ರಾಥೋಡ್ ಮತ್ತು ಚಕ್ಷುಧನ್ಯಾ ಅಭಿವೃದ್ಧಿಪಡಿಸಿದ ಹೊಸ ರಾಸಾಯನಿಕ ಮಿಶ್ರಣಕ್ಕೆ ಪೇಟೆಂಟ್ ಲಭಿಸಿದೆ. ಈ ರಾಸಾಯನಿಕ ಬಳಸಿದ ಕಾಂಕ್ರೀಟ್ ವ್ಯವಸ್ಥೆ ಮಳೆನೀರನ್ನು ಹೆಚ್ಚು ಪರಿಣಾಮಕಾರಿಯಾಗಿ ಭೂಮಿ ಯೊಳಗೆ ಹರಿಯುವಂತೆ ಮಾಡುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ನೆರವಾಗುತ್ತದೆ. ಮಳೆನೀರು ವ್ಯರ್ಥವಾಗಿ ಹರಿದು ಹೋಗುವು ದನ್ನು ತಪ್ಪಿಸಿ, ಜಲ ಸಂರಕ್ಷಣೆ ಮತ್ತು ಸುಸ್ಥಿರ ಜಲ ನಿರ್ವಹಣೆಗೆ ಕೊಡುಗೆ ನೀಡುವುದು ಈ ಆವಿಷ್ಕಾರದ ಹಿಂದಿನ ಉದ್ದೇಶವಾಗಿದೆ. ಈ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

20 ವರ್ಷಕ್ಕೆ ಪೇಟೆಂಟ್!

ಪರ್ಮಿಯಸ್(ನೀರು ಹೀರಿಕೊಳ್ಳುವ) ಕಾಂಕ್ರೀಟ್‌ಗಾಗಿ ಅಪಾಯಕಾರಿಯಲ್ಲದ ಪ್ರಿಮಿಕ್ಸ್ ಪರಿಹಾರವೆಂಬ ಹೆಸರಿನಲ್ಲಿ ನಡೆಸಿದ ಆವಿಷ್ಕಾರಕ್ಕೆ ಕೇಂದ್ರ ಸರ್ಕಾರದ ಪೇಟೆಂಟ್ ಕಚೇರಿ 20 ವರ್ಷಗಳ ಪೇಟೆಂಟ್ ಪ್ರಮಾಣಪತ್ರವನ್ನು ನೀಡಿದೆ. ಈ ಪೇಟೆಂಟ್ ಪಡೆಯಲಾದ ರಾಸಾಯನಿಕವು ನೀರು ಹೀರಿಕೊಳ್ಳುವ ಕಾಂಕ್ರೀಟ್‌ನ ಬಲ, ಬಾಳಿಕೆ, ನೀರು ಹೀರಿಕೊಳ್ಳುವ ಸಾಮರ್ಥ್ಯ ಹಾಗೂ ದೀರ್ಘಕಾಲೀನ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಸುಸ್ಥಿರ ಜಲ ನಿರ್ವಹಣೆ ಮತ್ತು ಅಂತರ್ಜಲ ಮರುಪೂರಣ ಯೋಜನೆಗಳಿಗೆ ಇದು ಹೆಚ್ಚು ಸೂಕ್ತವೆಂದು ತಿಳಿದುಬಂದಿದೆ.

ರಾಸಾಯನಿಕ ಪರೀಕ್ಷೆ ಯಶಸ್ವಿ

ನಗರದ ಎಸ್.ಪಿ. ಕಾಲೇಜು ಆವರಣ ಹಾಗೂ ಸತಾರ ಜಿಲ್ಲೆಯ ಐತಿಹಾಸಿಕ ದೇವಾಲಯದ ಆವರಣದಲ್ಲಿ ಈ ರಾಸಾಯನಿಕವನ್ನು ಬಳಸಿ ಮಳೆಗಾಲದಲ್ಲಿ ಉಂಟಾಗುವ ನೀರಿನ ನಿಲುಗಡೆ ತಡೆಯುವುದು ಮತ್ತು ಮಳೆನೀರು ಚರಂಡಿಗಳ ಮೂಲಕ ವ್ಯರ್ಥವಾಗಿ ಹರಿದುಹೋಗುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಯಶಸ್ವಿ ಪರೀಕ್ಷೆ ನಡೆಸಲಾಗಿದೆ.

ಪರಿಸರ ಸ್ನೇಹಿ ಆವಿಷ್ಕಾರ

ಈ ಉತ್ಪನ್ನದ ಪ್ರಮುಖ ಪ್ರಯೋಜನವೆಂದರೆ, ಮಳೆನೀರು ಮಣ್ಣಿನೊಳಗೆ ಸುಲಭವಾಗಿ ಇಂಗುವಂತೆ ಮಾಡಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ. ಇದರಿಂದ ಭಾರೀ ಮಳೆಯ ಸಂದರ್ಭ ಮೇಲ್ಮೈ ನೀರಿನ ಹರಿವು ಮತ್ತು ನೀರಿನ ನಿಲುಗಡೆ ಕಡಿಮೆಯಾಗುತ್ತದೆ. ಜೊತೆಗೆ, ಕ್ಷೀಣಿಸುತ್ತಿರುವ ಅಂತರ್ಜಲ ಮಟ್ಟವನ್ನು ಪುನಃ ತುಂಬಲು ಸಹಕಾರಿ ಆಗುವುದರೊಂದಿಗೆ, ಪರಿಸರ ಸ್ನೇಹಿ ಹಾಗೂ ಅಪಾಯವಿಲ್ಲದ ಉತ್ಪನ್ನವಾಗಿದೆ.



ಸಂಪೂರ್ಣ ಸ್ವದೇಶಿ ಉತ್ಪನ್ನ

ಇದೇ ಉದ್ದೇಶದ ಉತ್ಪನ್ನಗಳು ವಿದೇಶಗಳಲ್ಲಿ ತಯಾರಾಗಿ ಭಾರತಕ್ಕೆ ಆಮದಾಗುತ್ತಿವೆ ಎಂಬು ದನ್ನು ರಾಜೇಶ್ ಒಪ್ಪಿಕೊಂಡಿದ್ದಾರೆ. ಅವರು ಅಭಿವೃದ್ಧಿಪಡಿಸಿರುವ ಉತ್ಪನ್ನವು ಭಾರತದಲ್ಲೇ ಅಭಿವೃದ್ಧಿ ಪಡಿಸಲ್ಪಟ್ಟಿದ್ದು, ಆಮದಿಗಿಂತ ಕಡಿಮೆ ವೆಚ್ಚದ್ದಾಗಿದೆ. ಈ ಉತ್ಪನ್ನವನ್ನು ಭಾರತದ ಹವಾಮಾನ ಮತ್ತು ಸ್ಥಳೀಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟು ತಯಾರಿಸಲಾಗಿದ್ದು, ಕಾಂಕ್ರೀಟ್‌ನ ಕಾರ್ಯಕ್ಷಮತೆಯ ಜತೆಗೆ ಅಂತರ್ಜಲ ಮರುಪೂರಣಕ್ಕೆ ಸಮಾನ ಆದ್ಯತೆ ನೀಡಲಾಗಿದೆ. ವಿದೇಶಿ ಉತ್ಪನ್ನಗಳು ಮುಖ್ಯವಾಗಿ ಕಾಂಕ್ರೀಟ್‌ನ ಕಾರ್ಯಕ್ಷಮತೆಯ ಮೇಲಷ್ಟೇ ಗಮನಹರಿಸುತ್ತವೆ.

ದೇಗುಲ ಆವರಣದಲ್ಲಿ ಅಳವಡಿಕೆ

ರಾಜೇಶ್ ಅಭಿವೃದ್ಧಿಪಡಿಸಿರುವ ಉತ್ಪನ್ನವು ನಿಜವಾಗಿಯೂ ಪರಿಣಾಮಕಾರಿ. ರಾಸ್ತೆ ಕುಟುಂಬ ಆಡಳಿತದ ದೇಗುಲದ ಆವರಣದಲ್ಲಿ ನೀರಿನ ನಿಲುಗಡೆ ಸಮಸ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದು, ಅಂತರ್ಜಲಮಟ್ಟ ಹೆಚ್ಚಿದ ಕಾರಣ ಮರಗಳ ಆರೋಗ್ಯವೂ ಉತ್ತಮವಾಗಿದೆ. ರಾಸ್ತೆ ಕುಟುಂಬ ನಿರ್ಮಿಸಿ ನಿರ್ವಹಿಸುತ್ತಿರುವ ಅನೇಕ ದೇವಾಲಯಗಳಲ್ಲಿ ಒಂದರಲ್ಲಿ ಈ ಉತ್ಪನ್ನವನ್ನು ಪ್ರಾಯೋಗಿಕವಾಗಿ ಬಳಸಲಾಗಿತ್ತು. ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ಮಾಡಲು ಸಾಧ್ಯವಿರುವ ದೇವಾಲಯ ಆವರಣಗಳಲ್ಲಿ ಈ ತಂತ್ರಜ್ಞಾನವನ್ನು ಅಳವಡಿಸುವ ಸಾಧ್ಯತೆಯಿದೆ.

ಕಾಲೇಜು ಆವರಣದಲ್ಲಿ ಜೋಡಣೆ

ಎಸ್.ಪಿ. ಕಾಲೇಜು ಆವರಣವು ಅತ್ಯಂತ ಸಂಚಾರ ದಟ್ಟಣೆಯ ತಿಲಕ್ ರಸ್ತೆಯ ಪಕ್ಕದಲ್ಲಿದ್ದು, ಅಲ್ಲಿ ಮಳೆನೀರಿನ ಒಳಚರಂಡಿ ವ್ಯವಸ್ಥೆಯಿಲ್ಲ. ಇದರಿಂದ ರಸ್ತೆಯ ಮೇಲಿನ ಮಳೆನೀರು ಕಾಲೇಜು ಆವರಣಕ್ಕೆ ಹರಿದು ಬಂದು ನೀರು ನಿಲ್ಲುವ ಸಮಸ್ಯೆ ಉಂಟಾಗುತ್ತಿತ್ತು. ಈಗ ಆ ಮಳೆನೀರನ್ನು ಮೊದಲು ಒಂದು ಗುಂಡಿ ಹಾಗೂ ಸಣ್ಣ ಸಂಗ್ರಹ ಟ್ಯಾಂಕ್‌ಗೆ ಹರಿಸಿ, ನಂತರ ಬೋರ್‌ವೆಲ್‌ಗೆ ಮರುಭರ್ತಿ ಮಾಡುವ ವ್ಯವಸ್ಥೆ ಮಾಡಲಾಗಿದೆ. ಇದರ ಪರಿಣಾಮವಾಗಿ ಕಳೆದ ವರ್ಷ ಕಾಲೇಜು ಆವರಣದಲ್ಲಿ ನೀರಿನ ನಿಲುಗಡೆ ಸಮಸ್ಯೆ ಉಂಟಾಗಿಲ್ಲ.

ಕಡಿಮೆ ವೆಚ್ಚದ ಪರಿಹಾರ

ಇದು ಕಾಂಕ್ರೀಟ್‌ನ ಬಲ ಮತ್ತು ಬಾಳಿಕೆಯನ್ನು ಹೆಚ್ಚಿಸುತ್ತದೆ. ಮಳೆನೀರಿನ ಒಳಚರಂಡಿ (ಸ್ಟಾರ್ಮ್‌ವಾಟರ್ ಡ್ರೈನೇಜ್) ವ್ಯವಸ್ಥೆಯ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಸುಸ್ಥಿರ ನಗರಾಭಿವೃದ್ಧಿ, ಜಲ ಸಂರಕ್ಷಣೆ ಹಾಗೂ ಮಳೆನೀರಿನ ಸಮರ್ಪಕ ನಿರ್ವಹಣೆಗೆ ನೆರವಾಗುತ್ತದೆ. ಆಮದು ಮಾಡಿಕೊಳ್ಳುವ ಪರ್ಯಾಯ ಉತ್ಪನ್ನಗಳಿಗೆ ಹೋಲಿಸಿದರೆ, ಇದು ಕಡಿಮೆ ವೆಚ್ಚದ ಪರಿಹಾರವಾಗಿದೆ. ರಾಜೇಶ್ ಅವರ ಪ್ರಕಾರ, ಈ ತಂತ್ರಜ್ಞಾನವನ್ನು ವಾಹನ ನಿಲುಗಡೆ ಪ್ರದೇಶಗಳು, ಪಾದಚಾರಿ ಮಾರ್ಗಗಳು, ವಸತಿ ಬಡಾವಣೆಗಳು, ಶೈಕ್ಷಣಿಕ ಸಂಸ್ಥೆಗಳ ಆವರಣಗಳು, ಕೈಗಾರಿಕಾ ಪ್ರದೇಶಗಳು, ಉದ್ಯಾನಗಳು, ಸಾರ್ವಜನಿಕ ಮುಕ್ತ ಸ್ಥಳಗಳು, ರೈಲು ನಿಲ್ದಾಣಗಳು, ಬಸ್ ಟರ್ಮಿನಲ್‌ಗಳಲ್ಲಿ ಮಳೆನೀರು ಸಂಗ್ರಹಣೆ ಮತ್ತು ಅಂತರ್ಜಲ ಮರುಪೂರಣ ಯೋಜನೆಗಳಲ್ಲಿ ಬಳಸಬಹುದು. ಮಳೆನೀರು ಮೇಲ್ಮೈ ಹರಿವಿನ ಮೂಲಕ ವ್ಯರ್ಥವಾಗುವ ಯಾವುದೇ ಸ್ಥಳದಲ್ಲಿ ಈ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಬಹುದು. ಸುಸ್ಥಿರ ಹಾಗೂ ಪರಿಸರ ಸ್ನೇಹಿ ಮೂಲಸೌಕರ್ಯಗಳ ಮೂಲಕ ಪ್ರತಿ ಮಳೆಯನ್ನೂ ಅಂತರ್ಜಲ ಮರುಪೂರಣಕ್ಕೆ ಒಂದು ಅವಕಾಶವನ್ನಾಗಿ ಪರಿವರ್ತಿಸುವುದೇ ಈ ಉತ್ಪನ್ನವನ್ನು ಅಭಿವೃದ್ಧಿಪಡಿಸಿದ ರಾಜೇಶ್ ಉದ್ದೇಶವಾಗಿದೆ. ಈ ಉತ್ಪನ್ನವನ್ನು ವ್ಯಾಪಕವಾಗಿ ಬಳಸಿದರೆ, ಕ್ಷೀಣಿಸುತ್ತಿರುವ ಅಂತರ್ಜಲಮಟ್ಟವನ್ನು ಹೆಚ್ಚಿಸಲು, ಮಳೆನೀರನ್ನು ಸಂರಕ್ಷಿಸಲು, ನಗರ ಪ್ರದೇಶಗಳ ಪ್ರವಾಹ ಮತ್ತು ನೀರಿನ ನಿಲುಗಡೆ ಸಮಸ್ಯೆಯನ್ನು ತಗ್ಗಿಸಲು ಹಾಗೂ ಭವಿಷ್ಯದ ಪೀಳಿಗೆಗಳಿಗೆ ನೀರಿನ ಭದ್ರತೆ ಬಲಪಡಿಸಲು ನೆರವಾಗಲಿದೆ.

ಕಿರುಸುದ್ದಿ

ತ್ರಿಭಾಷಾ ಸೂತ್ರ: 7-9ನೇ ತರಗತಿಗಳಿಗೆ ಹಳೇ ಪದ್ಧತಿ

ಹೊಸದಿಲ್ಲಿ: ಈಗಾಗಲೇ 7ರಿಂದ 9ನೇ ತರಗತಿಯಲ್ಲಿರುವ ಹಾಗೂ ಎರಡು ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು 10ನೇ ತರಗತಿವರೆಗೆ ಅದೇ ಭಾಷಾ ಸಂಯೋಜನೆಯಲ್ಲಿ ವ್ಯಾಸಂಗ ಮಾಡಬಹುದು. ಅವರ ಮೇಲೆ ತ್ರಿಭಾಷಾ ಸೂತ್ರದ ಅನ್ವಯಿಸುವುದಿಲ್ಲ. ಅವರು ಹಳೆಯ ಪದ್ಧತಿಯಲ್ಲೇ ವ್ಯಾಸಂಗವನ್ನು ಮಾಡಬಹುದು ಎಂದು ಸಿಬಿಎಸ್‌ಇ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಸಿಬಿಎಸ್‌ಇ ಅಧಿಕಾರಿಗಳ ಸ್ಪಷ್ಟನೆಯಿಂದ ಲಕ್ಷಾಂತರ ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ನಿರಾಳವಾಗಿದೆ. ಜು.1ರಿಂದ 9ನೇ ತರಗತಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಎರಡು ಭಾರತೀಯ ಭಾಷೆಗಳ ಸಹಿತ ಒಟ್ಟು ಮೂರು ಭಾಷೆಗಳನ್ನು ಕಲಿಯಲೇಬೇಕೆಂಬ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ) ತಿಂಗಳ ಹಿಂದೆ ಆದೇಶಿಸಿತ್ತು.

₹3.66 ಕೋಟಿ ಮೌಲ್ಯದ ವಿಮಾ ಪಾಲಿಸಿಗಳ ಜಪ್ತಿ

ಹೊಸದಿಲ್ಲಿ: 1,266.63 ಕೋಟಿ ಮೌಲ್ಯದ ಎಸ್‌ಬಿಐ ವಂಚನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ(ಇಡಿ) 3.66 ಕೋಟಿ ರೂ. ಮೌಲ್ಯದ ಎರಡು ಹೂಡಿಕೆ-ಸಂಬಂಧಿತ ಜೀವ ವಿಮಾ ಪಾಲಿಸಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಿದೆ. ಎಂ/ಎಸ್ ಅಡ್ವಾಂಟೇಜ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ (ಎಒಪಿಎಲ್) ಮತ್ತು ಅದರ ಪ್ರವರ್ತಕ ಶ್ರೀಕಾಂತ್ ಭಾಸಿ ವಿರುದ್ಧದ ತನಿಖೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಸಿಬಿಐ ದಾಖಲಿಸಿದ ಎಫ್‌ಐಆರ್ ಆಧರಿಸಿ ತನಿಖೆ ಆರಂಭಿಸಿದ ಇಡಿ, ನಕಲಿ ವ್ಯಾಪಾರ ವ್ಯವಹಾರಗಳು, ಸುಳ್ಳು ದಾಖಲೆಗಳು ಹಾಗೂ ಬ್ಯಾಂಕ್ ಹಣದ ದುರುಪಯೋಗದ ಮೂಲಕ ಎಸ್‌ಬಿಐಗೆ ಭಾರೀ ನಷ್ಟ ಉಂಟುಮಾಡಲಾಗಿದೆ ಎಂದು ಆರೋಪಿಸಿದೆ.

ಹೈಡ್ರೋಜನ್ ರೈಲಿನ ವೇಗದ ಪರೀಕ್ಷೆ ಯಶ

ಹೊಸದಿಲ್ಲಿ: ಭಾರತದ ಮೊದಲ ಹೈಡ್ರೋಜನ್ ಚಾಲಿತ ರೈಲು ಶುಕ್ರವಾರ ಹರಿಯಾಣದ ಜಿಂದ್ ?ಸೋನಿಪತ್ ಮಾರ್ಗದಲ್ಲಿ ಗಂಟೆಗೆ 120 ಕಿಮೀ ವೇಗದಲ್ಲಿ ಯಶಸ್ವಿ ಅಂತಿಮ ಪರೀಕ್ಷೆ ಪೂರ್ಣಗೊಳಿಸಿದೆ. ಇದು ಭಾರತೀಯ ರೈಲ್ವೆಯ ಹಸಿರು ಸಾರಿಗೆ ಮತ್ತು ಇಂಗಾಲ ಹೊರಸೂಸುವಿಕೆ ಕಡಿತಗೊಳಿಸುವ ಯೋಜನೆಯಲ್ಲಿ ಮಹತ್ವದ ಮೈಲುಗಲ್ಲಾಗಿದೆ. ಈ ಯೋಜನೆಗಾಗಿ ಜಿಂದ್‌ನಲ್ಲಿ ಹೈಡ್ರೋಜನ್ ಉತ್ಪಾದನೆ, ಸಂಗ್ರಹಣೆ ಹಾಗೂ ಇಂಧನ ತುಂಬುವ ವಿಶೇಷ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.

ಬಂಗಾಳದಲ್ಲೂ ಏನಾಸಂ ಜಾರಿಗಾಗಿ ಸಕಲ ಸಿದ್ಧತೆ

ಕೋಲ್ಕತ್ತಾ: ಗುಜರಾತ್ ಮತ್ತು ಅಸ್ಸಾಂ ಸರ್ಕಾರಗಳು ಅನುಸರಿಸಿರುವ ಪ್ರಕ್ರಿಯೆಗಳಿಗೆ ಸಮಾನವಾಗಿ ಅಗತ್ಯ ಕಾನೂನು ನಿಯಮಗಳಲ್ಲಿ, ಪಶ್ಚಿಮ ಬಂಗಾಳ ಸರ್ಕಾರವೂ ಬಂಗಾಳದಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೊಳಿಸಲಿದೆ ಎಂದು ಪ.ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಶುಕ್ರವಾರ ಹೇಳಿದ್ದಾರೆ. ಏನಾಸಂ ಅನುಷ್ಠಾನ ನಿಟ್ಟಿನಲ್ಲಿ ನಿಗದಿತ ಪ್ರಕ್ರಿಯೆಗಳಿಗೆ ಸರ್ಕಾರ ಬದ್ಧವಿರಲಿದೆ ಎಂದವರು ವಿಶದಪಡಿಸಿದ್ದಾರೆ.

ಏನಾಸಂ ಅನುಷ್ಠಾನಕ್ಕೆ ನಿರ್ದಿಷ್ಟ ನಿಯಮಾವಳಿಗಳಿವೆ ಮತ್ತು ನಾವಿದಕ್ಕೆ ಸಂಪೂರ್ಣ ಬದ್ಧರಿದ್ದೇವೆ. ಗುಜರಾತ್, ಅಸ್ಸಾಂಗಳಲ್ಲಿ ಇದೇ ಕಾರ್ಯವಿಧಾನ ಅಥವಾ ನಿಯಮಾವಳಿಯನ್ನು ಅನುಸರಿಸಲಾಗಿದೆ ಎಂದು ಸುವೇಂದು ಅಧಿಕಾರಿ ಮಾಹಿತಿ ನೀಡಿದರು. ಗುಜರಾತ್, ಅಸ್ಸಾಂ ಸರ್ಕಾರಗಳು ಏನಾಸಂ ಅನುಷ್ಠಾನಕ್ಕೆ ಪೂರಕ ಶಾಸಕಾಂಗ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಂಡಿದ್ದನ್ನು ಉಲ್ಲೇಖಿಸಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರೇರಣಾದಾಯಿ ಮಂತ್ರ ವಂದೇಮಾತರಂ ರಚಿಸಿದ ಬಂಕಿಮ್‌ಚಂದ್ರ ಚಟ್ಟೋಪಾಧ್ಯಾಯರ 189ನೇ ಹುಟ್ಟುಹಬ್ಬವನ್ನು ಪ.ಬಂಗಾಳ ಸರ್ಕಾರ ಆಚರಿಸಿದ್ದು, ಈ ಕಾರ್ಯಕ್ರಮ ಸಂದರ್ಭ ಸಿಎಂ ಸುವೇಂದು ಅಧಿಕಾರಿ ಏನಾಸಂ ಅನುಷ್ಠಾನ ಮಾಹಿತಿ ನೀಡಿದರು. ಉತ್ತರ ಕೋಲ್ಕತ್ತಾದ ಕಾಲೇಜ್ ಸ್ಟ್ರೀಟ್‌ನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಏನಾಸಂ ಅನುಷ್ಠಾನಕ್ಕೆ ಬಿಜೆಪಿ ನಿಗದಿಪಡಿಸಿದ್ದ ಆರು ತಿಂಗಳ ಗಡುವಿಗೆ ಮುಂಚಿತವಾಗೇ ಪ.ಬಂಗಾಳದಲ್ಲಿ ಅನುಷ್ಠಾನಗೊಳ್ಳಲಿದೆ. ಬಂಗಾಳದ ಬಿಜೆಪಿ ಸರ್ಕಾರ ಏನಾಸಂ ಮಸೂದೆಯನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆಯೆಂದು ಮೂಲಗಳು ತಿಳಿಸಿವೆ.

ವೆನೆಜುವೆಲಾ ಭೂಕಂಪ ಸಾವಿನ ಸಂಖ್ಯೆ 589ಕ್ಕೆ

ವೆನೆಜುವೆಲಾ: ವೆನೆಜುವೆಲಾವನ್ನು ನಡುಗಿಸಿದ ಎರಡು ಪ್ರಬಲ ಭೂಕಂಪಗಳಿಗೆ ಬಲಿಯಾದವರ ಸಂಖ್ಯೆ 589ಕ್ಕೇರಿದ್ದು, ಗಾಯಾಳುಗಳ ಸಂಖ್ಯೆ 2980ಕ್ಕೇರಿದೆ ಎಂದು ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ತಿಳಿಸಿದ್ದಾರೆ. ಸಂತ್ರಸ್ತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗೆ ನೆರವಾಗಲು ಅಂತಾರಾಷ್ಟ್ರೀಯ ರಕ್ಷಣಾ ತಂಡಗಳು ವೆನೆಜುವೆಲಾಗೆ ಆಗಮಿಸಿವೆ.

ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳಿಗೆ ಆದ್ಯತೆ ಕೊಡಲಾಗಿದೆ. ಭೂಕಂಪನದಿಂದ ನೆಲಸಮವಾಗಿರುವ ಕಟ್ಟಡಗಳಡಿ ಸಿಲುಕಿರುವವರ ರಕ್ಷಣೆಗೆ ಪ್ರಯತ್ನಗಳು ಸಾಗಿವೆ. ಈ ನಿಟ್ಟಿನಲ್ಲಿ ನಾವು ನಿರಂತರ ಶ್ರಮಿಸುತ್ತಿದ್ದೇವೆ. ಬುಧವಾರ ಮುಂಜಾನೆಯ ಅವಳಿ ಭೂಕಂಪದಿಂದ ಕರಾವಳಿ ರಾಜ್ಯ ಲಾ ಗ್ವೈರಾ ಸಂಪೂರ್ಣ ಹಾನಿಗೀಡಾಗಿದೆ. ಇಲ್ಲಿನ ಭಗ್ನಾವಶೇಷಗೊಂಡ ಕಟ್ಟಡಗಳಡಿ ಸಿಲುಕಿ ಬದುಕಿರುವವರಿಗಾಗಿ ರಕ್ಷಣಾ ತಂಡಗಳು ಶೋಧ ಕಾರ್ಯಾಚರಣೆ ನಡೆಸುತ್ತಿವೆ ಮತ್ತು ಸಂತ್ರಸ್ತರಿಗೆ ನೀರು, ಆಹಾರ ಪೂರೈಸುತ್ತಿದ್ದು ಇಡೀ ಪ್ರದೇಶ ಮಿಲಿಟರಿ ಹಿಡಿತದಲ್ಲಿದೆ ಎಂದು ರಾಡ್ರಿಗಸ್ ತಿಳಿಸಿದ್ದಾರೆ. ಸರಕಾರಿ ಅಽಕಾರಿಗಳು, ಮಿಲಿಟರಿ ಅಧಿಕಾರಿಗಳು ಅಧ್ಯಕ್ಷರ ಜತೆಗಿದ್ದರು.

ಸಾವಿನ ಸಂಖ್ಯೆ: ಸಾವಿನ ಸಂಖ್ಯೆ ಮತ್ತಷ್ಟು ಏರುವ ಆತಂಕವಿದೆ. ವೆನೆಜುವೆಲಾದ 6.76 ಮಿಲಿಯನ್ ಜನರು ಭೂಕಂಪಗಳಿಂದಾಗಿ ತೊಂದರೆಗೀಡಾಗಿದ್ದು, ಈ ಪೈಕಿ ಎರಡು ಮಿಲಿಯನ್ ಜನರು ರಾಜಧಾನಿ ಕರಾಕಸ್‌ನವರು ಎಂದು ಅಂತಾರಾಷ್ಟ್ರೀಯ ವಲಸೆ ಸಂಸ್ಥೆ ಅಂದಾಜಿಸಿದೆ. ಜನರು ತಮ್ಮ ಮನೆಗಳಿರುವ ಜಾಗಕ್ಕೆ ಮರು ಪ್ರವೇಶಿಸಲು ಈ ಕ್ಷಣವೂ ಹೆದರುತ್ತಿದ್ದಾರೆ ಎಂದು ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ ಹೇಳಿದೆ.

ಪಾಕ್‌ನಂತೆ ಭಾರತದಲ್ಲೂ ಬಹುಪತ್ನಿತ್ವ ಜಾರಿಗೊಳಿಸಿ!

ಮುಂಬೈ: ಪಾಕಿಸ್ತಾನದಂತೆ ಭಾರತದಲ್ಲೂ ಮುಸ್ಲಿಮ್ ವೈಯಕ್ತಿಕ ಕಾನೂನಿನ ಅನ್ವಯ ಬಹುಪತ್ನಿತ್ವ ಜಾರಿ ಮಾಡಬೇಕೆಂದು ಎನ್‌ಸಿಪಿ ಶಾಸಕಿ ಸನಾ ಮಲಿಕ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಮಹಾರಾಷ್ಟ್ರ ವಿಧಾನಸಭೆಯಲ್ಲಿ ತ್ರಿವಳಿ ತಲಾಖ್ ಪದ್ಧತಿಯಿಂದ ಮುಸ್ಲಿಮ್ ಮಹಿಳೆಯರು ಎದುರಿಸುವ ಸಮಸ್ಯೆಗಳ ಕುರಿತ ಚರ್ಚೆಯ ವೇಳೆ ಶಾಸಕಿ ಸನಾ ವಿವಾದ ಮೈಗೆಳೆದುಕೊಂಡಿದ್ದಾರೆ. ನಾನು ಬಹುಪತ್ನಿತ್ವವನ್ನು ಸಮರ್ಥನೆ ಮಾಡಿಲ್ಲ ಅಥವಾ ಬೆಂಬಲಿಸಿಲ್ಲ. ಬಿಜೆಪಿ ಶಾಸಕಿ ದೇವಯಾನಿ ಫರಾಂದೆ, ಪಾಕ್‌ನಲ್ಲಿರುವ ಬಹುಪತ್ನಿತ್ವವನ್ನು ಭಾರತ ಅನುಸರಿಸಬೇಕಿಲ್ಲ ಎಂದಿದ್ದರು. ಪಾಕ್ ಉದಾಹರಣೆ ತೆಗೆದುಕೊಂಡು ನಾವು ಯಾಕೆ ನಿರ್ಧರಿಸಬೇಕು. ಪಾಕ್ ನಿಯಮಗಳು ಕುರಾನ್ ಆಧಾರಿತ. ನಾನು ಮಹಾರಾಷ್ಟ್ರದ ಮಗಳು. ಪಾಕಿಸ್ತಾನಕ್ಕೆ ಹೋಗಲ್ಲ ಎಂದು ಸನಾ ಯೂಟರ್ನ್ ಹೊಡೆದಿದ್ದಾರೆ.

ಬಿಜೆಪಿ, ಶಿವಸೇನೆ ವಿರೋಧ: ಪ್ರಧಾನಿ ಮೋದಿ ತ್ರಿವಳಿ ತಲಾಖ್ ವಿರುದ್ಧ ಕಾನೂನು ತಂದು ಮುಸ್ಲಿಮ್ ಮಹಿಳೆಯರ ಗೌರವ ಸಂಪಾದಿಸಿದ್ದಾರೆ. ಆದರೆ ಸನಾ ಮುಸ್ಲಿಮ್ ಮಹಿಳೆಯರಿಗೆ ಕೊಡುವ ಸಂದೇಶವೇನೆಂದು ಶಿವಸೇನೆ ನಾಯಕಿ ಶೈನಾ ಎನ್‌ಸಿ ಪ್ರಶ್ನಿಸಿದ್ದಾರೆ. ಇಲ್ಲಿ ಸಂವಿಧಾನದ ಆಧಾರದಲ್ಲಿ ಆಡಳಿತ ನಡೆಸುವ ಕ್ರಮವಿದೆಯೇ ಹೊರತು ಕುರಾನ್ ಪ್ರಕಾರವಲ್ಲ. ಸಂವಿಧಾನವನ್ನು ಅನುಸರಿಸುವುದಾದರೆ ಭಾರತದಲ್ಲಿ ಇರಬಹುದು ಎಂದು ಬಿಜೆಪಿ ನಾಯಕಿ ಮನೀಶಾ ಚೌಧರಿ ಟೀಕಿಸಿದ್ದಾರೆ. ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಸನಾ ಸಮರ್ಥರು ಎನ್ನುವ ಮೂಲಕ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ವಿವಾದದಿಂದ ದೂರವುಳಿದಿದ್ದಾರೆ.

ಬಂಕಿಮ್ ಚಂದ್ರ ಜಯಂತಿ: ಪ್ರಧಾನಿ ಮೋದಿ ನಮನ

ಹೊಸದಿಲ್ಲಿ: 'ವಂದೇ ಮಾತರಂ' ರಾಷ್ಟ್ರೀಯ ಗೀತೆಯ ರಚನೆಕಾರ ಹಾಗೂ ಖ್ಯಾತ ಕಾದಂಬರಿಕಾರ-ಕವಿ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರ ಜನ್ಮಜಯಂತಿಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ. ಎಕ್ಸ್ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡ ಮೋದಿ, 1838ರ ಜೂ.27ರಂದು ಜನಿಸಿದ ಬಂಕಿಮ್ ಚಂದ್ರರು, 'ವಂದೇ ಮಾತರಂ' ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಶಾಶ್ವತ ಪ್ರೇರಣೆಯೊಂದನ್ನು ನೀಡಿದರು ಎಂದು ಮೋದಿ ಬಣ್ಣಿಸಿದ್ದಾರೆ. ಈ ವರ್ಷ 'ವಂದೇ ಮಾತರಂ'ಗೆ 150 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ, ಅವರ ಸಮೃದ್ಧ ಸಾಹಿತ್ಯ ಕೃತಿಗಳು ಇಂದಿಗೂ ಜನರ ಮನಸ್ಸುಗಳನ್ನು ಪ್ರಜ್ವಲಗೊಳಿಸುತ್ತಿದ್ದು, ರಾಷ್ಟ್ರ ನಿರ್ಮಾಣದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುತ್ತಿವೆ ಎಂದು ಪ್ರಧಾನಿ ತಿಳಿಸಿದ್ದಾರೆ.

ದೇಶಪ್ರೇಮಿಗಳಿಗೆ ಪ್ರೇರಣಾದಾಯಿ ಗೀತೆ: ಅಮಿತ್ ಶಾ

ವಂದೇಮಾತರಂ ಭಾರತದ ಶಕ್ತಿ

ಹೊಸದಿಲ್ಲಿ: ವಂದೇಮಾತರಂ ದೇಶಭಕ್ತಿ ಗೀತೆಯಷ್ಟೇ ಅಲ್ಲ, ಭಾರತದ ಪುನರ್‌ನಿರ್ಮಾಣ ಪ್ರಯತ್ನಗಳಿಗೆ ಶಕ್ತಿತುಂಬುವ ಅಪೂರ್ವ ಮಂತ್ರವಾಗಿದೆ. ಬ್ರಿಟಿಷರ ಆಳ್ವಿಕೆ ಸಂದರ್ಭ ದೇಶದ ಪ್ರಜೆಗಳಲ್ಲಿ ರಾಷ್ಟ್ರೀಯ ಆತ್ಮಾಭಿಮಾನವನ್ನು ಬಡಿದೆಬ್ಬಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯರು ರಚಿಸಿರುವ ವಂದೇ ಮಾತರಂ, ರಾಷ್ಟ್ರೀಯ ಸಾಂಸ್ಕೃತಿಕ ಜಾಗೃತಿ ಮತ್ತು ರಾಷ್ಟ್ರಭಕ್ತಿಯ ಬಲಿಷ್ಠ ದ್ಯೋತಕವಾಗಿದೆ. ಸ್ವಾತಂತ್ರ್ಯ ಸಂಗ್ರಾಮವು ಅತ್ಯುಚ್ಚ ತೀವ್ರತೆಯ ಘಟ್ಟದಲ್ಲಿದ್ದಾಗ ಬ್ರಿಟಿಷರ ವಿರುದ್ಧ ಹೋರಾಡಲು ದೇಶಪ್ರೇಮಿಗಳಿಗೆ ಪ್ರೇರಣಾದಾಯಿಯಾದ ಮೂಲಮಂತ್ರವೇ ವಂದೇಮಾತರಂ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ.

ನಾರ್ಕೊ-ಕೋಆರ್ಡಿನೇಶನ್ ಸೆಂಟರ್‌ನ(ಎನ್‌ಸಿಒಆರ್‌ಡಿ) 10ನೇ ಶೃಂಗಮಟ್ಟದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಮಾದಕದ್ರವ್ಯ ಪಿಡುಗಿನ ವಿರುದ್ಧ ರಾಷ್ಟ್ರದ ಅಭಿಯಾನ ಹಿನ್ನೆಲೆಯಲ್ಲಿ ಜೂ.26ಮಹತ್ವಪೂರ್ಣ ದಿನವಾಗಿದೆ. ಏಕಕಾಲಕ್ಕೆ ರಾಷ್ಟ್ರಭಕ್ತಿಯ ದ್ಯೋತಕವಾಗಿರುವ ವಂದೇಮಾತರಂನ್ನು ಬರೆದ ಬಂಕಿಮ್‌ಚಂದ್ರ ಚಟ್ಟೋಪಾಧ್ಯಾಯರ ಜನುಮದಿನವೂ ಆಗಿರುವ ಕಾರಣ ಮತ್ತಷ್ಟು ಮಹತ್ವ ಪಡೆದಿದೆ ಎಂದರು.

ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ನೆನಪಿಸಿದ ಸಚಿವ ಶಾ, ಬಹುತೇಕ ರಾಷ್ಟ್ರಭಕ್ತರು ವಂದೇಮಾತರಂ ಜಪಿಸುತ್ತಲೇ ಬ್ರಿಟಿಷರ ಗಲ್ಲು ಶಿಕ್ಷೆಗೆ ಕೊರಳೊಡ್ಡಿದ್ದರು. ನಾವು ಭಾರತೀಯರೆಲ್ಲರಿಗೆ ವಂದೇಮಾತರಂ ಒಂದು ಘೋಷಣೆ ಅಥವಾ ಹಾಡಷ್ಟೇ ಅಲ್ಲ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆಯಾದ ಗೀತೆ ಮಾತ್ರವಲ್ಲ, ಜತೆಗೆ ಭಾರತದ ಪುನರ್ ನಿರ್ಮಾಣಕ್ಕಿರುವ ಅಪೂರ್ವ ಮಂತ್ರವಾಗಿದೆ. ಜಗತ್ತಿನಲ್ಲೇ ಅತ್ಯುಚ್ಚ ಸ್ಥಾನದಲ್ಲಿ ಭಾರತಮಾತೆಯನ್ನು ಮರಳಿ ಪ್ರತಿಷ್ಠಾಪಿಸುವ ಧ್ಯೇಯಮಂತ್ರವಾಗಿದೆ ಎಂದು ಸಚಿವರು ವಿವರಿಸಿದರು.

ಮಾದಕವಸ್ತು ನಿಯಂತ್ರಣಕ್ಕೆ ಕಠಿಣ ಕಾಯ್ದೆ: ಮಾದಕವಸ್ತು ಮುಕ್ತ ಭಾರತ ನಿರ್ಮಾಣ ನಿಟ್ಟಿನಲ್ಲಿ ಸರಕಾರದ ಪ್ರಯತ್ನಗಳನ್ನು ಬಲಪಡಿಸುವ ಬಗ್ಗೆ ಚರ್ಚಿಸಲು ಆಯೋಜಿಸಿದ್ದ ಸಭೆಯಲ್ಲಿ, 44 ಕೇಂದ್ರೀಯ ಖಾತೆಗಳು ಮತ್ತು ಇಲಾಖೆಗಳು, ರಾಜ್ಯ ಸರಕಾರಗಳು, ಮಾದಕವಸ್ತು ನಿಯಂತ್ರಣ ಕಾಯಿದೆ ಅನುಷ್ಠಾನ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಬೆಳೆಯುತ್ತಿರೋ ಸಿಂಥೆಟಿಕ್ ಮಾದಕವಸ್ತುಗಳ ಪಿಡುಗಿನ ನಿಯಂತ್ರಣ, ಡಾರ್ಕ್ ನೆಟ್ ಮೂಲಕ ಮಾದಕ ವಸ್ತು ಕಳ್ಳಸಾಗಣೆಗೆ ಮೂಗುದಾರ ಹಾಕುವುದು ಇತ್ಯಾದಿ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಕೃತಕ ಬುದ್ಧಿಮತ್ತೆ ಆವಿಷ್ಕಾರ ಶೃಂಗಸಭೆಗೆ ಮೋದಿ ಸಂದೇಶ

ಅವಕಾಶ ಸೃಷ್ಟಿಗೆ ಎಐ ಮಹತ್ವ

ಹೊಸದಿಲ್ಲಿ: ಪರಿಪೂರ್ಣ ಮತ್ತು ಜವಾಬ್ದಾರಿಯುತವಾಗಿ ಕೃತಕ ಬುದ್ಧಿಮತ್ತೆಯ ಅಳವಡಿಕೆಯು ಅಭಿವೃದ್ಧಿ ರಾಷ್ಟ್ರವಾಗುವ ನಿಟ್ಟಿನಲ್ಲಿ ಭಾರತದ ಯಾನದಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆವಿಷ್ಕಾರ, ಉತ್ಪಾದಕತೆ, ಉದ್ದಿಮೆಗಳಿಗೆ ನವರೂಪ ನೀಡಿಕೆ, ಹೊಸ ಅವಕಾಶಗಳ ಸೃಜಿಸುವಲ್ಲಿ ಕೃತಕ ಬುದ್ಧಿಮತ್ತೆ ಮಹತ್ವದ ಪಾತ್ರ ವಹಿಸುತ್ತಿದೆ. ತಂತ್ರಜ್ಞಾನ ರಂಗದಲ್ಲಿನ ತ್ವರಿತ ಮುನ್ನಡೆಗಳ ಫಲವಾಗಿ ಲೆಕ್ಕಾಚಾರ, ವಿತ್ತೀಯ ವೃತ್ತಿರಂಗದಲ್ಲೂ ತ್ವರಿತ ಮಾರ್ಪಾಡುಗಳಾಗುತ್ತಿವೆ ಎಂದು ಪ್ರಧಾನಿ ಮೋದಿ ಗಮನ ಸೆಳೆದಿದ್ದಾರೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಆಯೋಜಿಸಿದ ಎಐ ಆವಿಷ್ಕಾರ ಶೃಂಗಸಭೆಗೆ ತಮ್ಮ ಸಂದೇಶದಲ್ಲಿ ಪ್ರಧಾನಿ ಮೋದಿ ಈ ರೀತಿ ಭರವಸೆಗಳ ವ್ಯಕ್ತಪಡಿಸಿದ್ದಾರೆ. ಮಾನವ ನಿರ್ಣಯ ಸಹಿತ ಎಐಯನ್ನು ಜವಾಬ್ದಾರಿಯುತ ಬಳಸಿದಲ್ಲಿ ಎಐ ಆಧಾರಿತ ಪರಿಕರಗಳು ದಕ್ಷತೆಯನ್ನು ಹೆಚ್ಚಿಸಬಲ್ಲವು, ಅನುವರ್ತನಶೀಲತೆಯನ್ನು ಬಲಪಡಿಸಬಲ್ಲವು, ಸೂಕ್ತ ನಿರ್ಧಾರಗಳ ಕೈಗೊಳ್ಳಲು ನೆರವಾಗುವುದು ಮತ್ತು ವೃತ್ತಿಪರರು ಮಹಾನ್ ಮೌಲ್ಯದ ಫಲಿತಾಂಶಗಳ ಪಡೆಯಲು ನೆರವಾಗಲಿವೆ ಎಂದು ಮೋದಿ ತಮ್ಮ ಸಂದೇಶದಲ್ಲಿ ಹೇಳಿದ್ದಾರೆ.



ನಿರ್ಣಾಯಕ ಪಾತ್ರ

2047ರ ವೇಳೆ ಭಾರತವು ಸಂಪನ್ನ ರಾಷ್ಟ್ರವಾಗುವ ಧ್ಯೇಯದ ಸಾಕಾರಕ್ಕಾಗಿ ನಡೆದಿರುವ ಹಲವಾರು ಪ್ರಯತ್ನಗಳ ಭಾಗವಾಗಿ ಸರಕಾರ ವಿವಿಧ ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ಎಐಯ ಜವಾಬ್ದಾರಿಯುತ ಬಳಕೆಯು ಈ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ರಾಷ್ಟ್ರದ ಪ್ರಗತಿಗೆ ಚಾರ್ಟರ್ಡ್ ಅಕೌಂಟೆಂಟ್‌ಗಳ ಕೊಡುಗೆಯನ್ನು ಪ್ರಧಾನಿ ಶ್ಲಾಘಿಸಿದ್ದಾರೆ. ಒಂದೆಡೆ ಎಐ ರಂಗದ ಅವಕಾಶಗಳನ್ನು ಭಾರತ ಸ್ವೀಕರಿಸುತ್ತಿರುವಂತೆಯೇ, ಸಿಎ ಸೋದರ ಸಮೂಹವು ಹಣಕಾಸು ರಂಗದಲ್ಲಿ ತಜ್ಞತೆ, ಆವಿಷ್ಕಾರಗಳ ಹರಿಕಾರರಾಗಿ ಅತ್ಯುನ್ನತ ದರ್ಜೆಯ ಸಮಗ್ರತೆಯನ್ನು ನಿರಂತರ ಎತ್ತಿಹಿಡಿಯೋ ಮುಖೇನ, ವಿಕಸಿತ ಭಾರತ ನಿರ್ಮಾಣಕ್ಕೆ ಕೊಡುಗೆಯಾಗಲಿದ್ದಾರೆಂಬ ಆತ್ಮವಿಶ್ವಾಸ ತನಗಿದೆ ಎಂದು ಪ್ರಧಾನಿ ಮೋದಿ ಭರವಸೆ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಜೂ.28: ಮಾಣಿಲದಲ್ಲಿ ಆಮಂತ್ರಣ ಪತ್ರ ಬಿಡುಗಡೆ

• ವಿಟ್ಲ: ಮಾಣಿಲ ಶ್ರೀಧಾಮ ಶ್ರೀ ದುರ್ಗಾ ಮಹಾಲಕ್ಷ್ಮೀ ಕ್ಷೇತ್ರದಲ್ಲಿ ಜು.12ರಿಂದ ಆ.28ವರೆಗೆ ನಡೆಯುವ 48 ದಿನಗಳ ಸಾಮೂಹಿಕ ಶ್ರೀ ಲಕ್ಷ್ಮೀ ಪೂಜೆ ಹಾಗೂ ಶ್ರೀ ವರಮಹಾಲಕ್ಷ್ಮೀ ವ್ರತಾಚರಣೆ ಕಾರ್ಯಕ್ರಮದ ಆಮಂತ್ರಣ ಪತ್ರ ಬಿಡುಗಡೆ ಜೂ.28ರಂದು ಬೆಳಗ್ಗೆ 10 ಗಂಟೆಗೆ ಶ್ರೀಧಾಮದಲ್ಲಿ ನಡೆಯಲಿದೆ. ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಸಭಾಧ್ಯಕ್ಷತೆಯನ್ನು ಸಮಿಯ ಅಧ್ಯಕ್ಷ ಹರೀಶ್ ಬೊಟ್ಟಾರಿ ಚೇವಾರು ವಹಿಸಲಿದ್ದಾರೆ. ಹಿರಿಯ ಉದ್ಯಮಿ ಗೋಪಾಲಕೃಷ್ಣ ಪೈ, ಕಾರಳಮುಗೇರುಗುತ್ತು ಯಜಮಾನ ಅಮರನಾಥ ಅಜಿಲ, ಕ್ಯಾಂಪ್ಕೋ ನಿರ್ದೇಶಕ ಸತೀಶ್ ಚಂದ್ರ ಭಂಡಾರಿ, ಉದ್ಯಮಿಗಳಾದ ಬಿ. ಸಂಜೀವ ಪೂಜಾರಿ, ಡಿ. ಚಂದಪ್ಪ ಮೂಲ್ಯ, ಮೆಸ್ಕಾಂ ಸಹಾಯಕ ಇಂಜಿನಿಯರ್ ಸಚ್ಚಿದಾನಂದ ಸಾಲಿಯಾನ್, ಕಾಟುಕುಕ್ಕೆ ಮುಖ್ಯ ಶಿಕ್ಷಕ ಹರಿಪ್ರಸಾದ್ ಶೆಟ್ಟಿ ಮೇಲೆಂಗಿ ಭಾಗವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಭಗವದ್ಗೀತಾ ಪಾರಾಯಣದಲ್ಲಿ ಶ್ರಾವಣಿದೀಪಗೆ ಚಿನ್ನದ ಪದಕ

• ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ಶ್ರಾವಣಿದೀಪ



ಆನ್‌ಲೈನ್‌ನಲ್ಲಿ ನಡೆದ ಭಗವದ್ಗೀತಾ ಪಾರಾಯಣದಲ್ಲಿ ಚಿನ್ನದ ಪದಕವನ್ನು ಪಡೆದು, ಹರಿಯಾಣದ ಕುರುಕ್ಷೇತ್ರದಲ್ಲಿ ಸಹಸ್ರ ಗೀತಾ ಕಂಠನಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಪಡೆದಿರುತ್ತಾಳೆ. ಕಳೆದ ವರ್ಷ ಉಡುಪಿಯಲ್ಲಿ ನಡೆದ ಲಕ್ಷ ಕಂಠ ಗೀತ ಗಾಯನದಲ್ಲಿ ಭಾಗವಹಿಸಿರುತ್ತಾಳೆ. ಗೀತಾ ಪರಿವಾರದ ಸಂಸ್ಥಾಪಕರಾದ ಸ್ವಾಮಿ ಶ್ರೀ ಗೋವಿಂದ ದೇವ್ ಗಿರಿ ಮಹಾರಾಜರ ಗೀತಾ ಪರಿವಾರದ ಬಳಗದಲ್ಲಿ ಸೇರಿ ಭಗವದ್ಗೀತೆಯ ಅಭ್ಯಾಸವನ್ನು ಉಮಾರಾವ್ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದಾಳೆ. ಈಕೆ ಸಂದೀಪ್ ಶೆಬಿರ್ ಮತ್ತು ದಿವ್ಯ ಮೆಲ್ಕಾರ್ ಇವರ ಪುತ್ರಿಯಾಗಿರುತ್ತಾಳೆ.

ಡಿವೈಡರ್‌ಗೆ ಶಾಲಾ ಬಸ್ ಡಿಕ್ಕಿ; ನಾಲ್ಕು ಮಕ್ಕಳಿಗೆ ಗಾಯ

• ಉಡುಪಿ: ಶಾಲಾ ಬಸ್ ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದಾಗಿ ಬಸ್ ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್ ಮತ್ತು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನಲ್ಲಿದ್ದ ನಾಲ್ಕು ಶಾಲಾ ಮಕ್ಕಳು ಗಾಯಗೊಂಡ ಘಟನೆ ಮಣಿಪಾಲದಲ್ಲಿ ನಡೆದಿದೆ. ಸಿಂಡಿಕೇಟ್ ಸರ್ಕಲ್ ಡೌನ್ ಬಳಿಯ ಸೆಂಟ್ರಲ್ ಪಾರ್ಕ್ ಹೋಟೆಲ್ ಎದುರಿನ ರಾಷ್ಟ್ರೀಯ ಹೆದ್ದಾರಿ 169(ಎ) ಯಲ್ಲಿ ಬಸ್ ಚಾಲಕ ರಿಜ್ವಾನ್ ಅತಿ ವೇಗ ಮತ್ತು ಬೇಜವಾಬ್ದಾರಿಯಿಂದ ವಾಹನ ಚಲಾಯಿಸಿದ್ದರಿಂದ ಬಸ್ ಹತೋಟಿ ತಪ್ಪಿ ರಸ್ತೆಯ ಬಲಬದಿಯ ಡಿವೈಡರ್ ಹಾಗೂ ವಿದ್ಯುತ್ ಕಂಬಕ್ಕೆ ಜೋರಾಗಿ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಬಸ್ಸಿನ ಹಿಂಭಾಗದಲ್ಲಿ ಕುಳಿತಿದ್ದ ನಾಲ್ಕು ಜನ ಶಾಲಾ ಮಕ್ಕಳಿಗೆ ಸಣ್ಣಪುಟ್ಟ ತರಚಿದ ಗಾಯಗಳಾಗಿವೆ. ಈ ಕುರಿತು ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಪತ್ತೆಯಾದ ಯುವಕನನ್ನು ಪತ್ತೆ ಹಚ್ಚಿ ಪೋಷಕರಿಗೆ ಒಪ್ಪಿಸಿದ ಸುಳ್ಯ ಪೊಲೀಸರು

• ಸುಳ್ಯ: ಒಂದು ವಾರದ ಹಿಂದೆ ನಾಪತ್ತೆಯಾಗಿದ್ದ ದುಗ್ಗಲಡ್ಕ ಕೊಯಿಕುಳಿ ನಿವಾಸಿ ಡಿ.ಸಿ. ಕೌಶಿಕ್ ಎಂಬಾತನನ್ನು



ಸುಳ್ಯ ಪೊಲೀಸರು ತಮಿಳುನಾಡಿನ ವೇಲೂರಿನಿಂದ ಪತ್ತೆ ಹಚ್ಚಿ ಕರೆತಂದು ಬುಧವಾರ ಪೋಷಕರಿಗೆ ಒಪ್ಪಿಸಿದ್ದಾರೆ ಈತ ದೊಡ್ಡತೋಟದಲ್ಲಿ ವಾಸ್ತವ್ಯವಾಗಿರುವ ಚಂದ್ರಶೇಖರ್ ಎಂಬವರ ಪುತ್ರ ಜೂ.18ರಿಂದ ಕಾಣೆಯಾಗಿದ್ದು, ಈ ಬಗ್ಗೆ ಮನೆಯವರು ಸುಳ್ಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಹಿನ್ನೆಲೆಯಲ್ಲಿ ಸುಳ್ಯ ಪೊಲೀಸರು ಕಾರ್ಯಾಚರಣೆ ನಡೆಸಿ ಆತನನ್ನು ತಮಿಳುನಾಡಿನಿಂದ ಪತ್ತೆ ಹಚ್ಚಿ ಕರೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಸುಳ್ಯ ಪೊಲೀಸ್ ಠಾಣಾ ಉಪನಿರೀಕ್ಷಕ ಸಂತೋಷ್ ಕುಮಾರ್ ಬಿ.ಪಿ. ನೇತೃತ್ವದಲ್ಲಿ ಸಿಬ್ಬಂದಿಗಳಾದ ಶ್ರೀಶೈಲ ಎಂ.ಕೆ. ಹಾಗೂ ಗಜೇಂದ್ರ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕಾಸರಗೋಡು ಫುಟ್‌ಪಾತ್‌ಗಳಲ್ಲಿ ಪಾದಚಾರಿಗಳ ಸುಗಮ ಸಂಚಾರಕ್ಕೆ ವಾಹನಗಳ ಅಡ್ಡಿ

ಕಾಲುದಾರಿಯಲ್ಲೇ ಅಕ್ರಮ ನಿಲುಗಡೆ

• ಕಾಸರಗೋಡು: ಕಾಸರಗೋಡು ನಗರದ ವಿವಿಧ ಭಾಗಗಳ ಫುಟ್‌ಪಾತ್‌ಗಳಲ್ಲೇ ವಾಹನಗಳು ಅನಧಿಕೃತವಾಗಿ ನಿಲುಗಡೆಗೊಳ್ಳುತ್ತಿದ್ದು, ಇದರಿಂದಾಗಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಮಾತ್ರವಲ್ಲದೆ ಫುಟ್‌ಪಾತ್‌ಗಳಲ್ಲಿ ಜನದಟ್ಟಣೆಗೂ ಕಾರಣವಾಗುತ್ತಿದೆ. ನಗರ ವ್ಯಾಪ್ತಿಯ ಹಲವೆಡೆಗಳಲ್ಲಿ ಪಾದಚಾರಿಗಳಿಗೆ ರಸ್ತೆ ಮೂಲಕ ಹಾದುಹೋಗಲು ಝೀಬ್ರಾ ಲೈನ್‌ಗಳಿಲ್ಲ. ಆದ್ದರಿಂದ ಜೀವ ಕೈಯಲ್ಲಿ ಹಿಡಿದುಕೊಂಡು ರಸ್ತೆಯನ್ನು ದಾಟಬೇಕಾದ ಅನಿವಾರ್ಯತೆಯಿದೆ. ಈ ಹಿನ್ನೆಲೆಯಲ್ಲಿ ಪಾದಚಾರಿಗಳು ಬಹುತೇಕ ಕಡೆಗಳಲ್ಲಿ ಫುಟ್‌ಪಾತ್‌ಗಳನ್ನೇ ಅವಲಂಬಿಸುತ್ತಿದ್ದಾರೆ.

ನಗರದ ಪ್ರಧಾನ ರಸ್ತೆಯಾದ ಎಂ.ಜಿ.ರೋಡ್, ಕಾಸರಗೋಡು – ಕಾಞಂಗಾಡು ರಾಜ್ಯ ಹೆದ್ದಾರಿ, ಟ್ರಾಫಿಕ್ ಜಂಕ್ಷನ್, ಬ್ಯಾಂಕ್ ರೋಡ್, ನಾಯಕ್ಸ್ ರೋಡ್, ಕೆ.ಪಿ.ಆರ್.ರಾವ್ ರೋಡ್, ಹಳೆ ಬಸ್ ನಿಲ್ದಾಣ, ಹೊಸ ಬಸ್ ನಿಲ್ದಾಣ ಮೊದಲಾದೆಡೆಗಳಲ್ಲಿ ಫುಟ್‌ಪಾತ್‌ಗಳಲ್ಲೇ ಬೈಕ್, ಆಟೋರಿಕ್ಷಾ, ಕಾರು ಸಹಿತ ವಿವಿಧ ವಾಹನಗಳನ್ನು ನಿಲುಗಡೆಗೊಳಿಸಲಾಗುತ್ತಿದೆ. ಇದೊಂದು ಗಂಭೀರ ಸಮಸ್ಯೆಯಾಗಿದ್ದರೂ ನಗರಸಭಾ ಆಡಳಿತವಾಗಲೀ, ಮೋಟಾರು ವಾಹನ ಇಲಾಖೆಯಾಗಲೀ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸವಾಗಿದೆ.

ಇನ್ನೊಂದೆಡೆ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ರಸ್ತೆಗಳು,



ಫುಟ್‌ಪಾತ್‌ಗಳಲ್ಲೇ ಸಾಮಗ್ರಿಗಳ ಮಾರಾಟ

ಇನ್ನೊಂದೆಡೆ ಕಾಸರಗೋಡು ನಗರದ ಕೆಲವು ಪ್ರದೇಶಗಳಲ್ಲಿ ಫುಟ್‌ಪಾತ್‌ಗಳಲ್ಲೇ ಸಾಮಗ್ರಿಗಳನ್ನು ಇರಿಸಿ ಮಾರಾಟ ನಡೆಸಲಾಗುತ್ತಿದೆ. ಸಾಮಾನ್ಯವಾಗಿ ಹಳೆ ಬಸ್ ನಿಲ್ದಾಣ ಪರಿಸರದಲ್ಲಿ ಈ ರೀತಿಯ ವ್ಯಾಪಾರ ವ್ಯಾಪಕವಾಗಿ ಕಂಡು ಬರುತ್ತಿದೆ.

ಈ ನಡುವೆ ಕರಂದಕ್ಕಾಡು – ತಾಳಿಪಡ್ಪು ಮೈದಾನ ಸಮೀಪದ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯ ಫುಟ್‌ಪಾತ್‌ನಲ್ಲಿ ವಿದ್ಯುತ್ ಕಂಬದ ಸ್ಟೇ ವಯರ್ ಅಳವಡಿಸಲಾಗಿದ್ದು, ಇದು ಕೂಡಾ ಕಾಲ್ನಡೆ ಪ್ರಯಾಣಿಕರಿಗೆ ಸಮಸ್ಯೆಯಾಗಿ ಕಾಡುತ್ತಿದೆ.

ನಗರಸಭೆಯ ಅಧೀನದಲ್ಲಿರುವ ರಸ್ತೆಗಳು ಸಹಿತ ಇನ್ನಿತರ ರಸ್ತೆಗಳಲ್ಲಿ ಝೀಬ್ರಾ ಲೈನ್‌ಗಳನ್ನು ಎಳೆಯದಿರುವುದು ಪಾದಚಾರಿಗಳಿಗೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಈ ಮೊದಲು ಇದ್ದ ಝೀಬ್ರಾ ಲೈನ್‌ಗಳು ಅಳಿಸಿ ಹೋಗಿರುವುದರಿಂದ ಬಹುತೇಕ ಕಡೆಗಳಲ್ಲಿ ಪಾದಚಾರಿಗಳು ರಸ್ತೆ ದಾಟುವಾಗ ಅಪಾರ ಸಮಸ್ಯೆ ಎದುರಿಸುತ್ತಿದ್ದಾರೆ.

ವಿದ್ಯುತ್ ಟ್ರಾನ್ಸ್‌ಫಾರ್ಮರ್

ಕರಂದಕ್ಕಾಡು ಅಶ್ವಿನಿ ನಗರದಲ್ಲಿ ಸರ್ವೀಸ್ ರಸ್ತೆಯ ಫುಟ್‌ಪಾತ್‌ಗೆ ಒಳಪಡಿಸಿ ವಿದ್ಯುತ್ ಟ್ರಾನ್ಸ್ ಫಾರ್ಮರ್ ಸ್ಥಾಪಿಸಲಾಗಿದೆ. ನುಳ್ಳಿಪ್ಪಾಡಿ ಸಮೀಪ ಸರ್ವೀಸ್ ರಸ್ತೆಗೆ ಅಗಲ ಕಡಿಮೆಯಿರುವುದರಿಂದ ಫುಟ್‌ಪಾತ್ ಹಾಗೂ ರಸ್ತೆ ಸಮಾನಾಂತರದಲ್ಲಿದೆ. ಫುಟ್‌ಪಾತ್ ರಸ್ತೆಗಿಂತ ಎತ್ತರವಿಲ್ಲದ ಕಾರಣ ಈ ಭಾಗದಲ್ಲಿ ವಾಹನಗಳು ಹೆಚ್ಚಾಗಿ ಫುಟ್‌ಪಾತ್‌ನಲ್ಲೇ ಸಂಚರಿಸುತ್ತಿವೆ. ಫುಟ್‌ಪಾತ್ ಹಾಗೂ ರಸ್ತೆಗೆ ಪರಸ್ಪರ ಎತ್ತರ ವ್ಯತ್ಯಾಸವಿಲ್ಲದಿರುವುದು, ಫುಟ್‌ಪಾತ್‌ನಲ್ಲೇ ವಿದ್ಯುತ್ ಟ್ರಾನ್ಸ್ ಫಾರ್ಮರ್, ವಿದ್ಯುತ್ ಕಂಬ ಹಾಗೂ ಸ್ಟೇ ವಯರ್‌ಗಳನ್ನು ಸ್ಥಾಪಿಸುವುದರಿಂದಲೂ ಪಾದಚಾರಿಗಳು ಬವಣೆ ಪಡಬೇಕಾಗಿದೆ. ಈ ಕುರಿತು ಸಂಬಂಧಪಟ್ಟ ಇಲಾಖೆಗಳು ಇನ್ನಾದರೂ ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಕಾಸರಗೋಡು ನಗರದ ಬಹುತೇಕ ಎಲ್ಲಾ ಫುಟ್‌ಪಾತ್‌ಗಳು ಕೂಡಾ ವಾಹನ ಪಾರ್ಕಿಂಗ್ ಸ್ಥಳವಾಗಿ ಪರಿವರ್ತನೆಗೊಳ್ಳಬಹುದು.

ಫುಟ್‌ಪಾತ್‌ಗಳಲ್ಲೇ ವಾಹನಗಳನ್ನು ನಿಲುಗಡೆಗೊಳಿಸುತ್ತಿರುವುದರಿಂದ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲಿರುವ ಯೋಜನೆಗಳೆಲ್ಲವೂ ನಿಷ್ಪ್ರಯೋಜಕವಾಗಿವೆ. ಫುಟ್‌ಪಾತ್‌ಗಳಲ್ಲಿ ಅನಧಿಕೃತವಾಗಿ ವಾಹನಗಳು ನಿಲುಗಡೆಗೊಳ್ಳುತ್ತಿರುವುದರಿಂದ ಕೆಲವೊಮ್ಮೆ ಅಪಘಾತಗಳಿಗೂ ಕಾರಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಇಲಾಖೆಗಳು ಗಮನ ಹರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ನಗರ ಪ್ರದೇಶ ಹಾಗೂ ಪ್ರಧಾನ ಪೇಟೆಗಳಲ್ಲೂ ವಾಹನಗಳನ್ನು ಅವೈಜ್ಞಾನಿಕವಾಗಿ ನಿಲುಗಡೆಗೊಳಿಸುವುದರಿಂದ ಕಾಲ್ನಡಿಗೆ ಪ್ರಯಾಣಿಕರು ತೊಂದರೆಪಡುವಂತಾಗಿದೆ. ಪಾರ್ಕಿಂಗ್ ಕೇಂದ್ರಗಳನ್ನು ನಿಗದಿಪಡಿಸುವುದು, ಏಕಮುಖಸಂಚಾರ, ಸಿಗ್ನಲ್‌ಗಳು, ಸೈನ್ ಬೋರ್ಡ್‌ಗಳು, ಝೀಬ್ರಾ ಕ್ರಾಸಿಂಗ್‌ಗಳನ್ನು ಅಳವಡಿಸಿ ಸಂಚಾರ ದಟ್ಟಣೆಯನ್ನು ಪರಿಹರಿಸುವುದು, ಆಟೋರಿಕ್ಷಾ, ಟ್ಯಾಕ್ಸಿ, ಬಸ್‌ಗಳಿಗಿರುವ ನಿಲ್ದಾಣಗಳನ್ನು ಜನರಿಗೆ ಸಮಸ್ಯೆಯಾಗದ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು, ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ, ವಾಹನ ಚಾಲಕರಿಗೆ ಸಾರಿಗೆ ನಿಯಮಗಳ ಕುರಿತು ತಿಳುವಳಿಕೆ ಮೂಡಿಸುವುದು ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದರಿಂದ ಫುಟ್‌ಪಾತ್‌ಗಳ ಮೇಲೆ ವಾಹನಗಳ ನಿಲುಗಡೆಗೆ ನಿಯಂತ್ರಣ ಹೇರಬಹುದು.

ಉಡುಪಿ:ದೇವಸ್ಥಾನದ ಖಾಲಿ ಚೆಕ್‌ಗೆ ನಕಲಿ ಸಹಿ ಮಾಡಿ ವಂಚನೆಗೆ ಯತ್ನಿಸಿದ ಮಾಜಿ ಆಪರೇಟರ್ ವಿರುದ್ಧ ಕೇಸ್

• ಉಡುಪಿ: ಪರ್ವಾಜೆ ಶ್ರೀ ಮಹಾಲಿಂಗೇಶ್ವರದೇವಸ್ಥಾನದಬ್ಯಾಂಕ್ ಖಾತೆಯ ಖಾಲಿ ಚೆಕ್‌ಗೆ ಅಧ್ಯಕ್ಷರ ನಕಲಿ ಸಹಿ ಮಾಡಿ ನಗದೀಕರಣಕ್ಕೆ ಯತ್ನಿಸಿ ವಂಚಿಸಲು ಯತ್ನಿಸಿದ ದೇವಸ್ಥಾನದ ಮಾಜಿ ಡೇಟಾ ಎಂಟ್ರಿ ಆಪರೇಟರ್ ವಿರುದ್ಧ ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರ್ಣೆ ಗ್ರಾಮದ ಎಣ್ಣೆಹೊಳೆ ನಿವಾಸಿ ಅಕ್ಷಯ ದೇವಾಡಿಗ (29) ಆರೋಪಿಯಾಗಿದ್ದಾನೆ. ಈತ 2022ರ ಡಿಸೆಂಬರ್ 1 ರಿಂದ 2026ರ ಮೇ 7ರ ತನಕ ದೇವಸ್ಥಾನದ ಡೇಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ. ಇಲಾಖಾ ಲೆಕ್ಕ ಪರಿಶೋಧನೆ (ಆಡಿಟಿಂಗ್) ವೇಳೆಯಲ್ಲಿ ಈತನ ಕರ್ತವ್ಯ ಲೋಪ ಹಾಗೂ ಆರ್ಥಿಕ ಅಕ್ರಮ ಬೆಳಕಿಗೆ ಬಂದಿತ್ತು. ಈ ಬಗ್ಗೆ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ವಿವರಣೆ ಕೇಳಿದಾಗ ಯಾವುದೇ ಮಾಹಿತಿ ನೀಡದೆ ಮೇ 7ರಂದು ಈತ ದಿಢೀರ್ ರಾಜೀನಾಮೆ ನೀಡಿ ಹೊರನಡೆದಿದ್ದ.

ಜೂನ್ 24ರಂದು ಧಾರ್ಮಿಕ ಸಂಸ್ಥೆಯ ಇಂಡಿಯನ್ ಓವರ್ ಸೀಸ್ ಬ್ಯಾಂಕ್‌ನ ಕರೆಂಟ್ ಅಕೌಂಟ್‌ನ ಖಾಲಿ ಚೆಕ್ ಲೀಫ್ ಒಂದಕ್ಕೆ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಭಾಕರ ಬಂಗೇರ ಅವರ ನಕಲಿ ಸಹಿ ಮಾಡಿ ಬ್ಯಾಂಕಿಗೆ ನಗದೀಕರಣಕ್ಕೆ ಹಾಜರುಪಡಿಸಿದ್ದಾನೆ. ಬ್ಯಾಂಕ್ ಮ್ಯಾನೇಜರ್ ಮತ್ತು ಸಿಬ್ಬಂದಿಗೆ ಅನುಮಾನ ಬಂದು ವಿಚಾರಿಸಿದಾಗ ಸರಿಯಾದ ಉತ್ತರ ನೀಡದೆ ಪರಾರಿಯಾಗಿದ್ದಾನೆ. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಭಾಕರ ಬಂಗೇರ (68) ನೀಡಿದ ದೂರಿನಂತೆ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೀಕರ ರಸ್ತೆ ಅಪಘಾತ: ಕಾರು ಸಂಪೂರ್ಣ ನುಜ್ಜುಗುಜ್ಜು

• ಬೆಳ್ತಂಗಡಿ: ತಾಲೂಕಿನ ಸುಲ್ಕೇರಿ ಗ್ರಾಮದಲ್ಲಿ ಜೂ. 26ರಂದು ಬೆಳಗ್ಗೆ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು ಕಾರು ಸಂಪೂರ್ಣ ನುಜ್ಜುಗುಜ್ಜಾಗಿದ್ದು ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿರುವುದಾಗಿ ತಿಳಿದು ಬಂದಿದೆ.

ಮುಂಜಾನೆ ಸುಲ್ಕೇರಿ ಗ್ರಾಮದಲ್ಲಿ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಮಾರುತಿ ಸುಜುಕಿ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ತೀವ್ರತೆಗೆ ಕಾಂಕ್ರೀಟ್ ಕಂಬ ಮುರಿದು ಕಾರಿನ ಮೇಲೆಯೇ ಬಿದ್ದಿದ್ದು, ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ. ಬಾನೆಟ್, ಬಂಪರ್, ಇಂಜಿನ್ ಭಾಗ ಸಂಪೂರ್ಣ ಜಖಂಗೊಂಡಿದೆ. ಕಾರಿನ ಹಳದಿ ನಂಬರ್ ಪ್ಲೇಟ್ ಇದ್ದು, ಇದು ಬಾಡಿಗೆ ವಾಹನ ಎಂದು ತಿಳಿದುಬಂದಿದೆ.

ಅಪಘಾತದಿಂದ ವಿದ್ಯುತ್ ತಂತಿಗಳು ತುಂಡಾಗಿ ರಸ್ತೆಯಲ್ಲಿ ಬಿದ್ದಿವೆ. ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಮೆಸ್ಕಾಂ ಸಿಬ್ಬಂದಿ ದುರಸ್ತಿ ಕಾರ್ಯ ಕೈಗೊಂಡಿದ್ದಾರೆ.



ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿರುವುದಾಗಿ ತಿಳಿದು ಬಂದಿದ್ದು ಅವರ ಸ್ಥಿತಿಯ ಬಗ್ಗೆ ಪೊಲೀಸರಿಂದ ಅಧಿಕೃತ ಮಾಹಿತಿ ಇನ್ನಷ್ಟೇ ಬರಬೇಕಿದೆ. ಬೆಳ್ತಂಗಡಿ ಸಂಚಾರಿ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಉಡುಪಿ ಜಿಲ್ಲೆಯ ಮೂವರು ರೌಡಿಶೀಟರ್‌ಗಳ ಗಡಿಪಾರು

• ಉಡುಪಿ: ಜಿಲ್ಲೆಯಲ್ಲಿ ಅಕ್ರಮ ಚಟುವಟಿಕೆ ಹಾಗೂ ರೌಡಿಸಂ ಮಟ್ಟಹಾಕುವ ನಿಟ್ಟಿನಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಮೂವರು ಸಕ್ರಿಯ ರೌಡಿಶೀಟರ್‌ಗಳನ್ನು ಜಿಲ್ಲೆಯಿಂದ ಗಡಿಪಾರು ಮಾಡಿ ಜೂನ್ 24ರಂದು ಆದೇಶ ಹೊರಡಿಸಿದ್ದಾರೆ.

ಗಡಿಪಾರುಕ್ರಮಕ್ಕೆಒಳಗಾದರೌಡಿಶೀಟರ್‌ಗಳು ಕೊಲೆ, ಕೊಲೆಯತ್ನ, ಪೊಲೀಸ್ ಠಾಣೆಗೆ ಕಲ್ಲೆಸೆತ, ಕನ್ನಕಳವು, ಜಾನುವಾರು ಕಳವು ಹಾಗೂ ಹತ್ಯೆ ಸೇರಿದಂತೆ ಒಟ್ಟು 30 ಗಂಭೀರ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ.

ಮೊಹಮ್ಮದ್ ದಾನೀಶ್ ಮದನಿ (23)

ಕುಂದಾಪುರ ತಾಲೂಕಿನ ಗುಲ್ವಾಡಿ ಗ್ರಾಮದ ಮಾವಿನಕಟ್ಟೆ ನಿವಾಸಿಯಾದ ಈತನ ವಿರುದ್ಧ 8 ಪ್ರಕರಣಗಳು ದಾಖಲಾಗಿದ್ದು, ಕುಂದಾಪುರ ಗ್ರಾಮಾಂತರ ಠಾಣೆಯ ರೌಡಿಶೀಟರ್ ಆಗಿದ್ದಾನೆ. ಈತನನ್ನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ಕರಾಣಿ ಮುಸೀನ್ (44)

ಕುಂದಾಪುರ ತಾಲೂಕಿನ ಕಂಡ್ಲೂರು ನಿವಾಸಿಯಾದಈತನವಿರುದ್ಧ7 ಪ್ರಕರಣಗಳು ದಾಖಲಾಗಿವೆ. ಕುಂದಾಪುರ ಗ್ರಾಮಾಂತರ



ಠಾಣೆಯ ರೌಡಿಶೀಟರ್ ಆಗಿರುವ ಈತನನ್ನು ಬೀದರ್ ಜಿಲ್ಲೆಯ ಗಾಂಧಿ ಗಂಜ್ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲು ಆದೇಶಿಸಲಾಗಿದೆ.

ಇಲಿಯಾಸ್ (36)

ಕಾಪು ತಾಲೂಕಿನ ಪಾದೂರು ಗ್ರಾಮದ ಚಂದ್ರನಗರ ನಿವಾಸಿಯಾದ ಈತನ ವಿರುದ್ಧ ಬರೋಬ್ಬರಿ 15 ಪ್ರಕರಣಗಳು ದಾಖಲಾಗಿದ್ದು, ಶಿರ್ವ ಪೊಲೀಸ್ ಠಾಣೆಯ ರೌಡಿಶೀಟರ್ ಆಗಿದ್ದಾನೆ. ಈತನನ್ನು ಉತ್ತರ ಕನ್ನಡ ಜಿಲ್ಲೆಯ ಕಾರವಾರ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ರೌಡಿಸಂ ವಿರುದ್ಧ ಕಠಿಣ ಕ್ರಮ

ಉಡುಪಿ ಜಿಲ್ಲೆಯಲ್ಲಿ ಈವರೆಗೆ 3 ಅಪರಾಧಿಗಳ ವಿರುದ್ಧ ಪಿ.ಐ.ಟಿ. ಎನ್.ಡಿ.ಪಿ.ಎಸ್. ಕಾಯ್ದೆ ಹಾಗೂ 4 ಜನರನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಕಾರಾಗೃಹದಲ್ಲಿ ಇರಿಸಲಾಗಿದೆ.

ಮಂಗಳೂರು–ರಾಮೇಶ್ವರಂ ಎಕ್ಸ್‌ಪ್ರೆಸ್ ರೈಲು | ಪ್ರಯಾಣಿಕರ ಒತ್ತಾಯ

ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ವಿಸ್ತರಣೆಗಾಗಿ ಆಗ್ರಹ

• ಮಂಗಳೂರು: ಮಂಗಳೂರು–ರಾಮೇಶ್ವರಂ ನಡುವೆ ಸಂಚರಿಸುವ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲನ್ನು ಪ್ರತಿದಿನ ಅಥವಾ ವಾರಕ್ಕೆ ಎರಡು ಬಾರಿಗೆ ವಿಸ್ತರಿಸಬೇಕು ಎಂಬ ಆಗ್ರಹ ಪ್ರಯಾಣಿಕರಿಂದ ವ್ಯಕ್ತವಾಗಿದೆ.

ಮಂಗಳೂರು–ರಾಮೇಶ್ವರಂ (ರೈಲು ಸಂಖ್ಯೆ: 16622/16621) ನಡುವೆ ವಾರಕ್ಕೊಮ್ಮೆ ಸಂಚರಿಸುವ ರೈಲಿಗೆ ಕಳೆದ ಮಾರ್ಚ್‌ನಲ್ಲಿ ಚಾಲನೆ ನೀಡಲಾಗಿತ್ತು. ಪ್ರಸ್ತುತ ವಾರಕ್ಕೆ ಒಂದು ಬಾರಿ ಮಂಗಳೂರು ಸೆಂಟ್ರಲ್– ರಾಮೇಶ್ವರಂ ನಡುವೆ ಈ ರೈಲು ಓಡುತ್ತಿದೆ. ಮಂಗಳೂರು–ರಾಮೇಶ್ವರಂ ಎಕ್ಸ್‌ಪ್ರೆಸ್ ರೈಲು ಮಂಗಳೂರು ಸೆಂಟ್ರಲ್‌ನಿಂದ ಪ್ರತಿ ಶನಿವಾರ ಸಂಜೆ 7.30ಕ್ಕೆ ಹೊರಟು, ಮರುದಿನ ಬೆಳಗ್ಗೆ 10.50ಕ್ಕೆ ರಾಮೇಶ್ವರಂ ತಲುಪುತ್ತದೆ. ಭಾನುವಾರ ಮಧ್ಯಾಹ್ನ 3.30ಕ್ಕೆ ರಾಮೇಶ್ವರಂನಿಂದ ಹೊರಟು ಸೋಮವಾರ ಬೆಳಗ್ಗೆ 6.55ಕ್ಕೆ ಮಂಗಳೂರಿಗೆ ತಲುಪುತ್ತದೆ. ಮಂಗಳೂರಿನಿಂದ ರಾಮೇಶ್ವರಂಗೆ ನೇರ ರೈಲು ಸಂಪರ್ಕ ಒದಗಿಸಬೇಕು ಎಂಬ ಪ್ರಯಾಣಿಕರ ಬಹುಕಾಲದ ಬೇಡಿಕೆ ಈಡೇರಿದ ಬಳಿಕ ಈ ರೈಲಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ವಾರಕ್ಕೊಮ್ಮೆ ಸಂಚರಿಸುವ ಈ ರೈಲಿನ ಸೀಟ್‌ಗಳು ಭರ್ತಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರತಿದಿನ ಅಥವಾ ಪ್ರತಿ ಶನಿವಾರ ಹಾಗೂ ಬುಧವಾರ ಈ ರೈಲು ಮಂಗಳೂರಿನಿಂದ ರಾಮೇಶ್ವರಂಗೆ ಹೊರಡುವಂತಾಗಬೇಕು ಎಂಬುದು ಪ್ರಯಾಣಿಕರ ಒತ್ತಾಯ.

ಮಂಗಳೂರು–ರಾಮೇಶ್ವರಂ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು

ಪ್ರತಿ ಶನಿವಾರ ರಾಮೇಶ್ವರಂಗೆ ತೆರಳಿ, ಸೋಮವಾರ ಬೆಳಗ್ಗೆ ಮಂಗಳೂರು ಸೆಂಟ್ರಲ್ ರೈಲು ನಿಲ್ದಾಣಕ್ಕೆ ಮರಳುತ್ತದೆ. ಇದರಿಂದಾಗಿ ಸೋಮವಾರದಿಂದ ಶನಿವಾರದವರೆಗೆ ಸುಮಾರು ಐದು ದಿನಗಳ ಕಾಲ ಜರ್ಮನ್ ತಂತ್ರಜ್ಞಾನದ ಎಲ್‌ಎಚ್‌ಬಿ ಬೋಗಿಗಳನ್ನು ಒಳಗೊಂಡ ಸಂಪೂರ್ಣ ರೇಕ್ ಮಂಗಳೂರು ಸೆಂಟ್ರಲ್ ನಿಲ್ದಾಣದಲ್ಲೇ ಖಾಲಿಯಾಗಿ ನಿಲ್ಲುತ್ತದೆ. ಈ ರೇಕ್‌ನಲ್ಲಿ 4 ಸಾಮಾನ್ಯ ಬೋಗಿ, ಎರಡು ಹವಾನಿಯಂತ್ರಿತ ಟು ಟಿಯರ್, 6 ತ್ರೀ ಟಿಯರ್, 6 ಸ್ಲೀಪರ್ ಹಾಗೂ ಎರಡು ಎಕಾನಮಿ ಬೋಗಿಗಳು ಸೇರಿವೆ. ಐದು ದಿನ ಈ ರೈಲನ್ನು ಮಂಗಳೂರು ಸೆಂಟ್ರಲ್‌ನಲ್ಲಿ ಖಾಲಿಯಾಗಿ ನಿಲ್ಲಿಸುವ ಬದಲಿಗೆ ವಾರಕ್ಕೆ ಎರಡು ಬಾರಿ ಅಂದರೆ ಶನಿವಾರ ಹಾಗೂ ಬುಧವಾರ ಮಂಗಳೂರು- ರಾಮೇಶ್ವರಂ ನಡುವೆ ಸಂಚರಿಸಲು ಅವಕಾಶ ನೀಡಬಹುದು ಎಂಬ ಬೇಡಿಕೆ ವ್ಯಕ್ತವಾಗಿದೆ. ಈ ಬಗ್ಗೆ ದಕ್ಷಿಣ ಕನ್ನಡ ಸಂಸದರು, ರೈಲ್ವೆ ಇಲಾಖೆ ಕ್ರಮ ಕೈಗೊಳ್ಳಬೇಕು ಎಂಬುದು ಪ್ರಯಾಣಿಕರ ವಿನಂತಿಯಾಗಿದೆ.



ಈ ರೈಲಿನಲ್ಲಿ ಮಂಗಳೂರಿನಿಂದ ರಾಮೇಶ್ವರಂಗೆ ಶನಿವಾರ ಸಂಜೆ ಹೊರಟರೆ ಭಾನುವಾರ ಮಧ್ಯಾಹ್ನ ರಾಮೇಶ್ವರಂ ದೇವಾಲಯದಲ್ಲಿ ದರ್ಶನ ಮುಗಿಸಿ ವಾಪಸ್ ಭಾನುವಾರ ಮಧ್ಯಾಹ್ನ 3.30ಕ್ಕೆ ಮಂಗಳೂರಿಗೆ ಆಗಮಿಸುವ ರೈಲಿನಲ್ಲಿ ಹೊರಡಬಹುದು. ಆದರೆ, ರಾಮೇಶ್ವರಂಗೆ ತೆರಳುವ ಹೆಚ್ಚಿನ ಭಕ್ತರು ಮಧುರೈ, ಕನ್ಯಾಕುಮಾರಿ ಸಹಿತ ಸುತ್ತಲಿನ ದೇವಸ್ಥಾನ, ಪ್ರವಾಸಿ ತಾಣಗಳಿಗೂ ಭೇಟಿ ನೀಡುತ್ತಾರೆ. ಹೀಗಾಗಿ ವಾರಕ್ಕೆ ಎರಡು ಬಾರಿ ಈ ರೈಲು ಸಂಚರಿಸಿದರೆ ಭಾನುವಾರ ರಾಮೇಶ್ವರಂಗೆ ತೆರಳಿ ಗುರುವಾರ ವಾಪಸ್ ಬರಬಹುದು ಎಂಬುದು ಪ್ರಯಾಣಿಕರ ಅಭಿಪ್ರಾಯವಾಗಿದೆ.

ಮಂಗಳೂರು–ರಾಮೇಶ್ವರಂ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲನ್ನು ಕೇವಲ ರಾಮೇಶ್ವರಂಗೆ ತೆರಳುವ ಭಕ್ತರು ಮಾತ್ರವಲ್ಲದೆ ಸುತ್ತಲಿನ ದೇವಸ್ಥಾನ, ಪ್ರವಾಸಿ ಸ್ಥಳಗಳಿಗೆ ತೆರಳುವ ಜನರೂ ಅವಲಂಬಿಸಿದ್ದಾರೆ. ಜತೆಗೆ ಮಧುರೈ, ಪಳನಿ, ರಾಮೇಶ್ವರಂ ಮುಂತಾದೆಡೆಯ ಮೀನುಗಾರರೂ ಈ ರೈಲನ್ನು ಬಳಸುತ್ತಿದ್ದಾರೆ. ಮಂಗಳೂರಿನಿಂದ ಈ ಪ್ರದೇಶಗಳಿಗೆ ಮೀನುಗಾರರು ಹೆಚ್ಚಾಗಿ ಇದೇ ರೈಲಿನಲ್ಲಿ ತೆರಳುತ್ತಿದ್ದಾರೆ. ಹೀಗಾಗಿ ವಾರಕ್ಕೆ ಎರಡು ಬಾರಿಗೆ ವಿಸ್ತರಣೆಗೊಂಡರೆ ಅವರಿಗೂ ಅನುಕೂಲವಾಗಲಿದೆ.

ಉಗ್ರರಿಗೆ ಮರ್ಯಾದೆ ನೀಡಿದ ಗೃಹ ಸಚಿವ ವಿರುದ್ಧ ಬೆಲ್ಲದ ಟೀಕೆ

• **ಹುಬ್ಬಳ್ಳಿ:** ದೇಶದ ಭದ್ರತೆಗೆ ಕಂಟಕಪ್ರಾಯರಾಗಿರುವ ಮತ್ತು ಅಮಾಯಕರ ರಕ್ತ ಹರಿಸಲು ಸಂಚು ರೂಪಿಸುವ ಶಂಕಿತ ಉಗ್ರರನ್ನು ಗೃಹಸಚಿವ ಪ್ರಿಯಾಂಕ್ ಖರ್ಗೆ ಅವರು ಬಹುವಚನದಲ್ಲಿ ಸಂಬೋಧಿಸಿ ಗೌರವ ನೀಡಿರುವುದು ತೀವ್ರ ಖಂಡನೀಯ. ಇದು



ಕಾಂಗ್ರೆಸ್ ಪಕ್ಷದ ವಿಕೃತ ಮನಸ್ಥಿತಿ ಮತ್ತು ದೇಶವಿರೋಧಿ ನೀತಿಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಹಾಗೂ ಶಾಸಕ ಅರವಿಂದ ಬೆಲ್ಲದ ಟೀಕಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ದೇಶದ ಭದ್ರತೆಗಾಗಿ ಪ್ರಾಣವನ್ನು ಪಣಕ್ಕಿಟ್ಟು ಗಡಿಯಲ್ಲಿ ಹೋರಾಡುವ ಸೈನಿಕರನ್ನು ಹಾಗೂ ದೇಶದ ಹಿತ ಕಾಯುವ ದೇಶ ಭಕ್ತರನ್ನು ಏಕವಚನದಲ್ಲಿ ನಿಂದಿಸುವ ಕಾಂಗ್ರೆಸ್ ನಾಯಕರಿಗೆ, ದೇಶದ ಒಳಗೆ ಬಾಂಬ್ ಇಡಲು ಸಂಚು ರೂಪಿಸುವ ಶಂಕಿತ ಉಗ್ರರು ಕಂಡರೆ ಎಲ್ಲಿಲ್ಲದ ಗೌರವ ಮತ್ತು ಆದರ ಮೂಡುತ್ತಿರುವುದು ದುರದೃಷ್ಟಕರ ಎಂದು ಹರಿಹಾಯ್ದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಇಂತಹ ದೇಶವಿರೋಧಿ ಶಕ್ತಿಗಳಿಗೆ ಪರೋಕ್ಷ ಬೆಂಬಲ ಸಿಗುತ್ತಿದೆ ಎಂಬುದಕ್ಕೆ ಸಚಿವರ ಈ ಬೇಜವಾಬ್ದಾರಿಯುತ ಹೇಳಿಕೆಯೇ ಪ್ರತ್ಯಕ್ಷ ಸಾಕ್ಷಿ. ಒಬ್ಬ ಜವಾಬ್ದಾರಿಯುತ ಸಚಿವರಾಗಿ ಕಾನೂನು ಮತ್ತು ರಾಜ್ಯದ ಭದ್ರತೆಯ ಪರವಾಗಿ ನಿಲ್ಲಬೇಕಾದ ಪ್ರಿಯಾಂಕ್ ಖರ್ಗೆ ಅವರು, ಉಗ್ರರ ಪರವಾಗಿ ಮೃದು ಧೋರಣೆ ಹೊಂದಿರುವುದು ಅಕ್ಷಮ್ಯ ಅಪರಾಧವಾಗಿದೆ. ರಾಜ್ಯದ ಭದ್ರತೆ ಮತ್ತು ಸಾರ್ವಜನಿಕರ ಶಾಂತಿಯನ್ನು ಪಣಕ್ಕಿಟ್ಟು ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿರುವ ಕಾಂಗ್ರೆಸ್ ಸರ್ಕಾರದ ಈ ಧೋರಣೆಯನ್ನು ದೇಶದ ಜನರು ಎಂದಿಗೂ ಕ್ಷಮಿಸುವುದಿಲ್ಲ. ಸಚಿವರು ತಕ್ಷಣವೇ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದರು.

ರಾಮ ಬಾಣ



ರೈತರನ್ನು ಒಕ್ಕಲೆಬ್ಬಿಸುವುದಿಲ್ಲ: ಪರಂ

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ನಾನು ಮೊದಲೇ ಹೇಳಿದಂತೆ ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ನಾವು ಮಾಡುವುದಿಲ್ಲ. ಒತ್ತಾಯ ಪೂರ್ವಕವಾಗಿ ರೈತರನ್ನು ತೆಗೆದು ಆಚೆ



ಹಾಕಿ ನಾವು ಟೌನ್‌ಶಿಪ್ ಕಟ್ಟುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಡಿಸಿಎಂ ಡಾ. ಜಿ. ಪರಮೇಶ್ವರ ತಿಳಿಸಿದ್ದಾರೆ.

ತಮ್ಮ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿ, ರೈತರಿಗೆ ಕೊಡುವಂತಹ ಪರಿಹಾರ ಸಾಕಾಗುತ್ತಿಲ್ಲ ಎಂದು ಅನಿಸಿದರೆ ಅದನ್ನು ಕೂಡ ಇನ್ನು ಮುಂದೆ ಹೆಚ್ಚು ಮಾಡುವಂತಹ ಸಾಧ್ಯತೆಗಳು ಇದೆ. ಒಟ್ಟಾರೆ ಯಾವುದೇ ಗೊಂದಲ ಇಲ್ಲದೆ ಬಿಡದಿ ಟೌನ್‌ಶಿಪ್ ಮಾಡಬೇಕು ಎನ್ನುವುದು ನಮ್ಮ ಉದ್ದೇಶ ಎಂದರು. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಒಪ್ಪಿಗೆಯ ಮೂಲಕ ಅವರ ಜಮೀನನ್ನು ಪಡೆದು ಟೌನ್‌ಶಿಪ್ ಮಾಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ಬೆಂಗಳೂರಿನ ಮೇಲೆ ಸಂಚಾರದಟ್ಟಣೆ ಸೇರಿದಂತೆ ಅನೇಕ ಒತ್ತಡವಿದೆ. ನೈಸ್ ಪ್ರಾಜೆಕ್ಟ್ ಮಾಡಿದ ಸಂದರ್ಭದಲ್ಲಿ 7 ಟೌನ್‌ಶಿಪ್ ಮಾಡಬೇಕು ಎಂದು ಪ್ರಸ್ತಾವನೆ ಬಂದಿದ್ದವು. ಇದರ ಉದ್ದೇಶ ಬೆಂಗಳೂರಿನ ಮೇಲಿರುವ ಒತ್ತಡವನ್ನು ಕಡಿಮೆಮಾಡಬೇಕು ಎನ್ನುವುದಾಗಿತ್ತು ಎಂದರು.

ನೇಮಕಾತಿಗೆ ಅಧಿಸೂಚನೆ

ಬಜೆಟ್‌ನಲ್ಲೇ 56,942 ಹುದ್ದೆಗಳನ್ನು ನೇಮಕಾತಿ ಮಾಡುತ್ತೇವೆ ಎಂದು ತಿಳಿಸಿದ್ದೆವು. ಬಳಿಕ ಅದರ ಪ್ರಕ್ರಿಯೆಗಳು ಪ್ರಾರಂಭಗೊಂಡಿದ್ದವು. 24 ಸಾವಿರ ಹುದ್ದೆಗಳಿಗೆ ಹಣಕಾಸು ಇಲಾಖೆ ಕೂಡ ಅನುಮತಿ ನೀಡಿತ್ತು. ಎಲ್ಲಾ ಇಲಾಖೆಗಳಿಗೆ ಅಧಿಸೂಚನೆ ಮಾಡಿ ಎಂದು ನಾವು ತಿಳಿಸಿದ್ದೆವು. ಈ ಮಧ್ಯೆ ಸರ್ಕಾರದಲ್ಲಿ ಸಿಎಂ ಬದಲಾವಣೆಯಾದ ನಂತರ ಅದನ್ನು ಪುನರ್ ಪರಿಶೀಲನೆ ಮಾಡಿ ಈಗ 72 ಸಾವಿರ ಹುದ್ದೆ ತುಂಬಬೇಕು ಎಂದು ತೀರ್ಮಾನ ಮಾಡಲಾಗಿದ್ದು, ವಿವಿಧ ಇಲಾಖೆಗಳಿಗೆ ಅಧಿಸೂಚನೆ ಹೊರಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಸರಕಾರದ ತಪ್ಪುಗಳನ್ನು ಪ್ರಶ್ನಿಸುವವರಿಗೆ ದೇಶ ದ್ರೋಹಿ ಪಟ್ಟಕಟ್ಟಲಾಗುತ್ತಿದೆ
– ರಾಹುಲ್ ಗಾಂಧಿ

– ತಪ್ಪುಗಳನ್ನು ಪ್ರಶ್ನಿಸುವುದು ತಪ್ಪಲ್ಲ, ಆದರೆ ಸರಕಾರ ದೇಶದ ಹಿತಕ್ಕಾಗಿ ಸರಿಯಾದ ಕೆಲಸಗಳನ್ನು ಮಾಡಿದಾಗಲೂ ತಪ್ಪು ಅಂತ ಹೇಳುವುದು ತಪ್ಪು!

ದಿನ ಭವಿಷ್ಯ

ಮೇಷ ಪ್ರಮುಖ ಕಾರ್ಯ ಯೋಜಿಸಿದ್ದರೆ ಇಂದು ಪೂರ್ಣ ಯಶ ಸಿಗದು. ಕೌಟುಂಬಿಕ ಪರಿಸರ ಶಾಂತ. ಮಕ್ಕಳ ಸಾಧನೆಯಿಂದ ತೃಪ್ತಿ.

ವೃಷಭ ನಿಶ್ಚಿತ ಸಮಯದಲ್ಲಿ ಕೆಲಸ ಪೂರೈಸಲು ವಿಫಲ. ಇದರಿಂದ ಒತ್ತಡ ಹೆಚ್ಚಳ. ವಿದ್ಯಾರ್ಥಿಗಳಿಗೆ ಈ ದಿನ ಕಠಿಣವಾದೀತು. ಹೆಚ್ಚು ಪರಿಶ್ರಮ ಅಗತ್ಯ.

ಮಿಥುನ ಕಾಲಮಿತಿಯಲ್ಲಿ ನಿಮ್ಮ ಗುರಿ ಸಾಧಿಸುವಿರಿ. ಯಾವುದೇ ವಿಘ್ನ ಬಾಧಿಸದು. ಕೌಟುಂಬಿಕ ಸಂತೃಪ್ತಿ. ವಿದ್ಯಾರ್ಥಿಗಳ ಆಶಯ ಪೂರೈಸಲಿದೆ.

ಕಟಕ ಮನೆಯವರ ಜತೆ ಉತ್ತಮ ಹೊಂದಾಣಿಕೆ. ಭಿನ್ನಮತ ನಿವಾರಣೆ. ವದಂತಿಗಳಿಗೆ ಹೆಚ್ಚು ಕಿವಿಗೊಡಬೇಡಿ. ನಿಮ್ಮ ಕೆಲಸ ಮಾಡುತ್ತಿರಿ.

ಸಿಂಹ ಕುಟುಂಬ ಸದಸ್ಯರ ಜತೆ ಹೆಚ್ಚು ಕಾಲ ಕಳೆಯಿರಿ. ಆರೋಗ್ಯದ ಕುರಿತು ಕಾಳಜಿ ವಹಿಸಿರಿ. ವೃತ್ತಿಯಲ್ಲಿ ಸಾಧನೆಯ ತೃಪ್ತಿ. ಕಾರ್ಯ ಸಿದ್ಧಿ.

ಕನ್ಯಾ ಹೆಚ್ಚುವರಿ ಹೊಣೆಗಾರಿಕೆ ಒತ್ತಡ ಸೃಷ್ಟಿಸಲಿದೆ. ದುಡುಕಿನ ನಿರ್ಧಾರ ತಾಳದಿರಿ. ಖರೀದಿಯ ಉತ್ಸಾಹಕ್ಕೆ ಕಡಿವಾಣ ಹಾಕಿ.

ತುಲಾ ಆಧ್ಯಾತ್ಮದ ಆಸಕ್ತಿ ಉಂಟಾದೀತು. ಸಮಸ್ಯೆ ಮುಗಿಯುತ್ತಿಲ್ಲ ಎಂಬ ಭಾವವೇ ಅದಕ್ಕೆ ಕಾರಣ. ಸ್ನೇಹದಲ್ಲಿ ಬಿರುಕು. ಆರ್ಥಿಕ ಒತ್ತಡ ಹೆಚ್ಚು.

ವೃಶ್ಚಿಕ ಅಡ್ಡಿ ನಿವಾರಣೆ. ವಿಳಂಬವಿಲ್ಲದೆ ಕಾರ್ಯ ಎಸಗುವಿರಿ. ಆರ್ಥಿಕ ಸ್ಥಿರತೆ. ವೃತ್ತಿ ಒತ್ತಡ ನಿವಾರಣೆಯಾಗಲಿದೆ. ಬಂಧುತ್ವ ವೃದ್ಧಿ.

ಧನು ನಿಮ್ಮ ಭಾವನೆ, ಮನಸ್ಥಿತಿ ಆಪ್ತರ ಜತೆ ಹಂಚಿಕೊಳ್ಳಿ. ಇದರಿಂದ ಮನಸ್ಸು ಹಗುರ. ಸುಮ್ಮನೇ ಕೊರಗುತ್ತಾ ಕೂರಬೇಡ.

ಮಕರ ಸಾಧನೆಯ ದಿನ. ವ್ಯವಹಾರದಲ್ಲಿ ಸಫಲತೆ. ಕೆಲಕಾಲದಿಂದ ಕಾಡುತ್ತಿದ್ದ ಚಿಂತೆ ಪರಿಹಾರ. ವಿವಾಹಾಕಾಂಕ್ಷಿಗಳಿಗೆ ಶುಭ ಬೆಳವಣಿಗೆ.

ಕುಂಭ ಹೊಸ ಪಾಲುದಾರಿಕೆ ಲಾಭ ತಂದೀತು. ಆದರೆ ನಂಬಿಗಸ್ಥರ ಜತೆ ವ್ಯವಹಾರ ನಡೆಸಿ. ಸಂಬಂಧದಲ್ಲಿ ಉದ್ವಿಗ್ನತೆ. ಹೊಂದಾಣಿಕೆ ಮುಖ್ಯ.

ಮೀನ ಸಂಗಾತಿ ಜತೆ ಸಂಘರ್ಷ ನಡೆದೀತು. ಅವರ ದೃಷ್ಟಿಕೋನ ಕೂಡಾ ಪರಾಮರ್ಶಿಸಿ. ಸ್ನೇಹಿತರ ಜತೆ ಆತ್ಮೀಯ ಕಾಲಕ್ಷೇಪ. ಆರ್ಥಿಕ ಒತ್ತಡ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,8,3,6

ನಕ್ಸಲ್ ಟೆರರ್ ವ್ಯಾಂಕ್ವಿಶ್ಡ್ ಪುಸ್ತಕ ಬಿಡುಗಡೆಯಲ್ಲಿ ಡಾ.ಅಮರ್‌ಕುಮಾರ್ ಪಾಂಡೆ

ಭಾರತ ಈಗ ನಕ್ಸಲ್ ಮುಕ್ತ


• **ಬೆಂಗಳೂರು:** ದೇಶವನ್ನು ಐದು ದಶಕಗಳ ಕಾಲ ಕಾಡಿದ ನಕ್ಸಲ್ ಪಿಡುಗು ಭಾರತೀಯ ನಾಗರಿಕತೆಯನ್ನು ವಿನಾಶದ ಅಂಚಿಗೆ ತಳ್ಳಿತ್ತು. ನಕ್ಸಲಿಸಂ ಭಾರತದ ನಾಗರಿಕತೆಗೆ ಎದುರಾಗಿದ್ದ ಬಹುದೊಡ್ಡ ಪಿಡುಗಾಗಿತ್ತು. ಆದರೆ ಈ ಅತ್ಯಂತ ಕಠಿಣ ಸವಾಲನ್ನು ಮೆಟ್ಟಿನಿಂತು ದೇಶವನ್ನು ರಕ್ಷಿಸುವಲ್ಲಿ ಕಳೆದ ಒಂದೂವರೆ ದಶಕದಲ್ಲಿ ರೂಪಿಸಲಾದ ಭದ್ರತಾ ಮತ್ತು ಆಡಳಿತಾತ್ಮಕ ಕಾರ್ಯತಂತ್ರಗಳು ಯಶಸ್ವಿಯಾಗಿವೆ ಎಂದು ರಾಜ್ಯ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ.ಅಮರ್‌ಕುಮಾರ್ ಪಾಂಡೆ ಹೇಳಿದರು.

ಥಿಂಕರ್ಸ್ ಫೋರಂ ಕರ್ನಾಟಕ ವತಿಯಿಂದ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ನಡೆದ ಲೇಖಕ ತುಹಿನ್ ಸಿನ್ಹಾ ಬರೆದಿರುವ ನಕ್ಸಲ್ ಟೆರರ್ ವ್ಯಾಂಕ್ವಿಶ್ಡ್ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಕೇವಲ ಕೃಷಿ ದಂಗೆಯಾಗಿ ಆರಂಭವಾದ ನಕ್ಸಲ್ ಚಳುವಳಿ, ನಂತರದ ದಿನಗಳಲ್ಲಿ ದೇಶದ ಇತರ ಭಾಗಗಳಿಗೆ ಹರಡಿ ರೆಡ್ ಕಾರಿಡಾರ್ ಆಗಿ ಮಾರ್ಪಟ್ಟಿದ್ದನ್ನು ಲೇಖಕರು ಪುಸ್ತಕದಲ್ಲಿ ಅತ್ಯಂತ ಸೂಕ್ಷ್ಮವಾಗಿ ದಾಖಲಿಸಿದ್ದಾರೆ ಎಂದು ತಿಳಿಸಿದರು.

ಕೇರಳದಲ್ಲಿ ಗಣನೀಯ ಪ್ರಮಾಣದ ಜನರು ಮತ್ತು ಮಧ್ಯಮ ಕ್ರಮಾಂಕದ ನಾಯಕರು ಈ ಚಳುವಳಿಯ ಭಾಗವಾಗಿದ್ದರು. ಕರ್ನಾಟಕವೂ ಇದರಿಂದ ಮುಕ್ತವಾಗಿರಲಿಲ್ಲ ಎಂದು ಹೇಳಿದರು.

ಭಾರತದ ಮಣ್ಣಿನಿಂದ ಹುಟ್ಟಿದ, ಹೊರಗಿನಿಂದ ಆಮದು ಮಾಡಿಕೊಂಡ ಸಿದ್ಧಾಂತಗಳನ್ನು ಇಲ್ಲಿನ ವ್ಯವಸ್ಥೆಗೆ ಪರ್ಯಾಯವಾಗಿ ಹೇರಲು ನಕ್ಸಲರು ಯತ್ನಿಸಿದರು. ಮೊದಲು ರಷ್ಯಾದಿಂದ ಸಿದ್ಧಾಂತ ಆಮದಾಯಿತು, ಅದು ವಿಫಲವಾದಾಗ ಚೀನಾದ ಮಾವೋವಾದವನ್ನು ಅಳವಡಿಸಿಕೊಂಡು ಮಾವೋವಾದಿ ಎಂದು ಕರೆದುಕೊಂಡರು. ಬಂದೂಕಿನ ನಳಿಕೆಯಿಂದ ಅಧಿಕಾರ ಹಿಡಿಯಬೇಕು ಎಂಬುದು ಅವರ ಸಿದ್ಧಾಂತವಾಗಿತ್ತು. ಭಾರತ ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸೌಹಾರ್ದತೆಯ ಮೌಲ್ಯಗಳನ್ನು ಅವರು ನಂಬಲಿಲ್ಲ ಎಂದು ತಿಳಿಸಿದರು.

ದೇಶ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸಿದ್ದ ನಕ್ಸಲರು: ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಯತ್ನಿಸಿದ ನಕ್ಸಲರು, ತಮ್ಮ ಸಿದ್ಧಾಂತಕ್ಕೆ ಭಾರತದ ಮಣ್ಣಿನಲ್ಲಿ ಬೆಂಬಲ ಸಿಗದಿದ್ದಾಗ ದೇಶವಿರೋಧಿ ಸಂಘಟನೆಗಳೊಂದಿಗೆ ಕೈಜೋಡಿಸಿದರು. ಶ್ರೀಲಂಕಾದ ಎಲ್‌ಟಿಟಿಇ, ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳು ಹಾಗೂ ಈಶಾನ್ಯ ಭಾರತದ ಉಗ್ರಗಾಮಿ ಸಂಘಟನೆಗಳೊಂದಿಗೆ ಮೈತ್ರಿ ಮಾಡಿಕೊಂಡು ಭಾರತದ ಅಸ್ತಿತ್ವಕ್ಕೆ ಧಕ್ಕೆ ತರಲು ಯತ್ನಿಸಿದರು. ಒಂದು ಹಂತದಲ್ಲಿ ದೇಶದ 14 ರಾಜ್ಯಗಳ 200ಕ್ಕೂ ಹೆಚ್ಚು ಜಿಲ್ಲೆಗಳ ಭೌಗೋಳಿಕ ವ್ಯಾಪ್ತಿ ಇವರ ಕೆಂಪು ವಲಯದ ಪ್ರಭಾವಕ್ಕೆ ಒಳಗಾಗಿತ್ತು ಎಂದು ಮಾಹಿತಿ ನೀಡಿದರು.



ಅಂದಿನ ಸರ್ಕಾರದ ಮೃದು ಧೋರಣೆಯೇ ನಕ್ಸಲಿಸಂ ಮಿತಿಮೀರಲು ಕಾರಣವಾಗಿತ್ತು. ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ದೃಢ ನಿರ್ಧಾರಗಳಿಂದ ಭಾರತವು ನಕ್ಸಲ್ ಮುಕ್ತವಾಗಿದೆ. ಆದರೆ, ದೇಶದ ಪ್ರಗತಿ ಹಾಗೂ ಜಿಯೋ-ಸ್ಟಾಟಜಿಕ್ ಯೋಜನೆಗಳಿಗೆ ಅಡ್ಡಿಪಡಿಸುತ್ತಿರುವ ಅರ್ಬನ್ ನಕ್ಸಲ್ ಮಾನಸಿಕತೆಯ ವಿರುದ್ಧ ಯುವ ಪೀಳಿಗೆ ಜಾಗೃತರಾಗಬೇಕಿದೆ.
■ **ತುಹಿನ್ ಸಿನ್ಹಾ,** ಲೇಖಕ

ನಕ್ಸಲ್ ಮುಕ್ತ ಭಾರತದತ್ತ ಯಶಸ್ವಿ ಹೆಜ್ಜೆ

ಹಿಂದಿನ ಸರ್ಕಾರಗಳಲ್ಲಿದ್ದ ದೃಢ ನಿರ್ಧಾರದ ಕೊರತೆ, ಸ್ಪಷ್ಟತೆಯಿಲ್ಲದಿರುವುದು ಮತ್ತು ಗುಪ್ತಚರ ಮಾಹಿತಿಯ ಕೊರತೆಯಿಂದಾಗಿ ಈ ಸಮಸ್ಯೆ ಇಷ್ಟು ದೊಡ್ಡದಾಗಿ ಬೆಳೆಯಿತು. ಆದರೆ, ಪ್ರಸ್ತುತ ದೇಶದ ನಾಯಕತ್ವವು ಕೈಗೊಂಡ ಕಠಿಣ, ನಿರ್ಣಾಯಕ ಮತ್ತು ಕಾರ್ಯತಂತ್ರದ ಪರಿಣಾಮ ನಕ್ಸಲಿಸಂ ಅನ್ನು ಸಂಪೂರ್ಣವಾಗಿ ಹತ್ತಿಕ್ಕುವಲ್ಲಿ ಯಶಸ್ವಿಯಾಗಿದೆ.ಈ ಕರಾಳ ಅಧ್ಯಾಯಕ್ಕೆ ಈಗ ದೇಶದಲ್ಲಿ ಅಧಿಕೃತವಾಗಿ ಮುಕ್ತಾಯ ಹಾಡಲಾಗಿದೆ ಮತ್ತು ಭಾರತ ಇಂದು ನಕ್ಸಲ್ ಮುಕ್ತವಾಗಿದೆ ಎಂದು ಘೋಷಿಸಲಾಗಿದೆ ಎಂದು ಡಾ. ಅಮರ್ ಕುಮಾರ್ ಪಾಂಡೆ ಹೆಮ್ಮೆ ವ್ಯಕ್ತಪಡಿಸಿದರು.

ಶಂಕಿತ ಉಗ್ರನ ವಿಚಾರಣೆ

• **ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಬನ್ನಿಕೊಡು ಗ್ರಾಮದಲ್ಲಿ ಶಂಕಿತ ಉಗ್ರನ ಬಂಧನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ ಅಧಿಕಾರಿಗಳು ಶುಕ್ರವಾರ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ಆಗಮಿಸಿ ವಿಚಾರಣೆ ನಡೆಸಿದರು. ಶಂಕಿತ ಉಗ್ರ ಸುಹೇಲ್ ಮತ್ತವನ ಸಹೋದರ ಶೋಯೆಬ್ ಅವರುಗಳನ್ನು ಬೆಳಗ್ಗೆ 11 ಗಂಟೆಯಿಂದಲೇ ವಿಚಾರಣೆಗೊಳಪಡಿಸಿದ ಅಧಿಕಾರಿಗಳು, ಸುಹೇಲ್‌ನ ಮೊಬೈಲ್ ಫೋನ್ ಪರಿಶೀಲಿಸಿದ್ದಾರೆ. ಆತ ಯಾವ್ಯಾವ ಗ್ರೂಪ್ ಗಳಲ್ಲಿ ಸಕ್ರಿಯನಾಗಿದ್ದ, ಯಾರೊಂದಿಗೆಲ್ಲಾ ಸಂಪರ್ಕ ಹೊಂದಿದ್ದ ಎಂಬ ಕುರಿತು ಮಾಹಿತಿ ಕಲೆ ಹಾಕಿದ್ದಾರೆ. ಮೊಬೈಲ್‌ನಲ್ಲಿದ್ದ ಕೆಲವು ಸಂದೇಶಗಳನ್ನು ಅಳಿಸಿರುವ ಶಂಕೆಯೂ ವ್ಯಕ್ತವಾಗಿದ್ದು, ಹೆಚ್ಚಿನ ತಾಂತ್ರಿಕ ಪರಿಶೀಲನೆಗಾಗಿ ಮೊಬೈಲ್‌ನ್ನು ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ(ಎಫ್‌ಎಸ್‌ಎಲ್) ಕಳುಹಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಇಬ್ಬರು ಎನ್‌ಐಎ ಅಧಿಕಾರಿಗಳು ಹಾಗೂ ಇಬ್ಬರು ಡಿವೈಎಸ್ಪಿಗಳ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದ್ದು, ನಿನ್ನೆಯಷ್ಟೇ 10 ದಿನಗಳ ಕಸ್ಟಡಿಗೆ ಪಡೆದಿದ್ದ ಹರಿಹರ ಗ್ರಾಮಾಂತರ ಪೊಲೀಸರು ಕೂಡ ತನಿಖೆ ಚುರುಕುಗೊಳಿಸಿದ್ದಾರೆ.

ಡಾ.ಚಂದ್ರಕಲಾ ಬಿದರಿ ನಿಧನ



• **ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸಕ್ರಿಯರಾಗಿದ್ದ ಡಾ.ಚಂದ್ರಕಲಾ ಬಿದರಿ ಅವರು ಅನಾರೋಗ್ಯದ ಕಾರಣದಿಂದ ನಿಧನರಾಗಿದ್ದಾರೆ. ಡಾ. ಚಂದ್ರಕಲಾ ಬಿದರಿ ಅವರು ಕಲಬುರಗಿ ಜಿಲ್ಲೆಯ ಸೇಡಂನಲ್ಲಿರುವ ಗಂಗೋತ್ರಿಯ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದ ಅವರು, ಪ್ರಮುಖವಾಗಿ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದು, ಮಹಿಳಾ ಬದುಕು ಸೇರಿದಂತೆ ಹಲವು ಪುಸ್ತಕ ಗಳನ್ನು ಬರೆದಿದ್ದಾರೆ. ಇವರು ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬೀದರ್: ₹9.41 ಕೋಟಿ ಮೊತ್ತದ ಡ್ರಗ್ಸ್ ನಾಶ

ಪುಟ 0➡ಭಾಲ್ಕಿ ತಾಲೂಕಿನ ಧನ್ನೂರ್ ಗ್ರಾಮದಲ್ಲಿರುವ ಮೇ ಇನ್ವೈರೋ ಬಯೋಟೆಕ್ ಜೈವಿಕ ತ್ಯಾಜ್ಯ ವಿಲೇವಾರಿ ಘಟಕದ ಕುಲುಮೆಯಲ್ಲಿ ವಶಪಡಿಸಿಕೊಂಡಿದ್ದ ಮಾದಕ ವಸ್ತುಗಳನ್ನು ವಿಲೇವಾರಿ ಮಾಡಲಾಯಿತು. ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆಯುವುದು, ಸಾಗಾಟ ಹಾಗೂ ಮಾರಾಟ ಮಾಡುತ್ತಿದ್ದವರ ವಿರುದ್ಧ ನಡೆಸಿದ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 22 ಪ್ರಕರಣಗಳು ದಾಖಲಾಗಿದ್ದವು. ಈ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ 997 ಕೆಜಿ 764 ಗ್ರಾಂ ಗಾಂಜಾ, 51,638 ಮಾದಕ ಗುಳಿಗೆಗಳು ಹಾಗೂ 743 ಸಿರಪ್ ಬಾಟಲ್‌ಗಳನ್ನು ನಾಶಪಡಿಸಲಾಯಿತು.

ಆಪರೇಷನ್ ಸಿಂದೂರ್: ಹುತಾತ್ಮ ಆರು ಯೋಧರ ಹೆಸರು ಬಹಿರಂಗ

ಪುಟ 0➡ದೇಶದ ರಕ್ಷಣೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದ ಈ ಯೋಧರ ಹೆಸರುಗಳನ್ನು ರಾಷ್ಟ್ರೀಯ ಯುದ್ಧ ಸ್ಮಾರಕದ 'ರೋಲ್ ಆಫ್ ಹಾನರ್' ಪಟ್ಟಿಯಲ್ಲಿ ಸೇರಿಸಲಾಗಿದೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರಲ್ಲಿ ಭಾರತೀಯ ಸೇನೆಯ ಐವರು, ವಾಯುಪಡೆಯ ಓರ್ವ ಸಾರ್ಜೆಂಟ್ ಸೇರಿದ್ದಾರೆ. ಈ ಪೈಕಿ ರೈಫಲ್‌ಮನ್ ಸುನಿಲ್ ಕುಮಾರ್‌ಗೆ ಮರಣೋತ್ತರವಾಗಿ ವೀರಚಕ್ರ ಮತ್ತು ಸಾರ್ಜೆಂಟ್ ಸುರೇಂದ್ರ ಕುಮಾರ್‌ಗೆ ಮರಣೋತ್ತರ ವಾಯುಸೇನಾ ಪದಕ ನೀಡಿ ಗೌರವಿಸಲಾಗಿದೆ.

ಈ ಯೋಧರ ಹೆಸರುಗಳನ್ನು ಹೊಸದಿಲ್ಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿರುವ 'ವಾಲ್ 3ಡಿ' ಸ್ಮಾರಕದಲ್ಲೂ 2025ರ ವಿಭಾಗದಲ್ಲಿ ಕೆತ್ತಲಾಗಿದೆ. ಇದು ಆಪರೇಷನ್ ಸಿಂದೂರ್ ವೇಳೆ ಮೃತಪಟ್ಟ ಸೈನಿಕರ ಗುರುತನ್ನು ಸರ್ಕಾರದಿಂದ ಸಾರ್ವಜನಿಕವಾಗಿ ಮೊದಲ ಬಾರಿಗೆ ಅಧಿಕೃತ ವಾಗಿ ಪ್ರಕಟಿಸಿದ ಘಟನೆಯಾಗಿದೆ. ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿರುವ ತ್ಯಾಗ ಚಕ್ರವನ್ನು(ತ್ಯಾಗ ವೃತ್ತ) ರಾಷ್ಟ್ರದ ಹುತಾತ್ಮರಿಗೆ ಸಮರ್ಪಿಸಲಾಗಿದೆ. ಇದು 16 ವೃತ್ತಾಕಾರದ ಗ್ರಾನೈಟ್ ಶಿಲಾಫಲಕಗಳನ್ನು ಒಳಗೊಂಡಿದೆ. ಸ್ವಾತಂತ್ರ್ಯಾನಂತರ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಪ್ರತಿ ಸೈನಿಕನ ಹೆಸರು, ಶ್ರೇಣಿ, ಘಟಕಗಳನ್ನು ಈ ಶಿಲಾಫಲಕದ ಮೇಲೆ ಕೆತ್ತಲಾಗಿದೆ.

ಪಹಲ್ಗಾಮ್ ದಾಳಿಗೆ ಭಾರತದ ಪ್ರತಿಕ್ರಿಯೆ: ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರಂದು ನಡೆದ ಭೀಕರ ಉಗ್ರ ದಾಳಿಯಲ್ಲಿ 26 ನಾಗರಿಕರು ಮೃತಪಟ್ಟಿದ್ದರು. ಈ ದಾಳಿಗೆ ಪ್ರತಿಯಾಗಿ ಭಾರತ ಮೇ 7ರಂದು 'ಆಪರೇಷನ್ ಸಿಂದೂರ್' ಆರಂಭಿಸಿತು.

ಈ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ)ದಲ್ಲಿದ್ದ ಉಗ್ರರ ಮೂಲಸೌಕರ್ಯಗಳ ಮೇಲೆ ನಿಖರ ದಾಳಿ ನಡೆಸಲಾಯಿತು. ಬಳಿಕ ಪಾಕಿಸ್ತಾನದಿಂದ ನಡೆದ ಡ್ರೋನ್, ಕ್ಷಿಪಣಿ ಹಾಗೂ ಗಡಿ ದಾಳಿಗಳನ್ನು ಭಾರತೀಯ ಸೇನೆ ಯಶಸ್ವಿಯಾಗಿ ತಡೆದಿತ್ತು.

ಪಾಕ್ ವಾಯುನೆಲೆಗಳ ಮೇಲೂ ದಾಳಿ: ಕಾರ್ಯಾಚರಣೆಯ ಸಂದರ್ಭದಲ್ಲಿ ಭಾರತೀಯ ಪಡೆಗಳು ಪಾಕಿಸ್ತಾನದ ಪ್ರಮುಖ ವಾಯುಪಡೆ ನೆಲೆಗಳಾದ ನೂರ್ ಖಾನ್ ಮತ್ತು ರಹೀಂ ಯಾರ್ ಖಾನ್ ಮೇಲೂ ದಾಳಿ ನಡೆಸಿ, ಗರಿಷ್ಠ ಹಾನಿ ಮಾಡಿದ್ದವು. ಭಾರತ ಮತ್ತು ಪಾಕಿಸ್ತಾನದ ನಡುವೆ ನಾಲ್ಕು ದಿನ ತೀವ್ರ ಸೇನಾ ಉದ್ವಿಗ್ನತೆ ಮುಂದುವರಿದ ಬಳಿಕ, ಮೇ 10ರಂದು ಉಭಯ ದೇಶಗಳು ಸೈನಿಕ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸುವ ಕುರಿತು ಪರಸ್ಪರ ಒಪ್ಪಂದಕ್ಕೆ ಬಂದಿದ್ದವು.

ಹುತಾತ್ಮರಿಗೆ ರಾಷ್ಟ್ರ ಗೌರವ: ಆಪರೇಷನ್ ಸಿಂದೂರ್‌ನಲ್ಲಿ ಹುತಾತ್ಮರಾದ ಆರು ಯೋಧರ ಹೆಸರುಗಳನ್ನು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಶಾಶ್ವತವಾಗಿ ದಾಖಲಿಸುವ ಮೂಲಕ ದೇಶವು ಅವರ ಶೌರ್ಯ, ತ್ಯಾಗ ಮತ್ತು ದೇಶಭಕ್ತಿಗೆ ಗೌರವ ಸಲ್ಲಿಸಿದೆ. ಭಾರತದ ಭದ್ರತೆಗಾಗಿ ತಮ್ಮ ಜೀವವನ್ನೇ ಅರ್ಪಿಸಿದ ಈ ವೀರ ಯೋಧರು ದೇಶದ ಇತಿಹಾಸದಲ್ಲಿ ಸದಾ ಸ್ಮರಣೀಯರಾಗಿರಲಿದ್ದಾರೆ.

ಇಡಿ ದಾಳಿ ರಾಜಕೀಯಪ್ರೇರಿತ ಅಲ್ಲ

ಪುಟ 0➡ಇಡಿ ದಾಳಿ ನಮಗೂ ಆತಂಕ ಮೂಡಿಸಿದೆ. ಬೆಳಗಾವಿ ಜಿಲ್ಲಾ ಅಬಕಾರಿ ಉಪ ಆಯುಕ್ತರಾಗಿದ್ದ, ಸದ್ಯ ಹೆಚ್ಚುವರಿ ಆಯುಕ್ತರಾಗಿರುವ ಡಾ.ವೈ.ಮಂಜುನಾಥ ನಿವಾಸದ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿರುವುದು ನಿಜ. ಅವರು ನಮ್ಮ ಸಂಬಂಧಿಯೇ ಆಗಿದ್ದಾರೆ. ಭ್ರಷ್ಟಾಚಾರದ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಇಷ್ಟು ದೊಡ್ಡ ಅಧಿಕಾರಿಯ ಮೇಲೆ ಇಡಿ ದಾಳಿ ನಡೆಸಿರುವುದು ಇದೇ ಮೊದಲು ಎಂದರು.

ಈ ಹಿಂದೆ 2011ರಲ್ಲಿ ಮಂಜುನಾಥ ಅವರ ಮೇಲೊಂದು ಪ್ರಕರಣ ದಾಖಲಾಗಿತ್ತು. ಆದರೆ, ಅದು ಈಗಾಗಲೇ ರದ್ದಾಗಿದೆ. ಅಧಿಕಾರಿಗಳು ಯಾವ ಮಾಹಿತಿ ಪಡೆಯುತ್ತಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ. ಈ ಕುರಿತು ನಾನು ಅವರ ಜತೆ ಮಾತನಾಡುತ್ತೇನೆ. ಅವರ ಕುಟುಂಬಸ್ಥರು ಕಳೆದ 30 ವರ್ಷಗಳಿಂದ ಮದ್ಯದ ಅಂಗಡಿ ವ್ಯವಹಾರದಲ್ಲಿದ್ದಾರೆ. ಈ ತನಿಖೆ ಕೇವಲ ಒಂದು ಇಲಾಖೆಗೆ ಸೀಮಿತವಾಗಿಲ್ಲ ಮತ್ತು ಇಷ್ಟಕ್ಕೇ ಮುಗಿಯುವುದಿಲ್ಲ ಎಂದು ತಿಳಿಸಿದರು. 2028ರ ಚುನಾವಣೆ ಹತ್ತಿರ ಬಂದಾಗ ಇವೆಲ್ಲ ಸಹಜ. ದಾಳಿಯ ಹಿಂದಿನ ರಾಜಕೀಯ ಆಯಾಮದ ಬಗ್ಗೆ ಮಾತನಾಡಿದ ಸಚಿವರು, ನಮ್ಮನ್ನು ರಾಜಕೀಯವಾಗಿ ಕಟ್ಟಿ ಹಾಕಲು ಈ ದಾಳಿ ನಡೆಯುತ್ತಿದೆಯೇ ಎಂಬುದು ಈಗಲೇ ಗೊತ್ತಾಗುವುದಿಲ್ಲ. ಅದಕ್ಕೆ ಕನಿಷ್ಠ ಆರು ತಿಂಗಳು ಬೇಕು. ಸಾಮಾನ್ಯವಾಗಿ 2028ರ ರಾಜ್ಯ ವಿಧಾನಸಭೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಇಂತಹ ಇಡಿ ದಾಳಿಗಳು ಆರಂಭವಾಗುವುದು ಸಹಜ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

574 ಸನ್ನದುಗಳ ಇ-ಹರಾಜಿಗೆ ಸೂಚನೆ

ಪುಟ 0➡ಅಬಕಾರಿ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡೋದಕ್ಕೆ ಆಗುವುದಿಲ್ಲ ಎಂದುಕೊಳ್ಳಬೇಡಿ. ಅಗತ್ಯಬಿದ್ದರೆ ವರ್ಗಾವಣೆ ಮಾಡಲು ಅಗತ್ಯವಾದ ಕಾನೂನು ಬದಲಾವಣೆಯನ್ನೂ ತರಲು ಅವಕಾಶಗಳಿವೆ. ಬಹಳ ಎಚ್ಚರಿಕೆಯಿಂದ ಕೆಲಸ ಮಾಡಿ ಎಂದು ಸೂಚಿಸಿದರು. ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಯಾರನ್ನೂ, ಯಾವ ಪ್ರಯತ್ನವನ್ನೂ ನಾನು ಸಹಿಸುವುದಿಲ್ಲ. ಇಲಾಖೆಯಲ್ಲಿ ಹೊಸದಾಗಿ ಆಐಏ ಪದ್ಧತಿ ಜಾರಿಯಾದ ಬಳಿಕ ನಿರೀಕ್ಷಿತ ಪ್ರಮಾಣದಲ್ಲಿ ಬೆಳವಣಿಗೆ ಆಗಿದೆ. ಅಕ್ಕಪಕ್ಕದ ರಾಜ್ಯಗಳಲ್ಲಿ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎನ್ನುವ ವರದಿ ನೋಡಿದ್ದೇನೆ. ಇಲಾಖೆಗೆ ಕೊಟ್ಟಿರುವ ಗುರಿ ತಲುಪಲು ಶ್ರಮಿಸಬೇಕು ಎಂದು ಹೇಳಿದರು.

ಸಚಿವ ಸಂಪುಟ ವಿಸ್ತರಣೆ ವಿಳಂಬ: ಸಚಿವ ಜಾರಕಿಹೊಳಿ

• **ಬೆಳಗಾವಿ:** ರಾಜ್ಯದಲ್ಲಿ ಇನ್ನು ಅಧಿಕೃತವಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡಿಲ್ಲ. ಸಚಿವ ಸಂಪುಟ ವಿಸ್ತರಣೆ ವಿಳಂಬ ಆಗಿದ್ದರಿಂದಲೇ ಸದ್ಯಕ್ಕೆ ನಮಗೆ ತಾತ್ಕಾಲಿಕವಾಗಿ ಉಸ್ತುವಾರಿ ಜವಾಬ್ದಾರಿ ನೀಡಿ ಕೆಲಸ ನಿರ್ವಹಿಸಲು ಸೂಚಿಸಲಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಶುಕ್ರವಾರ ನಗರದ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೈ ತಪ್ಪಲು ಸಿದ್ದರಾಮಯ್ಯನವರು ಕಾರಣವೆಂದು ವಂದತಿ ಹರದಾಡುತ್ತಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೈ ತಪ್ಪಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣವಲ್ಲ. ಈಗಾಗಲೇ ಸಾಕಷ್ಟು ಬಾರಿ ಸ್ಪಷ್ಟಪಡಿಸಿದ್ದೇನೆ. ಹೈಕಮಾಂಡ್ ಒಬ್ಬರಿಗೆ ಒಂದೇ ಹುದ್ದೆ ಎಂಬ ಕಟ್ಟುನಿಟ್ಟಿನ ನಿಯಮದ ಅನ್ವಯವೇ ಈ ತೀರ್ಮಾನವಾಗಿದೆ ಎಂದು ಸಚಿವರು ವಿವರಿಸಿದರು. ಆದರೆ, ಪಕ್ಷದ ನಿಯಮದ ಪ್ರಕಾರ ಒಂದೇ ಹುದ್ದೆ ನಿಭಾಯಿಸಬೇಕಿದ್ದರಿಂದ, ನಾನು ಅಂತಿಮವಾಗಿ ಸಚಿವ ಸ್ಥಾನದಲ್ಲೇ ಮುಂದುವರಿಯಲು ನಿರ್ಧರಿಸಿ ಅಧ್ಯಕ್ಷ ಸ್ಥಾನದ ರೇಸಿನಿಂದ ಹಿಂದೆ ಸರಿದೆ ಎಂದು ಸ್ಪಷ್ಟಪಡಿಸಿದರು.

ನಗರಕ್ಕೆ ಉಪರಾಷ್ಟ್ರಪತಿ

ಪುಟ 0➡ಜೂ.28ರಂದು ಬೆಳಗ್ಗೆ 11 ಗಂಟೆಗೆ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಸಂಸ್ಥಾಪನಾ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನ ಅಂಗವಾಗಿ ಆಯೋಜಿಸಿರುವ ನಶಾ ಮುಕ್ತ ಭಾರತ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಂಡಿಪುರ, ನಾಗರಹೊಳೆ ಸಫಾರಿ ಪುನರಾರಂಭಕ್ಕೆ ಸರ್ಕಾರ ನಿರ್ಧಾರ

ಪುಟ 0➡ಈ ಬಗ್ಗೆ ತಾಂತ್ರಿಕ ಸಮಿತಿಯ ವರದಿ ಅಂಗೀಕರಿಸಲಾಗಿದ್ದು, ವೈಜ್ಞಾನಿಕ ಮೌಲ್ಯಮಾಪನದ ನಂತರ ಪರಿಣಾಮಕಾರಿ ಸಾಗಣೆ ಸಾಮರ್ಥ್ಯದ ಆಧಾರದ ಮೇಲೆ ಜಂಗಲ್ ಸಫಾರಿಗೆ ಹಸಿರು ನಿಶಾನೆ ನೀಡಲಾಗಿದೆ. ಸಮಿತಿಯ ಶಿಫಾರಸಿನ ಪ್ರಕಾರ ನಿಯಂತ್ರಿತ ರೀತಿಯಲ್ಲಿ ಜಂಗಲ್ ಸಫಾರಿ ನಡೆಸಲು ಸೂಚನೆ ನೀಡಲಾಗಿದೆ ಎಂದು ಸಿಎಂ ಕಚೇರಿ ಪ್ರಕಟಣೆ ತಿಳಿಸಿದೆ. ಪರಿಸರ ವ್ಯವಸ್ಥೆಯ ಸಮಗ್ರತೆಯನ್ನು ರಕ್ಷಿಸುವ ಜೊತೆಗೆ, ಪರಿಸರ ಪ್ರವಾಸೋದ್ಯಮವು ವನ್ಯಜೀವಿ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ ಮತ್ತು ಪ್ರವಾಸಿಗರ ಉತ್ತಮ ಅನುಭವಕ್ಕೆ ಪೂರಕವಾದ ಪರಿಸರ ಪ್ರವಾಸೋದ್ಯಮಕ್ಕೆ ಕರ್ನಾಟಕ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಕಚೇರಿ ಹೇಳಿದೆ.

15 ಲಕ್ಷ ಸಸಿ ನೆಡುವ ಕಾರ್ಯ

ಪುಟ 0➡**ಜಿಯೋ-ಟ್ಯಾಗಿಂಗ್- ನಿರಂತರ ಉಸ್ತುವಾರಿ:** ದಾಖಲೆ ಮಟ್ಟದಲ್ಲಿ ನೆಡಲಾಗುತ್ತಿರುವ 15 ಲಕ್ಷ ಸಸಿಗಳ ಬೆಳವಣಿಗೆಯನ್ನು ಜಿಯೋ-ಮ್ಯಾಪಿಂಗ್, ಡ್ರೋನ್ ಸಮೀಕ್ಷೆಗಳು ಹಾಗೂ 3 ವರ್ಷಗಳ ಸಮರ್ಪಿತ ನಿರ್ವಹಣಾ ಯೋಜನೆಯ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ. ಇದರಿಂದ ಸಸಿಗಳ ದೀರ್ಘಕಾಲೀನ ಬೆಳವಣಿಗೆ ಮತ್ತು ಸುಸ್ಥಿರತೆಯನ್ನು ಖಚಿತಪಡಿಸಲಾಗುತ್ತದೆ.

ಸಕಲ ವ್ಯವಸ್ಥೆ: ಒಟ್ಟು 243 ಎಕರೆ ಪ್ರದೇಶವನ್ನು 49 ವಲಯಗಳಾಗಿ ಹಾಗೂ 314 ಸಸಿ ನೆಡುವ ಸ್ಥಳಗಳಾಗಿ ವಿಭಾಗಿಸಲಾಗಿದೆ. ಪ್ರತಿ ವಲಯಕ್ಕೂ ಒಬ್ಬ ವಲಯ ಕಮಾಂಡರ್ ಉಪಸ್ಥಿತರಿರಲಿದ್ದಾರೆ. ಸುಗಮ ಸಂಚಾರಕ್ಕಾಗಿ ಮೆಟ್ರೊ ರೈಲುಗಳ ಸಂಚಾರ ಆವೃತ್ತಿಯನ್ನು ಹೆಚ್ಚಿಸಲಾಗಿದೆ. ಜತೆಗೆ ಮೆಟ್ರೊ ನಿಲ್ದಾಣಗಳಿಂದ ಸಸಿ ನೆಡುವ ಸ್ಥಳಗಳವರೆಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಆಹಾರ, ಪೋರ್ಟೆಬಲ್ ಶೌಚಾಲಯಗಳು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ.

ಮೆಟ್ರೊ ಸಹಕಾರ: ಸಸಿ ನೆಡುವ ಕಾರ್ಯಕ್ರಮ ಹಾಗೂ ವಾಕಥಾನ್‌ನಲ್ಲಿ ಭಾಗವಹಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಶನಿವಾರ ಮುಂಜಾನೆ ವಿಶೇಷ ಮೆಟ್ರೋ ಸೇವೆ ಒದಗಿಸಲಾಗುತ್ತಿದೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಸುಲಭವಾಗಿ ತಮ್ಮ ಗಮ್ಯಸ್ಥಾನ ತಲುಪುವ ಉದ್ದೇಶದಿಂದ, ನಮ್ಮ ಮೆಟ್ರೋ ಎಲ್ಲಾ ಮಾರ್ಗಗಳ ಎಲ್ಲಾ ಟರ್ಮಿನಲ್ ನಿಲ್ದಾಣಗಳಿಂದ 5 ಗಂಟೆ ಬದಲಾಗಿ ಬೆಳಗ್ಗೆ 4 ಗಂಟೆಗೆ ರೈಲು ಸಂಚಾರ ಆರಂಭಿಸಲಿದೆ.



15 ಲಕ್ಷ ಗಿಡಗಳನ್ನು ನೆಡುವ ಮೂಲಕ ನಗರದ ಹಸಿರು ಹೊದಿಕೆಯನ್ನು ಮರುಸ್ಥಾಪಿಸುವತ್ತ ಮಹತ್ವದ ಹೆಜ್ಜೆ ಇಡುತ್ತೇವೆ. ಒಟ್ಟಾಗಿ ಹಸಿರು, ಆರೋಗ್ಯಕರ ಮತ್ತು ಸುಸ್ಥಿರ ಬೆಂಗಳೂರಿಗೆ ಅಡಿಪಾಯ ಹಾಕುತ್ತಿದ್ದೇವೆ.
■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಹಸಿರು ಬೆಂಗಳೂರು ರೂವಾರಿ ಗೌರವ: ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಅಧಿಕೃತ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಜತೆಗೆ ಹಸಿರು ಬೆಂಗಳೂರು ರೂವಾರಿಗಳು ಎಂಬ ಗೌರವ ಸಿಗಲಿದೆ. ಅತ್ಯುತ್ತಮ ಕೊಡುಗೆ ನೀಡುವವರಿಗೆ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳಿಂದ ಗೌರವಿಸಲಾಗುತ್ತದೆ.

ಮ್ಯಾರಥಾನ್ ಆಯೋಜನೆ: ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಅಂಗವಾಗಿ ಬೆಳಗ್ಗೆ 6 ಗಂಟೆಗೆ 10ಕೆ ಹಾಗೂ 5ಕೆ ಮ್ಯಾರಥಾನ್ ಸಹ ಆಯೋಜಿಸಲಾಗಿದೆ. ಚಲ್ಲಘಟ್ಟ ಮೆಟ್ರೊ ನಿಲ್ದಾಣದಲ್ಲಿ ಮ್ಯಾರಥಾನ್ ಕೊನೆಗೊಳ್ಳಲಿದೆ.

ಗಿನ್ನಿಸ್ ದಾಖಲೆ ಸಾಧ್ಯತೆ: 12 ತಾಸು 243 ಎಕರೆ ಪ್ರದೇಶ, 50 ಸಾವಿರ ಜನ, ನೂರಾರು ಎನ್‌ಜಿಒಗಳು ಒಂದು ಉದ್ದೇಶ ಇಟ್ಟುಕೊಂಡು 15 ಲಕ್ಷ ಸಸಿ ನೆಡುತ್ತಿರುವ ಬೃಹತ್ ಕಾರ್ಯಕ್ರಮ ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆಯಾಗಲಿದೆ. ಸಿಎಂ ಡಿ.ಕೆ.ಶಿವಕುಮಾರ್, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಸೇರಿದಂತೆ ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ.



ಬೆಂಗಳೂರು ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಹಬ್ ಆಗಿ ಬೆಳೆಯುತ್ತಿರುವ ವೇಗದಲ್ಲೇ, ಅದರ ಹಳೆಯ ಹೆಮ್ಮೆಯಾದ ಉದ್ಯಾನ ನಗರಿ ಎಂಬ ಬಿರುದನ್ನು ಉಳಿಸಿಕೊಳ್ಳುವುದು ಈ ಯೋಜನೆ ಮುಖ್ಯ ಆಶಯ.
■ **ಎನ್.ಎ.ಹ್ಯಾರಿಸ್,** ಬಿಡಿಎ ಅಧ್ಯಕ್ಷ

ಎಸ್‌ಎಂಕೆ ರಸ್ತೆ ಲೋಕಾರ್ಪಣೆ

ಪುಟ 0➡**631 ಕೋಟಿ ರೂಪಾಯಿಗಳ ಬೃಹತ್ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಹೈಟೆಕ್ ರಸ್ತೆ ಟೋಲ್ ಮುಕ್ತವಾಗಿರಲಿದೆ. ಮೈಸೂರು, ಮಾಗಡಿ, ಹಾಸನ, ಕುಣಿಗಲ್, ಮಂಡ್ಯ ಮತ್ತು ರಾಮನಗರ ಭಾಗಗಳಿಂದ ರಾಜಧಾನಿಗೆ ಬರುವ ಮತ್ತು ಹೋಗುವ ಸವಾರರಿಗೆ ಇದು ಪ್ರಯೋಜನವಾಗಲಿದೆ. ಪರಿಸರಸ್ನೇಹಿ ನಗರಾಭಿವೃದ್ಧಿಗೆ ಪೂರಕವಾಗಿ 10 ಕಿಲೋಮೀಟರ್ ಉದ್ದದ ಪ್ರತ್ಯೇಕ ಸ್ಕೇಟಿಂಗ್ ಟ್ರ್ಯಾಕ್ ನಿರ್ಮಾಣ. ಸಂಚಾರ ಸುಗಮವಾಗಿಸಲು 3 ಪ್ರಮುಖ ಅಂಡರ್‌ಪಾಸ್‌ಗಳು. ಇದರಲ್ಲಿ ಎರಡು ವನ್ಯಜೀವಿ/ಪ್ರಾಣಿಗಳ ಮುಕ್ತ ಸಂಚಾರಕ್ಕಾಗಿ ಮೀಸಲಿಡಲಾಗಿದೆ. 11 ಮೇಲ್ಸೇತುವೆಗಳು ಹಾಗೂ 270 ಮೀಟರ್ ಉದ್ದದ ಸುರಂಗ ಮಾರ್ಗ ನಿರ್ಮಿಸಲಾಗಿದೆ. ಈ ಪ್ರಮುಖ ರಸ್ತೆಯನ್ನು ಶನಿವಾರ ಸಿಎಂ ಲೋಕಾರ್ಪಣೆಗೊಳಿಸಲಿದ್ದಾರೆ.**

ತಪ್ಪಿತಸ್ಥರನ್ನು ಬಿಡಲ್ಲ, ಕಠಿಣ ಕ್ರಮ ಖಚಿತ: ಸಿಎಂ ಯೋಗಿ

ಪುಟ 0➡ಕೆಲವು ರಾಜಕೀಯ ಪಕ್ಷಗಳು ನಿರಾಶೆಯಿಂದ ಅಯೋಧ್ಯೆ ಮತ್ತು ರಾಮಭಕ್ತರ ವಿರುದ್ಧ ಅಪಪ್ರಚಾರ ನಡೆಸುತ್ತಿವೆ ಎಂದು ಯೋಗಿ ಆರೋಪಿಸಿದರು. ಅಯೋಧ್ಯೆ ನಮ್ಮೆಲ್ಲರ ನಂಬಿಕೆಯ ಪ್ರತೀಕ. ಸಾಕ್ಷ್ಯವಿದ್ದರೆ ಎಸ್‌ಐಟಿ ಮುಂದೆ ಸಲ್ಲಿಸಿ, ಇಲ್ಲದಿದ್ದರೆ ಸುಳ್ಳು ಪ್ರಚಾರ ನಿಲ್ಲಿಸಿ ಎಂದು ಹೇಳಿದರು. ಪ್ರಕರಣದ ಎಫ್‌ಐಆರ್‌ನ್ನು ನಾಟಕ ಎಂದು ಕರೆದ ಅರವಿಂದ ಕೇಜ್ರಿವಾಲ್ ವಿರುದ್ಧವೂ ಯೋಗಿ ವಾಗ್ದಾಳಿ ನಡೆಸಿದರು. ದಿಲ್ಲಿಯಲ್ಲಿ ಉತ್ತಮ ಆಡಳಿತ ನೀಡಿದ್ದರೆ, ದಿಲ್ಲಿಯೂ ಇಂದು ಅಯೋಧ್ಯೆಯಂತೆ ಅಭಿವೃದ್ಧಿಯಾಗುತ್ತಿತ್ತು ಎಂದು ಟೀಕಿಸಿದರು.

ದೇಣಿಗೆ ದುರ್ಬಳಕೆ: 8 ಆರೋಪಿಗಳ ಸೆರೆ

ಪುಟ 0➡ವಿಚಾರಣೆ ನಡೆಸಿದ ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿತು. ಆರೋಪಿಗಳನ್ನು ಮತ್ತೆ ಜೂ.29 ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಅಭಿಯೋಜನಾ ಅಧಿಕಾರಿ ಕೆ.ಸಿ. ವರ್ಮಾ ತಿಳಿಸಿದ್ದಾರೆ.

ಶ್ರೀಶಾರದಾ ಪೀಠಕ್ಕೆ ಭೇಟಿ ನೀಡಿದ ಸಚಿವೆ ಕರಂದ್ಲಾಜೆ

• **ಶೃಂಗೇರಿ:** ಕೇಂದ್ರ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಶ್ರೀಶಾರದಾ ಪೀಠಕ್ಕೆ ಶುಕ್ರವಾರ ಭೇಟಿ ನೀಡಿ ದೇವಿಗೆ ಪೂಜೆ ಸಲ್ಲಿಸಿ, ಉಭಯ ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಸ್ವಾಮೀಜಿ ಹಾಗೂ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಬೆಳಗ್ಗೆ ಶ್ರೀ ತೋರಣ ಗಣಪತಿ, ಶ್ರೀ ಶಂಕರಾಚಾರ್ಯ, ಶ್ರೀ ಶಕ್ತಿಗಣಪತಿ, ಶ್ರೀ ಶಾರದಾಂಬೆಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಗುರುಭವನಕ್ಕೆ ತೆರಳಿದ ಸಚಿವರು ಜಗದ್ಗುರುಗಳಿಗೆ ಫಲ, ಪುಷ್ಪ ಸಮರ್ಪಿಸಿದರು. ಜಗದ್ಗುರುಗಳಿಗೆ ಪ್ರಧಾನಿ ಮೋದಿಯವರ 12 ವರ್ಷದ ಸಾಧನೆಯ ಪುಸ್ತಕ ನೀಡಿದರು.



ಸಚಿವರು ಮಾತನಾಡಿ, ಶ್ರೀ ಶಾರದಾ ಪೀಠದ ಉಭಯ ಜಗದ್ಗುರುಗಳ ದರ್ಶನ ಭಾಗ್ಯ ಆಶೀರ್ವಾದ ಪಡೆದಿರುವುದು ನಿಜಕ್ಕೂ ಪುಣ್ಯ. ಸಾಕ್ಷಾತ್ ಆದಿ ಶಂಕರಾಚಾರ್ಯರ ಪರಂಪರೆಯ ಗುರುಗಳ ಆಶೀರ್ವಾದ ದೊರಕುವುದು ಸುಲಭದ ವಿಷಯವಲ್ಲ. 12 ವರ್ಷದ ಪ್ರಧಾನ ಸೇವೆ ಸುಶಾಸನದ ವರದಿ ಜಗದ್ಗುರುಗಳಿಗೆ ಸಮರ್ಪಿಸುವುದು ಹೆಮ್ಮೆಯಾಗುತ್ತಿದೆ. ಜಗದ್ಗುರುಗಳು ಹೇಳಿದ ನಿಸ್ವಾರ್ಥ ಸೇವೆ, ಕರುಣೆ, ಸಮಾಜ ಕಲ್ಯಾಣದ ಮಾತುಗಳು ಇಂದಿನ ಕಾಲಕ್ಕೆ ತುಂಬಾ ಪ್ರಸ್ತುತವಾಗಿದೆ ಎಂದರು.ಈ ಸಂದರ್ಭದಲ್ಲಿ ಶ್ರೀಮಠದ ಆಡಳಿತಾಧಿಕಾರಿ ಪಿ.ಎ. ಮುರಳಿ, ಜಗದ್ಗುರುಗಳ ಆಪ್ತ ಸಹಾಯಕ ಶಿವಮತರ್ಮ, ಪಟ್ಟಣ ಪಂಚಾಯತಿ ಮಾಜಿ ಅಧ್ಯಕ್ಷ ಟಿ.ಕೆ.ಪರಾಶರ ಇದ್ದರು.

ಕುಶಲೋಪರಿ ವಿಚಾರಣೆ



ಶುಕ್ರವಾರ ಧರ್ಮಸ್ಥಳಕ್ಕೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಆಶೀರ್ವಾದ ಪಡೆದು, ಕುಶಲೋಪರಿ ವಿಚಾರಿಸಿದರು.

ವಿದ್ಯುತ್ ಸುರಕ್ಷತಾ ಸಪ್ತಾಹಕ್ಕೆ 1 ಲಕ್ಷ

• **ಬೆಂಗಳೂರು:** ವಿದ್ಯುತ್ ಪರಿವೀಕ್ಷಣಾಲಯ ದಿಂದ ಹಮ್ಮಿಕೊಂಡಿರುವ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹಕ್ಕೆ ಎಲ್ಲಾ ಎಸ್ಕಾಂಗಳಿಂದ ವಿಭಾಗಾವಾರು 1 ಲಕ್ಷ ರೂ. ನೀಡುವುದಾಗಿ ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಶುಕ್ರವಾರ ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯುತ್ ಅವಘಡಗಳನ್ನು ತಪ್ಪಿಸಲು ಜಾಗೃತಿ ಜತೆಗೆ ಮುಂಜಾಗ್ರತಾ ಕ್ರಮಗಳನ್ನೂ ಕೈಗೊಳ್ಳಬೇಕಾಗುತ್ತದೆ. ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ಮಾರ್ಗದರ್ಶನದಲ್ಲಿ ಅಗತ್ಯ ಕಾರ್ಯ ಯೋಜನೆ ರೂಪಿಸಲಾಗುವುದು ಎಂದರು.

ರಾಜ್ಯದಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿರುವ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸುವ ಮೂಲಕ ಹೊಸ ನೇಮಕಾತಿಗೆ ಸರ್ಕಾರ ಒತ್ತು ನೀಡಿದೆ. ಸರ್ಕಾರಿ ಇಲಾಖೆಗಳು ಮಾತ್ರವಲ್ಲದೆ, ನಿಗಮ ಮಂಡಳಿಗಳಲ್ಲಿ ಖಾಲಿ ಇರುವ ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದರು. ವಿದ್ಯುತ್ ಸುರಕ್ಷತೆ ಕುರಿತಂತೆ ಪ್ರಮಾಣ ಬೋಧಿಸಲಾಯಿತು. ಜತೆಗೆ ವಿದ್ಯುತ್ ಸುರಕ್ಷತಾ ಸಪ್ತಾಹದ ವೇಳೆ ಸಾರ್ವಜನಿಕರಿಗೆ ಜಾಗೃತಿ ಸಂದೇಶ ಸಾರಲಿರುವ ಎಲ್‌ಇಡಿ ಪರದೆ ಇರುವ ವಾಹನಗಳಿಗೆ ಚಾಲನೆ ನೀಡಲಾಯಿತು. ವಿದ್ಯುತ್ ಪರಿವೀಕ್ಷಣಾಲಯದ ಮುಖ್ಯ ವಿದ್ಯುತ್ ಪರಿವೀಕ್ಷಣಾಧಿಕಾರಿ ಡಾ. ತೀರ್ಥ ಅಪ್ಪಚ್ಚು, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್ ಷಡಾಕ್ಷರಿ, ಕೆಪಿಟಿಸಿಎಲ್ ನಿರ್ದೇಶಕ (ಕಾರ್ಯಾಚರಣೆ) ವಿಶ್ವನಾಥ್ ನಾಯಕ್, ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸಿ.ರಮೇಶ್, ಬಿ.ಎನ್. ಬಸವೇಗೌಡ ಇದ್ದರು.

> ವಿದ್ಯುತ್ ಸುರಕ್ಷತೆ ಕುರಿತಂತೆ ಸಾರ್ವಜನಿಕರು, ಇಂಧನ ಇಲಾಖೆ ಸಿಬ್ಬಂದಿ ಮತ್ತು ಗುತ್ತಿಗೆದಾರರಲ್ಲಿ ಮೊದಲು ಜಾಗೃತಿ ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ವಿದ್ಯುತ್ ಪರಿವೀಕ್ಷಣಾಲಯದ ಅಧಿಕಾರಿಗಳು ಜಿಲ್ಲಾಮಟ್ಟದ ಜತೆಗೆ ನಿಕಟ ಸಂಪರ್ಕದಲ್ಲಿದ್ದು ಕೆಲಸ ಮಾಡಬೇಕು.
> ■ **ಡಾ.ಎನ್.ಶಿವಶಂಕರ,** ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ಕಿರುಸುದ್ದಿ

ಅಮೆರಿಕದ ಕಂಪೆನಿಗಳ ಮೇಲೆ ಡಿಜಿಟಲ್ ತೆರಿಗೆ ಹೇರಿದರೆ ಶೇ.100 ತೆರಿಗೆ :ಟ್ರಂಪ್ ಬೆದರಿಕೆ

• **ವಾಷಿಂಗ್ಟನ್:** ಅಮೆರಿಕದ ಕಂಪನಿಗಳ ಮೇಲೆ ಡಿಜಿಟಲ್ ಸೇವಾ ತೆರಿಗೆ ಹೇರಿದಲ್ಲಿ ಅಂತಹ ದೇಶಗಳು ಅಮೆರಿಕಕ್ಕೆ ಮಾಡುವ ರಫ್ತಿನ ಮೇಲೆ ಶೇ.100ರ ಸುಂಕ ವಿಧಿಸಲಾಗುವುದು. ಈಗ ವ್ಯಾಪಾರ ಒಪ್ಪಂದ ಇದ್ದರೂ ಅದನ್ನು ಮೀರಿ ಈ ಸುಂಕ ಹೇರಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಒಡ್ಡಿದ್ದಾರೆ. ತನ್ನ ಸಾಮಾಜಿಕ ಮಾಧ್ಯಮ ಟ್ರುತ್ ಸೋಷಿಯಲ್‌ನಲ್ಲಿ, ಅನೇಕ ಯುರೋಪಿಯನ್ ದೇಶಗಳು ಅಮೆರಿಕದ ಕಂಪನಿಗಳ ಮೇಲೆ ಡಿಜಿಟಲ್ ತೆರಿಗೆ ಹೇರುವ ಬಗ್ಗೆ ಚರ್ಚಿಸುತ್ತಿವೆ.ಕೆಲವು ದೇಶಗಳು ಇಂತಹ ತೆರಿಗೆ ಹೇರಲು ಮುಂದಾಗಿವೆ.ಒಂದು ವೇಳೆ ಇಂತಹ ತೆರಿಗೆ ಹೇರಿದ್ದೇ ಆದರೆ, ಪ್ರತೀಕಾರವಾಗಿ ನಾವು ಅಂತಹ ದೇಶಗಳ ಮೇಲೆ ಶೇ.100ರಷ್ಟು ಸುಂಕ ಹೇರಲಿದ್ದೇವೆ ಎಂದು ಟ್ರಂಪ್ ಹೇಳಿದರು.ತನ್ನ ಇಷ್ಟದಂತಿಲ್ಲದ ಹೇಳಿಕೆಗಳಿಂದ ಪದೆ ಪದೆ ಸುದ್ದಿ ಮಾಡುತ್ತಿರುವ ಟ್ರಂಪ್ ಈಗ ಯುರೋಪಿನ ದೇಶಗಳ ವಿರುದ್ಧವೂ ತಿರುಗಿಬಿದ್ದಿದ್ದಾರೆ.

ಬೆಂಗಳೂರಿನ ದಲಿತ ಜನಾಗ್ರಹ ಸಮಾವೇಶಕ್ಕೆ ಉಡುಪಿಯಿಂದ 500ಕ್ಕೂ ಹೆಚ್ಚು ಮಂದಿ ಸಾಥ್

• **ಉಡುಪಿ:** ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಿಎಸ್ಎಸ್) ವತಿಯಿಂದ ಜುಲೈ 3ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿರುವ 'ದಲಿತ ಜನಾಗ್ರಹ ಸಮಾವೇಶ'ದಲ್ಲಿ ಉಡುಪಿ ಜಿಲ್ಲೆಯಿಂದ ಸುಮಾರು 500ಕ್ಕೂ ಅಧಿಕ ಕಾರ್ಯಕರ್ತರು ಹಾಗೂ ಸಮುದಾಯದ ಮುಖಂಡರು ಭಾಗವಹಿಸಲಿದ್ದಾರೆ ಎಂದು ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಸುಂದರ ಮಾಸ್ತರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದಲಿತರ ಮತ್ತು ಹಿಂದುಳಿದ ವರ್ಗಗಳ ಸಾರ್ವತ್ರಿಕ ಬೆಂಬಲದಿಂದಲೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಆದರೆ, ಆಡಳಿತದ ಚುಕ್ಕಾಣಿ ಹಿಡಿದ ಮೇಲೆ ದಲಿತರ ಶ್ರೇಯೋಭಿವೃದ್ಧಿಗೆ ಮತ್ತು ಉದ್ಧಾರಕ್ಕೆ ಸರ್ಕಾರ ಯಾವುದೇ ಶಕ್ತಿಶಾಲಿ ಹಾಗೂ ಪರಿಣಾಮಕಾರಿ ಯೋಜನೆಗಳನ್ನು ತಂದಿಲ್ಲ ಎಂದು ತೀವ್ರವಾಗಿ ಆಕ್ಷೇಪಿಸಿದರು. ಅಧಿಕಾರಕ್ಕೆ ಬರುವ ಮುನ್ನ ನೀಡಿದ ಭರವಸೆಗಳನ್ನು ಮರೆತು, ದಲಿತರ ಹಿತರಕ್ಷಣೆಯ ವಿಷಯದಲ್ಲಿ ಸರ್ಕಾರ ನಿರೀಕ್ಷಿತ ಮಟ್ಟದಲ್ಲಿ ಸ್ಪಂದಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಎಚ್ಚರಿಕೆಯ ಸಂದೇಶ ರವಾನಿಸಲು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿದ್ದು, ಇದಕ್ಕೆ ರಾಜ್ಯಾದ್ಯಂತ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ ಎಂದರು.ಈ ವೇಳೆ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ವಸಂತ ಗಿಳಿಯಾರ್, ವಿಭಾಗೀಯ ಸಂಘಟನಾ ಸಂಚಾಲಕ ಶ್ಯಾಮರಾಜ್ ಬಿರ್ತಿ, ಪ್ರಮುಖರಾದ ಸುರೇಶ್ ಹಕ್ಲಾಡಿ ಹಾಗೂ ಸುರೇಶ ಬಾರ್ಕೂರು ಉಪಸ್ಥಿತರಿದ್ದರು.

ವಿಶೇಷ ಓಣಂ ರೈಲು: ಶೇಕಡ 33 ಸಬ್ಸಿಡಿ

• **ಮಂಗಳೂರು:** ಭಾರತೀಯ ರೈಲ್ವೆಯ ಭಾರತ ಗೌರವ್ ರೈಲು ಯೋಜನೆಯಡಿ ಸೌತ್ ಸ್ಟಾರ್ ರೈಲ್ ಹಾಗೂ ಟೂರ್ ಟೈಮ್ಸ್, ವಿಶೇಷ ಓಣಂ ರಜಾ ರೈಲನ್ನು ಘೋಷಿಸಿವೆ. ಈ 11 ದಿನಗಳ ಎಲ್ಲ ಸೌಲಭ್ಯಗಳನ್ನು ಒಳಗೊಂಡ ಪ್ಯಾಕೇಜ್ ಪ್ರವಾಸವು ಆಗಸ್ಟ್ 20 ರಂದು ಪ್ರಾರಂಭವಾಗಲಿದ್ದು, ಬುಕ್ಕಿಂಗ್ ಆರಂಭವಾಗಿದೆ. ಮೊಬೈಲ್ 7305858585 ಸಂಪರ್ಕಿಸುವ ಮೂಲಕ ಅಥವಾ www.tourtimes.inಗೆ ಭೇಟಿ ನೀಡುವ ಮೂಲಕ ಟಿಕೆಟ್ ಕಾಯ್ದಿರಿಸಬಹುದಾಗಿದೆ.

ತೆರಿಗೆ ಮರು ಪಾವತಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ: ಡಿ.ಕೆ.ಶಿವಕುಮಾರ್

ಸಕಾಲಕ್ಕೆ ತೆರಿಗೆ ಪಾವತಿಸಿ

• **ಬೆಂಗಳೂರು:** ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು ಆಯಾ ವಿಭಾಗಗಳಿಗೆ ಹಂಚಿಕೆ ಮಾಡಲಾದ ತೆರಿಗೆ ಸಂಗ್ರಹಣಾ ಗುರಿ ಸಾಧಿಸಿ ತೋರಿಸಿ. ತೆರಿಗೆ ಮರು ಪಾವತಿ ಸಮಯಕ್ಕೆ ಸರಿಯಾಗಿ ಸಲ್ಲಿಸುವುದು ಹಾಗೂ ತೆರಿಗೆ ಮರು ಪಾವತಿಸಿರುವವರನ್ನು ಗುರುತಿಸಿ ನಿಗದಿತ ಅವಧಿಯ ಒಳಗೆ ಮರು ಪಾವತಿ ಮಾಡುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಾಣಿಜ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದರು. ನಿಮ್ಮ ಗುರಿ ಮುಟ್ಟಿ. ನಿಮಗೆ ಈಗ ಬರುತ್ತಿರುವ ತೆರಿಗೆಯ ಎರಡರಷ್ಟು ಸಂಗ್ರಹ ಮಾಡುವ ಸಾಮರ್ಥ್ಯ ಇದೆ. ಆದರೆ ಕಾನೂನು ಮೀರಿ, ಶೋಷಣೆ ಮಾಡಿ ಅಂತ ಹೇಳಲ್ಲ ಎಂದರು.

ಪ್ರಾಮಾಣಿಕ ತೆರಿಗೆದಾರರಿಗೆ ಯಾವುದೇ ರೀತಿಯ ತೊಂದರೆ ಆಗಬಾರದು. ಅವರನ್ನು ಸುಲಿಗೆ ಮಾಡಬಾರದು. ನಿಮ್ಮ ತೊಂದರೆಗಳು ಇದ್ದರೆ ಹೇಳಿ, ಅವು ನೈಜ ಇದ್ದರೆ ನಿವಾರಿಸೋಣ. ಪ್ರಾಮಾಣಿಕತೆ, ನಿಷ್ಠೆ, ಶ್ರಮಕ್ಕೆ ನನ್ನ ಬಳಿ ಗೌರವ, ಬೆಲೆ. ಪ್ರಾಮಾಣಿಕತೆ ಇಲ್ಲದಿದ್ದರೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವೆ. ಎಲ್ಲಾ ಹಂತಗಳ ಅಧಿಕಾರಿಗಳು ತೆರಿಗೆದಾರರ ನೈಜ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು ಎಂದು ಸಿಎಂ ಸೂಚಿಸಿದರು.

ಕೇಳುವುದಕ್ಕೂ-ಕಲಿಯುವುದಕ್ಕೂ ನಾನು ಸಿದ್ಧ: ನನ್ನ ಸಾರ್ವಜನಿಕ ಜೀವನಕ್ಕೆ ಸುಮಾರು ಮೂವತ್ತೆಂಟು ವರ್ಷಗಳ ಅನುಭವವಿದೆ. ಈ ಅವಧಿಯಲ್ಲಿ ಹಲವು ಪ್ರಮುಖ ಖಾತೆಗಳನ್ನು ನಿರ್ವಹಿಸಿದ್ದೇನೆ. ಈಗ ಹಣಕಾಸು ಮತ್ತು ವಾಣಿಜ್ಯ ತೆರಿಗೆ ಇಲಾಖೆಯ ಕಾರ್ಯವೈಖರಿಯನ್ನು ಇನ್ನಷ್ಟು ಆಳವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಕೇಳುವುದಕ್ಕೂ, ಕಲಿಯುವುದಕ್ಕೂ ನಾನು ಸದಾ ಸಿದ್ಧನಿದ್ದೇನೆ. ನಿರಂತರ ಕಲಿಕೆಯೇ ಉತ್ತಮ ಆಡಳಿತದ ಮೂಲ ಎಂದು ನಾನು ನಂಬುತ್ತೇನೆ.

ಆದ್ದರಿಂದ ಮುಂದಿನ ಸಭೆಯ ವೇಳೆಗೆ ಈಗಿನ ವರದಿಗಿಂತ ಉತ್ತಮವಾದ ಕಾರ್ಯಕ್ಷಮತೆಯ ವರದಿಯನ್ನು ನಿಮ್ಮಿಂದ ನಿರೀಕ್ಷಿಸುತ್ತೇನೆ. ಜಿಎಸ್ಟಿ ಸಂಗ್ರಹದಲ್ಲಿ ರಾಜ್ಯ ಉತ್ತಮ ಪ್ರಗತಿ ಸಾಧಿಸಿದ್ದು, ಶೇ.9ರಷ್ಟು ಪ್ರಗತಿ ಆಗಿದೆ. ಈ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆಯಾಗಿದೆ. ಗುಜರಾತ್, ತಮಿಳುನಾಡು, ಹರಿಯಾಣ ರಾಜ್ಯಗಳಿಗಿಂತ ಹೆಚ್ಚು ಪ್ರಗತಿ ರಾಜ್ಯದಲ್ಲಿ ಆಗಿರುವುದು ಸಮಾಧಾನದ ಸಂಗತಿ ಎಂದರು.

ನಕಲಿ ರಶೀದಿ ಮತ್ತು ನಕಲಿ ಐಟಿಸಿಗಳು ದೊಡ್ಡ ಸವಾಲಾಗಿದೆ. ಈ ಸವಾಲನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದೇವೆ. ಬೋಗಸ್ ಕಂಪನಿಗಳನ್ನು ಪತ್ತೆ ಹಚ್ಚಿ 166 ಕೋಟಿ ರೂ. ಸಂಗ್ರಹಿಸಿದ್ದೇವೆ. ಬೋಗಸ್ ಕಂಪನಿ ಸ್ಥಾಪಿಸಿದವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಪ್ರಮಾಣ ಹೆಚ್ಚಲಿ. ಇಲ್ಲಿಯವರೆಗೆ ಬೋಗಸ್ ಮಾಡುವವರನ್ನು ಬಂಧಿಸುವ ಪ್ರಮಾಣ ಕಡಿಮೆ ಇತ್ತು. ಈಗ ಬಂಧನವನ್ನು ಹೆಚ್ಚಿಸಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜತೆಗೆ ಸಿಬ್ಬಂದಿಯಿಂದ ಲೋಪ ಕಂಡು ಬಂದಾಗಲೂ ಕಠಿಣ ಕ್ರಮಗಳ ಮೂಲಕ ಎಚ್ಚರಿಕೆ ನೀಡಲಾಗಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮೈಸೂರು ವಿಭಾಗದಲ್ಲಿ ಕಾರ್ಯಕ್ಷಮತೆ ಕುಸಿತ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಕಾರ್ಯಕ್ಷಮತೆ ಕುಸಿದಿರುವುದಕ್ಕೆ ನೆಪಗಳು, ಕಾರಣಗಳನ್ನು ಕೊಡುವುದು ಸರಿಯಲ್ಲ. ಫಲಿತಾಂಶ ಮುಖ್ಯ. ಏನೇ ತಾಂತ್ರಿಕ ತೊಂದರೆಗಳಿದ್ದರೂ ಬಗೆಹರಿಸಿಕೊಂಡು ಉತ್ತಮ ಕಾರ್ಯಕ್ಷಮತೆ ನಿರೀಕ್ಷಿಸುತ್ತೇನೆ.



> ವಾಣಿಜ್ಯ ತೆರಿಗೆ ಅಧಿಕಾರಿಗಳು ಸರ್ಕಾರದ ಶಕ್ತಿ. ನೀವು ಶಕ್ತಿ ಕೊಡದಿದ್ದರೆ ಸರ್ಕಾರ ನಡೆಸುವುದು ಕಷ್ಟ. ವಾಣಿಜ್ಯ ತೆರಿಗೆ ಇಲಾಖೆಗೆ ಪ್ರಸ್ತುತ ಹಣಕಾಸು ವರ್ಷಕ್ಕೆ ನೀಡಿರುವ ತೆರಿಗೆ ಸಂಗ್ರಹದ ಗುರಿಯನ್ನು ಮೀರಿ ಸಾಧನೆ ತೋರಿಸುತ್ತೀರೆಂಬ ವಿಶ್ವಾಸ ನನಗಿದೆ.
> ■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಹರಿಪ್ರಸಾದ್‌ಗೆ ಸಾಮಾನ್ಯ ಜ್ಞಾನವಿಲ್ಲ: ಜೋಶಿ ಕಿಡಿ

• **ಹುಬ್ಬಳ್ಳಿ:** ರಾಮನ ಅಸ್ತಿತ್ವ ಬಗ್ಗೆ ಪ್ರಶ್ನೆ ಮಾಡಿದವರು, ರಾಮ ಕಾಲ್ಪನಿಕ ವ್ಯಕ್ತಿ ಎಂದವರು, ನೂರಾರು ಕೋಟಿ ರೂಪಾಯಿ ಭ್ರಷ್ಟಾಚಾರ ಮಾಡಿದವರು ಈಗ ರಾಮ ಮಂದಿರದ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕಿಡಿಕಾರಿದರು.

ನಗರದಲ್ಲಿ ಮಾಧ್ಯಮರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರಿಗೆ ಸಾಮಾನ್ಯ ಜ್ಞಾನವಿಲ್ಲ. ಮಹಮ್ಮದ್ ಘಜನಿ ಹಾಗೂ ಬಾಬರ್ ಅನ್ನು ಪೂಜೆ ಮಾಡಿದವರು ರಾಮನ ಮಂದಿರದ ಬಗ್ಗೆ ಮಾತನಾಡುತ್ತಿದ್ದಾರೆ? ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರಿಗೆ ಘಜನಿ ಹಾಗೂ ಬಾಬರ್ ಹೋಲಿಸುತ್ತಿದ್ದು, ಒಂದು ಸಮಯದಲ್ಲಿ ಅವರನ್ನು ಹೊಗಳಿದ್ದರು. ಕಾಂಗ್ರೆಸ್ ತಮ್ಮ ಅಸ್ತಿತ್ವದ ಬಗ್ಗೆ ಯೋಚಿಸಬೇಕು. ರಾಹುಲ್ ಗಾಂಧಿ ನೇತೃತ್ವದಲ್ಲಿ ದೇಶದಲ್ಲಿ ಕೇರಳ ರಾಜ್ಯದಲ್ಲಿ ಬಿಟ್ಟರೆ ಉಳಿದ ಕಡೆ ಕಾಂಗ್ರೆಸ್ ಸೋಲು ಅನುಭವಿಸಿದೆ ಎಂದು ನೆನಪಿಸಿದರು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಈ ಹಿಂದೆ ಮಂತ್ರಿ ಸ್ಥಾನಕ್ಕಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಡ್ಡಿ ಬಗ್ಗೆ ಮಾತನಾಡಿದ್ದರು. ಮೂರು ಅವಧಿಯ ಗಡಿ ದಾಟದ ಅವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು. ರಾಷ್ಟ್ರೀಯ ಮಾಧ್ಯಮಗಳ ಗಮನ ಸೆಳೆಯಲು ಕಾಂಗ್ರೆಸ್ಸಿಗರು ಸಂಘದ ಕುರಿತು ಹೇಳಿಕೆ ನೀಡುತ್ತಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ ತಮ್ಮದೇ ಆಡಳಿತ, ಅಧಿಕಾರಿಗಳನ್ನು ಇಟ್ಟುಕೊಂಡ ರಾಜ್ಯ ಸರ್ಕಾರ ಎಸ್‌ಐಆರ್ ಬಗ್ಗೆ ವಿರೋಧ ಮಾಡುತ್ತಿದೆ. ಕಾಂಗ್ರೆಸ್ ಬೆಂಬಲ ನೀಡಿದ ಕೇರಳ ಹಾಗೂ ಜಮ್ಮು ಕಾಶ್ಮೀರದಲ್ಲಿ ಎಸ್‌ಐಆರ್ ಸ್ವಾಗತಿಸಲಾಗಿದೆ.

ತಮಗೆ ಅನುಕೂಲವಾದಲ್ಲಿ ಸ್ವಾಗತ. ಆಗದ ಕಡೆ ಎಸ್‌ಐಆರ್ ವಿರೋಧ ಮಾಡುವುದೇ ಕಾಂಗ್ರೆಸ್ ಕೆಲಸ ಎಂದು ವ್ಯಂಗ್ಯವಾಡಿದರು.




> ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಈ ವಿಚಾರ ವಿಷಯಾಂತರ ಮಾಡಲು ಕಾಂಗ್ರೆಸ್ ನಾಯಕರು ಆರ್‌ಎಸ್‌ಎಸ್ ನಿಷೇಧದ ಬಗ್ಗೆ ಮಾತನಾಡುತ್ತಿದ್ದಾರೆ. ಈಗಾಗಲೇ ಸಂಘ ಪರಿವಾರದವರು ಈ ಬಗ್ಗೆ ಉತ್ತರಿಸಿದ್ದಾರೆ. ಹಿಂದೆ ನಾಲ್ಕೈದು ಬಾರಿ ನಿಷೇಧ ಮಾಡಿದಾಗ ನ್ಯಾಯಾಲಯವು ಛೀಮಾರಿ ಹಾಕಿದೆ.
> ■ **ಪ್ರಲ್ಹಾದ್ ಜೋಶಿ,** ಕೇಂದ್ರ ಸಚಿವ

- ಕಾಂಗ್ರೆಸ್ ತಮ್ಮ ಅಸ್ತಿತ್ವದ ಬಗ್ಗೆ ಯೋಚಿಸಲಿ
- ಎಸ್‌ಐಆರ್ ವಿರೋಧ ಮಾಡುವುದೇ ಕಾಂಗ್ರೆಸ್ ಕೆಲಸ

ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ 2ನೇ ಪತ್ನಿಗೂ ಪರಿಹಾರ: ಹೈ ಆದೇಶ

• **ಬೆಂಗಳೂರು:** ರಸ್ತೆ ಅಪಘಾತಗಳಲ್ಲಿ ಮೃತಪಟ್ಟ ವ್ಯಕ್ತಿಯ ಅವಲಂಬಿತರಿಗೆ ಪರಿಹಾರ ನಿಗದಿಪಡಿಸುವಾಗ ಕೇವಲ ಕಾನೂನುಬದ್ಧ ಸಂಬಂಧವನ್ನು ಮಾತ್ರವಲ್ಲ, ಮೃತರ ಮೇಲೆ ಅವಲಂಬಿತರಾಗಿದ್ದ ಎಲ್ಲರ ಹಿತಾಸಕ್ತಿಯನ್ನು ಪರಿಗಣಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.



ಇದೇ ವೇಳೆ, ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಎರಡನೇ ಪತ್ನಿ ಮತ್ತು ಆಕೆಯ ಮಕ್ಕಳಿಗೂ ಪರಿಹಾರದಲ್ಲಿ ಸಮಾನ ಹಕ್ಕು ಇದೆ ಎಂದು ಸ್ಪಷ್ಟಪಡಿಸಿ, ಪ್ರಕರಣವೊಂದರಲ್ಲಿ ಪರಿಹಾರ ಮೊತ್ತವನ್ನು 15 ಲಕ್ಷ ರೂ.ನಿಂದ 30 ಲಕ್ಷ ರೂ.ಗೆ ಹೆಚ್ಚಿಸಿ ಆದೇಶಿಸಿದೆ.

ದಾವಣಗೆರೆಯ ಮೋಟಾರು ವಾಹನ ಅಪಘಾತಗಳ ಪರಿಹಾರ ನ್ಯಾಯ ಮಂಡಳಿಯ ಆದೇಶವನ್ನು ಪ್ರಶ್ನಿಸಿ ಮೃತರ ಮೊದಲ ಪತ್ನಿ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಜಯಂತ್ ಬ್ಯಾನರ್ಜಿ ಮತ್ತು ತಾರಾ ವಿತಾಸ್ತಾ ಗಂಜು ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ಮೃತರ 2ನೇ ಪತ್ನಿ ಹಾಗೂ ಮಕ್ಕಳೂ ಮೃತರ ಮೇಲೆ ಅವಲಂಬಿತರಾಗಿದ್ದ ಹಿನ್ನೆಲೆಯಲ್ಲಿ ಅವರಿಗೆ ಪರಿಹಾರದಿಂದ ವಂಚಿಸುವಂತಿಲ್ಲ ಎಂದು ಅಭಿಪ್ರಾಯಪಟ್ಟಿತು. ಹೀಗಾಗಿ ನ್ಯಾಯಮಂಡಳಿ ಈ ಹಿಂದೆ ನೀಡಿದ್ದ 15 ಲಕ್ಷ ರೂ. ಪರಿಹಾರದ ಜತೆಗೆ ಹೆಚ್ಚುವರಿಯಾಗಿ ಇನ್ನೂ 15 ಲಕ್ಷ ರೂ. ನೀಡುವಂತೆ ವಿಮಾ ಕಂಪನಿಗೆ ನಿರ್ದೇಶಿಸಿ, ಒಟ್ಟು ಪರಿಹಾರ ಮೊತ್ತವನ್ನು 30 ಲಕ್ಷ ರೂ.ಗೆ ಹೆಚ್ಚಿಸಿತು.

ನ್ಯಾಯಪೀಠ, ಪರಿಹಾರ ಮೊತ್ತವನ್ನು ದ್ವಿಗುಣಗೊಳಿಸಿ ಒಟ್ಟು 30 ಲಕ್ಷ ರೂ. ಪಾವತಿಸುವಂತೆ ವಿಮಾ ಕಂಪನಿಗೆ ಆದೇಶ ನೀಡಿತು.

ನಾಳೆ ಆರ್‌ಜಿಯುಎಚ್‌ಎಸ್‌ನಿಂದ ಮಾದಕವಸ್ತು ವಿರೋಧಿ ದಿನಾಚರಣೆ

ನಶಾಮುಕ್ತ ಭಾರತ ಸಂಕಲ್ಪ ಘೋಷಣೆ

• **ಬೆಂಗಳೂರು:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್ಎಸ್)ದ 31ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆಯನ್ನು ಜೂ.28ರಂದು ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಶಾಮುಕ್ತ ಭಾರತ ಸಂಕಲ್ಪ ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಜಿಯುಎಚ್‌ಎಸ್ ಕುಲಪತಿ ಡಾ. ಭಗವಾನ್ ಬಿ.ಸಿ. ಮಾತನಾಡಿ, ಸಮಾರಂಭಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಹಾಗೂ ಆರೋಗ್ಯ ಸಚಿವ ಯು.ಟಿ. ಖಾದರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಆಂಧ್ರಪ್ರದೇಶದ ರಾಜ್ಯಪಾಲ ಎಸ್.ಅಬ್ದುಲ್ ನಜೀರ್ ಅವರು ವೈದ್ಯಕೀಯ ವಿದ್ಯಾರ್ಥಿಗಳ ಪಾತ್ರ ಕುರಿತು ದತ್ತಿ ಉಪನ್ಯಾಸ ನೀಡಲಿದ್ದಾರೆ. ಈ ದತ್ತಿಯನ್ನು ಆರ್‌ಜಿಯುಎಚ್‌ಎಸ್‌ನ ಪ್ರಥಮ ಕುಲಪತಿ ಡಾ. ಎಸ್. ಕಾಂತಾ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕಿ ದಿವಂಗತ ಡಾ. ಶಿವರತ್ನ ಸಿ. ಸಾವಡಿ ಅವರ ಹೆಸರಿನಲ್ಲಿ ಸ್ಥಾಪಿಸಲಾಗಿದೆ ಎಂದು ಭಗವಾನ್ ವಿವರಿಸಿದರು.



ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಿಂದ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಸಂಸ್ಥಾಪನಾ ದಿನದ ಅಂಗವಾಗಿ ರಾಜ್ಯಾದ್ಯಂತ ಸುಮಾರು 1.25 ಲಕ್ಷ ರೂ. ವೈದ್ಯ ಕೀಯ ವಿದ್ಯಾರ್ಥಿಗಳು ನಶಾಮುಕ್ತ ಭಾರತ ಸಂಕಲ್ಪ ಸ್ವೀಕರಿಸಲಿದ್ದಾರೆ ಎಂದರು. ಕಳೆದ ವರ್ಷದಲ್ಲಿ ರಾಜ್ಯದ 15 ಜಿಲ್ಲೆಗಳ 550ಕ್ಕೂ ಹೆಚ್ಚು ಸಂಯೋಜಿತ ಕಾಲೇಜುಗಳ 98 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ 10 ಸಾವಿರ ಸಿಬ್ಬಂದಿ ಜಾಗೃತಿ ಗಳಲ್ಲಿ ಭಾಗವಹಿ ಸಿದ್ದು, ದೇಶದಲ್ಲೇ ಇಂತಹ ಅಭಿಯಾನ ಆರಂಭಿಸಿದ ಮೊದಲ ಆರೋಗ್ಯ ವಿಜ್ಞಾನ ವಿವಿ ಎಂಬ ಹೆಗ್ಗಳಿಕೆ ಆರ್‌ಜಿಯುಎಚ್‌ಎಸ್‌ಗೆ ಸಲ್ಲುತ್ತದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ್, ಕುಲಸಚಿವ ಡಾ. ರಿಯಾಜ್ ಬಾಷಾ ಎಸ್. ಹಾಗೂ ಅರ್ಜುನ್ ಒಡೆಯರ್ ಇದ್ದರು.

> **ಅಕ್ಟೋಬರ್ ತಿಂಗಳಿಗೆ ರಾಮನಗರ ಕ್ಯಾಂಪಸ್**
> ಮುಂಬರುವ ಅಕ್ಟೋಬರ್ ಅಥವಾ ನವೆಂಬರ್ ತಿಂಗಳಿಗೆ ವಿಶ್ವವಿದ್ಯಾಲಯದ ರಾಮನಗರ ಕ್ಯಾಂಪಸ್ ಅನ್ನು ಉದ್ಘಾಟಿಸುವ ಗುರಿ ಹೊಂದಲಾಗಿದೆ. ಈ ಮೊದಲಿನ ದಿನಾಂಕದಂತೆ ಕಳೆದ ಡಿಸೆಂಬರ್‌ನಲ್ಲಿಯೇ ರಾಮನಗರದಲ್ಲಿರುವ ಹೊಸ ಆರ್‌ಜಿಯುಎಚ್‌ಎಸ್ ಕ್ಯಾಂಪಸ್ ಉದ್ಘಾಟನೆಯಾಗಬೇಕಿತ್ತು. ಅಲ್ಲದೇ, ಮಾರ್ಚ್ ನಲ್ಲಿ ಉದ್ಘಾಟಿಸುವ ಗಡುವು ಇಟ್ಟುಕೊಂಡಿದ್ದೇವು. ಆದರೆ, ವಿಳಂಬವಾಗುತ್ತಿದೆ ಎಂದು ಭಗವಾನ್ ಬಿ.ಸಿ. ಹೇಳಿದರು.

ಮಳೆ ಕೊರತೆ ಹಿನ್ನೆಲೆ 7ನೇ ಜನರೇಟರ್ ಬಂದ್ | ಪೆನ್‌ಸ್ಟಾಕ್ ಪೈಪ್ ಸೋರಿ ಅನಾಹುತ ಸೃಷ್ಟಿ


ಶರಾವತಿ ವಿದ್ಯುತ್ ಉತ್ಪಾದನಾ ಘಟಕಕ್ಕೆ ನುಗ್ಗಿದ ನೀರು


▸ **ಜಿ. ನಾಗೇಶ್ ಸಾಗರ**

ದಿಗಂತ ವಿಶೇಷ

• **ಸಾಗರ:** ಶರಾವತಿ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಗುರುವಾರ ಪೆನ್‌ಸ್ಟಾಕ್ ಪೈಪ್ ಲೀಕ್ ಆಗಿ ನೀರು ನುಗ್ಗಿದ ಪರಿಣಾಮ ಕ್ಷಣಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಶರಾವತಿ ಹಿನ್ನೀರನ್ನು ಆಶ್ರಯಿಸಿ ಲಿಂಗನಮಕ್ಕಿ ಜಲಾಶಯದ ಶರಾವತಿ ವಿದ್ಯುದಾಗಾರದಲ್ಲಿ 1,035 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇಲ್ಲಿ 10 ಘಟಕಗಳಿದ್ದು ತಲಾ 103.5 ಮೆಗಾವ್ಯಾಟ್ ವಿದ್ಯುತ್ತನ್ನು ಪ್ರತಿ ಘಟಕದಿಂದ ಉತ್ಪಾದನೆ ಮಾಡಲಾಗುತ್ತಿತ್ತು. ಈ ಘಟಕಗಳಿಗೆ ಸುಮಾರು 400 ಮೀ. ಎತ್ತರದಿಂದ ಬೃಹತ್ ಪೈಪ್‌ಗಳ ಮೂಲಕ ಟರ್ಬೈನ್‌ಗಳಿಗೆ ನೀರು ಹರಿಸಲಾಗುತ್ತದೆ.

ಮಳೆ ಕೊರತೆ ಹಿನ್ನೆಲೆಯಲ್ಲಿ ಲಿಂಗನಮಕ್ಕಿ ಜಲಾಶಯದಲ್ಲಿನ ನೀರಿನ ಪ್ರಮಾಣ ತೀವ್ರ ಕುಸಿತ ಕಂಡಿದೆ. ಈ ಹಿನ್ನೆಲೆಯಲ್ಲಿ ಕೇವಲ ಮೂರು ಯೂನಿಟ್‌ಗಳ ಮೂಲಕ 310.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಉಳಿದ ಏಳು ಯೂನಿಟ್‌ಗಳನ್ನು ನೀರಿನ ಕೊರತೆ ಹಿನ್ನೆಲೆಯಲ್ಲಿ ನಿಲ್ಲಿಸಿ ವಾರ್ಷಿಕ ನಿರ್ವಹಣೆಯನ್ನು ಅಧಿಕಾರಿಗಳು ಮಾಡುತ್ತಿದ್ದರು. ಏಳನೇ ಜನರೇಟರ್ ನಿಲ್ಲಿಸಿ ನಾಲ್ಕು ದಿನಗಳಾಗಿತ್ತು. ಅದರಲ್ಲಿ ನೀರು ಪೆನ್ ಸ್ಟಾಕ್ ಪೈಪ್‌ನಲ್ಲಿ ನೀರು ಸಂಗ್ರಹ ಹಾಗೆಯೆ ಇತ್ತು. ಹಂತಹಂತವಾಗಿ ಸಿಬ್ಬಂದಿ ಖಾಲಿ ಮಾಡುತ್ತಿರುವ ಸಂದರ್ಭದಲ್ಲಿ ಪೈಪ್ ಪಂಕ್ಚರ್ ಆಗಿ ನೀರು ಹೊರಬಂದಿದೆ. ಅಪಾಯದ ಸಾಧ್ಯತೆಯನ್ನು ಮನಗಂಡು ಮೂರು ಘಟಕಗಳನ್ನು ಬಂದ್ ಮಾಡಲಾಯಿತು.






ಒಟ್ಟಾರೆ ಲಿಂಗನಮಕ್ಕಿ ಜಲಾಶಯದ ನೀರಿನ ಪ್ರಮಾಣ ಕುಸಿತ ಆಗುತ್ತಿರುವುದು, ಶರಾವತಿ ವಿದ್ಯುದಾಗಾರದ 7ನೇ ಘಟಕದ ಪೈಪ್‌ನಲ್ಲಿ ಸಂಗ್ರಹವಾಗಿರುವ ನೀರು ಪೋಲಾಗಿರುವುದು ಎಲ್ಲವೂ ಮುಂದಿನ ದಿನಗಳಲ್ಲಿ ವಿದ್ಯುತ್ ಉತ್ಪಾದನೆಗೆ ತೊಂದರೆ ಉಂಟು ಮಾಡುವ ಜತೆಗೆ ಸಾಗರಕ್ಕೆ, ಜೋಗ ಕಾರ್ಗಲ್ ಜನರಿಗೆ ಕೊಡುತ್ತಿರುವ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಬಹುದು. ಮಳೆ ಪ್ರಮಾಣ ದಿಢೀರ್ ಕುಸಿತದಿಂದಾಗಿ ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ ತೀವ್ರ ಕುಸಿತ ಕಂಡಿದ್ದು, ಇನ್ನು ಮೂರ್‍ನಾಲ್ಕು ದಿನ ಮಳೆ ಬಾರದೆ ಹೋದಲ್ಲಿ ಜಲಾಶಯ ಬೆಡ್‌ಲೆವೆಲ್ ತಲುಪಿ ವಿದ್ಯುತ್ ಉತ್ಪಾದನೆ ನಿಲ್ಲಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

> **ಕಳೆದ ವರ್ಷಕ್ಕಿಂತ 35 ಅಡಿ ಕಡಿಮೆ**
> ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟ 1819 ಆಗಿದ್ದು, 1740 ಅಡಿ ತಲುಪುವವರೆಗೂ ವಿದ್ಯುತ್ ಉತ್ಪಾದನೆ ಮಾಡಬಹುದು. ಮೇ ಎರಡನೇ ವಾರ, ಜೂನ್‌ನಿಂದ ಮುಂಗಾರು ಪ್ರಾರಂಭವಾಗಿ ಇಷ್ಟು ಹೊತ್ತಿಗೆ ಜಲಾಶಯ ಸುಮಾರು 1775 ಅಡಿಗೂ ಹೆಚ್ಚಿನ ನೀರನ್ನು ತುಂಬಿಕೊಂಡಿರುತಿತ್ತು. ಆದರೆ ಜೂನ್ ಮುಗಿಯುತ್ತ ಬಂದರೂ ಮಳೆ ಬಿದ್ದಿಲ್ಲ. ಈತನಕ ಸುಮಾರು 550 ಮಿ.ಮೀ. ಒಳಗೆ ಮಳೆ ಬಿದ್ದಿದೆ. 151.64 ಅಡಿ ಸಾಮರ್ಥ್ಯದ ಲಿಂಗನಮಕ್ಕಿ ಜಲಾಶಯದಲ್ಲಿ ಶುಕ್ರವಾರ 14.86 ಟಿಎಂಸಿ ನೀರು ಮಾತ್ರ ಇದ್ದು, 1819 ಅಡಿ ಜಾಗದಲ್ಲಿ 1745.75 ಅಡಿ ನೀರು ಸಂಗ್ರವಾಗಿದೆ. ಕಳೆದ ವರ್ಷ ಈ ವೇಳೆಗೆ 1781.55 ಅಡಿ ನೀರಿದ್ದು, ಡ್ಯಾಂನಲ್ಲಿ 57.29 ಟಿಎಂಸಿ ನೀರು ಸಂಗ್ರಹವಾಗಿತ್ತು. ಮಳೆಯೆ ಇಲ್ಲದೆ ಇರುವುದರಿಂದ ಜಲಾಶಯಕ್ಕೆ ಯಾವುದೇ ಒಳಹರಿವು ಇಲ್ಲ. ಡ್ಯಾಂ ಲೆವೆಲ್ 1740 ತಲುಪಿದಾಗ ವಿದ್ಯುತ್ ಉತ್ಪಾದನೆ ಮಾಡಿದರೆ ಜಲಾಶಯದಲ್ಲಿ ಕಂಪನ ಉಂಟಾಗುತ್ತದೆ ಎನ್ನುತ್ತಾರೆ ಅಧಿಕಾರಿಗಳು.

ಅಯೋಧ್ಯೆ ದೇಣಿಗೆ ಲೂಟಿ ಆಘಾತಕಾರಿ: ಕೆ.ಎಸ್.ಈಶ್ವರಪ್ಪ

• **ಶಿವಮೊಗ್ಗ:** ಅಯೋಧ್ಯೆ ರಾಮಮಂದಿರದ ದೇಣಿಗೆ ಲೂಟಿಯಾಗಿರುವುದು ಆಘಾತ ತಂದಿದೆ. ಈ ಲೂಟಿಕೋರರ ಬಗ್ಗೆ ತನಿಖೆ ಮಾಡಿ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದ್ದಾರೆ.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಯಾರೋ ಒಬ್ಬರು ಮಾಡಿದ್ದರೆ ಇಡೀ ಕುಟುಂಬವನ್ನೇ ದೂಷಿಸುವುದು ಸರಿಯಲ್ಲ. ತಾಯಿ ಸೀತಾಮಾತೆಯ ಬಗ್ಗೆಯೂ ಹಿಂದೆ ಅನುಮಾನ ಪಟ್ಟಿದ್ದರು. ರಾಮಮಂದಿರ ನಿರ್ಮಾಣ ಈ ದೇಶದ ಇತಿಹಾಸ. ಕೇಂದ್ರ ಸರ್ಕಾರ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಇದನ್ನು ಕೇಂದ್ರ ಸರ್ಕಾರ ಹಗುರವಾಗಿ ತೆಗೆದುಕೊಂಡಿಲ್ಲ ಎಂದು ನಂಬಿದ್ದೇನೆ.

ಲೂಟಿಕೋರರು 6 ತಿಂಗಳ ಮುಂಚೆಯೇ ವ್ಯವಸ್ಥಿತವಾಗಿ ಸಂಚು ರೂಪಿಸಿ ಅಲ್ಲಿಯ ಸಿಸಿ ಕ್ಯಾಮೆರಾಗಳನ್ನು ಹಾಳು ಮಾಡಿದ್ದರು ಎನ್ನಲಾಗಿದೆ. ಈ ಲೂಟಿ ಕೂಡ ಸರ್ಕಾರಕ್ಕೆ ಮತ್ತು ರಾಮಭಕ್ತರಿಗೆ ಎಚ್ಚರಿಕೆಯ ಘಂಟೆಯಾಗಿದೆ. ಮಂದಿರ ಟ್ರಸ್ಟ್‌ನ ಆಡಳಿತ ವೈಫಲ್ಯ ಎದ್ದು ಕಾಣುತ್ತಿದೆ. ಬಿಜೆಪಿ, ಆರ್‌ಎಸ್‌ಎಸ್ ಕೂಡ ಭಾಗಿಯಾಗಿದೆ ಎಂಬ ಆರೋಪವನ್ನು ರಾಮಮಂದಿರ ಮಾಡುವುದೇ ಬೇಡ ಎಂದವರು ಮಾಡುತ್ತಿದ್ದಾರೆ. ಲೂಟಿ ಬಗ್ಗೆ ಅವರು ಈಗ ಗಮನ ಹರಿಸುತ್ತಿದ್ದಾರೆ. ಪುಣ್ಯಕ್ಷೇತ್ರದ ಗೌರವ ಹಾಳಾಗುತ್ತಿದೆ. ಯಾರೇ ಇದ್ದರೂ ತಕ್ಕ ಶಿಕ್ಷೆಯಾಗಬೇಕು ಎಂದರು.

ನನ್ನ ಭ್ರಷ್ಟಾಚಾರದ ಬಗ್ಗೆ ಕೆಲವರು ಮಾತನಾಡುತ್ತಿದ್ದಾರೆ. ನಾನು ಮಂತ್ರಿಯಾದಾಗ ಆರೋಪ ಬಂದಾಗ ಕೂಡಲೇ ರಾಜೀನಾಮೆ ನೀಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಬೇಡ ಎಂದಿದ್ದರೂ ನಾನು ರಾಜೀನಾಮೆ ನೀಡಿ, ಹೊರಗೆ ಬಂದು ತನಿಖೆಗೆ ಸಹಕರಿಸಿದ್ದೆ. ತನಿಖೆಯಲ್ಲಿ ನಿರಪರಾಧಿಯಂದು ತೀರ್ಮಾನವಾಗಿದೆ ಎಂದರು.

ಸಂಪಾದಕೀಯ

ದುರುದ್ದೇಶಿತ ವಿದೇಶಿ ದೇಣಿಗೆಗೆ ಅಂಕುಶ

ವಿದೇಶಗಳಿಂದ ದೇಣಿಗೆ ಪಡೆದು ನಿಯಮಬಾಹಿರವಾಗಿ ಕಾರ್ಯಾಚರಿಸುವ ಸರಕಾರೇತರ ಸಂಸ್ಥೆಗಳ(ಎನ್‌ಜಿಒ) ಕಾರ್ಯಾಚಟುವಟಿಕೆಗಳನ್ನು ನಿಯಂತ್ರಿಸಲು ಕೇಂದ್ರ ಸರಕಾರವು ಹೆಜ್ಜೆಯಿಟ್ಟಿದ್ದು ಈ ಸಂಬಂಧ ವಿದೇಶಿ ದೇಣಿಗೆ ನಿಯಂತ್ರಣ ನಿಯಮಾವಳಿ (ಎಫ್‌ಸಿಆರ್‌ಎ)ಗೆ ಸೂಕ್ತ ತಿದ್ದುಪಡಿಗಳನ್ನು ಮಾಡುವುದು ಅತ್ಯಂತ ಸೂಕ್ತವಾದ ಹಾಗೂ ಸಮಯೋಚಿತವಾದ ಉಪಕ್ರಮವಾಗಿದೆ. ಬಹಳಷ್ಟು ಸರಕಾರೇತರ ಸಂಸ್ಥೆಗಳು ವಿದೇಶಗಳಿಂದ ದೊಡ್ಡ ಮಟ್ಟದ ಹಣವನ್ನು ಪಡೆಯುತ್ತಿದ್ದು, ಈ ಹಣವನ್ನು ಮತಾಂತರ ಕಾರ್ಯಗಳಿಗೆ ಹಾಗೂ ದೇಶವಿರೋಧಿ ಚಟುವಟಿಕೆಗಳಿಗೆ ಬಳಸುತ್ತಿರುವುದರ ಹಿನ್ನೆಲೆಯಲ್ಲಿ ಇದನ್ನು ತಡೆಯಲು ಕಠಿಣ ನಿರ್ಬಂಧಗಳನ್ನು ಸರಕಾರವು ಜಾರಿಗೆ ತಂದಿದೆ. ಆ ಮೂಲಕ ಎನ್‌ಜಿಒಗಳ ಚಟುವಟಿಕೆಗೆ ಲಕ್ಷ್ಮಣ ರೇಖೆ ಹಾಕಲು ಹೊರಟಿದೆ.



ಹೊಸ ನಿಯಮಗಳನ್ವಯ ಎನ್‌ಜಿಒಗಳು ತಾವು ಯಾವ ಉದ್ದೇಶಕ್ಕಾಗಿ ವಿದೇಶಿ ದೇಣಿಗೆ ಪಡೆಯುತ್ತಿದ್ದೇವೆ ಎಂಬುದನ್ನು ಖಚಿತಪಡಿಸಬೇಕು ಹಾಗೂ ತಮ್ಮ ಕಾರ್ಯಾಚರಣೆಯ ಕಾರ್ಯವ್ಯಾಪ್ತಿ ಯಾವ ರಾಜ್ಯದಲ್ಲಿ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಕೆಲವು ಎನ್‌ಜಿಒಗಳು ಆದಿವಾಸಿ ಪಂಗಡಗಳಿರುವಂತಹ ಪ್ರದೇಶಗಳಲ್ಲಿ ಮತಾಂತರ ಕಾರ್ಯಗಳನ್ನು ನಡೆಸುತ್ತಿರುವುದರಿಂದ ಎನ್‌ಜಿಒಗಳು ತಮ್ಮ ಕಾರ್ಯವ್ಯಾಪ್ತಿಯ ಪ್ರದೇಶವನ್ನು ಸೂಚಿಸುವಂತೆ ಕಡ್ಡಾಯ ಮಾಡಿರುವುದು ವಿಹಿತವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಹೊಸ ನಿಯಮದಡಿಯಲ್ಲಿ ಎನ್‌ಜಿಒಗಳು ಮತಾಂತರ ಕಾರ್ಯ ನಡೆಸುವಂತಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ. ಹಿಂದಿನ ಕಾನೂನಿನಲ್ಲಿ ಇಂತಹ ಸ್ಪಷ್ಟ ನಿರ್ದೇಶ ಇಲ್ಲದಿರುವ ಕಾರಣದಿಂದಾಗಿ ಧಾರ್ಮಿಕ ಸಂಸ್ಥೆ ಎಂಬ ಹೆಸರಿನಲ್ಲಿ ವಿದೇಶಿ ಹಣ ಪಡೆಯುವ ಕೆಲವು ಸಂಸ್ಥೆಗಳು ಮತಾಂತರ ಕಾರ್ಯಗಳನ್ನು ಎಗ್ಗಿಲ್ಲದೆ ನಡೆಸುತ್ತಿದ್ದವು.

ವಿದೇಶಿಹಣವನ್ನು ಉದ್ದೇಶಿತ ಕಾರ್ಯವಲ್ಲದೆ ಅನ್ಯ ಉದ್ದೇಶಗಳಿಗೆ ಬಳಸುವುದನ್ನು ತಡೆಯುವುದು ಕೂಡಾ ಪ್ರಸಕ್ತ ನಿಯಮ ಬದಲಾವಣೆಯ ಗುರಿಯಾಗಿದೆ. ಇನ್ನಷ್ಟು ಹಣ ಗಳಿಸುವ ಉದ್ದೇಶಕ್ಕೆ ವಿದೇಶಿ ದೇಣಿಗೆ ಬಳಕೆಯಾಗುವುದನ್ನು ತಪ್ಪಿಸುವುದಕ್ಕಾಗಿ ನಿಯಮ ತಂದಿರುವ ಸರಕಾರವು ಎನ್‌ಜಿಒಗಳು ಶೇರು ಮಾರುಕಟ್ಟೆಯಂತಹ ಊಹಾತ್ಮಕ ಕ್ಷೇತ್ರದಲ್ಲಿ ಹಣ ಹೂಡುವುದನ್ನು ನಿರ್ಬಂಧಿಸಿದೆ. ಅನುಚಿತ ಕಾರ್ಯದಲ್ಲಿ ತೊಡಗಿರುವ ಕೆಲವು ಎನ್‌ಜಿಒಗಳು ಹಾಗೂ ಕೆಲವು ವಿರೋಧ ಪಕ್ಷಗಳು ಸರಕಾರದ ಈ ಹೊಸ ನಿಯಮಗಳನ್ನು ವಿರೋಧಿಸಿವೆಯಾದರೂ ರಾಷ್ಟ್ರಹಿತದ ಹಿನ್ನೆಲೆಯಲ್ಲಿ ಇವು ಸ್ವಾಗತಾರ್ಹ ಕ್ರಮಗಳೆಂಬುದು ನಿರ್ವಿವಾದ.

ಇವುಗಳತ್ತ ಮನಸ್ಸು ಮಾಡಬಾರದು

ಆತಿಕ್ಲೇಶೇನ ಯೇಽರ್ಥಾಃ ಸ್ಯುಃ ಧರ್ಮಸ್ಯಾತಿಕ್ರಮೇಣ ಚ ।
ಅರೀರ್ವಾ ಪ್ರಣಿಪಾತೇನ ಮಾ ಸ್ಮ ತೇಷು ಮನಃ ಕೃಥಾ ॥ – ಮಹಾಭಾರತ

ಯಾವ ಸಂಪತ್ತು ಅತಿಕ್ಲೇಶದಿಂದ ಬರುತ್ತದೆಯೋ, ಧರ್ಮದ ಹಾದಿಯನ್ನು ಬಿಟ್ಟು ಬರುತ್ತದೆಯೋ , ಶತ್ರುವಿಗೆ ಶರಣಾಗಿ ಬರುತ್ತದೆಯೋ ಅಂಥವುಗಳಲ್ಲಿ ಮನಸ್ಸು ಮಾಡಬಾರದು – ಎಂಬುದು ಶ್ಲೋಕಾರ್ಥ.

ಸಂಪತ್ತಿಗಾಗಿ ಹಂಬಲಿಸದವರಿಲ್ಲ. ಕಾಂಚನದಲ್ಲಿ ಎಲ್ಲ ಗುಣಗಳು ಇರುವುದರಿಂದ, ಕಾಸಿರುವವರನ್ನೇ ಜನರು ಆಮಂತ್ರಿಸಿ ಆದರಿಸುವುದರಿಂದ ತಾನೂ ಹಣ ಗಳಿಸಬೇಕು, ಶ್ರೀಮಂತನಾಗಿ ಗೌರವಾದರಗಳನ್ನು ಪಡೆಯಬೇಕು ಎಂದು ಬಯಸುವುದು ಸಹಜವೆನಿಸುತ್ತದೆ. ಹೇಗಾದರೂ ಸರಿ, ಏನೇ ಮಾಡಿಯಾದರೂ ಸರಿ ಶ್ರೀಮಂತನಾಗಬೇಕು ಎಂಬ ಆಸೆ ಹೆಚ್ಚಿನವರಲ್ಲಿ ಇರುವುದಾದರೂ ಎಲ್ಲರಿಗೂ ಸಾಧ್ಯವಾಗುವುದಿಲ್ಲ.

ಶ್ಲೋಕ ಸಾಗರ



ಡಾ.ಸೋಂದಾ ಭಾಸ್ಕರ ಭಟ್

ಪ್ರಾಮಾಣಿಕವಾಗಿ , ಪರಿಶ್ರಮದಿಂದ ದುಡಿದರೆ ಒಂದು ಹಂತಕ್ಕೆ ಏರಬಹುದು. ಹಣದ ಹಾಸಿಗೆಯ ಮೇಲೆ ಮಲಗಲು ಸಾಧ್ಯವಿಲ್ಲ. ನೀರಿನ ಪೈಪಿನಲ್ಲೋ, ನೀರಿನ ಟಾಂಕಿಯಲ್ಲೋ ಹಣ ತುಂಬಿಡಲು ಸಾಧ್ಯವಿಲ್ಲ. ಚೀಲದಲ್ಲಿ ತುಂಬಿಸಿ ನೆಲದಡಿಯಲ್ಲಿ ಹುಗಿದಿಡಲೂ ಆಗುವುದಿಲ್ಲ. ಇವೆಲ್ಲವೂ ಆಗಬೇಕಾದರೆ ವಾಮಮಾರ್ಗ ತುಳಿಯಬೇಕು. ಕೊಲೆ, ಸುಲಿಗೆ ಮಾಡಬೇಕು. ಅಧಿಕಾರದಲ್ಲಿದ್ದು ಲಂಚ ಪಡೆಯಬೇಕು. ಇಂಥವರ ಬಗ್ಗೆ ಮಾಧ್ಯಮಗಳಲ್ಲಿ ನೋಡಿದ್ದೇವೆ. ಪತ್ರಿಕೆಗಳಲ್ಲಿ ಓದಿದ್ದೇವೆ. ಈ ಎಲ್ಲ ಮಾರ್ಗಗಳಿಂದ ಹಣ ಶ್ರೀಮಂತಿಕೆಯನ್ನು ತಂದುಕೊಡಬಹುದು. ಆದರೆ ಶಾಶ್ವತ ನೆಮ್ಮದಿಯನ್ನೀಯದು.

ದುರ್ಮಾರ್ಗದಲ್ಲಿ ಗಳಿಸಿದ ಸಂಪತ್ತು ಆಪತ್ತಿಗೆ ಕಾರಣವಾಗುವುದರಿಂದ ಅವುಗಳ ಬಗ್ಗೆ ಮನಸ್ಸು ಮಾಡಬಾರದು. ಕ್ಲೇಶಕ್ಕೆ ಮೂಲವಾಗುವುದರಿಂದ ಸರ್ವಥಾ ಮನಸ್ಸು ಮಾಡಬಾರದು. ಪ್ರಕೃತ ಶ್ಲೋಕದಲ್ಲಿ ಯಾವ ಬಗೆಯ ಸಂಪತ್ತನ್ನು ಕುರಿತು ಆಸೆ ಪಡಬಾರದು, ಮನಸ್ಸು ಮಾಡಬಾರದು ಎಂಬುದನ್ನು ಕುರಿತು ಕವಿಯು ಸೂಚಿಸುತ್ತಾನೆ. ಮೊದಲನೆಯದಾಗಿ ಅತಿಕ್ಲೇಶದಿಂದ ಬರುವ ಸಂಪತ್ತಿನತ್ತ ಮನಸ್ಸು ಮಾಡಬಾರದು. ಅತಿಯಾದ ಕ್ಲೇಶದಿಂದ ಸಂಪತ್ತನ್ನು ಗಳಿಸಲು ಮುಂದಾದಾಗ ಸಾಕಷ್ಟು ಸವಾಲುಗಳಿರುತ್ತವೆ. ಆಪತ್ತು ಅಷ್ಟೇ ಬಲವಾಗಿರುತ್ತದೆ. ಸ್ವಲ್ಪ ಎಚ್ಚರ ತಪ್ಪಿದರೂ ಆಗುವ ನಷ್ಟ ತುಂಬಲಾರದ್ದಾಗುತ್ತದೆ. ಬೀಳುವ ಪೆಟ್ಟು ಏಳುವುದಕ್ಕೂ ಸಾಧ್ಯವಾಗದಂತಿರುತ್ತದೆ. ಜೀವಕ್ಕೆ ಅಪಾಯ ತರುವ ಅತಿಕ್ಲೇಶಕರವಾದ ಸಂಪತ್ತನ್ನು ಗಳಿಸಿ ಶ್ರೀಮಂತನೆನಿಸಿಕೊಳ್ಳುವ ಹಂಬಲ ಸರ್ವಥಾ ಒಳ್ಳೆಯದಲ್ಲ. ಇಂತಹ ಕೆಲಸಗಳತ್ತ ಮನಸ್ಸು ಮಾಡಬಾರದು. ಎರಡನೆಯದಾಗಿ ಧರ್ಮದ ಮಾರ್ಗದಿಂದ ಸಂಪತ್ತು ಗಳಿಸಬೇಕೇ ವಿನಾ ಅಧರ್ಮ ಮಾರ್ಗದಿಂದ ಸಂಪತ್ತನ್ನು ಗಳಿಸಲು ಮನಸ್ಸು ಮಾಡಬಾರದು. ಅಧರ್ಮದ ಗಳಿಕೆ ಪಾಪಕರ. ಎಷ್ಟೋ ಜನರ ಮನಸ್ಸಿಗೆ ನೋವನ್ನುಂಟು ಮಾಡುತ್ತದೆ. ಜೀವನವನ್ನೇ ಘಾಸಿಗೊಳಿಸುತ್ತದೆ. ಇಂಥವರನ್ನು ಭಗವಂತನೆಂದೂ ಮೆಚ್ಚಲಾರ. ಅವರಿತ್ತ ಸಂಪತ್ತನ್ನೂ ಮುಟ್ಟಲಾರ. ಪಾಪಿಯನ್ನಾಗಿಸುವ ಅಧರ್ಮದ ಗಳಿಕೆ ಬದುಕನ್ನೇ ನರಕವನ್ನಾಗಿಸುತ್ತದೆ. ಹಣ ಗಳಿಕೆಗಾಗಿ ಇಂತಹ ಮಾರ್ಗದ ಆಯ್ಕೆ ಸಾಧುವಲ್ಲ.ಮೂರನೆಯದಾಗಿ ಶತ್ರುವಿಗೆ ಶರಣಾದಾಗ ಬರುವ ಸಂಪತ್ತಿನತ್ತ ಮನಸ್ಸು ಮಾಡಬಾರದು. ಶತ್ರುವಿಗೆ ಶರಣಾದಾಗ ಆತನು ಸಂಪತ್ತನ್ನು ಕೊಡಬಹುದು. ಆದರೆ ಸ್ವಾಭಿಮಾನದ ಹರಣವಾಗುತ್ತದೆ. ಶತ್ರುವಿಗೆ ಶರಣಾಗುವುದು ಅಪಮಾನ. ಗೌರವಕ್ಕೆ ಧಕ್ಕೆ. ಬೆಲೆಯಿಲ್ಲದ ಅಸ್ತಿತ್ವವಾಗುತ್ತದೆ. ಶತ್ರುವು ಶರಣಾಗುವಂತೆ ಮಾಡಬೇಕೇ ವಿನಾ ಶತ್ರುವಿಗೆಂದೂ ಶರಣಾಗಬಾರದು. ಇಂತಹ ದೊಡ್ಡ ನಿರಭಿಮಾನ ಇನ್ನೊಂದಿಲ್ಲ. ಎಷ್ಟೇ ಸಂಪತ್ತು ಹರಿದು ಬರುವಂತಿದ್ದರೂ ಈ ಮೂರರತ್ತ ಮನಸ್ಸು ಮಾಡಬಾರದು.

ವಿಶುದ್ಧ ಚಕ್ರ ಮತ್ತು ನಾಯಕತ್ವ

ವಿಶುದ್ಧ ಚಕ್ರವು ಜಾಗೃತವಾಗಿ ಅದರ ಶಕ್ತಿಯೂ ಸೇರಿದರೆ ವ್ಯಕ್ತಿಯು ಜಗತ್ತಿಗೇ ಮಹಾನ್ ನಾಯಕನಾಗುತ್ತಾನೆ.

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನಾಯಕತ್ವವು ನಿಮ್ಮ ಸಂವಹನದ ರೀತಿ, ಆಲೋಚನೆಗಳನ್ನು ನೀವು ಹೇಗೆ ಕಾರ್ಯರೂಪಕ್ಕೆ ತರುತ್ತೀರಿ ಎನ್ನುವ ವಿಶೇಷತೆ, ಇತರರ ಮೇಲೆ ನೀವು ಹೇಗೆ ಪ್ರಭಾವ ಬೀರಬಲ್ಲಿರಿ ಎನ್ನುವ ಕೌಶಲ್ಯ, ಜೊತೆಗೆ ನೀವು ತಂಡವನ್ನು ನಿಮ್ಮ ಮಾತಿನ ಶಕ್ತಿಯಿಂದ ಹೇಗೆ ಮುನ್ನಡೆಸಬಲ್ಲಿರಿ ಎನ್ನುವ ತಾಕತ್ತಿನ ಮೇಲೆ ಅವಲಂಬಿಸಿರುತ್ತದೆ. ಇವೆಲ್ಲವೂ ವಿಶುದ್ಧ ಚಕ್ರಕ್ಕೆ ಸಂಬಂಧಿಸಿದ ಸಂಗತಿಗಳು. ನೀವು ಕೇವಲ ಮುಖ್ಯಸ್ಥನಾಗಿ ಉಳಿಯದೇ ನಾಯಕರಾಗುತ್ತೀರಿ. ಸರ್ವ ಜನಾನುರಾಗಿಯಾಗುತ್ತೀರಿ. ಅಧಿಕಾರಿಯಾಗಿರದೇ, ಕೇವಲ ರಾಜಕಾರಣಿಯಾಗಿರದೇ ಮುನ್ನಡೆಸುವ ಅಣ್ಣನಾಗುತ್ತೀರಿ.

ತಳಹದಿ; ಸ್ಪಷ್ಟತೆ ಮತ್ತು ಆತ್ಮವಿಶ್ವಾಸ

ನಾಯಕನಾದವರಿಗೆ ತಮ್ಮ ತಂಡವನ್ನು ಯಾವ ರೀತಿಯ ಮಾತುಗಳಿಂದ ಮುನ್ನಡೆಸಬೇಕು ಎನ್ನುವುದು ತಿಳಿದಿರಬೇಕು. ಯಾವಾಗ ಯಾವ ಧ್ವನಿ ಅವರಿಂದ ಬರಬೇಕು, ಅದು ಎಷ್ಟು ಪ್ರಮಾಣದಲ್ಲಿ ಇರಬೇಕು, ಯಾವಾಗ ತಾನೇ ಮುನ್ನುಗ್ಗಬೇಕು, ಯಾವಾಗ ತನ್ನ ತಂಡವನ್ನು ಮುಂದೆ ಹೋಗಲು ಬಿಡಬೇಕು ಹೀಗೆ ಎಲ್ಲವೂ ಸ್ಪಷ್ಟವಾಗಿರುವುದು ಮುಖ್ಯ. ಮಾತು ಮತ್ತು ನಡೆ ಎರಡೂ ಸಮತೋಲನದಲ್ಲಿ ಇರಲು ವಿಶುದ್ಧ ಚಕ್ರವು ಉತ್ತೇಜನಗೊಂಡಾಗ ಮಾತ್ರ ಸಾಧ್ಯ. ಅಂತಹವರಿಗೆ ಮಾತು ಎಂತಹಾ ಸಂದಿಗ್ಧ ಪರಿಸ್ಥಿತಿಯಲ್ಲೂ ಹಿಡಿತ ತಪ್ಪುವುದಿಲ್ಲ. ಸಾಯುವ ಕೊನೆಯ ಹಂತದಲ್ಲೂ ಕಮಾಂಡಿಂಗ್ ಇರುತ್ತದೆ. ಯಾವುದೇ ಗೊಂದಲಕ್ಕೆ ಆಸ್ಪದವೇ ಇರುವುದಿಲ್ಲ. ಅತ್ಯಂತ ಸ್ಪಷ್ಟವಾಗಿ, ಸ್ವಲ್ಪವೂ ತೊದಲದೇ ಗಟ್ಟಿಯಾದ ಧ್ವನಿಯಲ್ಲಿ ಆದೇಶ ಹೊಮ್ಮುತ್ತಿರುತ್ತದೆ. ಗಾಂಭೀರ್ಯ, ದೃಢತೆ ಎದುರಿನವರನ್ನು ಬೆಚ್ಚಿ ಬೀಳಿಸುವಂತೆ ಇರುತ್ತದೆ. ಅವರಲ್ಲಿ ತಾನಾಗಿಯೇ ಗೌರವ ಮತ್ತು ವಿಶ್ವಾಸ ಮೂಡುವಂತೆ ಆಗುತ್ತದೆ. ಎಷ್ಟೆಂದರೆ, ನಿಮಗೆ ಈಜು ಬರುತ್ತದೆಯೋ ಇಲ್ಲವೋ ಎಂದೂ ಸಹಾ ಆಲೋಚಿಸದೇ, ಅವರು ಆದೇಶ ನೀಡಿದರೆ ನೀವು ಬೋರ್ಗರೆಯುವ ನದಿಗೆ ಧುಮುಕಿ ಆಪತ್ತಿನಲ್ಲಿರುವವರನ್ನು ರಕ್ಷಣೆ ಮಾಡಬಲ್ಲಿರಿ.

ಮೂಲ ತತ್ವ; ಸತ್ಯ ಮತ್ತು ಪ್ರಾಮಾಣಿಕತೆ

ನೀವು ಸುಳ್ಳನ್ನೇ ಹೇಳುತ್ತಿದ್ದರೆ ಯಾರು ನಂಬುತ್ತಾರೆ? ನೀವು ನಿಮ್ಮ ತಂಡದವರಿಗೇ ತಪ್ಪು ದಾರಿ ಹೇಳಿದರೆ ಯಾರು ಹೆಚ್ಚು ದಿನ ಉಳಿಯುತ್ತಾರೆ? ಮೋಸ ಮಾಡುತ್ತಿದ್ದರಂತೂ ನಿಮ್ಮನ್ನೆ ಹೊರಗೆ ಹಾಕುತ್ತಾರೆ. ನಿಮ್ಮ ವಿಶುದ್ಧ ಚಕ್ರ ಜಾಗೃತವಾಗಿದ್ದರೆ ನೀವು ಸತ್ಯವನ್ನು ಮಾತ್ರ ಹೇಳುತ್ತೀರಿ. ನಿಮ್ಮ ಬಳಿ ಎಂದಿಗೂ ಸುಳ್ಳು ಸುಳಿಯುವುದೇ ಇಲ್ಲ! ಅಂದರೆ ನೀವು ಬಯಸಿದರೂ ಸುಳ್ಳನ್ನು ಹೇಳಲು ಆಗದು. ಅಷ್ಟೇ ಅಲ್ಲ ಇನ್ನೊಬ್ಬರು ಸುಳ್ಳನ್ನು ಹೇಳುತ್ತಿದ್ದರೆ ನಿಮಗೆ ತಕ್ಷಣ ಗೊತ್ತಾಗುತ್ತದೆ. ನೀವು ಅದನ್ನು ಅವರಿಗೆ ಬೇಸರವಾಗದಂತೆ ನಿಭಾಯಿಸಬಲ್ಲಿರಿ. ಅಥವಾ ಅವರ ಸ್ಥಾನವನ್ನು ನೀವು ನಿರ್ಧರಿಸಬಲ್ಲಿರಿ.

ನೈತಿಕತೆ ಎನ್ನುವುದು ನಿಮ್ಮ ಗ್ರೇಡ್ ಆಗಿರುತ್ತದೆ. ಎಂತಹಾ ಸಮಯದಲ್ಲೂ ನೀವು ನೈತಿಕತೆಯನ್ನು ಬಿಟ್ಟುಕೊಡುವುದಿಲ್ಲ. ನೀತಿ ಎನ್ನುವುದು ನಿಮಗೂ ಹಾಗೂ ನಿಮ್ಮ ಶತೃಗಳಿಗೂ ಒಂದೇ ಎನ್ನುವ ನಂಬಿಕೆ ನಿಮ್ಮದು. ನಿಮ್ಮ ಮಗನಿಗೂ, ನಿಮ್ಮ ತಂಡದ ಇನ್ನೊಬ್ಬ ಸದಸ್ಯನಿಗೂ ಒಂದೇ ಎನ್ನುವ ಸಮಾನತೆ ನಿಮ್ಮದು. ಸಾವನ್ನು ಎದುರಿಸುವ ಸಮಯ ಬಂದಾಗ ನೀವು ನಿಮ್ಮ ಮಗನನ್ನು ಮೊದಲಿಗೆ ಆಯ್ಕೆ ಮಾಡುತ್ತೀರೇ ವಿನಾ ಸಾಧಾರಣ ಸದಸ್ಯರನ್ನಲ್ಲ.

ಅಸ್ತ್ರ; ಪಾರದರ್ಶಕತೆ

ವ್ಯವಹಾರವು ತುಂಬಾ ಪಾರದರ್ಶಕವಾಗಿರಲು ವಿಶುದ್ಧ ಚಕ್ರವೇ ಕಾರಣ. ನಿಮಗೆ ಅದೊಂದು ಅಸ್ತ್ರವೂ ಹೌದು. ನಿಮ್ಮನ್ನು ಯಾರೂ ಪ್ರಶ್ನಿಸಲು ಅವಕಾಶವಿಲ್ಲದಂತೆ ನೀವು ಎಲ್ಲವನ್ನೂ ತೆರೆದಿಡುತ್ತೀರಿ. ತಂಡದೊಂದಿಗೆ ಹಂಚಿಕೊಳ್ಳುತ್ತೀರಿ. ಚರ್ಚಿಸುತ್ತೀರಿ. ಅವರ ಅಭಿಪ್ರಾಯಗಳಿಗೆ ಬೆಲೆ ಕೊಡುತ್ತೀರಿ. ಅವರ ಅಭಿಪ್ರಾಯಗಳನ್ನು ಮನರ್ ವಿಮರ್ಶೆ ಮಾಡುತ್ತೀರಿ. ಸೂಕ್ತ ಎನಿಸಿದರೆ ಪರಿಗಣಿಸುತ್ತೀರಿ. ನೀವು ನಿಮ್ಮ ಕೌಶಲ್ಯದಿಂದ ಅದನ್ನು ಇನ್ನಷ್ಟು ಪಾಲೀಶ್ ಮಾಡುತ್ತೀರಿ. ಮತ್ತು ಕೊನೆಯಲ್ಲಿ ಅದರ ಎಲ್ಲಾ



ಹಕ್ಕು ಮತ್ತು ಯಶಸ್ಸಿನ ಪಾಲನ್ನು ಅಭಿಪ್ರಾಯ ಕೊಟ್ಟವರಿಗೆ ನೀಡುತ್ತೀರಿ. ಕೆಲವೊಮ್ಮೆ ಎಲ್ಲಾ ಪ್ಲಾನ್ ನಿಮ್ಮದೊಬ್ಬರದೇ ಆಗಿದ್ದರೂ, ನೀವು ಅದನ್ನು ತಂಡದವರೊಂದಿಗೆ ಹಂಚಿಕೊಳ್ಳುತ್ತೀರಿ ಮತ್ತು ಅದನ್ನು ತಂಡದ ಯಶಸ್ಸು ಎಂದೇ ಹೇಳುತ್ತೀರಿ. ಕಾರಣ ನೀವೊಬ್ಬ ವಿಶುದ್ಧ ಚಕ್ರ ಜಾಗೃತರಾದ ನಾಯಕ. ನಾಯಕರು ಬರೀ ದರ್ಪದ ಆದೇಶವನ್ನು ನೀಡುತ್ತಿದ್ದರೆ ಅವರ ಮೇಲಿನ ವಿಶ್ವಾಸ ಕ್ರಮೇಣ ಕಡಿಮೆಯಾಗುತ್ತಾ ಬರುತ್ತದೆ. ಅವರು ರಾಜನಾಗುವ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ. ನೀವು ಇತರರ ಅಳಲನ್ನು, ನೋವನ್ನು ಸಮಸ್ಯೆಗಳನ್ನು ಕೇಳುವವರಾಗಿರಬೇಕು. ಅವರು ಬಾಯಿಬಿಟ್ಟು ಹೇಳಬಹುದು ಅಥವಾ ಹೇಳದೇ ಮೌನವಾಗಿ ನುಂಗಿಕೊಂಡಿರಬಹುದು. ಅದನ್ನು ಆಲಿಸುವ ಸಾಮರ್ಥ್ಯ ನಿಮ್ಮದಾಗಿರಬೇಕು. ನಿಮ್ಮ ತಂಡದ ಪ್ರತಿಯೊಬ್ಬರ ಬದುಕಿನ ಕತೆಗಳನ್ನು ನೀವು ತಿಳಿದುಕೊಂಡಿರಬೇಕು. ಅವರ ವ್ಯಕ್ತಿತ್ವ, ನಡೆ ಮತ್ತು ವರ್ತನೆಗಳನ್ನು ಅಭ್ಯಾಸ ಮಾಡಿರಬೇಕು. ವಿಶುದ್ಧ ಚಕ್ರವು ಕಿವಿಯವರೆಗೂ ವ್ಯಾಪಿಸಿದೆ. ಹಾಗಂತಾ ನೀವು ಹಿತ್ತಾಳೆ ಕಿವಿಯವರಾದರೆ, ನಿಮ್ಮ ವಿಶುದ್ಧ ಚಕ್ರ ಸಂಪೂರ್ಣ ಹಳಿ ತಪ್ಪಿದೆ ಎಂದರ್ಥ.

ನಿಮ್ಮ ಸಹೋದ್ಯೋಗಿಗಳ ಮತ್ತು ಸಾರ್ವಜನಿಕರ ಸಮಸ್ಯೆಗಳನ್ನು ತಾಳ್ಮೆಯಿಂದ ಕೇಳುವುದು ಬಹು ಮುಖ್ಯ. ನಿಮ್ಮ ಬಳಿ ಅದಕ್ಕೆ ಪರಿಹಾರ ಇಲ್ಲದೇ ಇರಬಹುದು ಅಥವಾ ನಿಮಗೆ ಪರಿಹಾರ ನೀಡಲು ಸಮಯದ ಅಭಾವ, ಹಣದ ಅಭಾವ ಅಥವಾ ಯಾವುದೇ ತರಹದ ಕೊರತೆಗಳು ಇರಬಹುದು. ಆದರೂ ನೀವು ಅವರ ಮಾತುಗಳನ್ನು ಕೇಳಿಸಿಕೊಳ್ಳುವುದು ಮತ್ತು ಅದಕ್ಕೆ ತಕ್ಷಣದ ಯಾವುದೋ ಒಂದು ಉತ್ತರ ನೀಡುವುದು ಮುಖ್ಯ. ನಿಮ್ಮ ಉತ್ತರದಿಂದ ಅವರಿಗೆ ಎಳ್ಳಷ್ಟಾದರೂ ಸಮಾಧಾನವಾಗುವುದು ಮುಖ್ಯ. ಎಲ್ಲರ ಆಲೋಚನೆಗಳನ್ನು ಸಮಾನವಾಗಿ ಆಲಿಸುವುದು ಮತ್ತು ಕೊನೆಯಲ್ಲಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳುವುದು ನಾಯಕನಾದವನಿಗೆ ಮಾತ್ರ ಸಾಧ್ಯ. ನಿಮ್ಮ ನಿರ್ಧಾರ ಮಾತ್ರ ಅತ್ಯಂತ ಸೂಕ್ತವಾಗಿರಬೇಕು. ಒಂದು ವ್ಯವಸ್ಥಿತ ನಿರ್ಧಾರ ಮಾತ್ರ ನಿಮ್ಮ ನಾಯಕತ್ವವನ್ನು ಸದಾ ಉಳಿಸುತ್ತದೆ. ಅದರಲ್ಲಿ ಮುಂದಾಲೋಚನೆ ಹಾಗೂ ಸಾರ್ವಜನಿಕ ಹಿತಾಸಕ್ತಿ ಇರುವುದು ಅಗತ್ಯ. ಅದು ತಕ್ಷಣದಲ್ಲಿ ಜನಸಾಮಾನ್ಯರಿಗೆ ಅರ್ಥವಾಗದಿದ್ದರೂ, ಮುಂದೆ ಅವರೇ ನಿಮ್ಮನ್ನು ನಿಮ್ಮ ನಿರ್ಧಾರಕ್ಕಾಗಿ ಬೆಂಬಲಿಸುತ್ತಾರೆ.

ಪ್ರೇರಣೆ ಮತ್ತು ಪ್ರೋತ್ಸಾಹ

ನಾಯಕರು ಸದಾ ಉತ್ಸಾಹದಿಂದ ಇರಬೇಕೆಂಬುದು ಒಂದು ನಿಯಮ. ನಾಯಕರು ಉತ್ಸಾಹದಿಂದ ಇದ್ದರೆ ಅವರ ತಂಡ ಸಹಾ ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಲು ಸಾಧ್ಯ. ನಾಯಕರು ತನ್ನ ತಂಡವನ್ನು ಹುರಿದುಂಬಿಸುತ್ತಾ ಇದ್ದರೆ, ತಂಡದ ಸಾಮಾನ್ಯ ವ್ಯಕ್ತಿಯೂ ಸಹಾ ತನ್ನ ಶಕ್ತಿ ಮೀರಿ ಕೆಲಸ ಮಾಡಬಲ್ಲ. ನಾಯಕನು ತನ್ನ ಮಾತಿನ ಮೂಲಕ ತಂಡದ ನಿರಾಶೆಯನ್ನು ಹೋಗಲಾಡಿಸಬಲ್ಲ. ಭರವಸೆಯನ್ನು ಮೂಡಿಸಬಲ್ಲ. ಬುದ್ಧಿಗೆ ತಲುಪುವ ಮಾತುಗಳು ತಾತ್ಕಾಲಿಕವಾದ ಆಲೋಚನೆಗಳನ್ನು ಹುಟ್ಟಿಸಬಹುದು. ಹಾಗೂ ಬುದ್ಧಿಜೀವಿಗಳು ಮಾತ್ರ ಅದನ್ನು ಸ್ವೀಕರಿಸುತ್ತಾರೆ. ಮತ್ತು ಅದರ ವಿಮರ್ಶೆ ಮತ್ತು ವಿಶ್ಲೇಷಣೆಗೆ ತೊಡಗುತ್ತಾರೆ. ಅದೇ ಭಾವನೆಗೆ ತಲುಪುವ ಮಾತುಗಳು ಕ್ರಾಂತಿಯನ್ನೇ ಉಂಟು ಮಾಡುತ್ತವೆ. ಹೊಸ ಚಳುವಳಿಗಳಿಗೆ ಕಾರಣವಾಗುತ್ತದೆ. ಜನಸಾಮಾನ್ಯರು ಅದನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಹಿಂದೆ ಮುಂದೆ ನೋಡದೇ ಅನುಸರಿಸುತ್ತಾರೆ. ಜನರ ಕಷ್ಟ ಸುಖಗಳನ್ನು ತನ್ನದೇ ಎನ್ನುವಂತೆ ಭಾವಿಸಿ ಮಾತನಾಡುವ ನಾಯಕರನ್ನು ಎಲ್ಲರೂ ಅನುಸರಿಸುತ್ತಾರೆ. ತಮ್ಮ ಪ್ರಾಣವನ್ನೇ ಕೊಡಲು ಸಿದ್ಧರಾಗುತ್ತಾರೆ. ಮಾತು ಎನ್ನುವುದು ಕತ್ತಿಯ ಅಲುಗಿನಂತೆ; ಅಹಂಕಾರದಿಂದ ಆಡಿದರೆ ಕತ್ತು ಹಾರುತ್ತದೆ, ವಿನಮ್ರತೆಯಿಂದ ಆಡಿದರೆ ಕತ್ತು ಮೇಲೇರುತ್ತದೆ.

ಧ್ವನಿಮಾ ವ್ಯವಸ್ಥೆ

ಮನುಷ್ಯರು ಹೊರಡಿಸುವ ಧ್ವನಿಮಾಗಳು ಮುಖ್ಯವಾಗಿ ಕಂಠ್ಯಗಳು. ಶ್ವಾಸಕೋಶದಿಂದ ಬರುವ ಗಾಳಿಯ ಕಂಪನದಿಂದಲೇ ಹುಟ್ಟುತ್ತವೆ. ವಿಶುದ್ಧ ಚಕ್ರದ ಜಾಗವೇ ಧ್ವನಿ ಉತ್ಪಾದನಾ ಕೇಂದ್ರ. ಹೀಗಾಗಿ ವಿಶುದ್ಧ ಚಕ್ರವು ಸಮತೋಲನದಲ್ಲಿ ಇದ್ದಾಗ ಮಾತ್ರ ಖಂಡ ಧ್ವನಿಮಾಗಳು ಅಂದರೆ ಸ್ವರ ವ್ಯಂಜನಗಳು ಸ್ಪಷ್ಟವಾಗಿ ಹೊರಹೊಮ್ಮುತ್ತವೆ. ಗಂಟಲಿನ ಸ್ನಾಯುಗಳು ಮತ್ತು ಧ್ವನಿ ತಂತುಗಳು ಆರೋಗ್ಯವಾಗಿದ್ದಾಗ ಕರಾರುವಾಕ್ಕಾಗಿ ಪದಗಳು ಹೊರಹೊಮ್ಮುತ್ತವೆ. ಹಾಗೂ ಅಖಂಡ ಧ್ವನಿಮಾಗಳಾದ ಧ್ವನಿ ತರಂಗಗಳು, ಏರಿಳಿತಗಳು ಲಯ ತಪ್ಪುವುದಿಲ್ಲ. ನಿಮ್ಮ ಮಾತಿನ ಭಾವನೆಗಳು, ಒತ್ತು, ಶೈಲಿ ಎಲ್ಲೂ ತಪ್ಪುವುದಿಲ್ಲ. ವಿಶುದ್ಧ ಚಕ್ರದ ಆಧ್ಯಾತ್ಮಿಕ ಬಲದಿಂದ ನಾಯಕನ ಧ್ವನಿಯಲ್ಲಿರುವ ಗಾಂಭೀರ್ಯ, ಕರುಣೆ ಮತ್ತು ಆಜ್ಞೆಗಳು ನಿಖರವಾಗಿ ಹೊಮ್ಮುತ್ತವೆ.

ಧ್ವನಿಮಾ ವ್ಯವಸ್ಥೆಯು ಶ್ವಾಸಕೋಶದ ಗಾಳಿಗೆ ಅಕ್ಷರ ರೂಪವನ್ನು ನೀಡುತ್ತದೆ. ಆ ಅಕ್ಷರಗಳಿಗೆ ಜೀವ ಕೊಡುವುದು ವಿಶುದ್ಧ ಚಕ್ರ. ನಿಮ್ಮ ಮನಸ್ಸಿನ ಕಲ್ಮಶಗಳೆಲ್ಲವೂ ಕರಗಿ ಹೊರಬರುವ ಧ್ವನಿಮಾಗಳು ಕರುಣೆ, ಸತ್ಯ ಮತ್ತು ಪ್ರೇಮದಿಂದ ತುಂಬಿರುತ್ತವೆ. ಅಂತಹಾ ಧ್ವನಿಯು ಕೇಳುಗರಲ್ಲಿ ಸಕಾರಾತ್ಮ ಭಾವಗಳನ್ನು ಉತ್ತೇಜಿಸುತ್ತವೆ. ವ್ಯಕ್ತಿಗೆ ಧ್ವನಿಮಾಗಳ ಜ್ಞಾನ ಮತ್ತು ಅದರ ಮೇಲೆ ಹಿಡಿತವಿದ್ದರೆ ಆತ ಭಾಷಾ ಪಂಡಿತನಾಗುತ್ತಾನೆ. ಅದರೊಂದಿಗೆ ವಿಶುದ್ಧ ಚಕ್ರದ ಶಕ್ತಿಯೂ ಸೇರಿದರೆ ಜಗತ್ತಿಗೇ ಮಹಾನ್ ನಾಯಕನಾಗುತ್ತಾನೆ. ಧ್ವನಿಮಾ ವ್ಯವಸ್ಥೆಯು ಮಾತಿನ ದೇಹವಾದರೆ, ವಿಶುದ್ಧ ಚಕ್ರವು ಅದರ ಆತ್ಮ.

ವೈದ್ಯಕೀಯ ಜಾಗೃತಿ ಅವಶ್ಯ

ಒಳನೋಟ

• ಹೆ.ಬಾ. ಮಲ್ಯ



ನಾವು ಚಿಕ್ಕವರಿದ್ದಾಗ ಅಂದರೆ ಆರೇಳು ದಶಕಗಳ ಹಿಂದೆ ಇಂದಿನಂತೆ ಹೈಟೆಕ್ ಚಿಕಿತ್ಸಾಲಯಗಳಾಗಲಿ, ಎಂ.ಬಿ.ಬಿ.ಎಸ್., ಎಂ.ಡಿ. ಕಲಿತ ವೈದ್ಯರಾಗಲೀ ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ನಗರಗಳಲ್ಲಷ್ಟೇ ಕೆಲವು ದೊಡ್ಡ ಆಸ್ಪತ್ರೆಗಳು, ಎಂ.ಬಿ.ಬಿ.ಎಸ್. ವೈದ್ಯರಿದ್ದರು. ನಾವಿದ್ದಂಥ ಚಿಕ್ಕ ಹಳ್ಳಿಗಳಲ್ಲಿ L.I.M. (Licentiate In Medicine) ಪದವಿ ಹೊಂದಿದ ಒಬ್ಬರು ವೈದ್ಯರಿರುತ್ತಿದ್ದರು. ವಿಶೇಷವಾಗಿ ಆಯುರ್ವೇದ ಪಂಡಿತರು ಹಾಗೂ ನಾಟಿ ಔಷಧಿ ಕೊಡುವ ಕೆಲವರಿರುತ್ತಿದ್ದರು. ಆಗಲೂ ಖಾಯಿಲೆಗಳು ಬರುತ್ತಿದ್ದುವು. ರೋಗಗಳಿಂದ ಜನ ಸಾಯುತ್ತಲೂ ಇದ್ದರು. ಆಗ ನಂಬಿಕೆಯ ಕಾಲ. ರೋಗಿಗಳಿಗೆ ಪಂಡಿತರು, ವೈದ್ಯರ ಬಗ್ಗೆ ಪೂರ್ಣ ವಿಶ್ವಾಸವಿರುತ್ತಿತ್ತು. ಆ ನಂಬಿಕೆಯೇ ಅನೇಕ ರೋಗಿಗಳ ಖಾಯಿಲೆಯನ್ನು ವಾಸಿ ಮಾಡುತ್ತಿತ್ತು. ಅದನ್ನು ವೈದ್ಯರ 'ಕೈಗುಣ' ಎನ್ನುತ್ತಿದ್ದರು. ಈಗಿನಂತೆ ವೈದ್ಯರು ರೋಗಿಗಳಲ್ಲಿ ಭಯ ಹುಟ್ಟಿಸುತ್ತಿರಲಿಲ್ಲ. ಪ್ರೀತಿಯಿಂದ ಮಾತನಾಡಿ ರೋಗಿಗಳಲ್ಲಿ ಧೈರ್ಯ, ವಿಶ್ವಾಸ ತುಂಬುತ್ತಿದ್ದರು. 'ದೇವರ ದಯೆಯಿಂದ ನಿಮ್ಮ ಖಾಯಿಲೆ ಗುಣವಾಗುತ್ತದೆ' ಎಂದು ವಿಶ್ವಾಸ ತುಂಬುತ್ತಿದ್ದರು. ಹಾಗಂತ ಆಗಲೂ ಜನ ಚಿಕಿತ್ಸೆ ಪಡೆದ ಮೇಲೂ ಸಾಯುತ್ತಿದ್ದರು. ಅಂದಿನ ರೋಗಗಳು, ಅವುಗಳ ಲಕ್ಷಣಗಳೇ ಬೇರೆ, ಇಂದಿನ ರೋಗಗಳ ಲಕ್ಷಣಗಳೇ ಬೇರೆ. ಅಂದು ಆಯುರ್ವೇದ ಪಂಡಿತರು, ನಾಟಿ ಔಷಧಿ ನೀಡುವವರ ಔಷಧಿಗಳು ಪ್ರಕೃತಿಯನ್ನಾಧರಿಸಿದ್ದವು. ಬೇರು, ನಾರು, ವಿವಿಧ ಬಗೆಯ ಸೊಪ್ಪುಗಳು, ವನಸ್ಪತಿಗಳು ಔಷಧಿ ತಯಾರಿಯಲ್ಲಿ ಉಪಯೋಗಿಸಲ್ಪಡುತ್ತಿದ್ದವು. ಇಂದಿನಂತೆ ಮಾನವ ತಯಾರಿಸಿದ, ರಾಸಾಯನಿಕ, ಸ್ಟಿರಾಯಿಡ್ ಬಳಸಿದ ಔಷಧಿಗಳು ಇರಲಿಲ್ಲ. ಆಯುರ್ವೇದ, ನಾಟಿ ಔಷಧಿಗಳಿಂದ ಪಾರ್ಶ್ವ ಪರಿಣಾಮ (Side effects) ಇರುತ್ತಿರಲಿಲ್ಲ.

ರಾಸಾಯನಿಕ ಮಿಶ್ರಿತ ಔಷಧಿಗಳಿಂದ ಪಾರ್ಶ್ವ ಪರಿಣಾಮಗಳಿವೆ. ಖಾಯಿಲೆಗಳು ತಾತ್ಕಾಲಿಕವಾಗಿ ವಾಸಿಯಾದರೂ ದೀರ್ಘಾವಧಿಯಲ್ಲಿ, ರಾಸಾಯನಿಕಗಳು ಹೃದಯ, ಮೂತ್ರಪಿಂಡ, ಪಿತ್ತಕೋಶ, ಕರುಳು ಜಠರಗಳ ಮಾಂಸಪೇಶಿಗಳಲ್ಲಿ ನೆಲೆಯಾಗಿ, ಹೃದಯಾಘಾತ, ಮೂತ್ರಪಿಂಡ ವೈಫಲ್ಯ ತತ್ಪರಿಣಾಮವಾಗಿ ಡಯಾಲಿಸಿಸ್, ಕೀಮೋಥೆರಪಿ, ರೇಡಿಯೇಶನ್ ಚಿಕಿತ್ಸೆಯಿಂದ ಕ್ಯಾನ್ಸರ್ ಇತ್ಯಾದಿಗಳಿಗೆ ಕಾರಣವಾಗುತ್ತಿವೆ. ಹಿಂದೆ ಸಹಜವಾಗಿ ಹೆರಿಗೆಯಾಗುತ್ತಿದ್ದರೆ ಇಂದು ಮಾತೆತ್ತಿದರೆ ಸಿಜೇರಿಯನ್ ಹೆರಿಗೆ ಹೆಚ್ಚಾಗುತ್ತಿದೆ. ಹುಟ್ಟುವ ಘಳಿಗೆ ಈಗ ದೇವರು ನಿರ್ಧರಿಸುವ ಬದಲು ವೈದ್ಯರೇ ನಿರ್ಧರಿಸುತ್ತಾರೆ. ಹಾಗೆಯೇ ಸಾವಿನ ಕ್ಷಣವನ್ನು ಕೂಡ. ಇನ್ನೇನು ಸಾಯುವುದು ನಿಶ್ಚಿತ ಎಂದಾಗ ವೆಂಟಿಲೇಟರ್, ಮಾಸ್ಕ್ ಹಾಕಿಡುತ್ತಾರೆ. ವಿದೇಶದಲ್ಲಿರುವ ಮಕ್ಕಳು ಬರುವವರೆಗೆ ಕೃತಕ ಶ್ವಾಸಕ್ರಿಯೆ (ಆಕ್ಸಿಜನ್) ಮಾಸ್ಕ್‌ನಲ್ಲಿರಿಸುತ್ತಾರೆ. ಮಕ್ಕಳು ಬಂದ ನಂತರ ಆಕ್ಸಿಜನ್ ಮಾಸ್ಕ್ ತೆಗೆಯುತ್ತಾರೆ. ಐಸ್‌ಬಾಕ್ಸ್‌ನಲ್ಲಿಡುವುದರಿಂದ ಹೆಣ ಬೇಗನೇ ಕೊಳೆಯುವುದಿಲ್ಲ. I.C.U. ವೆಚ್ಚ, ಸ್ಪೆಷಲ್‌ವಾರ್ಡ್ ಬಾಡಿಗೆ, ತುಟ್ಟಿ ಔಷಧಿಗಳ ವೆಚ್ಚ ಹತ್ತಾರು ಲಕ್ಷಗಳಲ್ಲಿರುತ್ತವೆ. ಶ್ರೀಮಂತ ರೋಗಿಗಳಿಗೆ ಪರವಾಗಿಲ್ಲ. ಬಡರೋಗಿಗಳಿಗೆ ಈ ಅಪಾರ ವೆಚ್ಚವನ್ನು ಭರಿಸುವುದು ಕಷ್ಟ. ಅಂಥವರು ಈ ಕಾರಣಕ್ಕಾಗಿಯೇ ಜ್ಯೋತಿಷಿಗಳು, ಭೂತ, ನಾಗ, ದೈವ, ದೇವರುಗಳ ಮೊರೆ ಹೋಗುತ್ತಾರೆ. ಪೂಜೆ, ಯಾಗ, ಹೋಮಗಳಿಗೆ ಮೊರೆ ಹೋಗುತ್ತಾರೆ.

ಇಂದು ವೈದ್ಯಕೀಯ ಕ್ಷೇತ್ರದ ವ್ಯಾಪಾರೀಕರಣವಾಗಿದೆ. ಹಿಂದೆ ಆಹಾರ, ಆರೋಗ್ಯ (ವೈದ್ಯ), ಅಕ್ಷರ (ವಿದ್ಯೆ) ಈ ಮೂರು ಮಾರಾಟದ ವಸ್ತುಗಳಾಗಿರಲಿಲ್ಲ. ಉಚಿತವಾಗಿ, ಸೇವೆಯಾಗಿ ನೀಡಲಾಗುತ್ತಿತ್ತು. ರೋಗಿಗಳು ಕೊಟ್ಟಷ್ಟರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದ ಕಾಲ. ಹಳ್ಳಿಗಳಲ್ಲಿ ಅತಿಥಿ ಸತ್ಕಾರದ ಶ್ರೇಷ್ಠ ಪರಂಪರೆ ಇದ್ದುದರಿಂದ ಹೊಟೇಲುಗಳ ಸಂಖ್ಯೆ ಕಡಿಮೆ ಇತ್ತು. ಗುರುಕುಲಗಳಲ್ಲಿ ಶುಲ್ಕವಿರುತ್ತಿರಲಿಲ್ಲ. ಗುರುದಕ್ಷಿಣೆ, ಪೋಷಕರು ನೀಡುವ ಅಕ್ಕಿ, ಬೇಳೆ, ತರಕಾರಿಗಳಿಂದ ಗುರುಗಳು ತೃಪ್ತಿ ಪಡುತ್ತಿದ್ದರು. ಇಂದು ಈ ಮೂರು ಕ್ಷೇತ್ರಗಳೂ ವ್ಯಾಪಾರೀಕರಣಗೊಂಡು ಕೋಟ್ಯಂತರ ರೂಪಾಯಿ ಲಾಭ ಗಳಿಸುವ ದಂಧೆಗಳಾಗಿವೆ. ಪಂಚತಾರಾ ಹೊಟೇಲುಗಳು, ಹೈಟೆಕ್ ಆಸ್ಪತ್ರೆಗಳು, ಲಕ್ಷಾಂತರ ರೂಪಾಯಿ ಶುಲ್ಕ ತೆಗೆದುಕೊಳ್ಳುವ ಖಾಸಗಿ ವಿದ್ಯಾಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಸರ್ಕಾರಿ ಶಾಲೆಗಳ ದುರವಸ್ಥೆ ಬಗ್ಗೆ ಎಲ್ಲರಿಗೂ ತಿಳಿದೇ ಇದೆ.

ಹಿಂದೆ 'ಅತಿಥಿ ದೇವೋಭವ' ಎಂಬುದು ಕೇವಲ ಘೋಷಣೆಯಾಗಿರಲಿಲ್ಲ. ಅದೇ ರೀತಿ 'ಗುರು ಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರ' ಎಂಬ ಭಾವನೆ ಇತ್ತು. 'ವೈದ್ಯೋ ನಾರಾಯಣೋ ಹರಿಃ' ಎಂಬ ಉಕ್ತಿಯನ್ನು ನಾವೆಲ್ಲ ಕೇಳಿರಬಹುದು. ಈಗ ವೈದ್ಯಲೋಕದ ಬಗ್ಗೆ ಈ ರೀತಿ ವಿಡಂಬನಾತ್ಮಕವಾಗಿ ಹೇಳಲಾಗುತ್ತಿದೆ.

ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರಃ।
ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿಚ॥

"ವೈದ್ಯರಾಜನಿಗೆ ನಮಸ್ಕಾರ, ಆತ ಯಮರಾಜನ ಸಹೋದರ, ಯಮ ಪ್ರಾಣವನ್ನು ಮಾತ್ರ ಕೊಂಡೊಯ್ಯುತ್ತಾನೆ. ವೈದ್ಯ ಪ್ರಾಣದೊಂದಿಗೆ ಧನವನ್ನೂ ಅಪಹರಿಸುತ್ತಾನೆ"

ಇದನ್ನು ಯಾವನೋ ಬಡವ್ಯಕ್ತಿ, ಇಂದಿನ ವೈದ್ಯಕೀಯ ವೆಚ್ಚವನ್ನು ಭರಿಸಲಾಗದೆ ತನ್ನ ಸಂಬಂಧಿಕನ ಪ್ರಾಣ ಉಳಿಸಲಾಗದೇ ಹೋದ ಸಂದರ್ಭದಲ್ಲಿ ರಚಿಸಿದ ವಿಡಂಬನಾತ್ಮಕ ಶ್ಲೋಕವಿರಬಹುದು. ಆದರೆ ಇದೇ ಸತ್ಯವಲ್ಲ. ತುಂಬ ಮಂದಿ ಶ್ರೇಷ್ಠ, ಪ್ರಾಮಾಣಿಕ ವೈದ್ಯರು ಇಂದಿಗೂ ಇದ್ದಾರೆ. ಉಚಿತ ಚಿಕಿತ್ಸೆ ನೀಡುವ ವೈದ್ಯರು, ಚಿಕಿತ್ಸಾಲಯಗಳು ಬೇಕಾದಷ್ಟು ಇವೆ. ಅದನ್ನು ಕಡೆಗಣಿಸಲಾಗದು.

ಇಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಈಗ ಔಷಧಿ ಕ್ಷೇತ್ರದಲ್ಲಿ, ಚಿಕಿತ್ಸಾ ವ್ಯವಸ್ಥೆಯಲ್ಲಿ ಬಹಳ ಉತ್ತಮ ಬೆಳವಣಿಗೆಯಾಗಿರುವುದನ್ನೂ ಕಡೆಗಣಿಸಲಾಗದು. ಹಲವಾರು ಮಾರಕ ಖಾಯಿಲೆಗಳಿಗೆ ಈಗ ಚಿಕಿತ್ಸೆ ಕಂಡುಹಿಡಿಯಲಾಗಿದೆ. ರೋಗ ಪತ್ತೆ ಹಚ್ಚುವ ತಂತ್ರಜ್ಞಾನದಲ್ಲೂ ಬಹಳಷ್ಟು ಆವಿಷ್ಕಾರಗಳಾಗಿವೆ. ಎಕ್ಸ್‌ರೇ, ಎಂ.ಆರ್.ಐ., ಎಂಡೋಸ್ಕೋಪಿ ಮುಂತಾದ ಆಧುನಿಕ ವೈದ್ಯಕೀಯ ಪರಿಕರಗಳು ಲಭ್ಯ ಇವೆ. ಅದೇ ರೀತಿ ಶಸ್ತ್ರಚಿಕಿತ್ಸೆ ಗಳು ಕೂಡಾ ಈಗ ಹಿಂದಿನಂತೆ ಕಠಿಣವೆನಿಸಿಲ್ಲ. ಕಂಪ್ಯೂಟರ್ ಹಾಗೂ ಇನ್ನಿತರ ಉಪಕರಣಗಳ ಸಹಾಯದಿಂದ ಶಸ್ತ್ರಚಿಕಿತ್ಸೆ ಪರಿಣಾಮಕಾರಿ ಎನ್ನುವಂತಾಗಿದೆ.

ವೈದ್ಯಕೀಯ ಕ್ಷೇತ್ರದ ಕೆಲವು ಋಣಾತ್ಮಕ ಅಂಶಗಳಿಗೆ ಕೆಲವು ಔಷಧಿ ಕಂಪೆನಿಗಳ, ವಿಶೇಷವಾಗಿ ಅಮೆರಿಕಾದಲ್ಲಿನ ಕೆಲವು ಬೃಹತ್ ಕಂಪೆನಿಗಳ ಲಾಬಿಯೂ ಇರುವುದೂ ಸತ್ಯ. ಈಗ ಜಾಹೀರಾತು ಕ್ಷೇತ್ರ ಬಹಳ ಉಬ್ಬಾಯ ಸ್ಥಿತಿಯಲ್ಲಿದೆ. ಜನ ದೇಶಿ ವೈದ್ಯರ ಹಿರಿಯರ, ಅನುಭವದ ಮಾತನ್ನು ನಂಬುವುದಕ್ಕಿಂತ ಜಾಹೀರಾತಿನ ಅಬ್ಬರದ ಪ್ರಚಾರವನ್ನೇ ಮೂಢರಂತೆ ಅತಿಯಾಗಿ ನಂಬುತ್ತಾರೆ. ಕರಾವಳಿಯಾದ್ಯಂತ ಸಾವಿರಾರು ವರ್ಷಗಳಿಂದ ಕೊಬ್ಬರಿ ಎಣ್ಣೆ ಗೃಹ ಬಳಕೆ ವಸ್ತುವಾಗಿದೆ. ಆದರೆ ಪಾಮೋಲಿನ್ ಎಣ್ಣೆಯ ಪ್ರಚಾರಕ್ಕಾಗಿ, ಕೊಬ್ಬರಿ ಎಣ್ಣೆಯಿಂದ ಕೊಲೆಸ್ಟ್ರಾಲ್ ಹೆಚ್ಚಾಗಿ ಹೃದಯಾಘಾತ ಕಾರಣವಾಗುತ್ತವೆ ಎಂಬ ಅಪಪ್ರಚಾರ ಮಾಡಲಾಯಿತು. ಆದರೆ ಈಗ ಕರಾವಳಿಯ ಜನರಿಗೆ ಈ ಮೋಸದ ಅರಿವಾಗಿದೆ. 2021ರ ಕೊರೋನಾ ಸಂದರ್ಭದಲ್ಲಿ ಭಾರತದ ವಿಜ್ಞಾನಿಗಳು ಉತ್ತಮ ಔಷಧವನ್ನು ಕಂಡುಹಿಡಿದಿದ್ದರ ಪರಿಣಾಮವಾಗಿ ಕೋರೋನಾ ಸಾವಿನ ಸಂಖ್ಯೆ ಭಾರತದಲ್ಲಿ ಕಡಿಮೆ ಆಯಿತು. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಯೋಗ, ಪ್ರಾಣಾಯಾಮಗಳಿಂದ, ಉತ್ತಮ ದೇಶಿ ಆಹಾರ, ಸೊಪ್ಪು, ತರಕಾರಿ, ವನಸ್ಪತಿ ಔಷಧಿ ಗಿಡಗಳಿಂದ, ಯೋಗ್ಯ ಜೀವನ ಶೈಲಿಯಿಂದ ಆರೋಗ್ಯವನ್ನು ರಕ್ಷಿಸಿಕೊಳ್ಳಲು ಸಾಧ್ಯ ಎಂಬ ಜಾಗೃತಿ ಮೂಡುತ್ತಿದೆ.

ರೋಗಬಂದಮೇಲೆಔಷಧಿನೀಡುವುದಕ್ಕಿಂತಮೊದಲೇರೋಗತಡೆಯುವ ಪದ್ಧತಿ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಯೋಗ, ಪ್ರಾಣಾಯಾಮಗಳ ವಿಶೇಷತೆ. ಮಾನವ ಶರೀರದಲ್ಲಿ ದೇವರು ರೋಗ ನಿರೋಧಕ ಶಕ್ತಿಯನ್ನೂ ಹಾಕಿದ್ದಾನೆ. ಮಾನವ ಅದನ್ನು ಸಮರ್ಥವಾಗಿ ಬಳಕೆ ಮಾಡಬೇಕು. ವೈದ್ಯಕೀಯ ಜಾಗೃತಿ ಇಂದಿನ ಅಗತ್ಯ.

ಸ್ಟ್ಯಾಂಡಪ್ ಕಾಮಿಡಿಯಲ್ಲಿ ಹಾಸ್ಯದ ಪ್ರಮಾಣವೆಷ್ಟು?

▸ ದೇವಿತಾ ಸಿ. ಸುಬ್ಬಯ್ಯ



ಮೊದಲೆಲ್ಲ ಕಾಮಿಡಿ ಶೋಗಳೆಂದರೆ ಮನೆಯವರೆಲ್ಲ ಒಟ್ಟಾಗಿ ಕೂತು ಹೊಟ್ಟೆನೋವು ಬರುವವರೆಗೂ ನಗುತ್ತಿದ್ದೆವು. ನಗುವು ಸಹಜ ಧರ್ಮ ನಗಿಸುವುದು ಪರಧರ್ಮ ಎನ್ನುವಂತೆ ಹಾಸ್ಯ ಕಲಾವಿದರ ಮಾತುಗಳಲ್ಲಿ ಚುರುಕುತನ ಇರುತ್ತಿತ್ತು, ವ್ಯಂಗ್ಯ ಇರುತ್ತಿತ್ತು. ಇದರೊಂದಿಗೆ ಸಾಮಾಜಿಕ ಸಂದೇಶವೂ ಇರುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಸ್ಟ್ಯಾಂಡಪ್ ಕಾಮಿಡಿ ಶೋಗಳನ್ನು ಗಮನಿಸಿದರೆ, ಹಾಸ್ಯದ ವ್ಯಾಖ್ಯಾನವೇ ಬದಲಾಗುತ್ತಿರುವಂತೆ ಕಾಣುತ್ತಿದೆ. ಇಂದು ಹಲವರಿಗೆ ಹಾಸ್ಯ ಎಂದರೆ ಯಾರನ್ನಾದರೂ ಗೇಲಿ ಮಾಡುವುದು, ಒಂದು ಸಮುದಾಯವನ್ನು ಹೀಯಾಳಿಸುವುದು, ಅಶ್ಲೀಲ ಪದಗಳನ್ನು ಬಳಸುವುದು ಅಥವಾ ವೈಯಕ್ತಿಕ ನಿಂದನೆಯನ್ನು ವೇದಿಕೆಗೆ ತರುವುದು ಎಂಬಂತಾಗಿದೆ. ನಿಜಕ್ಕೂ ಇದು ಹಾಸ್ಯವೇ? ಅಥವಾ ನಾವು ಹಾಸ್ಯದ ಹೆಸರಿನಲ್ಲಿ ಅವಹೇಳನವನ್ನು ಸಂಭ್ರಮಿಸುತ್ತಿದ್ದೇವೆಯೇ?

ನಗು ಮನುಷ್ಯನಿಗೆ ಪ್ರಕೃತಿ ಕೊಟ್ಟ ವರ. ಮಗುವಿಗೆ ಭಾಷೆ ಗೊತ್ತಿರದಿದ್ದರೂ ನಗು ಗೊತ್ತಿರುತ್ತದೆ. ನಗುವಿನಲ್ಲಿ ಎಲ್ಲವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತದೆ. ನಗು ಎನ್ನುವುದು ಸಂತೋಷದ ಅಭಿವ್ಯಕ್ತಿ. ಅದು ಮನಸ್ಸಿನಲ್ಲಿರುವ ಒತ್ತಡವನ್ನು ಕಡಿಮೆ ಮಾಡುವ ಜತೆಗೆ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಮನುಷ್ಯನ ಬದುಕಿನಲ್ಲಿ ಆಶಾವಾದವನ್ನು ಬೆಳೆಸುತ್ತದೆ. ದರೆ ನಾವು ಯಾವ ಸಂದರ್ಭದಲ್ಲಿ, ಯಾವುದಕ್ಕೆ ನಗುತ್ತಿದ್ದೇವೆ?

ಹೆಚ್ಚು ನಕ್ಕಷ್ಟು ಹೆಚ್ಚು ಬದುಕುತ್ತೇವೆ ಎಂಬ ಮಾತಿದೆ. ವೈದ್ಯಕೀಯವಾಗಿಯೂ ನಗುವಿನ ಮಹತ್ವ ಅಪಾರ. ಆರೋಗ್ಯವನ್ನು ವೃದ್ಧಿ, ಉಲ್ಲಸಿತ ಮನಸು. ದೇಹದಲ್ಲಿ ಉತ್ತಮ ಹಾರ್ಮೋನುಗಳ ಉತ್ಪತ್ತಿ. ಒಳ್ಳೆಯ ಹಾಸ್ಯ ಮನುಷ್ಯನ ಚಿಂತನೆಯನ್ನು ವಿಸ್ತರಿಸುತ್ತದೆ. ಸಮಾಜದ ವೈಪರೀತ್ಯಗಳನ್ನು ಕಟುವಾಗದ ರೀತಿಯಲ್ಲಿ ತೋರಿಸುತ್ತದೆ. ಹಾಸ್ಯವು ನೋವುಂಟುಮಾಡದೆ ನಗಿಸುವ ಕಲೆ. ಯಾರನ್ನಾದರೂ ಕೀಳುಗೊಳಿಸದೆ ಸಂತೋಷ ನೀಡುವ ಕೌಶಲ್ಯ. ಆದರೆ ಈಗ ನಡೆಯುತ್ತಿರುವುದೇನು?

ಆರೋಗ್ಯಕರ ನಗು ಮತ್ತು ಅವಹೇಳನದ ನಗುವಿನಲ್ಲಿ ವ್ಯತ್ಯಾಸವಿದೆ. ಮುಗ್ಧತನ ನೋಡಿ ನಗುವುದು ಬೇರೆ. ಯಾರದೋ ದೈಹಿಕ ಲಕ್ಷಣ, ಜಾತಿ, ಬಣ್ಣ, ಭಾಷೆ ಅಥವಾ ವೈಕಲ್ಯವನ್ನು ಗೇಲಿ ಮಾಡಿ ನಗುವುದು ಬೇರೆ. ಮತ್ತೊಬ್ಬರ ಘನತೆಯನ್ನು ಕಿತ್ತುಕೊಳ್ಳುವ ನಗು ಆರೋಗ್ಯಕರ ಸಮಾಜದ ಲಕ್ಷಣವಾಗುವುದಿಲ್ಲ. ಸಮಾಜದಲ್ಲಿ ನಾವು ಯಾವುದಕ್ಕೆ ನಗುತ್ತೇವೆ ಎಂಬುದು ನಮ್ಮ ಸಂಸ್ಕೃತಿಯ ಪ್ರತಿಬಿಂಬ. ಒಬ್ಬ ವ್ಯಕ್ತಿಯನ್ನು ಅವಮಾನಿಸಿದಾಗ, ಒಂದು ಸಮುದಾಯವನ್ನು ಹೀಯಾಳಿಸಿದಾಗ ಅಥವಾ ಮಹಿಳೆಯರನ್ನು ಅಶ್ಲೀಲವಾಗಿ ಚಿತ್ರಿಸಿದಾಗ ಜನರು ಚಪ್ಪಾಳೆ ತಟ್ಟಿ ನಕ್ಕರೆ ಅದು ಸಮಾಜದ ಸಂವೇದನಾಶೀಲತೆಯ ಪ್ರಶ್ನೆ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ರಿಯಾಲಿಟಿ ಕಾಮಿಡಿ ಶೋಗಳಲ್ಲಿ ಅನೇಕ ಹಾಸ್ಯಗಳನ್ನು ನೋಡಿದರೆ, ಹಾಸ್ಯಕ್ಕಿಂತ ಹೆಚ್ಚಾಗಿ ಅವಮಾನವೇ ಕಾಣಸುತ್ತದೆ. ಕೆಲವರು ಅದನ್ನು ರೋಸ್ಟ್ ಎಂದು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವಷ್ಟೇ ಸಾಮಾಜಿಕ ಜವಾಬ್ದಾರಿಯೂ ಇದೆ.

ಇಂದಿನ ಸ್ಟ್ಯಾಂಡ್‌ಅಪ್ ಕಾಮಿಡಿಯಲ್ಲಿ ನಗುವಂಥದ್ದೇನಿದೆ? ಬಹುಬೇಡಿಕೆಯ ಕಾಮಿಡಿಯನ್ ಮ್ಯಾಕ್ಸ್ ಅಮಿನಿ ವೇದಿಕೆಯ ಮೇಲಿಂದಲೇ ಚೀನಿ ಮತ್ತು ಆಫ್ರಿಕನ್ ಮೂಲದ ಜನರ ರೂಪವನ್ನು ವ್ಯಂಗ್ಯ ಮಾಡುತ್ತಾರೆ. ಭಾರತೀಯ ಕಾಮಿಡಿಯನ್‌ಗಳೂ ಇಂದು ಬಹುಬೇಡಿಕೆಯಲ್ಲಿದ್ದಾರೆ. ರಣ್‌ವೀರ್ ಅಲಹಾಬಾದಿಯಾ, ಪ್ರಣೀತ್ ಮೋರೆ ಮುಂತಾದ ಕೀಳುದರ್ಜೆಯ ಕೆಲವರು ನಿರಾಯಾಸವಾಗಿ ಅಶ್ಲೀಲ ಪದಗಳನ್ನು ಬಳಸುತ್ತಾರೆ. ಪ್ರೇಕ್ಷಕರು ಅದಕ್ಕೂ ನಗುತ್ತಾರೆ. ಆ ನಗುವಿನ ನಡುವೆ ಪ್ರಶ್ನೆ ಕಳೆದುಹೋಗುತ್ತದೆ. ನಿಜಕ್ಕೂ ಅಲ್ಲಿ ಹಾಸ್ಯ ಇದೆಯೇ? ಲೈಂಗಿಕ ಸಂಗತಿಗಳನ್ನು ಹಸಿಹಸಿಯಾಗಿ ಹೇಳುವುದರಲ್ಲಿ ಯಾವ ಹಾಸ್ಯ ಇದೆ?

ಹ್ಯೂಮರ್ ಎಂದರೆ ಒಬ್ಬರನ್ನು ನೋಯಿಸುವುದಲ್ಲ. ಅದು ಜೀವನದ ವೈರುಧ್ಯಗಳನ್ನು ಸೂಕ್ಷ್ಮವಾಗಿ ಹಿಡಿಯುವುದು. ಒಂದು ಸಾಮಾನ್ಯ ಘಟನೆಯನ್ನು ಹೊಸ ದೃಷ್ಟಿಕೋನದಲ್ಲಿ ತೋರಿಸುವುದು. ನಗುವಿನ ಮೂಲಕ ಸತ್ಯವನ್ನು ಹೇಳುವುದು. ಚಾರ್ಲಿ ಚಾಪ್ಲಿನ್ ಅವರ ಹಾಸ್ಯವನ್ನು ನೆನಪಿಸಿಕೊಳ್ಳಿ. ಅವರು ಬಡತನ, ಅಧಿಕಾರದ ದುರುಪಯೋಗ ಮತ್ತು ಸಾಮಾಜಿಕ ಅಸಮಾನತೆಗಳ ಬಗ್ಗೆ ಹಾಸ್ಯ ಮಾಡಿದರು. ಆದರೆ ಯಾರನ್ನೂ ಅವಮಾನಿಸಲಿಲ್ಲ. ನಮ್ಮ ದೇಶದಲ್ಲಿಯೂ ಅನೇಕ ಶ್ರೇಷ್ಠ ಹಾಸ್ಯ ಕಲಾವಿದರು ಅಶ್ಲೀಲತೆಯ ಲೇಪವಿಲ್ಲದೆ ಜನರನ್ನು ನಗಿಸಿದ್ದಾರೆ. ಅವರೆಲ್ಲರೂ ಇಂದು ಸಮಾಜದ ನೆನಪಿನಲ್ಲಿದ್ದಾರೆ. ಅದಕ್ಕಾಗಿಯೇ ಹಾಸ್ಯ ಮತ್ತು ಹೀಯಾಳಿಕೆ ಒಂದೇ ಅಲ್ಲ. ವ್ಯಂಗ್ಯ ಮತ್ತು ನಿಂದನೆ ಒಂದೇ ಅಲ್ಲ.

ಇತ್ತೀಚೆಗೆ ಕಾಮಿಡಿಯನ್ ಪ್ರಣೀತ್ ಮೋರೆ ಅವರ ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿವಾದ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಚರ್ಚೆಗೆ ಕಾರಣವಾಯಿತು. ಒಂದು ಕಡೆ ಕಲಾವಿದರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಇರಬೇಕು ಎನ್ನುವ ವಾದ ಕೇಳಿಬಂದರೆ, ಇನ್ನೊಂದು ಕಡೆ ಹಾಸ್ಯದ ಹೆಸರಿನಲ್ಲಿ ಯಾವುದೇ ವ್ಯಕ್ತಿ, ಸಮುದಾಯ ಅಥವಾ ಒಂದು ಹೆಣ್ಣನ್ನು ಕೀಳು ಮಟ್ಟದಲ್ಲಿ ನೋಡುವುದು, ಸಂಸ್ಕೃತಿಯನ್ನು ಅವಮಾನಿಸುವುದು ಸ್ವಾತಂತ್ರ್ಯದ ವ್ಯಾಪ್ತಿಗೆ ಬರಬಹುದೇ ಎಂಬ ಪ್ರಶ್ನೆಯೂ ಉದ್ಭವಿಸಿತು. ಇದರೊಂದಿಗೆ ಹಾಸ್ಯಕ್ಕೆ ಮಿತಿ ಇರಬೇಕಲ್ಲವೆ ಎನ್ನುವುದು ಪ್ರಶ್ನೆಯಾಗಿ ಉಳಿದಿದೆ.

ಕಾನೂನು ಮಿತಿಗಳನ್ನು ಬದಿಗಿಟ್ಟು ನೋಡಿದರೂ, ನೈತಿಕ ಮಿತಿಗಳು ಇರಬೇಕಲ್ಲವೇ? ಒಬ್ಬ ಕಲಾವಿದ ವೇದಿಕೆಯಲ್ಲಿ ಹೇಳುವ ಮಾತು ಸಾವಿರಾರು ಜನರನ್ನು ಪ್ರಭಾವಿಸಬಹುದು. ಹೀಗಾಗಿ ಜನಪ್ರಿಯತೆಯ ಹೆಸರಿನಲ್ಲಿ ಯಾವುದೇ ಮಾತನ್ನಾದರೂ ಹಾಸ್ಯವೆಂದು ಸಮರ್ಥಿಸಿಕೊಳ್ಳುವುದು ಕೂಡದು.

ಸಮಾಜಕ್ಕೆ ಹಾಸ್ಯ ಬೇಕು. ಇಂದಿನ ಒತ್ತಡದ ಬದುಕಿನಲ್ಲಿ ಅದು ಇನ್ನಷ್ಟು ಅಗತ್ಯ. ಆದರೆ ಯಾವುದಕ್ಕೆ ನಗುತ್ತಿದ್ದೇವೆ ಎಂಬುದನ್ನು ಯೋಚಿಸಬೇಕು. ಯಾರನ್ನೂ ನೋಯಿಸದೆ ನಗಿಸುವುದು ನಿಜವಾದ ಪ್ರತಿಭೆ. ಹಾಸ್ಯದ ವೇದಿಕೆಗಳು ಮತ್ತೆ ಗೌರವವನ್ನು ಪಡೆಯಬೇಕಾದರೆ ನಗುವಿನ ಗುಣಮಟ್ಟದ ಬಗ್ಗೆ ಸಮಾಜವೇ ಪ್ರಶ್ನಿಸಬೇಕು. ಇಲ್ಲದಿದ್ದರೆ ನಗುವಿನ ಹೆಸರಿನಲ್ಲಿ ನಾವು ನಿಧಾನವಾಗಿ ಸಂವೇದನಾಶೀಲತೆಯನ್ನು ಕಳೆದುಕೊಳ್ಳುತ್ತೇವೆ. ಒಳ್ಳೆಯ ಹಾಸ್ಯ ಮನುಷ್ಯನನ್ನು ಉನ್ನತಿಗೇರಿಸುತ್ತದೆ. ಕೆಟ್ಟ ಹಾಸ್ಯ ಮತ್ತೊಬ್ಬನನ್ನು ತಗ್ಗಿಸಿ ನಮ್ಮನ್ನು ನಗಿಸುತ್ತದೆ. ಈ ಎರಡರ ನಡುವಿನ ವ್ಯತ್ಯಾಸವನ್ನು ಅರಿಯುವ ಸಮಯ ಈಗ ಬಂದಿದೆ.

ಕಿರುಸುದ್ದಿ

ಪಠ್ಯ ಪುಸ್ತಕ ವಿತರಣೆ

ಬಂಟ್ವಾಳ: ಪೂರ್ವ ಪ್ರಾಥಮಿಕ ಹಂತವು ಶಿಕ್ಷಣದ ಮೊದಲ ಮೆಟ್ಟಿಲು, ಈ ಹಂತದಲ್ಲಿ ಪಡೆದ ಶಿಕ್ಷಣವು ಭವಿಷ್ಯದ ತಳಹದಿಯಾಗಿರುತ್ತದೆ ಎಂದು ಕಲ್ಲಡ್ಕ ಕ್ಲಸ್ಟರ್ ಸಮೂಹ ಸಂಪನ್ಮೂಲ ವ್ಯಕ್ತಿ ಜ್ಯೋತಿ ಹೇಳಿದರು. ಅವರು ವೀರಕಂಭಗ್ರಾಮದ ಮಜಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ (ಎಲ್‌ಕೆಜಿ ಮತ್ತು ಯುಕೆಜಿ) ಮಕ್ಕಳಿಗೆ ಸರಕಾರದಿಂದ ದೊರೆತ ಪಠ್ಯ ಪುಸ್ತಕಗಳನ್ನು ವಿತರಿಸಿ ಮಾತನಾಡಿದರು.ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿ ಬೆನೆಡಿಕ್ಟಾ ಆಗ್ನೇಸ್ ಮಂಡೋನ್ಸ, ಹಿರಿಯ ಶಿಕ್ಷಕಿ ಸಂಗೀತ ಶರ್ಮ ಪಿ. ಜಿ., ಶಿಕ್ಷಕ ಅಹ್ಮದ್ ತೌಸೀಫ್, ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿಯರಾದ ಪಲ್ಲವಿ, ಸುಷ್ಮ, ಆಯಾ ಮೀನಾಕ್ಷಿ ಉಪಸ್ಥಿತರಿದ್ದರು.

ಯೋಗ ದಿನಾಚರಣೆ

ಕುಂದಾಪುರ: ಮೂಡ್ಲಕಟ್ಟೆ ತಾಂತ್ರಿಕ ವಿದ್ಯಾಲಯದ ಎಂಬಿಎ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಯೋಗ ಶಿಕ್ಷಕ ಮಂಜುನಾಥ ಎಸ್. ಬಿಜೂರು ಅವರು, ಯೋಗದಿಂದಾಗುವ ಉಪಯೋಗಗಳ ಬಗ್ಗೆ ಹಾಗೂ ಯೋಗವು ಮನುಷ್ಯನ ಆಂತರಿಕ ಮತ್ತು ಮಾನಸಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಇದೆಷ್ಟು ಸಹಕಾರಿಯಾಗಲಿದೆ ಎಂದು ತಿಳಿಸಿ ಯೋಗಾಭ್ಯಾಸವನ್ನು ಮಾಡುವಾಗ ಪಾಲಿಸಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು. ಕಾಲೇಜಿನ ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗಡೆ, ಎಂಬಿಎ ವಿಭಾಗದ ಮುಖ್ಯಸ್ಥೆ ಡಾ. ಸುಚಿತ್ರಾ ಪೂಜಾರಿ ಹಾಗೂ ಉಪನ್ಯಾಸಕರು ಉಪಸ್ಥಿತರಿದ್ದರು. ಎಂಬಿಎ ವಿದ್ಯಾರ್ಥಿನಿ ಶಾಂಭವಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಪುಸ್ತಕ, ಲೇಖನ ಸಾಮಗ್ರಿ ವಿತರಣೆ

ಕುಂದಾಪುರ: ಬೈಂದೂರು ವಲಯದ ಗುಜ್ಜಾಡಿ ಗ್ರಾಮದ ಮಂಕಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಮುಂಬೈ ಉದ್ಯಮಿ ಉಮೇಶ್ ಶ್ರೀಯಾನ್ ಉಚಿತವಾಗಿ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿದರು. ಶ್ಯಾಮಲ ಅವರು ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರಘು ಮತ್ತು ಸದಸ್ಯರು, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಮತ್ತು ಸದಸ್ಯರು, ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಉಪಸ್ಥಿತರಿದ್ದರು. ಶಿಕ್ಷಕಿಯರಾದ ಮಲ್ಲಿಶಾ ಶೆಟ್ಟಿ ಸ್ವಾಗತಿಸಿದರು. ಮಧುರ ನಿರೂಪಿಸಿದರು. ಶ್ವೇತಾ ವಂದಿಸಿದರು.

ಸಂತ ಫಿಲೋಮಿನಾ ಕಾಲೇಜಿನಲ್ಲಿ 'ನಶಾ ಮುಕ್ತ ಭಾರತ ಅಭಿಯಾನ'



ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ ಸ್ನಾತಕೋತ್ತರ ಸಭಾಭವನದಲ್ಲಿ 'ನಶಾ ಮುಕ್ತ ಭಾರತ ಅಭಿಯಾನ' ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಫಾ.ಡಾ. ಆಂಟನಿ ಪ್ರಕಾಶ್ ಮೊಂತೇರೊ, ಯುವಜನತೆ ಮಾದಕ ವಸ್ತುಗಳ ವ್ಯಸನದಿಂದ ದೂರವಿದ್ದು ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು. ಅವರು 'ನಶಾ ಮುಕ್ತ ಭಾರತ' ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಥಮ ಎಂಸಿಎ ತರಗತಿಯ ಜೆಪಿಟಾ ಮತ್ತು ಬಳಗದವರು ಪ್ರಾರ್ಥಿಸಿದರು. ಕಾಲೇಜಿನ ಡ್ಯಾಪ್ಸ್ ಘಟಕದ ಸಂಯೋಜಕ, ಐಕ್ಯುಎಸಿಯ ಸಂಯೋಜಕ ಡಾ. ಎಡ್ವಿನ್ ಎಸ್. ಡಿ'ಸೋಜ ಸ್ವಾಗತಿಸಿ, ಕಾಲೇಜಿನ ಪರೀಕ್ಷಾಂಗ ಕುಲಸಚಿವ ಡಾ. ವಿನಯಚಂದ್ರ ವಂದಿಸಿದರು. ಎಂಸಿಎ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಅಕ್ಷತಾ ಬಿ. ಕಾರ್ಯಕ್ರಮ ನಿರ್ವಹಿಸಿದರು.

ಕೂರ್ನಡ್ಕ-ಕಾಪುಮಲೆ ರಸ್ತೆಗೆ ರೂ.10 ಲಕ್ಷ ಅನುದಾನ : ಕಾಂಕ್ರಿಟೀಕರಣಕ್ಕೆ ಗುದ್ದಲಿ ಪೂಜೆ

ಸುಳ್ಯ: ಆಲೆಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೂರ್ನಡ್ಕ-ಕಾಪುಮಲೆ ರಸ್ತೆಗೆ ಆಲೆಟ್ಟಿ ಗ್ರಾ.ಪಂ. ಮಾಜಿ ಸದಸ್ಯ ಸತ್ಯಕುಮಾರ್ ಆಡಿಂಜ ಹಾಗೂ ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಶಿಫಾರಾಸ್ಸಿನ ಮೇರೆಗೆ ಕರ್ನಾಟಕ ಸರಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ರೂ.10 ಲಕ್ಷ ಅನುದಾನ ಬಿಡುಗಡೆಗೊಂಡಿದ್ದು, ಇದರ ಗುದ್ದಲಿಪೂಜೆ ಬುಧವಾರ ನಡೆಯಿತು. ಸತ್ಯಕುಮಾರ್ ಆಡಿಂಜ ಪ್ರಾಸ್ತಾವಿಸಿದರು. ಜಿಲ್ಲಾ ಪರಿಷತ್ ಮಾಜಿ ಸದಸ್ಯ ದೇವಪ್ಪ ನಾಯ್ಕ ಹೊನ್ನ ಡಿ., ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ಸದಸ್ಯ ಕೆ.ಆರ್. ತೇಜಕುಮಾರ್ ಬಡ್ಡಡ್ಕ, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭವಾನಿಶಂಕರ್ ಕಲ್ಮಡ್ಕ ಶುಭ ಹಾರೈಸಿದರು. ಸ್ಥಳೀಯರಾದ ಪುರುಷೋತ್ತಮ ದೋಣಿಮೂಲೆ, ರಾಮಚಂದ್ರ ಪಾವಲೀಕಜೆ, ತೀರ್ಥರಾಮ ಬಡ್ಡಡ್ಕ, ಮಾಧವ ಪಾವಳಿ ಕಜೆ, ಸುಕುಡಪ್ಪ ನಾಯ್ಕ, ತಿಮ್ಮಪ್ಪ ಗೌಡ ನೆಡ್ಚಿಲು, ತೀರ್ಥರಾಮ, ರಮೇಶ್ ಪಾವಳಿಕಜೆ, ಸರೋಜಿನಿ ಪಾವಲಿಕಜೆ, ಸುಲೋಚನ, ಉಪಸ್ಥಿತರಿದ್ದರು. ಉದಯಕಿರಣ ಕಾಪುಮಲೆ ವಂದಿಸಿದರು.



ಬೆಂಜನಪದವು ಕೆನರಾ ಇಂಜಿನಿಯರಿಂಗ್ ಕಾಲೇಜ್‌ನ ಪ್ರಥಮ ವರ್ಷದ ಇಲೆಕ್ಟ್ರಾನಿಕ್ ವಿದ್ಯಾರ್ಥಿಗಳಿಂದ ಬಂಟ್ವಾಳ ತಾಲೂಕಿನ ನಾವೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭ ನಾವೂರು ಪಂಚಾಯತ್ ಅಭಿವೃದ್ಧಿ ಅಧಿಕಾರಿ ರೋಬರ್ಟ್ ಫೆರ್ನಾಡಿಸ್, ವಿದ್ಯಾರ್ಥಿಗಳಾದ ನಿಶಾಂತ್, ರಾಕೇಶ್, ಲಾವಣ್ಯ, ಮೋಕ್ಷ, ಧನುಷ್, ರಮೇಶ್, ಶರಣ್, ಅಕ್ಷಯ್, ನಾಗಶ್ರೀ ಮೊದಲಾದವರು ಭಾಗವಹಿಸಿದರು.

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಸಹಕರಿಸಿ: ಕೊಡಗು ಡಿಸಿ

ಮಡಿಕೇರಿ: ಕೊಡಗು ಜಿಲ್ಲೆಯಾದ್ಯಂತ ಜೂನ್ 28ರಿಂದ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ನಡೆಯಲಿದ್ದು, ಸಿದ್ಧತೆ ಬಗ್ಗೆ ಅಧಿಕಾರಿಗಳಿಂದ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಮಾಹಿತಿ ಪಡೆದರು.

ನಗರದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಯಶಸ್ಸಿಗೆ ಎಲ್ಲಾ ಇಲಾಖೆಗಳು, ಸಂಘ ಸಂಸ್ಥೆಗಳು ಕೈಜೋಡಿಸಬೇಕು. ಅಗತ್ಯ ಸಿಬ್ಬಂದಿಗಳು ಹಾಗೂ ವಾಹನಗಳ ನಿಯೋಜನೆ, ನಿರಂತರ ವಿದ್ಯುತ್ ಪೂರೈಕೆ, ಅಂಗನವಾಡಿ ಮತ್ತು ಶಾಲಾ-ಕಾಲೇಜುಗಳಲ್ಲಿ ಇತರೆ ಪ್ರದೇಶಗಳಲ್ಲಿ ಪಲ್ಸ್ ಪೋಲಿಯೋ ಲಸಿಕೆ ನೀಡಲು ವ್ಯವಸ್ಥೆ ಮಾಡುವುದು ಮತ್ತಿತರ ಬಗ್ಗೆ ಅಗತ್ಯ ಕ್ರಮವಹಿಸುವಂತೆ ನಿರ್ದೇಶನ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸತೀಶ್ ಕುಮಾರ್ ಅವರು ಮಾಹಿತಿ ನೀಡಿ, ಜಿಲ್ಲೆಯಲ್ಲಿ ನಗರ ವ್ಯಾಪ್ತಿಯಲ್ಲಿ 2,638, ಗ್ರಾಮೀಣ ಭಾಗದಲ್ಲಿ 26,373 ಸೇರಿದಂತೆ ಒಟ್ಟು 29,011 ಮಕ್ಕಳು ಐದು ವರ್ಷದೊಳಗಿನ ವರಿದ್ದಾರೆ. ಎಲ್ಲಾ ಮಕ್ಕಳಿಗೆ ಲಸಿಕೆ ನೀಡಲು ಜಿಲ್ಲೆಯಲ್ಲಿ ಒಟ್ಟು 471 ಬೂತ್‌ಗಳನ್ನು ಗುರುತಿಸಲಾಗಿದೆ. 33 ಸಂಚಾರಿ ತಂಡ, 1 ಮೊಬೈಲ್ ಸಂಚಾರಿ ತಂಡ ರಚಿಸಲಾಗಿದೆ. ಒಟ್ಟು 1952 ಲಸಿಕೆದಾರರನ್ನು ಗುರುತಿಸಲಾಗಿದ್ದು, ಒಟ್ಟು 84 ಮೇಲ್ವಿಚಾರಕರನ್ನು ಗುರುತಿಸಲಾಗಿದೆ. ಇವರುಗಳಿಗೆ ಈಗಾಗಲೇ ಜಿಲ್ಲಾ ಹಾಗೂ ತಾಲೂಕು ಮಟ್ಟದಿಂದ ತರಬೇತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕರು ಸ್ತ್ರೀ ಶಕ್ತಿ ಗುಂಪುಗಳ ಪದಾಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ಸಿಗೆ ಕೈಜೋಡಿಸುವಂತೆ ತಿಳಿಸಿದರು.

ಸೆಸ್ಕ್ ಇಇ ರಾಮಚಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪ್ರಸನ್ನ ಕುಮಾರ್, ಪ್ರಾದೇಶಿಕ ಸಾರಿಗೆ ಇಲಾಖೆಯ ಇನ್‌ಸ್ಪೆಕ್ಟರ್ ಮೋಹನ್ ಕುಮಾರ್, ಶಿಕ್ಷಣ ಇಲಾಖೆ ಅಧಿಕಾರಿಗಳು, ಕೆಎಸ್‌ಆರ್‌ಟಿಸಿ ಘಟಕ ವ್ಯವಸ್ಥಾಪಕ ಈರಸಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ದೀಪಕ್ ಮೊದಲಾದವರಿದ್ದರು.

ಗ್ರಾಮ ಜನ್ಯ ರೈತ ಉತ್ಪಾದಕ ಕಂಪನಿ ವತಿಯಿಂದ ನಿರ್ಮಾಣ | ಕೃಷಿಕರಿಗೆ ಸಹಕಾರಿ

ಆಧುನಿಕ ಶೈತ್ಯಾಗಾರ ಕಾರ್ಯಾರಂಭ

ಪುತ್ತೂರು: ಮುಂಡೂರು ಹಿಂದಾರು ಬಳಿ ಗ್ರಾಮ ಜನ್ಯ ರೈತ ಉತ್ಪಾದಕ ಕಂಪನಿ ವತಿಯಿಂದ ನಿರ್ಮಿಸಲಾದ ಆಧುನಿಕ ಶೈತ್ಯಾಗಾರ ಗುರುವಾರ ಉದ್ಘಾಟನೆಗೊಂಡಿತು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಅವರು ದೀಪ ಪ್ರಜ್ವಲನೆ ಮಾಡುವ ಮೂಲಕ ಉದ್ಘಾಟಿಸಿದರು. ಬಳಿಕ ಶೈತ್ಯಾಗಾರದ ಪ್ರವೇಶ ದ್ವಾರವನ್ನು ತೆರೆಯುವ ಮೂಲಕ ಸಾರ್ವಜನಿಕ ಬಳಕೆಗೆ ಅಧಿಕೃತವಾಗಿ ಚಾಲನೆ ನೀಡಿದರು.

ಶೈತ್ಯಾಗಾರದ ಪ್ರಥಮ ಗ್ರಾಹಕ ಅಭಿಜ್ಞಾನ ಫುಡ್ಸ್ ಸಂಸ್ಥೆಯ ರಾಧಾಕೃಷ್ಣ ಹಾಗೂ ಶಿಂಗಾರ ರೈತ ಉತ್ಪಾದಕ ಕಂಪನಿಯ ರಾಮಕಿಶೋರ್ ಮಂಚಿ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಹಲಸು ಮೇಳದಲ್ಲಿ ಪುತ್ತೂರಿಗೆ ಶೈತ್ಯಾಗಾರದ ಅಗತ್ಯತೆಯನ್ನು ಪ್ರಸ್ತಾಪಿಸಿ, ಈ ಯೋಜನೆಗೆ ಪ್ರೇರಣೆ ನೀಡಿದ ಮುಳಿಯ ಸಮೂಹ ಸಂಸ್ಥೆಯ ಮುಖ್ಯಸ್ಥ ಕೇಶವ ಪ್ರಸಾದ್ ಮುಳಿಯ ಅವರನ್ನೂ ಗೌರವಿಸಲಾಯಿತು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಮಪ್ರತೀಕ್ ಕರಿಯಾಲ್ ಪ್ರಾಸ್ತಾವಿಕ ಭಾಷಣ ಮಾಡಿ, ಗ್ರಾಮಜನ್ಯ ಸಂಸ್ಥೆ ಬೆಳೆದು ಬಂದ ಹಾದಿ, ರೈತರ ಅಭಿವೃದ್ಧಿಗಾಗಿ ಕೈಗೊಂಡಿರುವ ವಿವಿಧ ಯೋಜನೆಗಳು, ಆಧುನಿಕ ಶೈತ್ಯಾಗಾರದ ಅಗತ್ಯತೆ ಹಾಗೂ ಇದರ ಮೂಲಕ ರೈತರು, ಆಹಾರ ಸಂಸ್ಕರಣಾ ಘಟಕಗಳು, ವ್ಯಾಪಾರಿಗಳು, ಜ್ಯೂಸ್



ಕೇಂದ್ರಗಳು, ಬೇಕರಿಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕರಿಗೆ ದೊರೆಯುವ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು.

ಸಂಸ್ಥೆಯ ಅಧ್ಯಕ್ಷ ಮೂಲಚಂದ್ರ ಕೆ. ಅಧ್ಯಕ್ಷತೆ ವಹಿಸಿದ್ದರು. ಈ ಶೈತ್ಯಾಗಾರದ ಆರಂಭದಿಂದ ಪುತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶದ ರೈತರು ಮತ್ತು ಉದ್ಯಮಿಗಳಿಗೆ ಕೃಷಿ ಹಾಗೂ ಆಹಾರ ಉತ್ಪನ್ನಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಡುವ ಅತ್ಯಾಧುನಿಕ ಸೌಲಭ್ಯ ಲಭ್ಯವಾಗಿದ್ದು, ಕೃಷಿ ಮೌಲ್ಯವರ್ಧನೆ ಮತ್ತು ಗ್ರಾಮೀಣ ಆರ್ಥಿಕಾಭಿವೃದ್ಧಿಗೆ ಗ್ರಾಮಜನ್ಯದ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ನಿರಂಜನ್ ಪೋಳ್ಯ, ಶ್ರೀ ಶಂಕರನಾರಾಯಣ ಭಟ್ ಖಂಡಿಗೆ, ಶ್ರೀ ಹರ್ಷ ಕುಮಾರ್ ಎಂ.ಎಸ್., ಬಲರಾಮ ಕೆ. ಹಾಗೂ ಸುಬ್ರಾಯ ಬಿ.ಎಸ್. ಉಪಸ್ಥಿತರಿದ್ದರು. ಸಂಸ್ಥೆಯ ಮಾರ್ಗದರ್ಶಕ ಮಂಡಳಿಯ ಸದಸ್ಯರಾದ ಸತ್ಯನಾರಾಯಣ ಎಂ.ಜಿ. ಹಾಗೂ ನಿವೃತ್ತ ವಿಜ್ಞಾನಿ ಯದುಕುಮಾರ್ ಎನ್. ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಶುಭ ಹಾರೈಸಿದರು.

> **ಉತ್ತಮ ಮಾರುಕಟ್ಟೆ ಬೆಲೆ ಪಡೆಯಲು ಸಾಧ್ಯ**
> **ಗ್ರಾಮ ಜನ್ಯ ರೈತ ಉತ್ಪಾದಕ ಕಂಪನಿಯು ಗ್ರಾಮೀಣ ಪ್ರದೇಶದಲ್ಲಿ ಅತ್ಯಾಧುನಿಕ ಶೈತ್ಯಾಗಾರ ನಿರ್ಮಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ರೈತರು, ಆಹಾರ ಸಂಸ್ಕರಣಾ ಘಟಕಗಳು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಈ ಸೌಲಭ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳುವ ಮೂಲಕ ಕೃಷಿ ಉತ್ಪನ್ನಗಳ ಗುಣಮಟ್ಟ ಕಾಪಾಡಿಕೊಳ್ಳಲು ಹಾಗೂ ಉತ್ತಮ ಮಾರುಕಟ್ಟೆ ಬೆಲೆ ಪಡೆಯಲು ಸಾಧ್ಯವಾಗಲಿ.**
> ■ **ಕಿಶೋರ್ ಕುಮಾರ್**

ಸಂಸ್ಥೆಯ ನಿರ್ದೇಶಕ ನಿರಂಜನ್ ಪೋಳ್ಯ ಸ್ವಾಗತಿಸಿ, ನಿರ್ದೇಶಕಿ ಯಶಸ್ವಿನಿ ವಂದಿಸಿದರು. ಸಂಸ್ಥೆಯ ಅಕೌಂಟೆಂಟ್ ಕೃಷ್ಣ ಪ್ರಸಾದ್ ಕಾರ್ಯಕ್ರಮ ನಿರ್ವಹಿಸಿದರು.

ಗೃಹಿಣಿ ಆತ್ಮಹತ್ಯೆ

ಬದಿಯಡ್ಕ: ಗೃಹಿಣಿಯೋರ್ವೆ ನೇಣು ಬಿಗಿದು ಆತ್ಮಹತ್ಯೆಗೈದ ಘಟನೆ ನಡೆದಿದೆ. ಪೈಕ ಚಾಮುಂಡಿಮೂಲೆ ನಿವಾಸಿ, ನೆಲ್ಲಿಕಟ್ಟೆಯಲ್ಲಿ ಅಡಿಕೆ ವ್ಯಾಪಾರಿಯಾಗಿರುವ ಶಂಕರ ಪಾಟಾಳಿ ಎಂಬವರ ಪತ್ನಿ ಚಿತ್ರಕಲಾ (41) ಮೃತಪಟ್ಟ ಮಹಿಳೆ. ಗುರುವಾರ ಮಧ್ಯಾಹ್ನ ಅವರು ಮನೆಯ ಬಚ್ಚಲುಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಕಂಡುಬಂದಿದ್ದರು. ಕೂಡಲೇ ಆಸ್ಪತ್ರೆಗೆ ತಲುಪಿಸಿದರೂ ಜೀವ ರಕ್ಷಿಸಲಾಗಲಿಲ್ಲ. ಕಬದಿಯಡ್ಕ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರು ಪತಿ, ಮಕ್ಕಳಾದ ಪ್ರತ್ಯೂಷ್, ಪ್ರಖ್ಯಾತ್ ಅವರನ್ನು ಅಗಲಿದ್ದಾರೆ.

ಕಾರು ಡಿಕ್ಕಿ ಹೊಡೆದು ವಿದ್ಯಾರ್ಥಿಗಳಿಗೆ ಗಾಯ

ಮುಳ್ಳೇರಿಯ: ಕಾರು ಡಿಕ್ಕಿ ಹೊಡೆದು ಇಬ್ಬರು ವಿದ್ಯಾರ್ಥಿಗಳು ಗಂಭೀರ ಗಾಯಗೊಂಡ ಘಟನೆಗೆ ಸಂಬಂಧಿಸಿ ಕಾರು ಚಾಲಕನ ವಿರುದ್ಧ ಆದೂರು ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಘಟನೆಯಲ್ಲಿ ಮುಳ್ಳೇರಿಯ ವಿವೇಕಾನಂದ ನಗರದ ಶ್ರೀಯಾನ್ (5), ದೀಕ್ಷಾ (17) ಎಂಬವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮುಳ್ಳೇರಿಯ ಸರಕಾರಿ ವೊಕೇಶನಲ್ ಹೈಯರ್ ಸೆಕೆಂಡರಿ ಶಾಲೆಯ ಪ್ಲಸ್ ಟು ವಿದ್ಯಾರ್ಥಿನಿಯಾದ ದೀಕ್ಷಾ ಅವರು ಮುಳ್ಳೇರಿಯ ಗಜಾನನ ಪ್ರೀ ಪ್ರೈಮರಿ ಶಾಲೆ ವಿದ್ಯಾರ್ಥಿಯಾದ ಶ್ರೀಯಾನ್ ಜೊತೆ ಮನೆಗೆ ತೆರಳುತ್ತಿದ್ದ ಸಂದರ್ಭ ಗಜಾನನ ಶಾಲೆ ಪರಿಸರದ ರಸ್ತೆಯಲ್ಲಿ ಅವರಿಗೆ ಕಾರು ಡಿಕ್ಕಿ ಹೊಡೆದಿದೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣ
ಶೇ. 50ರಷ್ಟು ದಂಡ ಪಾವತಿಗೆ ಅವಕಾಶ



ಮಡಿಕೇರಿ: ಸಾರಿಗೆ ಇಲಾಖೆಯ ದಂಡ ಬಾಕಿ ಹಾಗೂ ಪೊಲೀಸ್ ಇಲಾಖೆಯ ಇ-ಚಲನ್ ಮೂಲಕ ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ರಾಜ್ಯ ಸರಕಾರ ಶೇ.50 ರಷ್ಟು ರಿಯಾಯಿತಿ ಘೋಷಿಸಿದ್ದು, ಜು.10 ರ ವರೆಗೆ ನಡೆಯಲಿರುವ ಅಭಿಯಾನವನ್ನು ವಾಹನ ಸವಾರರು ಸದುಪಯೋಗ ಪಡಿಸಿಕೊಳ್ಳುವಂತೆ ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ಕೊಡಗು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭಾ ಅವರು ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲದಲ್ಲಿ ನಡೆದ 1991ರಿಂದ 2027ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಪ್ರಕರಣ ಇತ್ಯರ್ಥ ಪಡಿಸುವ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕ ಸರ್ಕಾರವು ಸಾರಿಗೆ ಇಲಾಖೆ ಹಾಗೂ ಸಂಚಾರ ಪೊಲೀಸ್ ಇಲಾಖೆಯಲ್ಲಿ ಬಾಕಿ ಇರುವ ವಾಹನಗಳ ದಂಡದ ಮೊತ್ತದ ಮೇಲೆ ಶೇ.50 ರಷ್ಟು ರಿಯಾಯಿತಿ ಘೋಷಿಸಿದೆ. ವಾಹನ ಸವಾರರು ತಮ್ಮ ಮೇಲಿರುವ ದಂಡದ ಹೊರೆಯನ್ನು ಅರ್ಧದಷ್ಟು ಕಡಿಮೆ ಮಾಡಿಕೊಳ್ಳಲು ಜೂ.21ರಿಂದ ಜು.10ರ ವರೆಗೆ ಅವಕಾಶ ಕಲ್ಪಿಸಿದೆ. ಹಳೆಯ ಪ್ರಕರಣವನ್ನು ವಿಲೇವಾರಿ ಮಾಡುವ ಉದ್ದೇಶದಿಂದ ಸರ್ಕಾರವೇ ರಿಯಾಯಿತಿ ನೀಡಿದ್ದು, ಯಾರೂ ಕೂಡಾ ಭಯ ಪಡದೆ ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಹೇಳಿದರು.

ಸಾರಿಗೆ ಮೋಟಾರ್ ನಿರೀಕ್ಷ ಮೋಹನ್ ಕುಮಾರ್ ಅವರು ಮಾತನಾಡಿ, 1991 ರಿದ 2022ರ ಅವಧಿಯಲ್ಲಿ ಮೋಟಾರು ವಾಹನ ಕಾಯ್ದೆ ಉಲ್ಲಂಘನೆಗಾಗಿ ಸಾರಿಗೆ ಇಲಾಖೆಯಿಂದ ದಾಖಲಾಗಿರುವ ವಾಹನ ಚಾಲನಾ ಪರವಾನಗಿ, ಇನ್ಶೂರೆನ್ಸ್, ಎಮಿಷನ್ ಟೆಸ್ಟ್ ಮತ್ತಿತರ ದಾಖಲಾತಿ ಇಲ್ಲದೆ ಪ್ರಕರಣ ದಾಖಲಿಸಿಕೊಂಡವರು ಸುಲಭವಾಗಿ ಪ್ರಕರಣವನ್ನು ಇತ್ಯರ್ಥ ಪಡಿಸಿಕೊಳ್ಳಬಹುದೆಂದರು.

ಮೇ 2026ಕ್ಕಿಂತ ಮುಂಚಿತವಾಗಿ ಪೊಲೀಸ್ ಇಲಾಖೆಯಿಂದ ದಾಖಲಾದ ಎಲ್ಲಾ ಬಾಕಿ ಟ್ರಾಫಿಕ್ ಇ-ಚಲನ್ ದಂಡಗಳಿಗೂ ಶೇ. 50ರಷ್ಟು ರಿಯಾಯಿತಿ ದೊರೆಯಲಿದೆ ಎಂದರು.

ಸಾರಿಗೆ ಇಲಾಖೆಯ ಅಧೀಕ್ಷರಾದ ಮೋಹನ್, ಸಲೀಮಾ, ಪ್ರಧಾನ ಕಾನೂನು ನೆರವು ಅಭಿರಕ್ಷಕಿ ಮೈಮೂನ, ವಕೀಲರು ಹಾಗೂ ಸಿಬ್ಬಂದಿಗಳು ಇದ್ದರು. ಆಡಳಿತ ಸಹಾಯಕ ಜಯಪ್ಪ ಸ್ವಾಗತಿಸಿ, ನಿರೂಪಿಸಿದರು.

ಕ್ಷಯರೋಗ ಮುಕ್ತ ಅಭಿಯಾನ ಶಿಬಿರ

ಮಡಿಕೇರಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕ್ಷಯರೋಗ ವಿಭಾಗದಿಂದ ಪಾಲಿಬೆಟ್ಟ ಟಾಟಾ ಕಂಪನಿ ಆವರಣದಲ್ಲಿ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ 100 ದಿನಗಳ ಕ್ಷಯ ಮುಕ್ತ ಅಭಿಯಾನ ಸಂಬಂಧ ಶಿಬಿರ ನಡೆಯಿತು.

ಶಿಬಿರದಲ್ಲಿ ಹ್ಯಾಂಡ್ ಹೆಲ್ಡ್ ಎಕ್ಸ್-ರೇ, ಸಿಕ್ಕಲ್ ಸೆಲ್ ಪರೀಕ್ಷೆ ಮಾಡಲಾಯಿತು.

ಆಡಳಿತ ವೈದ್ಯಾಧಿಕಾರಿ ಡಾ.ಶಿವಪ್ಪ ಹಾಗೂ ಟಾಟಾ ಕಂಪನಿಯ ಆರ್‌ಐಎಚ್‌ಪಿ ವೈದ್ಯಾಧಿಕಾರಿ ಡಾ.ಚಂದ್ರು ಅವರು ಕ್ಷಯ ರೋಗ ಕಾರ್ಯಕ್ರಮ 100 ದಿನಗಳ ಅಭಿಯಾನ ಸಂಬಂಧ ಮಾಹಿತಿ ನೀಡಿದರು. ಕ್ಷಯ ಗುರುತಿಸುವ ಸಂಬಂಧ ಕಫ ಸಂಗ್ರಹಣೆ ಹಾಗೂ ಹ್ಯಾಂಡ್ ಹೆಲ್ಡ್ ಎಕ್ಸ್-ರೇ ಅಂದರೆ ಕ್ಷಯ ರೋಗಾಣುಗಳು ಸೋಂಕಿತ ವ್ಯಕ್ತಿಯು ಕೆಮ್ಮಿದಾಗ ಹೊರಬಂದ ರೋಗಾಣು ಗಳು ಗಾಳಿಯ ಮುಖಾಂತರ ಆರೋಗ್ಯವಂತ ವ್ಯಕ್ತಿಯ ಮೂಗು ಮತ್ತು ಬಾಯಿಯ ಮುಖಾಂತರ ಶ್ವಾಸಕೋಶ ಕ್ಷಯ ಪ್ರವೇಶ ಮಾಡಿ ಸೋಂಕುಂಟು ಮಾಡುತ್ತದೆ. ಸೋಂಕನ್ನು ಪ್ರಾರಂಭಿಕ ಹಂತದಲ್ಲಿ ಗುರುತಿಸುವ ಒಂದು ಸುಲಭ ವಿಧಾನ ಹಾಗೂ ಸೋಂಕುಳ್ಳ ವ್ಯಕ್ತಿ ಆರೋಗ್ಯ ಸಂಸ್ಥೆಯನ್ನು ತಲುಪದೇ ವ್ಯಕ್ತಿಯ ವಾಸಸ್ಥಳ ಅಥವಾ ಅನುಕೂಲವಾಗುವ ನಿಗದಿತ ಜಾಗದಲ್ಲಿ ಎಕ್ಸರೇ ಮಾಡಿ ಕ್ಷಯ ಗುರುತಿಸುವ ವಿಧಾನವಾಗಿದೆ ಎಂದು ವಿವರಿಸಲಾಯಿತು.

ಟಾಟಾ ಕಂಪನಿ ಲಿಮಿಟೆಡ್ ವರ್ಷಿಣಿ ಹಾಗೂ ಎನ್‌ಟಿಇಪಿ ಸಿಬ್ಬಂದಿಗಳಾದ ನವೀನ್, ಶ್ರೀಧರ್, ಲೋಕೇಶ್ ಹಾಗೂ ಜ್ಯೋತಿ ಮತ್ತಿತರರು ಹಾಜರಿದ್ದರು.

ಜೂ.30ರಿಂದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಕೊಡಗು ಜಿಲ್ಲಾ ಪ್ರವಾಸ

ಮಡಿಕೇರಿ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮಿ ಚೌಧರಿ ಅವರು ಜೂ. 30, ಜುಲೈ 1 ಮತ್ತು 2ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಅಧ್ಯಕ್ಷರು ಜೂ.30 ರಂದು ಬೆಳಗ್ಗೆ 9.15 ಗಂಟೆಗೆ ಪೊನ್ನಂಪೇಟೆ ತಾಲ್ಲೂಕಿನ ನಾಗರಹೊಳೆಗೆ ಆಗಮಿಸಿ ನಾಗರಹೊಳೆ ಅರಣ್ಯ ವಾಸಿಗಳು ವಾಸಿಸುವ ಹಾಡಿಗೆ ಭೇಟಿ ನೀಡಲಿದ್ದಾರೆ. ನಂತರ ನಾಗರಹೊಳೆ ಗದ್ದೆಹಾಡಿ ಮತ್ತು ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗೆ ಭೇಟಿ ನೀಡಲಿದ್ದಾರೆ. ಬಳಿಕ ಬೆಳಗ್ಗೆ 11.30 ಗಂಟೆಗೆ ತಿತಿಮತಿ ಗ್ರಾಮದ ಆನೆ ಮಾವುತರು ವಾಸಿಸುವ ಹಾಡಿಗೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 12.30 ಗಂಟೆಗೆ ತಿತಿಮತಿಯ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 2 ಗಂಟೆಗೆ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ. ಬಳಿಕ ಮಧ್ಯಾಹ್ನ 3.30 ಗಂಟೆಗೆ ವಿರಾಜಪೇಟೆಯಲ್ಲಿ ವಸತಿ ಶಾಲೆಗೆ ಭೇಟಿ ನೀಡಲಿದ್ದಾರೆ. ಸಂಜೆ 4.30 ಗಂಟೆಗೆ ವಿರಾಜಪೇಟೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ.

ಜು. 1 ರಂದು ಬೆಳಗ್ಗೆ 9 ಗಂಟೆಗೆ ಮಡಿಕೇರಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ. ನಂತರ ಬೆಳಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು, ಜಿಲ್ಲಾಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಆಯೋಜಿಸಿರುವ ಪಿಒಎಸ್‌ಎಚ್ (ಪೋಸ್) ಅಧಿನಿಯಮ 2013ರ ತರಬೇತಿ ಹಾಗೂ ಅರಿವು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಳಿಕ ಮಧ್ಯಾಹ್ನ 12 ಗಂಟೆಗೆ ನಗರದ ಗೌಡ ಸಮಾಜದ ರಸ್ತೆಯಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವಿವಿದೋದ್ದೇಶ ಒಳಾಂಗಣ ಸಭಾಂಗಣದಲ್ಲಿ ಕಾಲೇಜು ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಲಿದ್ದಾರೆ. ನಂತರ ಸಂಜೆ 4 ಗಂಟೆಗೆ ಕುಶಾಲನಗರ ಕೂಡಿಗೆಯ ಟಾಟಾ ಕಾಫೀ ಕ್ಯೂರಿಂಗ್ ವರ್ಕ್ಸ್ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲಿದ್ದಾರೆ. ಸಂಜೆ 5 ಗಂಟೆಗೆ ಕುಶಾಲನಗರದ ಮೆಟ್ರಿಕ್ ನಂತರದ ಒಬಿಸಿ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಭೇಟಿ ನೀಡಲಿದ್ದಾರೆ.

ಜು 2 ರಂದು ಬೆಳಗ್ಗೆ 9 ಗಂಟೆಗೆ ನಗರದ ಕೊಡವ ಸಮಾಜದ ಹತ್ತಿರ ಇರುವ ಮಹಿಳಾ ಪೊಲೀಸ್ ಠಾಣೆಗೆ ಭೇಟಿ ನೀಡಲಿದ್ದಾರೆ. ನಂತರ ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಮಹಿಳಾ ಸ್ಪಂದನಾ ಕಾರ್ಯಕ್ರಮ ಹಾಗೂ ಮಹಿಳಾ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಸುದ್ದಿಗೋಷ್ಠಿ ನಡೆಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಡಾ.ಮಾರುತಿ ವಿ.ಎಸ್. ಅವರು ತಿಳಿಸಿದ್ದಾರೆ.

ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ

ಮೇಜರ್ ಸೋಮನಾಥ ಶರ್ಮ ತ್ಯಾಗದಿಂದ ಕಾಶ್ಮೀರ ಉಳಿದಿದೆ

ಪುತ್ತೂರು: ಪರಮ ವೀರ ಚಕ್ರ ಪ್ರಶಸ್ತಿ ಪಡೆದ ಈ ದೇಶದ ಮೊದಲ ಸೇನಾನಿ ಮೇಜರ್ ಸೋಮನಾಥ ಶರ್ಮ. 1947ರ ಪಾಕಿಸ್ತಾನ ಹಾಗೂ ಭಾರತದ ನಡುವೆ ನಡೆದಂತಹ ಮೊದಲ ಯುದ್ಧದಲ್ಲಿ ಅವರು ತೋರಿದ ಸಾಹಸ ಒಂದು ದೊಡ್ಡ ಮಾದರಿಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಅವರು ಆ ಯುದ್ಧದಲ್ಲಿ ತನ್ನ ತಲೆಯನ್ನು ಕೊಟ್ಟದ್ದಕ್ಕಾಗಿ ಭಾರತದ ತಲೆ ಕಾಶ್ಮೀರ ಉಳಿದುಕೊಳ್ಳುವುದಕ್ಕೆ ಸಾಧ್ಯವಾಗಿದೆ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಧಿಕಾರಿ ರಾಕೇಶ ಕುಮಾರ್ ಕಮ್ಮಜೆ ಹೇಳಿದರು.

ಅವರು ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ಶನಿವಾರ ಆಯೋಜಿಸಲಾದ ಭಾರತೀಯ ಸೇನೆಯ ಬಗೆಗಿನ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

1947ರ ಯುದ್ಧದಲ್ಲಿ ಮೇಜರ್ ಸೋಮನಾಥ ಶರ್ಮಾರವರು 90 ಮಂದಿ ಸೈನಿಕರ ನಾಯಕತ್ವವನ್ನು ವಹಿಸಿ, 700 ಪಾಕಿಸ್ತಾನಿ ಸೈನಿಕರ ವಿರುದ್ಧ ಸುಮಾರು 6 ಗಂಟೆಗಳ ಕಾಲ ಸತತವಾಗಿ ಹೋರಾಡಿ ಪಾಕಿಸ್ಥಾನಿಯರು



ಒಂದಿಂಚು ಮುಂದೆ ಬರದಂತೆ ತಡೆದು ನಿಲ್ಲಿಸಿದರು. ಭಾರತೀಯ ಸೇನೆ ಹೆಚ್ಚಿನ ಪ್ರಮಾಣದಲ್ಲಿ ಜಮಾವಣೆ ಆಗುವವರೆಗೆ ಯುದ್ಧವನ್ನು ಮುಂದುವರೆಸುತ್ತಾ ತಮ್ಮ ಪ್ರಾಣಾರ್ಪಣೆಯನ್ನು ಮಾಡಿದರು ಎಂದು ಹೇಳಿದರು.

1947ರಿಂದ 2026ರವರೆಗೆ ಪರಮ ವೀರ ಚಕ್ರ ಪ್ರಶಸ್ತಿ ಕೇವಲ 21 ಯೋಧರಿಗೆ ಪ್ರಾಪ್ತವಾಗಿದೆ. ಅದರಲ್ಲಿ 14 ಮಂದಿಗೆ ಮರಣೋತ್ತರವಾಗಿ ದೊರೆತಿದ್ದರೆ, ಯುದ್ಧ ಮಾಡುತ್ತಾ ಕೂದಲೆಳೆಯಲ್ಲಿ ಪಾರಾದ 7 ಯೋಧರಿಗೆ ಯುದ್ಧದ ನಂತರ ನೀಡಲಾಗಿದೆ. ಆ 7ರಲ್ಲಿ ಮೂವರು ಯೋಧರಾದ ಕ್ಯಾ. ಯೋಗೇಂದ್ರ ಸಿಂಗ್ ಯಾದವ್, ಕ್ಯಾ. ಸಂಜಯ್ ಕುಮಾರ್ ಹಾಗೂ ಕ್ಯಾ. ಬಾಣಾಸಿಂಗ್ ಈಗಲೂ ನಮ್ಮ ನಡುವೆ ಇದ್ದಾರೆ. ಆ ಮೂವರಲ್ಲಿ ಕ್ಯಾ. ಯೋಗೇಂದ್ರ ಸಿಂಗ್ ಯಾದವ್ ಹಾಗೂ ಕ್ಯಾ. ಸಂಜಯ್ ಕುಮಾರ್ ಅವರನ್ನು ಅಂಬಿಕಾ ಸಂಸ್ಥೆಯ ಅಂಗಳಕ್ಕೆ ಆಗಮಿಸಿದ್ದು ಪುಣ್ಯ ವಿಶೇಷ ಎಂದು ತಿಳಿಸಿದರು.

> ▸▸ 1947ರ ಯುದ್ಧದಲ್ಲಿ ಮೇಜರ್ ಸೋಮನಾಥ ಶರ್ಮಾರವರು 90 ಮಂದಿ ಸೈನಿಕರ ನಾಯಕತ್ವವನ್ನು ವಹಿಸಿದರು.
>
> ▸▸ ಸುಮಾರು 6 ಗಂಟೆಗಳ ಕಾಲ ಸತತವಾಗಿ ಹೋರಾಡಿ ಪಾಕಿಸ್ಥಾನಿಯರು ಒಂದಿಂಚು ಮುಂದೆ ಬರದಂತೆ ತಡೆದು ನಿಲ್ಲಿಸಿದರು.
>
> ▸▸ ಭಾರತೀಯ ಸೇನೆ ಹೆಚ್ಚಿನ ಪ್ರಮಾಣದಲ್ಲಿ ಜಮಾವಣೆ ಆಗುವವರೆಗೆ ಯುದ್ಧವನ್ನು ಮುಂದುವರೆಸುತ್ತಾ ತಮ್ಮ ಪ್ರಾಣಾರ್ಪಣೆಯನ್ನು ಮಾಡಿದರು

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಮಿಲಿಟರಿ ಸಮವಸ್ತ್ರ ಎನ್ನುವುದು ನಮ್ಮ ದೇಶದ ಹೆಮ್ಮೆಯ ಪ್ರತೀಕವಾಗಿದೆ. ಆದ್ದರಿಂದ ಸೇನಾ ಸಮವಸ್ತ್ರ ಮಾದರಿಯ ಸಮವಸ್ತ್ರವನ್ನು ಅಂಬಿಕಾದ ವಿದ್ಯಾರ್ಥಿಗಳಿಗೆ ಒದಗಿಸಿಕೊಡಲಾಗಿದೆ. ಭಾರತದ ಗಡಿಯನ್ನು ಕಾಯುವ ಸೈನಿಕರಿಗೆ ನಾವು ಹೇಗೆ ಗೌರವ ಕೊಡುತ್ತೇವೆಯೋ ಹಾಗೆಯೇ ನಮ್ಮ ಈ ಮಿಲಿಟರಿ ಮಾದರಿ ಸಮವಸ್ತ್ರಕ್ಕೂ ಗೌರವವನ್ನು ಕೊಡಬೇಕು ಎಂದರು.

ಅಂಬಿಕಾ ಸಮೂಹ ಸಂಸ್ಥೆಗಳ ಕೋಶಾಧಿಕಾರಿ ರಾಜಶ್ರೀ ಎಸ್. ನಟ್ಟೋಜ, ವಿದ್ಯಾಲಯದ ಪ್ರಾಂಶುಪಾಲೆ ಮಾಲತಿ ಡಿ., ಉಪ ಪ್ರಾಂಶುಪಾಲೆ ಸುಜನಿ ಬೋರ್ಕರ್, ಸಮಾಜ ವಿಜ್ಞಾನ ಶಿಕ್ಷಕರಾದ ರಮೇಶ್ ಹಾಗೂ ದೀಪ್ತಿ ಉಪಸ್ಥಿತರಿದ್ದರು. ಶಾಲಾ ನಾಯಕ ಸಾತ್ವಿಕ್ ಜಿ. ಹಾಗೂ ಶಾಲಾ ನಾಯಕಿ ವಂಶಿಕಾ ಬಿ. ರೈ ಕಾರ್ಯಕ್ರಮ ನಿರ್ವಹಿಸಿದರು.

ವಿವಿಧ ಸಹಕಾರಿ ಸಂಘಗಳಿಗೆ ಜಮೀನು ಮಂಜೂರಾತಿಗೆ ಸಚಿವರಿಗೆ ಮನವಿ

ಪುತ್ತೂರು: ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಸಹಕಾರಿ ಸಂಘಗಳಿಗೆ ಜಮೀನು ಮಂಜೂರಾತಿ ಮಾಡುವಂತೆ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಅವರಿಗೆ ಶಾಸಕ ಅಶೋಕ್ ರೈ ಮನವಿ ಮಾಡಿದ್ದಾರೆ.

ಸಚಿವರನ್ನು ಭೇಟಿಯಾಗಿ ಮಾತುಕತೆ ನಡೆಸಿದ ಶಾಸಕರು ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪುತ್ತೂರು ನಗರದ ಪಡೀಲು ಮೂರ್ತೆದಾರರ ಸೇವಾ ಸಹಕಾರಿ ಸಂಘಕ್ಕೆ 05 ಸೆಂಟ್ಸ್, ಬೆಳ್ಳಿಪ್ಪಾಡಿ ಗ್ರಾಮದ ಕೊಡಿಮರ ಹಾಲು ಉತ್ಪಾದಕರ ಸಹಕರಿ ಸಂಘಕ್ಕೆ 0.3 ಸೆಂಟ್ಸ್ ಹಾಗೂ ಕಬಕ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ 0.3.50 ಸೆಂಟ್ಸ್ ಜಾಗ ಮಂಜೂರು ಮಾಡಿಸುವಂತೆ ಈಗಾಗಲೇ ಮನವಿಯನ್ನು ಸಲ್ಲಿಸಿದ್ದಾರೆ.

ಅನೇಕ ವರ್ಷಗಳಿಂದ ಈ ಮೂರು



ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕ ಹಿತಾಸಕ್ತಿಯ ಸಂಘಗಳಾಗಿದೆ. ಸಂಘದ ಅಧೀನದಲ್ಲಿ ಈ ಜಾಗ ಸ್ವಾಧೀನದಲ್ಲಿದ್ದರೂ ಸಂಘದ ಹೆಸರಿಗೆ ಇನ್ನೂ ದಾಖಲುಗೊಂಡಿರುವುದಿಲ್ಲ. ಸರಕಾರ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಶಾಸಕರು ಸಚಿವರಿಗೆಮನವಿಸಲ್ಲಿಸಿದ್ದಾರೆ. ಶಾಸಕರ ಮನವಿಗೆ ಸ್ಪಂದಿಸಿದ ಸಚಿವರು ಈ ಬಗ್ಗೆ ವರದಿ ಸಿದ್ದಪಡಿಸಲು ಜಿಲ್ಲಾಧಿಕಾರಿಗೆ ಸೂಚನೆಯನ್ನು ನೀಡಿದ್ದಾರೆ.

‘ಪ್ರಗತಿ, ಸ್ಫೂರ್ತಿ, ಉನ್ನತಿ–2026’ ವ್ಯಕ್ತಿತ್ವ ವಿಕಸನ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಾಗಾರಕ್ಕೆ ಚಾಲನೆ

ಜ್ಞಾನಕ್ಕೆ ಕೌಶಲ್ಯ, ಮೌಲ್ಯ ಸೇರಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ



ಮಂಗಳೂರು: ಸಮಾಜದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ, ನಾಯಕತ್ವ ಗುಣಗಳ ವಿಕಸನ ಹಾಗೂ ಜೀವನ ಕೌಶಲ್ಯಗಳ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು, ವಿಶ್ವ ಕೊಂಕಣಿ ಕೇಂದ್ರ, ಶಕ್ತಿನಗರದ ಸಹಯೋಗದಲ್ಲಿ ಶ್ರೀ ಪೂರ್ಣಾನಂದ ಸೇವಾ ಪ್ರತಿಷ್ಠಾನ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ನಾಲ್ಕು ದಿನಗಳ ವಸತಿ ಸಹಿತ ಚಟುವಟಿಕೆ ಆಧಾರಿತ ‘ಪ್ರಗತಿ ಸ್ಫೂರ್ತಿ ಮತ್ತು ಉನ್ನತಿ ‘2026’ ವ್ಯಕ್ತಿತ್ವ ವಿಕಸನ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಾಗಾರಕ್ಕೆ ಗುರುವಾರ ಭವ್ಯ ಚಾಲನೆ ದೊರೆಯಿತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ಸಿ.ಎ. ನಂದಗೋಪಾಲ ಶೆಣೈ ಅವರು, ಶಿಕ್ಷಣವೆಂದರೆ ಕೇವಲ ಪಠ್ಯಾಧಾರಿತ ಜ್ಞಾನವಲ್ಲ; ಅದು ವ್ಯಕ್ತಿಯ ಸರ್ವತೋಮುಖ ವ್ಯಕ್ತಿತ್ವ ರೂಪುಗೊಳಿಸುವ ಪ್ರಕ್ರಿಯೆ. ಜ್ಞಾನಕ್ಕೆ ಕೌಶಲ್ಯ, ಮೌಲ್ಯಗಳು ಮತ್ತು ಸೇವಾ ಮನೋಭಾವಗಳು ಸೇರಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಮಾತೃ ಭಾಷೆ ಕೊಂಕಣಿ ನಮ್ಮ ಅಸ್ತಿತ್ವದ ಪ್ರತೀಕವಾಗಿದ್ದು, ಯುವಜನತೆಯಲ್ಲಿ ಆತ್ಮವಿಶ್ವಾಸ ಹಾಗೂ ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸುತ್ತದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಶ್ವ ಕೊಂಕಣಿ ಕೇಂದ್ರದ ಉಪಾಧ್ಯಕ್ಷ ಡಿ. ರಮೇಶ ನಾಯಕ್ ಮೈರಾ ಅವರು, “ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪಠ್ಯಜ್ಞಾನದ ಜೊತೆಗೆ ಸಂವಹನ ಕೌಶಲ್ಯ, ನಾಯಕತ್ವ ಗುಣ, ಸಮಯ ನಿರ್ವಹಣೆ, ತಂತ್ರಜ್ಞಾನ ಜ್ಞಾನ ಹಾಗೂ ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳಿಗೆ ನೈಜ ಜೀವನದ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸುತ್ತವೆ” ಎಂದರು. ಸುಮಾರು 75 ವಿದ್ಯಾರ್ಥಿಗಳು ಮೂರು ಹಂತಗಳಲ್ಲಿ ಈ ಶಿಬಿರದಲ್ಲಿ ಭಾಗವಹಿಸುತ್ತಿದ್ದು, ಇದರ ಸಂಪೂರ್ಣ ಪ್ರಯೋಜನ ಪಡೆಯುವಂತೆ ಕರೆ ನೀಡಿದರು.

ವಿಶ್ವ ಕೊಂಕಣಿ ಕೇಂದ್ರದ ಹಿರಿಯ ಉಪಾಧ್ಯಕ್ಷ ವಿಲಿಯಂ ಡಿಸೋಜಾ ಮಾತನಾಡಿ, “ಇಂತಹ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸಮಾನತೆ, ಸ್ನೇಹ, ಪರಸ್ಪರ ಸಹಕಾರ ಮತ್ತು ಸಮಾಜದೊಂದಿಗೆ ಬಾಂಧವ್ಯವನ್ನು ಬೆಳೆಸುತ್ತವೆ. ಭಾಷೆ, ಸಂಸ್ಕೃತಿ ಹಾಗೂ ನಾಯಕತ್ವ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಇವು ಮಹತ್ವದ ಪಾತ್ರ ವಹಿಸುತ್ತವೆ” ಎಂದು ಅಭಿಪ್ರಾಯಪಟ್ಟರು.

> **ಜ್ಞಾನಕ್ಕೆ ಕೌಶಲ್ಯ, ಮೌಲ್ಯಗಳು ಮತ್ತು ಸೇವಾ ಮನೋಭಾವಗಳು ಸೇರಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.**
> ■ ಸಿ.ಎ. ನಂದಗೋಪಾಲ ಶೆಣೈ, ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ

ಕಾರ್ಯಕ್ರಮದಲ್ಲಿ ವಿಶ್ವಕೊಂಕಣಿ ಕೇಂದ್ರದ ಕಾರ್ಯನಿರ್ವಹಣಾಧಿಕಾರಿ ಡಾ. ಬಿ. ದೇವದಾಸ್ ಪೈ, ಶ್ರೀ ಪೂರ್ಣಾನಂದ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಮುರಳೀಧರ ಪ್ರಭು ವಗ್ಗ, ದಕ್ಷಿಣ ಕನ್ನಡ ಜಿಲ್ಲಾ ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಂಘದ ಅಧ್ಯಕ್ಷ ದಯಾನಂದ ನಾಯಕ್ ಪುಂಜಾಲಕಟ್ಟೆ, ಕಾರ್ಯದರ್ಶಿ ಸುಧಾಕರ ಪ್ರಭು ಪೆರ್ಮರೋಡಿ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಸುರೇಂದ್ರ ಸಾಮಂತ್, ಮೋಹನ್ ನಾಯಕ್ ಒಡ್ದೂರು, ರವೀಂದ್ರ ನಾಯಕ್ ಕುಂಟಲ್ಪಾಡಿ, ಸಂಜೀವ ಸಾಮಂತ್ ಮರೋಳಿ, ದಿವಾಕರ ಶೆಣೈ ಮರೋಳಿ, ನಿಕಟಪೂರ್ವ ಅಧ್ಯಕ್ಷ ವಿಜಯ ಶೆಣೈ ಕೊಡಂಗೆ ಹಾಗೂ ಸಂಘದ ಪದಾಧಿಕಾರಿಗಳಾದ ಉಪೇಂದ್ರ ನಾಯಕ್ ಮೇರಿಹಿಲ್, ಪ್ರಭಾಕರ ಶೆಣೈ ಗುರುನಗರ, ಅನಂತ ಪ್ರಭು ಮರೋಳಿ, ಸುಚಿತ್ರ ರಮೇಶ ನಾಯಕ್, ಗಣೇಶ ಪ್ರಭು ಓಮ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಾಗಾರದ ಮುಖ್ಯ ತರಬೇತುದಾರರಾದ ಕುಡ್ವಿ ವಿದ್ಯಾಶೆಣೈ ಅವರು ಶಿಬಿರದ ಉದ್ದೇಶ, ಚಟುವಟಿಕೆಗಳು ಹಾಗೂ ನಿರೀಕ್ಷಿತ ಫಲಿತಾಂಶಗಳ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಡಾ. ವಿಜಯಲಕ್ಷ್ಮಿ ನಾಯಕ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ನಾಲ್ಕು ದಿನಗಳ ಈ ಕಾರ್ಯಾಗಾರದಲ್ಲಿ ವ್ಯಕ್ತಿತ್ವ ವಿಕಸನ, ಸಂವಹನ ಕೌಶಲ್ಯ, ನಾಯಕತ್ವ ತರಬೇತಿ, ತಂಡ ಕಾರ್ಯಪದ್ಧತಿ, ಸಾಂಸ್ಕೃತಿಕ ಅರಿವು, ಜೀವನ ಮೌಲ್ಯಗಳು ಹಾಗೂ ಉದ್ಯೋಗಾಭಿಮುಖಿ ಕೌಶಲ್ಯಗಳ ಕುರಿತು ವಿಶೇಷ ತರಬೇತಿ ನೀಡಲಾಗುತ್ತಿದೆ. ಸಮಾಜದ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಮಹತ್ವದ ಹೆಜ್ಜೆಯಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಕೆನರಾ ಕಾಲೇಜಿನಲ್ಲಿ ಬೃಹತ್ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್

200ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳ ವೇದಿಕೆ



ಮಂಗಳೂರು: ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು ಇದರ ತರಬೇತಿ, ಇಂಟರ್ನ್‌ಶಿಪ್ ಮತ್ತು ಪ್ಲೇಸ್‌ಮೆಂಟ್ ಸೆಲ್ ವತಿಯಿಂದ, ಐಕ್ಯೂಎಸಿ ಸಹಯೋಗದಲ್ಲಿ ಹಾಗೂ ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಸಹಭಾಗಿತ್ವದಲ್ಲಿ ಗುರುವಾರ ಕಾಲೇಜಿನ ಶ್ರೀಮತಿ ರತ್ನಾ ಎಸ್. ಶೆಣೈ ಸ್ಮಾರಕ ಸಭಾಂಗಣದಲ್ಲಿ ‘ಆನ್–ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್–2026’ ನಡೆಯಿತು. ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಆಯೋಜಿಸಿದ್ದ ಈ ಬೃಹತ್ ಉದ್ಯೋಗ ಮೇಳದಲ್ಲಿ 300ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಭಾರತೀಯಕೈಗಾರಿಕಾಒಕ್ಕೂಟ(ಸಿಐಐ) ಉಪಾಧ್ಯಕ್ಷಸಿಎ ಅನಂತೇಶ್ ಪ್ರಭು ಮುಖ್ಯ ಅತಿಥಿಯಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ಉದ್ಯೋಗ ಮಾರುಕಟ್ಟೆಯಲ್ಲಿ ಸ್ಪರ್ಧೆ ಹೆಚ್ಚಾಗಿದ್ದರೂ, ಪ್ರತಿಭೆ ಮತ್ತು ಕೌಶಲ್ಯ ಹೊಂದಿರುವವರಿಗೆ ಅವಕಾಶಗಳ ಕೊರತೆಯಿಲ್ಲ . ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ನಿರಂತರ ವೃದ್ಧಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸಂಚಾಲಕ ಸಿಎ ಎಂ. ಜಗನ್ನಾಥ್ ಕಾಮತ್ ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯದ ವೃತ್ತಿಜೀವನವನ್ನು ರೂಪಿಸುವ ನಿಟ್ಟಿನಲ್ಲಿ ಕಾಲೇಜು ವಿವಿಧ ಉದ್ಯೋಗಮುಖಿ ತರಬೇತಿಗಳು, ಕೌಶಲ್ಯಾಭಿವೃದ್ಧಿ ಕಾರ್ಯಾಗಾರಗಳು, ಇಂಟರ್ನ್‌ಶಿಪ್ ಅವಕಾಶಗಳು ಹಾಗೂ ಕೈಗಾರಿಕಾ ಸಹಭಾಗಿತ್ವಗಳನ್ನು ಇನ್ನಷ್ಟು ವಿಸ್ತರಿಸುತ್ತಿದೆ ಎಂದರು.

ಪ್ಲೇಸ್‌ಮೆಂಟ್ ಸೆಲ್ ಸಂಯೋಜಕಿ ಶೈಲಜಾ ಕುಮಾರಿ ಮಾತನಾಡಿ, ವಿದ್ಯಾರ್ಥಿಗಳನ್ನು ಉದ್ಯೋಗ ಕ್ಷೇತ್ರದ ನಿರೀಕ್ಷೆಗಳಿಗೆ ಸಜ್ಜುಗೊಳಿಸುವುದು ಹಾಗೂ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ನೇರ ಸಂಪರ್ಕ ಕಲ್ಪಿಸುವುದೇ ಈ ಕಾರ್ಯಕ್ರಮದ ಪ್ರಮುಖ ಆಶಯ ಎಂದು ಹೇಳಿದರು.

ಉದ್ಯೋಗ ಮೇಳದಲ್ಲಿ ಐಟಿ ಹಾಗೂ ನಾನ್–ಐಟಿ ವಲಯದ ಪ್ರಮುಖ ಸಂಸ್ಥೆಗಳು ಭಾಗವಹಿಸಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದವು. ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ಸಂದರ್ಶನ ಹಾಗೂ ಆಯ್ಕೆ ಪ್ರಕ್ರಿಯೆಗಳು ದಿನವಿಡೀ ಯಶಸ್ವಿಯಾಗಿ ನಡೆದವು.

ಪ್ರಾಂಶುಪಾಲರಾದ ಡಾ. ಪ್ರೇಮಲತಾ ವಿ. ಸ್ವಾಗತಿಸಿದರು. ಆಡಳಿತಾಧಿಕಾರಿ ಡಾ. ದೀಪ್ತಿ ನಾಯಕ್ ಉಪಸ್ಥಿತರಿದ್ದರು. ಉಪನ್ಯಾಸಕಿದೇವಿಕಾಪ್ರಭುಕಾರ್ಯಕ್ರಮವನ್ನು ನಿರೂಪಿಸಿದರು. ಶ್ವೇತಾ ಪೈ ವಂದಿಸಿದರು.

ಅಗ್ರಹಾರ ಅಂಗನವಾಡಿ ಕೇಂದ್ರ ಕಟ್ಟಡ ಉದ್ಘಾಟನೆ



ಕಾಪು : ಕಾಪು ವಿಧಾನಸಭಾ ಕ್ಷೇತ್ರದ ಕಟಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಗ್ರಹಾರ ಏಣಗುಡ್ಡೆ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣಕ್ಕೆ 18 ಲಕ್ಷ ರೂಪಾಯಿ ಅನುದಾನದ ಮಂಜೂರಾಗಿ ಕಾಮಗಾರಿ ಪೂರ್ಣಗೊಂಡಿದ್ದು ಇದರ ಉದ್ಘಾಟನೆಯನ್ನು ಜೂ. 26 ರಂದು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಗೀತಾಂಜಲಿ ಸುವರ್ಣ, ತಾಲೂಕು ಪಂಚಾಯತ್ ಮಾಜಿ ಸದಸ್ಯರಾದ ನಾಗೇಶ್, ಕಟಪಾಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಶ್ರೀಧರ್ ಪೂಜಾರಿ, ಸುಭಾಸ್ ಬಲ್ಲಾಳ್, ಸ್ಥಳೀಯರಾದ ದಿಲೀಪ್, ಮುರಳೀಧರ ಪೈ, ನಿತೀನ್, ಅರ್ಚಕರಾದ ಗೋವಿಂದ ಭಟ್, ಅಂಗನವಾಡಿ ಶಿಕ್ಷಕಿ ಸುಮಾ ರಾಜೇಶ್ ಉಪಸ್ಥಿತರಿದ್ದರು.

ಜನಕಲ್ಯಾಣ ಶಿಬಿರಕ್ಕೆ ಸಂಸದ ಬ್ರಿಜೇಶ್ ಚೌಟ ಚಾಲನೆ

ಅಭಿವೃದ್ಧಿಯಲ್ಲಿ ದೇಶ ದಾಪುಗಾಲು



ಮಂಗಳೂರು: ನರೇಂದ್ರ ಮೋದಿ ಯವರು ಈ ದೇಶದ ಪ್ರಧಾನಿಯಾದ ಬಳಿಕ ದೇಶದ ಚಿತ್ರಣ ಬದಲಾಗಿದೆ. ದೇಶದ ಅಭಿವೃದ್ಧಿಯಲ್ಲಿ ದಾಪುಗಾಲಿಕ್ಕಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದರು.

ಮಂಗಳೂರಿನ ಬಿಜೈ ಕೆಎಸ್ಸಾರ್ಟಿಸಿ ಬಸ್ ತಂಗುದಾಣದಲ್ಲಿ ಗುರುವಾರ ವಿಶ್ವಾಸ, ವಿಕಾಸ ಮತ್ತು ಜನಕಲ್ಯಾಣ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರಸರ್ಕಾರವುವಿಶ್ವಾಸ,ವಿಕಾಸ ಮತ್ತು ಜನಕಲ್ಯಾಣ ಕಾರ್ಯಕ್ರಮದ ಮೂಲಕ ಮನೆ ಮಾತಾಗಿದೆ. ಈ ಯೋಜನೆ ಬಗ್ಗೆ ಪ್ರಚಾರಪಡಿಸುವ ನಿಟ್ಟಿನಲ್ಲಿ ಜನಕಲ್ಯಾಣ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಆಡಳಿತಕ್ಕೆ ಬರುವ ಮುನ್ನ ದೇಶದ ಸ್ಥಿತಿ ದಿವಾಳಿಯಾಗಿತ್ತು. ಆದರೆಸರಿಯಾದ ಸಂದರ್ಭ ಮೋದಿ ಅವರು ಅಧಿಕಾರ ವಹಿಸಿಕೊಂಡು ಯಶಸ್ವಿಯಾಗಿ 12ವರ್ಷ ಗಳ ಆಡಳಿತದಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯ ಮಾಡಿದ್ದಾರೆ. ಅದರಲ್ಲೂ ಸರ್ಕಾರದ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಹಾಕಿ ಆಡಳಿತ ಮೇಲೆ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಜನ್‌ಧನ್ ಖಾತೆ ತೆರೆದು ನೇರ ಖಾತೆಗೆ ಹಣ ಪಾವತಿ ಮಾಡಲಾಗುತ್ತಿದೆ. ಸ್ಟಾರ್ಟ್ ಅಪ್ ಇಂಡಿಯಾಕ್ಕೆ ಒತ್ತು, ಮೂಲ ಸೌಲಭ್ಯಕ್ಕೆ ಒತ್ತು, ಡಿಜಿಟಲ್, ರಕ್ಷಣೆ, ರಸ್ತೆಗೆ ಆದ್ಯತೆ ನೀಡಿ ಅಖಂಡ ಭಾರತದ ವಿಕಾಸ, ಅಭಿವೃದ್ಧಿ ಯೋಜನೆ ಮೂಲಕ ಜನಕಲ್ಯಾಣಕ್ಕೆ ಆದ್ಯತೆ ನೀಡಲಾಗಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಕೇಂದ್ರ ಸರ್ಕಾರ ಹೆದ್ದಾರಿ, ಆರೋಗ್ಯ ಕ್ಷೇತ್ರದಲ್ಲಿಭಾರೀಬದಲಾವಣೆಯನ್ನು ತಂದಿದೆ. ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿಗಳನ್ನು ನಾಗರಿಕರಿಗೆ ಮುಟ್ಟಿಸುವಲ್ಲಿ ಈ ಶಿಬಿರ ಅರ್ಥಪೂರ್ಣ ಕಾರ್ಯಕ್ರಮ ಎಂದರು.

ಕಾರ್ಯಕ್ರಮದಲ್ಲಿ ಕೆಎಸ್ಸಾರ್ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ್ ಶೆಟ್ಟಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಕಾರ್ಯಕ್ರಮದ ಸಂಯೋಜಕ ದೇವಪ್ಪ ಪೂಜಾರಿ ಮತ್ತಿತರರು ಉಪಸ್ಥಿತರಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

26-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	420 - 470
ಚೋಲ್ ಅಡಿಕೆ	:	525 - 550
ಡಬಲ್ ಚೋಲ್	:	525 - 550
ಹೊಸ ಪಠೋರ	:	330 - 380
ಹಳೆ ಪಠೋರ	:	350 - 380
ಹೊಸ ಉಳ್ಳಿ	:	140 - 280
ಹಳೆ ಉಳ್ಳಿ	:	130 - 280
ಹೊಸ ಕೋಕಾ	:	310 - 330
ಹಳೆ ಕೋಕಾ	:	310 - 330
ಹೊಸ ಕರಿಗೋಟು	:	235 - 265
ಹಳೆ ಕರಿಗೋಟು	:	235 - 265
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	268.50
ಆರ್‌ಎಸ್‌ಎಸ್ 2	-	224.00
ಸ್ಕ್ರಾಪ್ 1	-	154.00
ಸ್ಕ್ರಾಪ್ 2	-	145.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-58) ಡ್ರಾ ಜೂನ್ 26ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RW 618248 (KOLLAM)

Consolation Prize Rs.5,000/-
RN 628248 RO 628248 RP 628248 RR 628248
RS 628248 RT 628248 RU 628248 RV 628248
RX 628248 RY 628248 RZ 628248

2nd Prize Rs.30,00,000/- [30 Lakhs]
RV 890583 (KATTAPPANA)

3rd Prize Rs.5,00,000/- [5 Lakhs]
RV 374659 (ALAPPUZHA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0268 0365 0522 0577 0854 1052 1220 1942 2676 3088 4754 5374 6004 7675 7779 7857 8335 9842 9998

5th Prize Rs.2,000/-
0183 0808 5291 5675 9089 9410

6th Prize Rs.1,000/-
0199 0623 0747 0753 1248 1303 1459 1726 2172 2295 2727 2943 3176 3314 3584 3643 4096 5242 5934 6232 6459 6541 7438 8239 9403

7th Prize Rs.500/-
0067 0116 0284 0446 0939 1096 1293 1341 1381 1655 1863 2227 2308 2558 2629 2636 2729 2752 2780 2854 3001 3246 3274 3446 3531 3641 3663 3811 3892 4078 4186 4218 4251 4376 4390 4869 4933 4980 5170 5466 5560 5752 5806 5925 5950 6115 6637 6638 6695 6708 6944 6956 6995 7058 7134 7179 7277 7298 7491 7578 7671 7781 7960 8019 8114 8795 8872 8885 8897 8908 8967 8989 9122 9193 9448 9754

8th Prize Rs.200/-
0170 0378 0567 0569 0670 0862 0973 1011 1045 1053 1246 1257 1562 1610 1705 1743 1866 2016 2022 2126 2133 2197 2277 2354 2375 2380 2463 2524 2601 2734 2787 2911 2967 3083 3654 3656 3699 3730 3812 3827 4087 4094 4135 4406 4407 4605 4646 4674 4770 4829 4912 4914 4952 5005 5006 5121 5343 5584 5834 5877 6094 6133 6342 6408 6621 6639 7082 7098 7152 7306 7518 7607 7921 7957 8125 8331 8341 8431 8480 8540 8594 8962 9021 9034 9042 9156 9249 9401 9800 9825 9886 9893

9th Prize Rs.100/-
0247 0439 0535 0651 0686 0704 0717 0846 0864 1041 1078 1331 1366 1407 1416 1458 1484 1502 1514 1535 1547 1939 2015 2085 2159 2162 2312 2347 2450 2486 2513 2525 2626 2767 2784 2814 3054 3075 3259 3318 3347 3380 3556 3684 3952 3968 4133 4194 4287 4392 4480 4497 4521 4553 4558 4713 4788 4801 4922 4931 5000 5042 5045 5051 5063 5073 5087 5124 5196 5206 5250 5355 5426 5493 5516 5658 5765 5773 5889 5926 6149 6194 6418 6533 6539 6579 6594 6673 6704 6718 6818 6883 6893 6987 7009 7060 7079 7100 7109 7130 7196 7255 7314 7705 7708 7726 7741 7754 7792 7794 7834 7856 7933 8077 8089 8127 8194 8497 8523 8581 8718 8818 8901 8955 8995 9007 9209 9363 9546 9599 9617 9625 9657 9662 9713 9742 9778 9815 9821 9854 9888 9900 9934 9973

ಕೇರಳದ ನೂತನ ಸ್ಟೇಟ್ ಅಟಾರ್ನಿ ನ್ಯಾಯವಾದಿ ಅನೂಪ್ ನಾಯರ್

ದಿ.ಎಂ. ಕೆ. ವಿಜಯ್ ಕುಮಾರ್ ಮನೆಗೆ ಭೇಟಿ



ಕಾರ್ಕಳ : ಕೇರಳ ರಾಜ್ಯದ ನೂತನ ಸ್ಟೇಟ್ ಅಟಾರ್ನಿ ನ್ಯಾಯವಾದಿ ಅನೂಪ್ ನಾಯರ್ ಅವರು ಕಾರ್ಕಳದ ತನ್ನ ಗುರುಗಳಾದ ಹಿರಿಯ ನ್ಯಾಯವಾದಿ ದಿ. ಎಂ. ಕೆ. ವಿಜಯ್ ಕುಮಾರ್ ಅವರ ಮನೆಗೆ ಭೇಟಿ ನೀಡಿ ಅವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಮರ್ಪಿಸಿದರು.

ನ್ಯಾಯಾಂಗ ಕ್ಷೇತ್ರಕ್ಕೆ ದಿ. ಎಂ. ಕೆ. ವಿಜಯ್ ಕುಮಾರ್ ಅವರ ಆರು ದಶಕಗಳ ಸುಧೀರ್ಘ ಸೇವೆಯನ್ನು ಸ್ಮರಿಸಿದರು . ತನ್ನನ್ನು ಸೇರಿ ನೂರಾರು ವಕೀಲ ಶಿಷ್ಯರಿಗೆ ಮಾರ್ಗದ ರ್ಶನ ಮಾಡಿ ಸಮರ್ಥ ನ್ಯಾಯವಾದಿಗಳಾಗಿ ರೂಪಿಸುವಲ್ಲಿ ನ್ಯಾಯಾಂಗ ಕ್ಷೇತ್ರದ ದಿಗ್ಗಜ ದಿ. ಎಂ. ಕೆ. ವಿಜಯ್ ಕುಮಾರ್ ಅನನ್ಯ ಕೊಡುಗೆ ನೀಡಿರುತ್ತಾರೆ ಎಂದರು.

ಎಂ. ಕೆ. ವಿಜಯಕುಮಾರ್ ಅವರ ಅಪಾರ ವಿದ್ವತ್, ಕೌಶಲ್ಯ, ನಿಷ್ಠೆ ಹಾಗೂ ಪ್ರಾಮಾಣಿಕ ಸೇವೆಯಿಂದ ಧೀಮಂತ ವಕೀಲರೆಂಬ ಪ್ರತೀತಿ. ಅವರು ನ್ಯಾಯ ಕ್ಷೇತ್ರದ ದಂತಕಥೆ ಎಂದು ನ್ಯಾಯವಾದಿ ಅನೂಪ್ ನಾಯರ್ ತಮ್ಮ ಗುರುಗಳನ್ನು ಸ್ಮರಿಸಿದರು.

ಇತ್ತೀಚಿಗೆ ಕೇರಳ ರಾಜ್ಯದ ಮುಖ್ಯಮಂತ್ರಿ ವಿ.ಡಿ. ಸತೀಸನ್ ನ್ಯಾಯವಾದಿ ಅನೂಪ್ ನಾಯರ್ ಅವರನ್ನು ಕೇರಳ ರಾಜ್ಯದ ಸ್ಟೇಟ್ ಅಟಾರ್ನಿಯಾಗಿ ನೇಮಕ ಮಾಡಿದ ಕ್ಯಾಬಿನೆಟ್ ನಿರ್ಧಾರವನ್ನು ಪ್ರಕಟಿಸಿದ್ದರು. ಈ ಹಿನ್ನೆಲೆಯಲ್ಲಿ ತಮ್ಮ ಗುರು ಗಳಾದ ಎಂ.ಕೆ. ವಿಜಯಕುಮಾರ್‌ರವರಿಗೆ ತಮ್ಮ ಶ್ರದ್ಧಾ ನಮ ನವನ್ನು ಅರ್ಪಿಸಲು ನ್ಯಾಯವಾದಿ ಅನೂಪ್ ನಾಯರ್ ಕಾರ್ಕಳಕ್ಕೆ ಆಗಮಿಸಿದ್ದರು.

ಎಂ.ಕೆ. ವಿಜಯ್ ಕುಮಾರ್ ಪುತ್ರರಾದ ನ್ಯಾಯವಾದಿ ಎಂ. ಕೆ. ಸುವ್ರತ್ ಕುಮಾರ್, ಎಂ. ಕೆ. ವಿಪುಲ್ ತೇಜ್, ಸೊಸೆ ಶ್ವೇತ ವಿಪುಲ್ ತೇಜ್, ನ್ಯಾಯವಾ ದಿಗಳ ಸಂಘದ ಉಪಾಧ್ಯಕ್ಷ ಹರೀಶ್ ಅಧಿಕಾರಿ, ಪದ್ಮಪ್ರಸಾದ್ ಜೈನ್, ಹಿರಿಯ ನ್ಯಾಯವಾದಿಗಳಾದ ಜಿ. ಮುರಳೀಧರ ಭಟ್, ನ್ಯಾಯವಾದಿಗಳಾದ ಪರಿತೋಷ್ ಜೈನ್, ಕೇರಳ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಪಿ. ಬಿ. ಸುಬ್ರಮಣ್ಯಂ, ಆರ್. ಶ್ರೀಹರಿ, ಶ್ರೀಕಾಂತ್ ಜೈನ್, ಚಂದ್ರರಾಜ ಹೆಗ್ಡೆ, ಪ್ರಕಾಶ್ ರಾವ್ ಮೊದಲಾದವರು ಉಪಸ್ಥಿತರಿದ್ದರು.


ಕಿರುಸುದ್ದಿ

ತಂಬಾಕು ಬಳಕೆ ಫ್ಲೆಕ್ಸ್ ಬೋರ್ಡ್‌ಗಳ ವಿರುದ್ಧ ಕಾನೂನು ಕ್ರಮ

ಕಾಸರಗೋಡು: ಫಿಫಾ ವಿಶ್ವಕಪ್ ಫುಟ್ಬಾಲ್‌ಗೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಫುಟ್ಬಾಲ್ ಅಭಿಮಾನಿಗಳು ತಂಬಾಕು ಬಳಕೆದಾರರನ್ನು ಒಳಗೊಂಡ ಫ್ಲೆಕ್ಸ್ ಬೋರ್ಡ್‌ಗಳನ್ನು ಹಾಕಿರುವುದು ಗಮನಕ್ಕೆ ಬಂದಿದ್ದು, ಅಂತಹ ಬೋರ್ಡ್‌ಗಳನ್ನು ತೆಗೆದುಹಾಕಬೇಕು ಅಥವಾ ತಂಬಾಕು ಬಳಕೆಯ ದೃಶ್ಯಗಳನ್ನು ಮರೆಮಾಚಬೇಕು ಎಂದು ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಬಿ.ಸಂತೋಷ್ ತಿಳಿಸಿದ್ದಾರೆ. ಇಲ್ಲದಿದ್ದರೆ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾಯ್ದೆಯ ಸೆಕ್ಷನ್ 5ರ ಪ್ರಕಾರ ತಂಬಾಕು ಬಳಕೆಯನ್ನು ಉತ್ತೇಜಿಸುವ ವ್ಯಕ್ತಿಗಳು, ಕ್ಲಬ್‌ಗಳು, ಮಂಡಳಿ ಇರುವ ಆವರಣದ ಮಾಲಕರು ಮತ್ತು ಮುದ್ರಣ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಇದು ಜೈಲು ಶಿಕ್ಷೆ ಅಥವಾ ದಂಡ ವಿಧಿಸಬಹುದಾದ ಅಪರಾಧವಾಗಿದ್ದು, ಈ ನಿಟ್ಟಿನಲ್ಲಿ ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಪಠ್ಯದಲ್ಲಿ ತುರ್ತು ಪರಿಸ್ಥಿತಿ ವಿಚಾರ ಸ್ವಾಗತಾರ್ಹ

ಉಳ್ಳಾಲ: ದೇಶದ ಪ್ರಜಾಪ್ರಭುತ್ವವನ್ನೇ ಹರಣ ಮಾಡಿದ ರಾಷ್ಟ್ರೀಯ ತುರ್ತುಪರಿಸ್ಥಿತಿಯ ಕುರಿತ ವಿಚಾರವನ್ನು ಸಿಬಿಎಸ್ ಸಿಯ 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಸಮಾಜವನ್ನು ಅರಿತುಕೊಳ್ಳಿ ಭಾಗದಡಿ



ಪಾಠವಾಗಿ ಸೇರ್ಪಡೆಗೊಳಿಸಿರುವುದು ಸ್ವಾಗತಾರ್ಹ.ಅಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ಅಧಿಕಾರದ ಲಾಲಸೆಗೆ ದೇಶದ ಸಂವಿಧಾನದ ಆಶಯವನ್ನೇ ಧಿಕ್ಕರಿಸಿದ ಘೋರ ಕೃತ್ಯ ಇದಾಗಿದೆಯೆಂದು ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ವಕ್ತಾರರಾದ ಜೀವನ್ ಕುಮಾರ್ ತೊಕ್ಕೊಟ್ಟು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತುರ್ತುಪರಿಸ್ಥಿತಿ ದೇಶದ ಸಂವಿಧಾನಕ್ಕೆ ಮಾಡಿದ ನೇರ ದಾಳಿಯಾಗಿದ್ದು,ಈ ವೇಳೆ ರಾಜಕೀಯ ನಾಯಕರು, ಪತ್ರಕರ್ತರು,ಸಾಮಾಜಿಕ ನಾಯಕರನ್ನು ವಿನಾ ಕಾರಣ ಬಂಧಿಸಲಾಗಿತ್ತು.ಇದರ ವಿರುದ್ಧ ಭಾರತವಾದ್ಯಂತ ನಡೆದ ಹೋರಾಟವು ದೇಶದ ಎರಡನೇ ಸ್ವಾತಂತ್ರ್ಯ ಹೋರಾಟವಾಗಿದೆ.ಕಾಂಗ್ರೆಸ್ ಸರ್ಕಾರ ನಕಲಿ ಇತಿಹಾಸವನ್ನು ಸೃಷ್ಟಿಸಿ ಜನರ ಹಾದಿ ತಪ್ಪಿಸಿದ್ದು, ಇಂದಿನ ಯುವ ಪೀಳಿಗೆಗೆ ನೈಜ ಚರಿತ್ರೆಯ ಅರಿವು ಮೂಡಬೇಕಿದೆಯೆಂದು ಜೀವನ್ ಕುಮಾರ್ ತೊಕ್ಕೊಟ್ಟು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜುಲೈ 1 ರಿಂದ 'ವಿಬಿ-ಗ್ರಾಮ್ ಜಿ' ಯೋಜನೆ ಜಾರಿ

ಕುಶಾಲನಗರ: ಕುಶಾಲನಗರ ತಾಲೂಕಿನ ಕೂಡುಮಂಗಳೂರು ಗ್ರಾಮ ಪಂಚಾಯಿತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪರ್ಯಾಯವಾಗಿ ಜುಲೈ 1 ರಿಂದ ಜಾರಿಗೆ ಬರಲಿರುವ ಹೊಸ ಯೋಜನೆಯಾದ "ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಾರ್ ಅಂಡ್ ಆಜೀವಿಕ್ ಮಿಷನ್" ಕುರಿತ ಒಂದು ದಿನದ ತರಬೇತಿ ಕಾರ್ಯಾಗಾರ ನಡೆಯಿತು. ಕಾರ್ಯಾಗಾರದಲ್ಲಿ ಮಾಸ್ಟರ್ ಟ್ರೈನರ್‌ಗಳಾಗಿ ಭಾಗವಹಿಸಿದ್ದ ಕುಶಾಲನಗರ ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ರಾಕೇಶ್ ಮತ್ತು ಗುಡ್ಡೆಹೊಸೂರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಸುಮೇಶ್ ಅವರು ಹೊಸ ಯೋಜನೆಯ ಉದ್ದೇಶಗಳು ಹಾಗೂ ಕಾರ್ಯವಿಧಾನಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಈ ತರಬೇತಿಯಲ್ಲಿ ಕುಶಾಲನಗರ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರುಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಡಾಟಾ ಎಂಟ್ರಿ ಆಪರೇಟರ್‌ಗಳು, ಸಂಬಂಧಪಟ್ಟ ನರೇಗಾ ತಾಂತ್ರಿಕ ಸಹಾಯಕರುಗಳು ಹಾಗೂ ನರೇಗಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ಕೂಡುಮಂಗಳೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಂತೋಷ್ ಅವರು ಸ್ವಾಗತಿಸಿ, ವಂದಿಸಿದರು.

73.92 ಕೆಜಿ ಗಾಂಜಾ ನಾಶ

ಉಡುಪಿ: ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ 73.92 ಕೆಜಿ ತೂಕದ, ಅಂದಾಜು 36,29,550 ರೂ. ಮೌಲ್ಯದ ಗಾಂಜಾವನ್ನು ಕಾನೂನು ಪ್ರಕ್ರಿಯೆಯಂತೆ ಪಡುಬಿದ್ರಿ ಠಾಣಾ ವ್ಯಾಪ್ತಿಯ ಮ. ಆಯುಷ್ ಎನ್‌ವಿರೋಟೆಕ್ ಪ್ರೈ. ಲಿ. ಸಂಸ್ಥೆಯಲ್ಲಿ ನಾಶಪಡಿಸಲಾಯಿತು. ಜಿಲ್ಲಾ ಡ್ರಗ್ ಡಿಸ್ಪೋಸಲ್ ಕಮಿಟಿಯ ಮೇಲ್ವಿಚಾರಣೆಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಉಡುಪಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾ ಡ್ರಗ್ ಡಿಸ್ಪೋಸಲ್ ಕಮಿಟಿಯ ಅಧ್ಯಕ್ಷ ಹರಿರಾಮ್ ಶಂಕರ್ ನೇತೃತ್ವ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಡ್ರಗ್ ಡಿಸ್ಪೋಸಲ್ ಕಮಿಟಿಯ ಸದಸ್ಯರು ಹಾಗೂ ಕಾರ್ಕಳ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ಎಸ್. ವಿಜಯಪ್ರಸಾದ್, ಉಡುಪಿ ಉಪವಿಭಾಗದ ಪೊಲೀಸ್ ಉಪಾಧೀಕ್ಷಕ ಪ್ರಭುದೇವ ಕೆ.ಯು., ಇತರ ಪೊಲೀಸ್ ಅಧಿಕಾರಿಗಳು ಹಾಗೂ ಮ. ಆಯುಷ್ ಎನ್‌ವಿರೋಟೆಕ್ ಪ್ರೈ. ಲಿ. ಸಂಸ್ಥೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸುಳ್ಯ ಶಾಸಕರಿಂದ ಅನುದಾನ ತಾರತಮ್ಯ: ಕಡಬ ಕಾಂಗ್ರೆಸ್

ಕಡಬ: ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕ ಭಾಗೀರಥಿ ಮುರುಳ್ಯ ಅವರು ರಾಜ್ಯ ಸರ್ಕಾರ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ರೂ.25 ಕೋಟಿ ವಿಶೇಷ ಅನುದಾನದ ಹಂಚಿಕೆಯಲ್ಲಿ ತಾರತಮ್ಯ ಎಸಗಿದ್ದು, ಅನುದಾನ ದುರ್ಬಳಕೆ ಮಾಡಿದ್ದಾರೆ ಎಂದು ಕಡಬ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಭಿಲಾಷ್ ಪಿ.ಕೆ. ಆರೋಪಿಸಿದರು. ಅವರು ಶುಕ್ರವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅನುದಾನ ಹಂಚಿಕೆಯಲ್ಲಿ ಪಾರದರ್ಶಕತೆ ಇಲ್ಲದೆ ಬಿಜೆಪಿ ಮುಖಂಡರು, ಬಿಜೆಪಿ ಬೆಂಬಲಿತ ಹಾಗೂ ಸಂಘ ಸಂಸ್ಥೆಗಳ ಶಿಫಾರಸಿನ ಮೇರೆಗೆ ಅನುದಾನ ವಿತರಿಸಲಾಗುತ್ತಿದೆ. ಅಗತ್ಯವಿರುವ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ಲಕ್ಷಿಸಲಾಗಿದ್ದು, ಇದರಿಂದ ಕಡಬ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಧಕ್ಕೆಯಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕಡಬ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಕ್ಲೆವಿಯರ್ ಬೇಬಿ, ಪ್ರಧಾನ ಕಾರ್ಯದರ್ಶಿ ಸತೀಶ್ ನಾಯಕ್ ಮೆಲಿನಮನೆ, ಎಸ್‌ಸಿ ಘಟಕದ ಅಧ್ಯಕ್ಷ ಶಶಿಧರ ಬೊಟ್ಟಡ್ಕ, ಯುವ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಶಾಕಿರ್, ಸೇವಾದಳದ ಅಧ್ಯಕ್ಷ ಸುಜಿತ್ ಪಿ.ಕೆ., ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಸುಧೀರ್ ದೇವಾಡಿಗ ಮತ್ತಿತರರು ಉಪಸ್ಥಿತರಿದ್ದರು.



ಅಡ್ಡೂರು ಸಾರ್ವಜನಿಕ ಶ್ರೀ ಗಣೇಶೋತ್ಸವ ಸೇವಾ ಸಮಿತಿಯ 40ನೇ ವರ್ಷದ ಗಣೇಶೋತ್ಸವದ ಸಂದರ್ಭದಲ್ಲಿ ದೇವರಿಗೆ ಸಮರ್ಪಿಸಲಾಗುವ ಬೆಳ್ಳಿಯ ಪ್ರಭಾವಳಿಗೆ ಸಂಬಂಧಿಸಿದ ವಿಜ್ಞಾಪನ ಪ್ರತಿಯನ್ನು ಉದ್ಯಮಿ ಚಂದ್ರಹಾಸ ಶೆಟ್ಟಿ ನಾರಳ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ರವಿಶಂಕರ್ ರಾವ್ ನೂಯಿ, ವಿಶ್ವೇಶ್ವರ ಭಟ್ ಕಾಂಜಿಲಕೋಡಿ, ಹಾಗೂ ಅಧ್ಯಕ್ಷ ಯಶೋಧರ ಅಡ್ಡೂರು, ನವೀನ್ ಆಚಾರ್ಯ ಮೊದಲಾದವರು ಉಪಸ್ಥಿತರಿದ್ದರು.

ಸ್ಥಳೀಯರ ವಿರೋಧ: ಕೊಡಗಿನಿಂದ ದೂರವಾಗಲು 'ಶ್ರೀಎಂ' ನಿರ್ಧಾರ

ಮಡಿಕೇರಿ: ಧ್ಯಾನ ಕೇಂದ್ರ, ಗೋಶಾಲೆ ಮತ್ತಿತರ ಚಟುವಟಿಕೆ ಕೈಗೊಳ್ಳುವ ಉದ್ದೇಶದಿಂದ ನಾಪೋಕ್ಲು ಸಮೀಪದ ಮಲ್ಮ ಬೆಟ್ಟದ ಬಳಿ ತಾನು ಖರೀದಿಸಿರುವ 58 ಎಕರೆ ಜಾಗವನ್ನು ಮಾರಾಟ ಮಾಡಲು ಉದ್ದೇಶಿಸಿರುವುದಾಗಿ ತಿಳಿಸಿದ ಎಂ.ಮುಮ್ತಾಜ್ ಆಲಿ ಅವರು, ಜಾಗ ಖರೀದಿಗೆ ಯಾರೂ ಮುಂದೆ ಬರದಿದ್ದಲ್ಲಿ ಸರಕಾರಕ್ಕೆ ನೀಡುವುದಾಗಿ ಘೋಷಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀ ಎಂ ಎಂದೇ ಖ್ಯಾತರಾಗಿರುವ ಮುಮ್ತಾಜ್ ಆಲಿ ಅವರು, ತಾನು ಅನೇಕ ಹಿಂದೂ ದೇವಾಲಯಗಳನ್ನು ನಿರ್ಮಿಸಿದ್ದೇನೆ. ಉಪನಿಷತ್, ರಾಮಾಯಣ, ವೇದಗಳ ಬಗ್ಗೆ ಸಾಕಷ್ಟು ಮಾಹಿತಿ ಹೊಂದಿದ್ದೇನೆ. ಅವುಗಳ ಬಗ್ಗೆ ದೇಶ–ವಿದೇಶಗಳಲ್ಲಿ ಉಪನ್ಯಾಸಗಳನ್ನೂ ನೀಡುತ್ತಾ ಬಂದಿದ್ದೇನೆ. ಹೀಗಿರುವಾಗ ಮುಸ್ಲಿಂ ಹೆಸರಿದೆ ಎಂಬ ಕಾರಣಕ್ಕೆ ಸಾಮಾಜಿಕ ಜಾಲ ತಾಣಗಳಲ್ಲಿ ಅನಗತ್ಯ ಟೀಕೆ ಮಾಡುತ್ತಿರುವುದು ಬೇಸರ ತಂದಿದೆ ಎಂದು ವಿಷಾದಿಸಿದರು.

ಮಲ್ಮ ಬೆಟ್ಟದ ಬಳಿ ಜಾಗ ಖರೀದಿ ಸಂದರ್ಭ, ಧ್ಯಾನ ಕೇಂದ್ರ ಮಾಡಬಹುದು ಎಂದು ಜಾಗ ಮಾರಿದವರೇ ತನಗೆ ಸಲಹೆ ನೀಡಿ ಜಾಗ ಮಾರಾಟ ಮಾಡಿದ್ದರು. ಹೀಗಾಗಿ ತನಗೆ ಸ್ಥಳೀಯರ ಧಾರ್ಮಿಕ ಭಾವನೆಗಳಿಗೆ ಚ್ಯುತಿ ಉಂಟಾಗುವ ಬಗ್ಗೆ ತಿಳಿದಿರಲಿಲ್ಲ. ತಾನು ಅಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ನಡೆಸಲು ಜಾಗ ಖರೀದಿಸಿಲ್ಲ. ಧ್ಯಾನಕೇಂದ್ರ, ಗೋಶಾಲೆ ರೂಪಿಸುವ ಉದ್ದೇಶದಿಂದ ಮಲ್ಮಬೆಟ್ಟದಿಂದ 2.50 ಕಿ.ಮೀ. ದೂರದಲ್ಲಿ 58 ಎಕರೆ ಸುಂದರವಾದ ಜಾಗ ಖರೀದಿಸಿದ್ದೆ. ಆ ಪೈಕಿ 10 ಎಕರೆ ಜಾಗವನ್ನು ಮಾತ್ರ ಭೂಪರಿವರ್ತನೆ ಮಾಡಲು ಅರ್ಜಿ ಸಲ್ಲಿಸಿದ್ದೆ ಎಂದು ಸ್ಪಷ್ಟಪಡಿಸಿದರು.

ಗೋಷ್ಠಿಯಲ್ಲಿ ಹಾಜರಿದ್ದ ಶ್ರೀಎಂ ಅವರ ಅನುಯಾಯಿ ಲಾಲ್ ಕುಶಾಲಪ್ಪ ಮಾತನಾಡಿ, ಜಾಗ ಖರೀದಿಗೆ ಸ್ಥಳೀಯರ ವಿರೋಧವಿದ್ದರೆ ಗ್ರಾಮಸಭೆಗೆ ತಮ್ಮನ್ನು ಕರೆದು ಮಾಹಿತಿ ಪಡೆಯಬಹುದಿತ್ತು. ಸಂವಹನದ ಕೊರತೆಯಿಂದ ಇಂತಹ ವಿವಾದ ಸೃಷ್ಟಿಯಾಗಿದೆ ಎಂದು ಬೇಸರಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿದ್ದಂಡ ಬೋಪಣ್ಣ ಹಾಜರಿದ್ದರು.

'ಮೇಕ್ ಇನ್ ಇಂಡಿಯಾ', 'ಮೇಕ್ ಫಾರ್ ದಿ ವರ್ಲ್ಡ್'ನ ದೃಷ್ಟಿಕೋನ

ಆರ್ಥಿಕ ಸಮೃದ್ಧಿಗೆ ಅತ್ಯಗತ್ಯ

ಹೊಸದಿಲ್ಲಿ : ಭಾರತದ ಉತ್ಪಾದನಾ ವಲಯವನ್ನು ಅದರ ಸ್ಥಾಪಿತ ಸೇವಾ ಆರ್ಥಿಕತೆಯ ಜೊತೆಗೆ ಬಲಪಡಿಸುವ ಅಗತ್ಯವಿದೆ ಎಂದಿರುವ ಯುವ ಚಿಂತಕ ಅಜಯ್ ಪುರುಷೋತ್ತಮ್ ಶೆಟ್ಟಿ ಅವರು,' ಮೇಕ್ ಇನ್ ಇಂಡಿಯಾ 'ಮತ್ತು ' ಮೇಕ್ ಫಾರ್ ದಿ ವರ್ಲ್ಡ್'ನ ದೃಷ್ಟಿಕೋನವನ್ನು ಒತ್ತಿ ಹೇಳಿದರು. ಆಮದು ಅವಲಂಬನೆಯನ್ನು ಕಡಿಮೆ ಮಾಡುವುದು, ರಫ್ತು ಹೆಚ್ಚಿಸುವುದು ಮತ್ತು ದೇಶದೊಳಗೆ ಹೆಚ್ಚಿನ ಮೌಲ್ಯವನ್ನು ಸೃಷ್ಟಿಸುವುದು ಭಾರತದ ದೀರ್ಘಕಾಲೀನ ಆರ್ಥಿಕ ಸಮೃದ್ಧಿಗೆ ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು.

ರಾಜಧಾನಿ ದಿಲ್ಲಿಯ ರಾಜ್‌ಘಾಟ್‌ನ ಗಾಂಧಿ ದರ್ಶನ್ ಬಳಿಯ ಸತ್ಯಾಗ್ರಹ ಮಂಟಪ್‌ನಲ್ಲಿ ನಡೆದ ಅಣುಕು ಯುವ ಸಂಸತ್–'ವಿಚಾರ್ ಯಾತ್ರಾ 2026'ರಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಅಜಯ್ ಅವರು ಈ ಸಂದರ್ಭ ದೇಶದೆಲ್ಲೆಡೆಯಿಂದ ಬಂದ ವಿದ್ಯಾರ್ಥಿಗಳು, ಯುವ ನಾಯಕರು ಮತ್ತು ನಿಯೋಗಿಗಳ ಜೊತೆ ಸಂವಾದ ನಡೆಸಿದರು. ನಾಯಕತ್ವ, ಆವಿಷ್ಕಾರ ಮತ್ತು ಆರ್ಥಿಕ ಬೆಳವಣಿಗೆ ಕುರಿತಂತೆ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ರಾಷ್ಟ್ರ ನಿರ್ಮಾಣದಲ್ಲಿ ತಂತ್ರಜ್ಞಾನದ ಮಹತ್ವವನ್ನು ಉಲ್ಲೇಖಿಸಿದ ಅವರು, ಈ



ತಂತ್ರಜ್ಞಾನ ಸುಧಾರಣೆಯು ಮುಂದಿನ ಪೀಳಿಗೆಯನ್ನು ಬರಿಯ ನಿಷ್ಕ್ರಿಯ ಗ್ರಾಹಕರನ್ನಾಗಿಸುವ ಬದಲಿಗೆ ರಚನಾತ್ಮಕ ಚಿಂತನೆಯ , ನವೀನ ಆವಿಷ್ಕಾರಗಳು ಮತ್ತು ಸಮಸ್ಯೆ ಪರಿಹಾರಕಾರರನ್ನಾಗಿಸಿ ಸಬಲೀಕರಣಗೊಳಿಸು ವಂತಾಗಬೇಕು. ಉತ್ತಮ ಶಿಕ್ಷಣ,ನಾವೀನ್ಯತೆ , ಶಿಸ್ತು, ಅನುಶಾಸನ ಮತ್ತು ಸದುದ್ದೇಶಗಳಿಂದ ಬೆಂಬಲಿತವಾದಲ್ಲಿ ಭಾರತೀಯ ಜನಸಂಖ್ಯೆಯ ಲಾಭವು ದೇಶಕ್ಕೆ ಅತ್ಯಂತ ಬಲಿಷ್ಠ ಶಕ್ತಿಯ ಕೊಡುಗೆಯಾದೀತು ಎಂದರು.

ಇಂಧನ ಭದ್ರತೆಯ ಮಹತ್ವದ ಬಗ್ಗೆ ಮಾತನಾಡಿದ ಅವರು, ಸೂರ್ಯನ ಬೆಳಕು, ಪರಮಾಣು ಇಂಧನದೊಂದಿಗೆ ನವೀಕರಿಸಬಹುದಾದ ಇಂಧನ ಮೂಲ ಸೇರಿದಂತೆ ಸಮತೋಲಿತ ಇಂಧನ ಕಾರ್ಯತಂತ್ರದ ಅಗತ್ಯವಿದೆ.ಭಾರತ ಇತ್ತೀಚೆಗೆ ಕಲ್ಪಾಕಮ್‌ನಲ್ಲಿ ಪ್ರೊಟೋಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಮೂಲಕ ಮಹತ್ವದ ಸಾಧನೆಗೈದಿರುವುದನ್ನು ಉಲ್ಲೇಖಿಸಿದ ಅವರು, ಇದೊಂದು ಭಾರತದ ಬೆಳೆಯುತ್ತಿರುವ ವೈಜ್ಞಾನಿಕ ಸಾಮರ್ಥ್ಯಕ್ಕೆ ನಿದರ್ಶನವಾಗಿದೆ. ಹಾಗೆಯೇ ಇದು ದೀರ್ಘಕಾಲೀನ ಇಂಧನ ಸುಭದ್ರತೆಗೆ ದೇಶದ ಬದ್ಧತೆಯನ್ನೂ ಸಾರುತ್ತದೆ ಎಂದರು.

ಸ್ವದೇಶಿ ಬಳಕೆಯಿಂದ ದೇಶಹಿತ ಭಾರತೀಯ ಉದ್ಯಮ, ಸ್ಥಳೀಯ ಕೈಗಾರಿಕೆಗಳು, ನವೀನ ಆವಿಷ್ಕಾರ, ಉದ್ಯೋಗ ಸೃಷ್ಟಿಯನ್ನು ಬಲಪಡಿಸಬೇಕಾದರೆ ನಾವು ಸ್ವದೇಶಿ ವಸ್ತುಗಳನ್ನೇ ಬಳಸಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಸಂಕಲ್ಪ ತೊಡಬೇಕಿದೆ.ಯುವನಾಗರಿಕರು ಉದ್ಯಮ, ಬಳಕೆ, ಪ್ರವಾಸೋದ್ಯಮ ಮತ್ತು ಉದ್ಯಮಶೀಲತೆಯಲ್ಲಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ತಮ್ಮ ಕೊಡುಗೆ ನೀಡುವಂತಾಗಬೇಕು . ನಮ್ಮ ಸಾಂಸ್ಕೃತಿಕ ಮೌಲ್ಯಗಳು, ಆಧ್ಯಾತ್ಮಿಕತೆ ಮತ್ತು ನಾಯಕತ್ವದಲ್ಲಿ ಶೀಲ ಮತ್ತು ಚಾರಿತ್ರ್ಯದ ಪಾತ್ರ ಮಹತ್ವದ್ದು . ಆರ್ಥಿಕ ಪ್ರಗತಿ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಆಧುನಿಕತೆಗಳು ವ್ಯಕ್ತಿಯ ಸಮಗ್ರತೆ, ಹೊಣೆಗಾರಿಕೆ ಮತ್ತು ಸಾರ್ವಜನಿಕ ಸೇವಾ ಬದ್ಧತೆಗಳಿಂದ ಕೂಡಿದ್ದರೆ ಮಾತ್ರವೇ ಅರ್ಥಪೂರ್ಣವಾಗಲು ಸಾಧ್ಯ ಎಂದರು.

ಸಮಾರಂಭವು ಭಗವಾನ್ ವೇದವ್ಯಾಸರಿಂದ ರಚಿತವಾದ ಸೂರ್ಯಮಂತ್ರದ ಪಠಣ ಮತ್ತು ಭಾನು ಸಪ್ತಮಿಯ ಮಹತ್ವದ ಚಿಂತನೆಗಳೊಂದಿಗೆ ಆರಂಭಗೊಂಡಿತು. ಭಾರತೀಯ ಯುವಜನತೆ ಬುದ್ಧಿವಂತಿಕೆ, ಪ್ರಜ್ಞಾವಂತಿಕೆ, ಸ್ಥಿತಿಸ್ಥಾಪಕತ್ವ, ವ್ಯಕ್ತಿತ್ವ ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸುವ ಮನೋಭಾವದಿಂದ ಆಶೀರ್ವದಿಸಲ್ಪಡಲಿ ಎಂದು ಪ್ರಾರ್ಥನೆಗಳನ್ನು ಸಲ್ಲಿಸಲಾಯಿತು.

ವಿಚಾರಯಾತ್ರಾದ ಮುಖ್ಯ ಸಲಹಾಗಾರ ಸುಮಂತ್ ಕುಮಾರ್ ಅವರು ಅಜಯ್ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಯುವಜನರಲ್ಲಿ ರಾಷ್ಟ್ರ ನಿರ್ಮಾಣ, ಹೊಣೆಗಾರಿಕೆ ಕುರಿತಂತೆ ಜಾಗೃತಿ ಮೂಡಿಸುವ ಈ ಕಾರ್ಯಕ್ರಮಕ್ಕೆ ಯುವನೀತಿ ಚಾರಿಟೇಬಲ್ ಟ್ರಸ್ಟ್, ಯುವ ಇವೆಂಟ್ಸ್ ಮತ್ತು ದಿಲ್ಲಿ ಪ್ರವಾಸೋದ್ಯಮ ವಿಭಾಗಗಳು ಬೆಂಬಲ ನೀಡಿದ್ದವು. ಸಮಾರಂಭದಲ್ಲಿ ವಿವಿಧ ಚಿಂತಕರು, ತಜ್ಞರು, ವೃತ್ತಿಪರರು ಪಾಲ್ಗೊಂಡಿದ್ದು, ಕಾರ್ಯಕ್ರಮವು ರಚನಾತ್ಮಕ ಸಂವಾದ, ಚರ್ಚೆ, ಚಿಂತನೆಗಳ ವಿನಿಮಯಕ್ಕೆ ವೇದಿಕೆಯನ್ನು ಒದಗಿಸಿತು.

ನಾಳೆ ಕುಂಭಾಶಿಯಲ್ಲಿ ಕುಂದಾಪುರ ತಾ. ಕನ್ನಡ ಸಾಹಿತ್ಯ ಸಮ್ಮೇಳನ

ಕುಂದಾಪುರ : ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕುಂದಾಪುರ ತಾಲೂಕು ಘಟಕದ ಆಶ್ರಯದಲ್ಲಿ ಕುಂದಾಪುರ ತಾಲೂಕಿನ 20 ನೇ ಕನ್ನಡ ಸಾಹಿತ್ಯ ಸಮ್ಮೇಳನ –2026 'ನುಡಿ ಬೆಳಕು' ಕುಂಭಾಶಿ ಆನೆಗುಡ್ಡೆಯ ಶ್ರೀ ವಿನಾಯಕ ಸಭಾಂಗಣದಲ್ಲಿ ಜೂ.28 ರಂದು ನಡೆಯಲಿದೆ.

ಕುಂದಾಪುರ ತಾಲೂಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಉಮೇಶ್ ಪುತ್ರನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿರಿಯ ಪತ್ರಕರ್ತ, ಲೇಖಕ ಯು.ಎಸ್. ಶೆಣೈ ಸಮ್ಮೇಳನಾಧ್ಯಕ್ಷತೆ ವಹಿಸಲಿದ್ದಾರೆ. ಸಮ್ಮೇಳನವು ಬೆಳಗ್ಗೆ 8 ಗಂಟೆಗೆ ರಾಷ್ಟ್ರಧ್ವಜಾರೋಹಣದೊಂದಿಗೆ ಆರಂಭಗೊಂಡು ಸಂಜೆ 6 ರವರೆಗೆ ನಡೆಯಲಿದೆ. ಬೆಳಗ್ಗೆ 10 ಕ್ಕೆ ಲೇಖಕ ಡಾ. ನರೇಂದ್ರ ರೈ ದೇರ್ಲ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ಜಿಲ್ಲಾಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಆಶಯನುಡಿಗಳನ್ನಾಡಲಿದ್ದಾರೆ ಎಂದರು. ಸಂಸದ ಕೋಟ ಶ್ರೀನಿವಾಸ್ ಪೂಜಾರಿ, ಶಾಸಕ ಕಿರಣ್ ಕುಮಾರ್ ಕೊಡ್ಗಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಎಸ್‌ಪಿ ಹರಿರಾಮ್ ಶಂಕರ, ಗಣ್ಯರು ಭಾಗವಹಿಸಲಿದ್ದಾರೆ.

ಮಾಜಿ ಸಮ್ಮೇಳನಾಧ್ಯಕ್ಷ ಕುಂಭಾಸಿಯ ವಿಶ್ವಂಭರ ಉಪಾಧ್ಯಾಯ ಜನ್ಮ ಶತಮಾನದ ಪ್ರಯುಕ್ತ ಸಂಸ್ಮರಣಾ ಪುರಸ್ಕಾರವನ್ನು ಖ್ಯಾತ ಗಮಕಿ, ಲೇಖಕ ಡಾ. ರಾಘವೇಂದ್ರ ರಾವ್ ಅವರಿಗೆ ಪುರಸ್ಕಾರ ಪ್ರದಾನ ನಡೆಯಲಿದೆ.

ಸಾಧಕರಿಗೆ ಸಮ್ಮಾನ :

ವಿವಿಧ ಕ್ಷೇತ್ರದ ಸಾಧಕರಾದ ವೈದ್ಯ – ಡಾ। ಬಿ.ವಿ. ಉಡುಪ, ಯಕ್ಷಗಾನ – ವೆಂಕಟೇಶ್ ವೈದ್ಯ ತೆಕ್ಕಟ್ಟೆ, ಕೃಷಿ – ಶಾಮ ಕಾವ್ರಾಡಿ, ಶಿಕ್ಷಣ – ಶೇಷಗಿರಿ ಗೋಟ, ಐರಿನ್ ಸಾಲಿನ್ಸ್, ಯೋಗ – ರಘುವೀರ್ ನಗರ್ಕರ್, ಮಹಿಳಾ ಸಬಲೀಕರಣ – ರಾಧಾದಾಸ್ ಕುಂಭಾಶಿ, ಕುಂಚ ಕಲೆ– ಕೆ.ಕೆ. ರಾಮನ್ ಕುಂದಾಪುರ, ಭಜನೆ– ಶ್ರೀರಾಮ ಭಜನಾ ಮಂಡಳಿ ಬೀಜಾಡಿ – ಗೋಪಾಡಿ, ಹಿರಿಯ ಸೂಲಗಿತ್ತಿ ಲಕ್ಷ್ಮೀ ಪೂಜಾರ್ತಿ ಬಸ್ರೂರು, ಸಮಾಜ ಸೇವೆ – ಕೊರ್ಗಿ ವಿಠ್ಠಲ ಶೆಟ್ಟಿ ಕುಂಭಾಶಿ, ಸಂಘಟನೆ – ತೆಕ್ಕಟ್ಟೆ ಫ್ರೆಂಡ್ಸ್, ಸಾರ್ವಜನಿಕ ಸೇವೆ – ನಾರಾಯಣ ಭಂಡಾರಿ ಬೀಜಾಡಿ, ಕೊರಗರ ಶ್ರೇಯೋಭಿವೃದ್ಧಿ– ಮಕ್ಕಳ ಮನೆ ಕುಂಭಾಶಿ, ಕುಸುರಿ ಕಲೆ–ವೆಂಕಟೇಶ್ ಆಚಾರ್ಯ, ವಿಶಿಷ್ಟ ಸೇವೆ–ಸಿರಾಜ್ ಕುಂದಾಪುರ ಅವರನ್ನು ಉದ್ಯಮಿ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜ ಸಮ್ಮಾನಿಸಲಿದ್ದಾರೆ.

ಕಸಾಪ ಕುಂದಾಪುರ ತಾಲೂಕು ಗೌರವ ಕಾರ್ಯದರ್ಶಿಗಳಾದ ದಿನಕರ ಆರ್.ಶೆಟ್ಟಿ ಮತ್ತು ಅಕ್ಷತಾ ಗಿರೀಶ ಉಪಸ್ಥಿತರಿದ್ದರು.

ಮೂವತ್ತೆರಡರ ಹರೆಯದಲ್ಲಿ ಅಡಿಗಾಸ್ ಯಾತ್ರಾ ಸಂಸ್ಥೆ

ಪ್ರವಾಸೋದ್ಯಮದಲ್ಲಿ ವಿಶ್ವಾಸಾರ್ಹ ಹೆಸರು

ಅಡಿಗಾಸ್ ಯಾತ್ರಾ

ಸತತ ಪಯತ್ನ, ಕಠಿಣ ಪರಿಶ್ರಮ ಹಾಗೂ ಹೊಸತನ್ನು ಅಳವಡಿಸಿಕೊಂಡು ಅದನ್ನು ಜಾರಿಗೊಳಿಸುವುದು ಪ್ರತಿ ಉದ್ಯಮದ ಯಶಸ್ಸಿನ ಕೀಲಿ ಕೈ. ಆದರಲ್ಲೂ, ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ, ದಿನಕ್ಕೊಂದು ಹೊಸ ಆವಿಷ್ಕಾರದ ಪರ್ವಕಾಲದಲ್ಲಿ, ನಿರಂತರವಾಗಿ, ವಿಭಿನ್ನವಾಗಿ ಯೋಜನೆಗಳನ್ನು ಮೈಗೂಡಿಸಿಕೊಂಡು ಮುಂಚೂಣಿಯಲ್ಲಿ ನಿಲ್ಲಬಲ್ಲ ಸಂಸ್ಥೆಗಳಲ್ಲೊಂದು ಶ್ರೀಯುತ ಕೆ. ನಾಗರಾಜ್ ಅಡಿಗರ "ಕನಸಿನ ಕೂಸು " ಅಡಿಗಾಸ್ ಯಾತ್ರಾ / ಅಡಿಗಾಸ್ ವರ್ಲ್ಡ್ ಸಂಸ್ಥೆ. ಸಂಸ್ಥೆಗೀಗ 32 ರ ಹರೆಯ.



ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯ, ಕುಂದಾಪುರ ತಾಲ್ಲೂಕಿನ ಕಟ್ಕೆರೆ ಅಡಿಗರ ಹುಟ್ಟೂರು.

1994 ರಲ್ಲಿ ಟ್ರಾವೆಲ್ಸ್ ಉದ್ಯಮವನ್ನು ಆರಂಭಿಸಿ ಮೊತ್ತ ಮೊದಲು ನೇಪಾಳ ಪ್ರವಾಸಕ್ಕೆ ಉತ್ತರ ಕರ್ನಾಟಕದಿಂದ 22 ಜನರನ್ನು ಕರೆದೊಯ್ದಿದ್ದು ಮೊದಲ ನೇಪಾಳ ಪ್ರವಾಸ ಯಶಸ್ವಿಯಾಗಿತ್ತು. ಅಲ್ಲಿಂದ ಅಡಿಗರು ನಿರಂತರವಾಗಿ ಹೊಸ ಹೊಸ ಪ್ರಯತ್ನಗಳನ್ನು, ಸ್ಥಳಗಳನ್ನು ಪ್ರವಾಸೋದ್ಯಮದಲ್ಲಿ ಪರಿಚಯಿಸಿ ಅದನ್ನು ಯಶಸ್ವಿಗೊಳಿಸುವಲ್ಲಿ ಅವರ ಪರಿಶ್ರಮ, ಸತತ ಅಧ್ಯಯನ, ವಿಶ್ವಾಸಾರ್ಹತೆ ಸರಿಸಾಟಿಯಿಲ್ಲದ್ದು.

ಅಡಿಗಾಸ್ ಸಂಸ್ಥೆಯು ಪ್ರವಾಸಿಗರ / ಯಾತ್ರಿಕರ ಅಭಿರುಚಿ ಹಾಗೂ ಬೇಡಿಕೆಗೆ ಅನುಗುಣವಾಗಿ 500ಕ್ಕೂ ಹೆಚ್ಚು ಪ್ರವಾಸಗಳನ್ನು ದೇಶಿಯ, ಅಂತರ ರಾಷ್ಟ್ರೀಯ, ಗ್ರಾಹಕಾನುಕೂಲಿತ ಹಾಗೂ ಮಧುಚಂದ್ರ ಪ್ರವಾಸಗಳು ಯೋಜಿಸಿದೆ.

ಅಂತರ ರಾಷ್ಟ್ರೀಯ ಪ್ರವಾಸಗಳಲ್ಲಿ ಯುರೋಪ್, ಯುಕೆ, ಆಸ್ಟ್ರೇಲಿಯಾ, ದುಬೈ, ಇಂಡೋನೇಷಿಯಾ, ಸಿಂಗಾಪುರ್, ಮಲೇಷಿಯಾ, ಥೈಲ್ಯಾಂಡ್, ಬಾಲಿ, ವಿಯಟ್ನಾಮ್, ಕಾಂಬೋಡಿಯಾ, ಹಾಂಕಾಂಗ್ –ಮಕಾವು, ಸ್ಕಾಂಡಿನೇವಿಯನ್ ಕಂಟ್ರಿಸ್ ಜಪಾನ್, ಶ್ರೀಲಂಕಾ, ನೇಪಾಳ ಮತ್ತು ಭೂತಾನ್ ಪ್ರವಾಸಗಳು ಅಪಾರ ಜನ ಮನ್ನಣೆಯನ್ನು ಗಳಿಸಿವೆ. ಬಹುತೇಕ ಪ್ರವಾಸಿಗರಿಗೆ ವಿದೇಶಿ ಪ್ರವಾಸಕ್ಕೆ ಅಡಿಗಾಸ್ ಮೊದಲ ಆಯ್ಕೆಯಾಗಿರುತ್ತದೆ.

ನೂತನ ಪ್ರಯೋಗಗಳಿಗೆ ಸದಾ ಮುಕ್ತವಾಗಿರುವ ಅಡಿಗಾಸ್ ಈ ಬಾರಿ Domestic Fixed Departures ಎನ್ನುವ ಯೋಜನೆಯಡಿ ಭಾರತದಾದ್ಯಂತ ಪ್ರಸಿದ್ಧ ಪ್ರವಾಸಿ ತಾಣಗಳಿಗೆ ಪ್ರತಿಷ್ಠಿತ ಪಂಚತಾರ ಹೋಟೆಲ್ ಹಾಗೂ ರೆಸಾರ್ಟ್‌ಗಳಲ್ಲಿ ವಸತಿ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ, ನಿಖರ ಮಾಹಿತಿಯನ್ನೊಳಗೊಂಡ ಕಾರ್ಯಕ್ರಮ ಪಟ್ಟಿ, ಮುಂಚಿತವಾಗಿ ಕಾದಿರಿಸಿದ ಸುಸಜ್ಜಿತ ಹೋಟೆಲ್‌ಗಳಲ್ಲಿ ಉಟೋಪಹಾರ, ಸ್ಥಳೀಯ ಗೈಡ್‌ಗಳ ಸೌಲಭ್ಯವಿದ್ದು, ನಿಮ್ಮ ಪ್ರವಾಸವು ಸುಖಕರವಾಗಿರುತ್ತದೆ.ದೇಶಿಯ ಪ್ರವಾಸಗಳಲ್ಲಿ ಅಡಿಗಾಸ್ ಮೊದಲ ಆಯ್ಕೆಯಾಗಿರುತ್ತದೆ.

CUTOMISED TOURS

ನಿಮ್ಮ ಆಯ್ಕೆಯ ದೇಶಿಯ ಅಥವಾ ವಿದೇಶಿ ಪ್ರವಾಸಿ ತಾಣಕ್ಕೆ, ನೀವು ಇಚ್ಛಿಸಿದ ದಿನಾಂಕದಲ್ಲಿ, ನಿಮ್ಮ ಆದಾಯಕ್ಕನುಗುಣವಾಗಿ ಪಂಚತಾರಾ ಸೌಲಭ್ಯಗಳೊಂದಿಗೆ , ವ್ಯವಸ್ಥೆ ಮಾಡುವ ಸಾಮರ್ಥ್ಯ ಅಡಿಗಾಸ್ ಸಂಸ್ಥೆ ಹೊಂದಿದೆ.. ಹೀಗೆ 500 ಕ್ಕೂ ಮೀರಿದ ವಿಭಿನ್ನ, ವೈವಿಧ್ಯಮಯ ಪ್ರವಾಸಗಳ ಆಯ್ಕೆಯಿಂದ ಅಡಿಗಾಸ್ ಇಂದು ಕರ್ನಾಟಕದ ಮನೆಮಾತಾಗಿದೆ.

ವಿಶ್ವಾಸ ಮತ್ತು ನಂಬಿಕೆ ಎಂಬ ಎರಡು ಆಧಾರ ಸ್ತಂಭಗಳ ಮೇಲೆ ನಿಂತಿರುವ ಪ್ರವಾಸೋದ್ಯಮ ಕ್ಷೇತ್ರದಲ್ಲಿ 30 ವರ್ಷಗಳಿಂದ ತೊಡಗಿಸಿಕೊಂಡಿರುವ ಅಡಿಗಾಸ್ ಸಂಸ್ಥೆ ಅಪಾರ ಜನ ಮನ್ನಣೆಯನ್ನು ಗಳಿಸಿದೆ. ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯದ " ಅನುಭವಿ ಸೇವಾ ಪೂರೈಕೆದಾರ ", ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ, ಸತತ 4 ವರ್ಷಗಳಿಂದ ಅತ್ಯುತ್ತಮ ಪ್ರವಾಸಿ ಸಂಸ್ಥೆ ಎಂಬ ಹೆಗ್ಗಳಿಕೆ ಮತ್ತು ಪ್ರಶಸ್ತಿ, ಇಕನಾಮಿಕ್ಸ್ ಟೈಮ್ಸ್‌ನಿಂದ ಉತ್ತಮ ಪ್ರವಾಸಿ ಸಂಸ್ಥೆ ಎಂಬ ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಸಂಸ್ಥೆಯ ಯಶಸ್ಸಿಗೆ ಹಿಡಿದ ಕೈಗನ್ನಡಿ.ಆಸಕ್ತರು ಹೆಚ್ಚಿನ ಮಾಹಿತಿಗೆ ಅಡಿಗಾಸ್ ಯಾತ್ರಾವನ್ನು ಸಂಪರ್ಕಿಸಿ:

08026616678/ 7022259008/ 9449478944. website : www.adigasyatra.com

ಬಿ.ಜೆ.ಪಿ. ದ.ಕ. ಜಿಲ್ಲಾ ಕಾನೂನು ಪ್ರಕೋಷ್ಠ

ನೂತನ ಪದಾಧಿಕಾರಿಗಳ ಪದಗ್ರಹಣ



ಮಂಗಳೂರು: ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲಾ ಕಾನೂನು ಪ್ರಕೋಷ್ಠದ ನೂತನ ಪದಾಧಿಕಾರಿಗಳ ಪದಗ್ರಹಣವು ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಶುಕ್ರವಾರ ನಡೆಯಿತು.

ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಕೋಷ್ಠದ ಸಂಯೋಜಕ ಸುಧೀರ್ ಶೆಟ್ಟಿ ಕಣ್ಣೂರು ಅತಿಥಿಯಾಗಿದ್ದರು. ವಿಧಾನ ಪರಿಷತ್ ಮಾಜಿ ಸದಸ್ಯ ಕೆ. ಮೋನಪ್ಪ ಭಂಡಾರಿ ಮಾತನಾಡಿ, ಕಾನೂನು ಪ್ರಕೋಷ್ಠ ಬೆಳೆದು ಬಂದ ದಾರಿಯನ್ನು ತಿಳಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಜಿಲ್ಲಾ ಪ್ರಕೋಷ್ಠದ ಸಹ ಸಂಯೋಜಕ ಪ್ರಸನ್ನ ದರ್ಬೆ, ಓಬಿಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮಹೇಶ್ ಜೋಗಿ, ಕೆ.ಸುಧಾಕರ ಜೋಷಿ ಉಪಸ್ಥಿತರಿದ್ದರು.

ಕಾನೂನು ಪ್ರಕೋಷ್ಠದ ನೂತನ ಜಿಲ್ಲಾ ಸಮಿತಿ ಸದಸ್ಯರನ್ನು ಹಾಗೂ ಮಂಡಲ ಸಂಚಾಲಕರು ಮತ್ತು ಸಹ ಸಂಚಾಲಕರನ್ನು ಜಿಲ್ಲಾ ಸಂಚಾಲಕ ಶ್ರೀಧರ ಶೆಟ್ಟಿ ಪುಳಿಂಚ ಘೋಷಣೆ ಮಾಡಿದರು. ನೂತನ ಜಿಲ್ಲಾ ಸಮಿತಿ ಸದಸ್ಯರಾಗಿ ಪುರುಷೋತ್ತಮ ಭಟ್, ಎನ್. ನರಸಿಂಹ ಹೆಗ್ಡೆ, ಪುರಂದರ ಶೆಟ್ಟಿ ಬಲ್ಯ, ವೇಣು ಕುಮಾರ್, ಶ್ರೀಧರ್ ಸುವರ್ಣ, ಸಂದೀಪ್ ವಳಲಂಬೆ, ಅಕ್ಷತಾ ಅವರನ್ನು ಘೋಷಣೆ ಮಾಡಲಾಯಿತು. ಮಂಡಲದ ಸಂಚಾಲಕರು ಮತ್ತು ಸಹ ಸಂಚಾಲಕರನ್ನಾಗಿ ಪ್ರಮುಖರಾದ ಶಶಿಕುಮಾರ್ ಮೂಲ್ಕಿ, ಶುಕರಾಜ್ ಎಸ್. ಕೊಟ್ಟಾರಿ, ಶಿವರಾಜ್ ಶೆಟ್ಟಿ, ಚಂದ್ರಹಾಸ್ ಕೊಟ್ಟಾರಿ, ದಿನೇಶ್ ಎನ್., ಬಾಲಕೃಷ್ಣ ಎ. ಉಳ್ಳಾಲಬೈಲ್, ಅಭಿಲಾಷ್ ಶಾಸ್ತ್ರಿ, ವೀರೇಂದ್ರ ಎಂ. ಸಿದ್ದಕಟ್ಟೆ, ರಮೇಶ್ ಕೆ.ಮಠದಮೂಲೆ, ಕೃಷ್ಣಪ್ರಸಾದ್ ನಡ್ಸಾರ್, ಮಹೇಶ್ ಕೆ.ಸವಣೂರು, ಸೌಮ್ಯ ಪಿ., ಯತೀಶ್ ಶೆಟ್ಟಿ ಪಣೆಕ್ಕರ, ಚೇತನ್ ಕುಮಾರ್ ಶೆಟ್ಟಿ, ಗೋವಿಂದರಾಜ್, ರವೀಂದ್ರನಾಥ್ ರೈ, ಶಶಿಕುಮಾರ್ ಕಲ್ಲೂರಾಯ, ಸಂದೀಪ್ ಮದುವೆಗದ್ದೆ ಅವರನ್ನು ಘೋಷಣೆ ಮಾಡಲಾಯಿತು.

ಜಿಲ್ಲಾ ಸಹಸಂಚಾಲಕ ಪ್ರಮೋದ್ ಪೂಜಾರಿ ಕೆರ್ವಾಶೆ ಸ್ವಾಗತಿಸಿದರು. ಶ್ರೀಧರ್ ಸುವರ್ಣ ವಂದಿಸಿದರು. ಸಂದೀಪ್ ವಳಲಂಬೆ ನಿರೂಪಿಸಿದರು.

ಕೃಷ್ಣಮಠದ ರಾಜಾಂಗಣದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ರಾಜ್ಯದ 1200 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಸಾಧನೆಗೈದ ವಿದ್ಯಾರ್ಥಿಗಳು ದೇಶದ ದೊಡ್ಡ ಸಂಪನ್ಮೂಲ

ಉಡುಪಿ: ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90 ರಿಂದ 95ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ, ಸಾಧನೆಗೈದ ವಿದ್ಯಾರ್ಥಿಗಳು ಕೇವಲ ತಮ್ಮ ಕುಟುಂಬ ಅಥವಾ ಊರಿಗೆ ಕೀರ್ತಿ ತಂದಿಲ್ಲ. ಬದಲಿಗೆ ಈ ದೇಶದ ದೊಡ್ಡ ಸಂಪನ್ಮೂಲವಾಗಿದ್ದಾರೆ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಹೇಳಿದರು.

ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ಶೇ. 90 ಕ್ಕಿಂತ ಹೆಚ್ಚು ಅಂಕಗಳಿಸಿದ ರಾಜ್ಯದ 1200 ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಬೃಹತ್ ಪ್ರತಿಭಾ ಪುರಸ್ಕಾರ ವಿತರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೊಬೈಲ್ ಬಿಟ್ಟರೆ ಸೂಪರ್ ಕಂಪ್ಯೂಟರ್

ತಮ್ಮ ಭಾಷಣದಲ್ಲಿ ಪಿ.ಜಿ.ಆರ್. ಸಿಂಧ್ಯಾ



ಅವರು, '8 ರಿಂದ 13 ವರ್ಷದೊಳಗಿನ ಮಕ್ಕಳು ಕೇವಲ ಒಂದು ತಿಂಗಳ ಕಾಲ ಮೊಬೈಲ್ ಹಾಗೂ ಟಿವಿಯಿಂದ ದೂರವಿದ್ದು, ನಿರಂತರ ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡರೆ ಅವರ ಮೆದುಳು ಸೂಪರ್ ಕಂಪ್ಯೂಟರ್‌ನಂತೆ ಕೆಲಸ ಮಾಡಲು ಆರಂಭಿಸುತ್ತದೆ. ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಕೇವಲ ಪಠ್ಯ ಶಿಕ್ಷಣಕ್ಕೆ ಸೀಮಿತವಾಗಿಲ್ಲ. ಅದು ಪರಿಸರ ಜ್ಞಾನ, ಸ್ವಚ್ಛತೆ, ಪ್ರಾಣಿ–ಸಸ್ಯಗಳ ಸಂರಕ್ಷಣೆ ಹಾಗೂ ಮಣ್ಣು–ನೀರಿನ ಉಳಿತಾಯದಂತಹ ಆತ್ಮಮೌಲ್ಯ ಜೀವನ ಮೌಲ್ಯಗಳನ್ನು ಮಕ್ಕಳಿಗೆ ಬಾಲ್ಯದಲ್ಲೇ ಕಲಿಸಿಕೊಡುತ್ತದೆ" ಎಂದರು.

ಪರ್ಯಾಯ ಶೀರೂರು ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಸಮಾರಂಭವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

> ಸಾಧನೆಗೈದ ವಿದ್ಯಾರ್ಥಿಗಳು ಕೇವಲ ತಮ್ಮ ಕುಟುಂಬ ಅಥವಾ ಊರಿಗೆ ಕೀರ್ತಿ ತಂದಿಲ್ಲ. ಬದಲಿಗೆ ಈ ದೇಶದ ದೊಡ್ಡ ಸಂಪನ್ಮೂಲವಾಗಿದ್ದಾರೆ.
> ■ ಪಿ.ಜಿ.ಆರ್. ಸಿಂಧ್ಯಾ

ಇದೇ ವೇಳೆ ವಿದ್ಯಾರ್ಥಿಗಳಿಗೆ ಇರುವ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡಿದ ಅವರು, ಕಾಲೇಜು ವಿಭಾಗದ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ರಾಷ್ಟ್ರಪತಿ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ, ಅವರಿಗೆ ಎಂಬಿಬಿಎಸ್, ಇಂಜಿನಿಯರಿಂಗ್, ಐಎಎಸ್ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ರೈಲ್ವೆ ಇಲಾಖೆ, ಪೊಲೀಸ್ ಮತ್ತು ರಕ್ಷಣಾ ಇಲಾಖೆಗಳ ಉದ್ಯೋಗ ನೇಮಕಾತಿಯಲ್ಲೂ ವಿಶೇಷ ಮೀಸಲಾತಿ ಹಾಗೂ ಹೆಚ್ಚಿನ ಆದ್ಯತೆ ದೊರೆಯಲಿದೆ" ಎಂದು ತಿಳಿಸಿದರು.

ಸಮಾರಂಭದಲ್ಲಿ ಕಬ್ ಮತ್ತು ಬುಲ್ ಬುಲ್ ಮಕ್ಕಳ ಅತ್ಯುನ್ನತ 'ಗೋಲ್ಡನ್ ಆರೋ' ಪ್ರಶಸ್ತಿ ಹಾಗೂ ಅರ್ಹ ಸಾಧಕರಿಗೆ 'ರಾಷ್ಟ್ರಪತಿ ಪ್ರಮಾಣ ಪತ್ರ'ಗಳನ್ನು ವಿತರಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಡಿಡಿಪಿಯು) ಮಾರುತಿ, ಜಿಲ್ಲಾ ಮುಖ್ಯ ಆಯುಕ್ತ ಇಂದ್ರಾಳಿ ಜಯಕರ್ ಶೆಟ್ಟಿ, ಜಿಲ್ಲಾ ಗೈಡ್ ಆಯುಕ್ತೆ ಜ್ಯೋತಿ ಪೈ, ಕಾರ್ಯದರ್ಶಿ ಆನಂದ ಅಡಿಗ, ಕೋಶಾಧಿಕಾರಿ ಹರಿಪ್ರಸಾದ್ ರೈ, ಲಯನ್ಸ್ ಸಂಸ್ಥೆಯ ಎಂ.ಎನ್. ಹೆಗ್ಡೆ ಹಾಗೂ ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳಾದ ಗುಣರತ್ನ, ದಿವಾಕರ ಸನಿಲ್, ಮಹಮ್ಮದ್ ಮೌಲಾ ಮತ್ತು ಎಸ್‌ಒ ಸುಮನಾ ಶೇಖರ್ ಉಪಸ್ಥಿತರಿದ್ದರು.

ಕಿರುಸುದ್ದಿ

ಮಾಣಿ-ಸಂಪಾಜೆ ಚತುಷ್ಪಥ ಯೋಜನೆ : ಡಿಪಿಆರ್ ಅಪ್ರೂವಲ್‌ಗೆ ಮನವಿ

• **ಪುತ್ತೂರು:** ಮಾಣಿ–ಸಂಪಾಜೆ ರಾಷ್ಟ್ರೀಯ ಹೆದ್ದಾರಿ 275ರ ಚತುಷ್ಪಥ ಯೋಜನಾ ವರದಿ(ಡಿಪಿಆರ್) ಸಿದ್ಧವಾಗಿದ್ದು ಅದನ್ನು ಅಪ್ರೂವಲ್ ಮಾಡುವಲ್ಲಿ ಕ್ರಮ ಕೈಗೊಳ್ಳಲು ಸರಕಾರಕ್ಕೆ ಡಿಪಿಆರ್ ವರದಿ ಸಲ್ಲಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಆಯುಕ್ತರಿಗೆ ಶಾಸಕ ಅಶೋಕ್ ರೈ ಮನವಿ ಮಾಡಿದ್ದಾರೆ. ಬೆಂಗಳೂರಿನಲ್ಲಿರುವ ಆಯುಕ್ತ ಟಿ. ಶ್ರೀಧರ್ ಅವರ ಕಚೇರಿಗೆ ಭೇಟಿ ನೀಡಿ ಮಾತುಕತೆ ನಡೆಸಿದ ಶಾಸಕರು ಈಗಾಗಲೇ ರಾಜ್ಯ ಸರಕಾರದ ಮೂಲಕ ರೂ.3.19 ಕೋಟಿ ವೆಚ್ಚದಲ್ಲಿ ಡಿಪಿಆರ್ ಸಿದ್ಧಪಡಿಸಲಾಗಿದೆ. ಲೋಕೋಪಯೋಗಿ ಸಚಿವರಾಗಿದ್ದ ಸತೀಶ್ ಜಾರಕಿಹೊಳಿಯವರ ಮೂಲಕ ಮಾಣಿ–ಸಂಪಾಜೆ ರಾ. ಹೆದ್ದಾರಿ ಚತುಷ್ಪಥ ಯೋಜನೆಯ ಡಿಪಿಆರ್ ಸಿದ್ಧಪಡಿಸಿ ಕೆಲವೇ ತಿಂಗಳುಗಳು ಕಳೆದರೂ ಇನ್ನೂ ಅದನ್ನು ಅಪ್ರೂವಲ್‌ಗೆ ರಾಷ್ಟ್ರೀಯ ಹೆದ್ದಾರಿ ಸಚಿವಾಲಯಕ್ಕೆ ಕಳುಹಿಸದ ಕಾರಣ ಈ ಬೃಹತ್ ಯೋಜನೆಗೆ ಹಿನ್ನಡೆಯಾಗಿದೆ. ಇಲಾಖಾ ಮಟ್ಟದಲ್ಲಿ ಆಗಬೇಕಾದ ಕೆಲಸಗಳನ್ನು ತಕ್ಷಣವೇ ಮಾಡುವಂತೆ ಅಧಿಕಾರಿಗೆ ಮನವಿ ಮಾಡಿದರು. ಮಾಣಿ–ಸಂಪಾಜೆ ಚತುಷ್ಪಥ ಹೆದ್ದಾರಿಯಾದಲ್ಲಿ ಪುತ್ತೂರು ಇನ್ನಷ್ಟು ಅಭಿವೃದ್ಧಿಯಾಗುವುದರ ಜೊತೆಗೆ ಪುತ್ತೂರಿನಿಂದ ಮಂಗಳೂರಿಗೆ ಕೇವಲ ಅರ್ಧಗಂಟೆಯಲ್ಲಿ ತಲುಪಬಹುದಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬರಬೇಕೆಂಬುದು ನಾಗರಿಕರ ಒತ್ತಾಯವಾಗಿದೆ ಎಂದು ಅಶೋಕ್ ರೈ ತಿಳಿಸಿದ್ದಾರೆ.

ಚಿನ್ನದ ಸರ ಸೆಳೆದು ಪರಾರಿ:ಸೆರೆ

• **ಮಂಗಳೂರು:** ನಗರದ ಸೂಟರ್ ಪೇಟೆ ಬಳಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯೊಬ್ಬರ ಕುತ್ತಿಗೆಯಿಂದ ಚಿನ್ನದ ಸರ ಸೆಳೆದು ಪರಾರಿಯಾಗುತ್ತಿದ್ದವರ ಪೈಕಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಇನ್ನೋರ್ವನಿಗಾಗಿ ಪತ್ತೆ ಕಾರ್ಯ ಮುಂದುವರಿದಿದೆ. ಉತ್ತರ ಪ್ರದೇಶದ ಗೋರಖ್ ಪುರ್ ನಿವಾಸಿಗಳಾದ ರವಿ ಬರ್ವ, ಮಹಮ್ಮದ್ ಸಾಹಿಲ್ ಬಂಧಿತರು. ಬಾಗಲಕೋಟೆ ನಿವಾಸಿ ಅಲ್ತಾಫ್ ಹುಸೇನ್ ಪರಾರಿಯಾದಾತ. ಜೂ.14ರಂದು ಪ್ರಭಾವತಿ ಎಂಬವರು ಸಂಕ್ರಮಣ ಪೂಜೆ ನಿಮಿತ್ತ ಸೂಟರ್ ಪೇಟೆಗೆ ಹೋಗಲು ಎಕ್ಕೂರು ಬಸ್ಸು ನಿಲ್ದಾಣದಲ್ಲಿ ಬಸ್ಸಿನಿಂದ ಇಳಿದು ನಡೆದುಕೊಂಡು ಹೋಗುವಾಗ ಘಟನೆ ನಡೆದಿದೆ. ಆರೋಪಿಗಳು ಪ್ರಭಾವತಿ ಅವರ ಕುತ್ತಿಗೆಯಲ್ಲಿದ್ದ 12 ಗ್ರಾಂ ತೂಕದ ಸರವನ್ನು ಕೈಹಾಕಿ ಎಳೆದು ಪರಾರಿಯಾಗಿದ್ದರು. ಪಾಂಡೇಶ್ವರ ಪೊಲೀಸರು ಪತ್ತೆಗೆ ಬಲೆ ಬೀಸಿದ್ದರು. ಶುಕ್ರವಾರ ಬೆಳಗ್ಗೆ ಆರೋಪಿಗಳು ನಗರದ ಬಸ್ ನಿಲ್ದಾಣದಲ್ಲಿರುವ ಬಗ್ಗೆ ಮಾಹಿತಿ ಹಿನ್ನಲೆಯಲ್ಲಿ ಪೊಲೀಸರು ದಾಳಿ ನಡೆಸಿ ಮೂವರನ್ನು ವಶಕ್ಕೆ ಪಡೆದಿದ್ದರು. ಆರೋಪಿಗಳನ್ನು ಪೊಲೀಸ್ ಠಾಣೆಗೆ ಕರೆ ತರುವ ವೇಳೆ ಆರೋಪಿ ಅಲ್ತಾಫ್ ಹುಸೇನ್ ಏಕಾಏಕಿ ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದಾನೆ.

ಆರೋಗ್ಯ ಜಾಗೃತಿಗಾಗಿ ರಾಜ್ಯ ಮಟ್ಟದ ಕವನ, ಕಥಾ ಸ್ಪರ್ಧೆ

• **ಮಂಗಳೂರು:** ಕನ್ನಡ ಸಾಹಿತ್ಯದ ಮೂಲಕ ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಮಹತ್ವದ ಉದ್ದೇಶದಿಂದ ಕರ್ನಾಟಕ ಆರೋಗ್ಯ ಸಾಹಿತ್ಯ ಪರಿಷತ್ ವತಿಯಿಂದ "ಆರೋಗ್ಯ ಜಾಗೃತಿಗಾಗಿ ರಾಜ್ಯ ಮಟ್ಟದ ಕವನ ಮತ್ತು ಕಥಾ ಸ್ಪರ್ಧೆ – 2026" ಅನ್ನು ಆಯೋಜಿಸಲಾಗಿದೆ. 'ವೈದ್ಯಲೋಕ' ಆರೋಗ್ಯ ಮಾಸ ಪತ್ರಿಕೆ ಮತ್ತು ಮೀಡಿಯಾ ಐಕಾನ್ ಸಂಸ್ಥೆಗಳು ಈ ಸ್ಪರ್ಧೆಗೆ ಸಹಯೋಗ ನೀಡುತ್ತಿವೆ. ಬರವಣಿಗೆಯ ಮೂಲಕ ಆರೋಗ್ಯ ಮತ್ತು ಸ್ವಾಸ್ಥ್ಯದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಧ್ವನಿಯಾಗುವುದು. ನಿಮ್ಮ ಪದಗಳು ಆರೋಗ್ಯಕರ ಭವಿಷ್ಯಕ್ಕೆ ಪ್ರೇರಣೆಯಾಗಲಿ ಎಂಬುದು ಪರಿಷತ್ತಿನ ಆಶಯ. ಸಾರ್ವಜನಿಕರು, ವೈದ್ಯರು ಮತ್ತು ಆರೋಗ್ಯ ವೃತ್ತಿಪರರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಆಯ್ದ ಬರಹಗಳು 'ವೈದ್ಯಲೋಕ' ಮಾಸಪತ್ರಿಕೆ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಗೊಳ್ಳಲಿದೆ. ಕಥೆ ಮತ್ತು ಕವನ ಕಳುಹಿಸಲು ಕೊನೆಯ ದಿನಾಂಕ: ಜೂ. 30. ಬರಹಗಳನ್ನು ಕಳುಹಿಸಬೇಕಾದ ವಿಳಾಸ: ಇಮೇಲ್: ಇಛಿಛಿಬಜಿಜಿಜ್ಜಟಃ ಢಇಚಿಜ್ಜಿ.ಟಇ , ವಾಟ್ಸಪ್: 81975 54373, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕೃಷ್ಣ ಎಂ: 81975 54373, ಎನ್.ವಿ. ರಮೇಶ್: 98455 65238

ನಾಪತ್ತೆಯಾದ ಮಹಿಳೆ ಪತ್ತೆ

• **ಕುಂಬಳೆ:** ಸೀತಾಂಗೋಳಿಯಿಂದ ನಾಪತ್ತೆಯಾಗಿದ್ದ ಮಹಿಳೆಯನ್ನು ಪಾಲಕ್ಕಾಡು ರೈಲ್ವೆ ನಿಲ್ದಾಣದಲ್ಲಿ ಪತ್ತೆಹಚ್ಚಲಾಗಿದೆ. ಅಸ್ಸಾಂ ನಿವಾಸಿ, ಸೀತಾಂಗೋಳಿ ಕ್ವಾರ್ಟರ್ಸ್‌ನಲ್ಲಿ ವಾಸಿಸುವ 23ರ ಹರೆಯದ ಈ ಮಹಿಳೆಯನ್ನು ಪತ್ತೆಹಚ್ಚಲಾಗಿದೆ. ಕಳೆದ ಮಂಗಳವಾರ ಬೆಳಗ್ಗೆಯಿಂದ ಆಕೆ ನಾಪತ್ತೆಯಾಗಿದ್ದರು. ಈ ಕುರಿತು ಆಕೆಯ ಪತಿ ಕುಂಬಳೆ ಪೊಲೀಸರಿಗೆ ದೂರು ಸಲ್ಲಿಸಿದ್ದರು.

ವಿದ್ಯಾರ್ಥಿನಿ ನೇಣು ಬಿಗಿದು ಆತ್ಮಹತ್ಯೆ

• **ಕಾಸರಗೋಡು:** ಪದವಿ ವಿದ್ಯಾರ್ಥಿನಿಯೋರ್ವೆ ಮನೆಯ ಬೆಡ್‌ರೂಮ್‌ನಲ್ಲಿ ಫ್ಯಾನ್‌ಗೆ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.



ಕಾಸರಗೋಡು ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮೀಪುಗುರಿ ಶೆಟ್ಟಿಗದ್ದೆ ನಿವಾಸಿ ಗಿರೀಶ್ ಆಚಾರ್ಯ ಮತ್ತು ದೀಪಿಕಾ ದಂಪತಿಯ ಪುತ್ರಿ ಪ್ರಕೃತಿಕಾ (19) ಮೃತಪಟ್ಟ ವಿದ್ಯಾರ್ಥಿನಿ. ಗುರುವಾರ ಮಧ್ಯಾಹ್ನ ಅವರು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಕೂಡಲೇ ಆಸ್ಪತ್ರೆಗೆ ಸಾಗಿಸಿದರೂ ಪ್ರಯೋಜನವಾಗಲಿಲ್ಲ. ಮಂಗಳೂರು ಖಾಸಗಿ ಕಾಲೇಜಿನಲ್ಲಿ ಮೂರು ದಿನಗಳ ಹಿಂದೆಯಷ್ಟೇ ಪ್ರಥಮ ಪದವಿ ಶಿಕ್ಷಣಕ್ಕೆ ಸೇರ್ಪಡೆಗೊಂಡಿದ್ದರು. ಮೃತರು ತಂದೆ, ತಾಯಿ, ಸಹೋದರ ಪ್ರತ್ಯೂಕ್ ಅವರನ್ನು ಅಗಲಿದ್ದಾರೆ.

ನಿಧನ ಸುದ್ದಿ

ನಾರಾಯಣ ಎಂ.

ಕಾಸರಗೋಡು: ಉಪ್ಪಳ ಸೋಂಕಾಲು ಕೊಡಂಗೆ ರಸ್ತೆ ಬಳಿಯ ಬಳಕುಡೆ ನಿವಾಸಿ, ಕಾಸರಗೋಡು ವಿವೇಕಾನಂದ ನಗರದಲ್ಲಿ ವಾಸಿಸುತ್ತಿದ್ದ ಹಿರಿಯ ವ್ಯಾಪಾರಿ ನಾರಾಯಣ ಎಂ. (78) ನಿಧನ ಹೊಂದಿದರು.



ಅಲ್ಪಕಾಲದ ಅಸೌಖ್ಯದಿಂದಿದ್ದ ಅವರು ಕಾಸರಗೋಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪ್ರತಾಪ ನಗರ ಹಾಗೂ ಕೊಡಂಗೆಯಲ್ಲಿ ಹಲವಾರು ವರ್ಷಗಳ ಕಾಲ ದಿನಸಿ ವ್ಯಾಪಾರಿಯಾಗಿದ್ದರು. ಬಿಜೆಪಿಯ ಹಿರಿಯ ಕಾರ್ಯಕರ್ತರಾಗಿದ್ದರು. ಮೃತರು ಪತ್ನಿ ಪ್ರಮೀಳಾ, ಮಕ್ಕಳಾದ ನಿಶಾ, ನಿಮ್ಮಿ, ಸೌಮ್ಯಾ ಅವರನ್ನು ಅಗಲಿದ್ದಾರೆ.



ರಾ.ಹೆ.ಯ ಮೆಲ್ಕಾರಿನಲ್ಲಿ ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಶ್ರೀದುರ್ಗಾಪರಮೇಶ್ವರಿ ಭಜನಾ ಮಂದಿರಕ್ಕೆ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು. ಈ ಸಂದರ್ಭ ಮಂದಿರ ಸಮಿತಿ ಅಧ್ಯಕ್ಷ ಸಚಿನ್ ಮೆಲ್ಕಾರ್, ಗೌರವಾಧ್ಯಕ್ಷರಾದ ದಾಮೋದರ ಮೆಲ್ಕಾರ್, ಎಂ.ಎಸ್. ಕುಮಾರ್, ಕಾರ್ಯದರ್ಶಿ ದಿನೇಶ್ ಟೈಲರ್, ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಜೂ.28 ರಂದು ರೋಟರಿ ಜಿಲ್ಲಾ ಗವರ್ನರ್‌ರಾಗಿ ಸತೀಶ್ ಬೋಳಾರ್ ಅಧಿಕಾರ ಸ್ವೀಕಾರ

• **ಮಂಗಳೂರು:** ದಕ್ಷಿಣ ಕನ್ನಡ, ಕೊಡಗು, ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆಗಳನ್ನು ಒಳಗೊಂಡಿರುವ ರೋಟರಿ ಜಿಲ್ಲೆ 3181ರ 2026–27ನೇ ಸಾಲಿನ ಜಿಲ್ಲಾ ಗವರ್ನರ್ ಆಗಿ ಸತೀಶ್ ಬೋಳಾರ್ ಅವರು ಆಯ್ಕೆಗೊಂಡಿದ್ದು, ಅವರು ಜೂ.28ರಂದು ಮಂಗಳೂರಿನ ಪಿಲಿಕುಳ ಸೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಜಿಲ್ಲಾ ಗವರ್ನರ್ ವಿಕ್ರಂ ದತ್ತ ಅವರು, ಅಂದು ಪೂರ್ವಾಹ್ನ 9.30ಕ್ಕೆ ಕಾರ್ಯಕ್ರಮಾರಂಭಗೊಳ್ಳಲಿದೆ. ರೋಟರಿ ಫೌಂಡೇಶನ್ ಟ್ರಸ್ಟಿ ಹಾಗೂ ರೋಟರಿ ಇಂಟರ್ ನ್ಯಾಷನಲ್ ಮಾಜಿ ನಿರ್ದೇಶಕ ಡಾ.ಭರತ್ ಪಾಂಡ್ಯ ಹಾಗೂ ಹಾಲಿ ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ. ಅವರ ಉಪಸ್ಥಿತಿಯಲ್ಲಿ ಸತೀಶ್ ಬೋಳಾರ್ ಅವರಿಗೆ ಜಿಲ್ಲಾ ಗವರ್ನರ್ ಪದವಿಪ್ರದಾನ ನಡೆಯಲಿದೆ ಎಂದರು.

ಜಿಲ್ಲಾ ಗವರ್ನರ್ ಸತೀಶ್ ಬೋಳಾರ್ ಮಾತನಾಡಿ, ಮುಂದಿನ ಒಂದು ವರ್ಷದ ಅವಧಿಯಲ್ಲಿ ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸುವ ಯೋಚನೆ ಇದೆ. ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣ, ಯುವಸಬಲೀಕರಣ, ಮಹಿಳಾ ಅಭಿವೃದ್ಧಿ, ಹಿರಿಯನಾಗರಿಕರ ಕಲ್ಯಾಣ ಹಾಗೂ ಸದಸ್ಯತ್ವ ವೃದ್ಧಿಗೆ ಆದ್ಯತೆ ನೀಡುವ ಮಹತ್ವಾಕಾಂಕ್ಷೆಯ ಸೇವಾ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದರು.

ಪರಿಸರ ಸಂರಕ್ಷಣೆಯ ಅಂಗವಾಗಿ ಧನ್ಯವಾದ್ ಯೋಜನೆಯಡಿ 10 ಸಾವಿರ ಸಸಿಗಳನ್ನು ನೆಡುವ ಉದ್ದೇಶ ಹೊಂದಲಾಗಿದೆ. ಮಹಿಳಾ ಸಬಲೀಕರಣಕ್ಕಾಗಿ 'ಸಹೇಲಿ ಸಖಿ: ಯೋಜನೆ, ಈ ಬಾರಿ ವಿಶೇಷವಾಗಿ 'ನಮ್ಮ ಹಬ್ಬ– ನಮ್ಮ ಸೇವೆ' ಮೂಲಕ ಹಬ್ಬಗಳೊಂದಿಗೆ ಸೇವಾ ಕಾರ್ಯಕ್ರಮಗಳನ್ನು ಸಂಯೋಜಿಸಲಾಗಿದೆ ಎಂದು ಅವರು ಹೇಳಿದರು.

ಜಿಲ್ಲಾ ಕಾರ್ಯದರ್ಶಿ (ಆಡಳಿತ) ಜಿ.ಕೆ. ಶೆಟ್ಟಿ, ಮಾಧ್ಯಮ ಸಮಿತಿ ಸಂಯೋಜಕ ಭಾಸ್ಕರ ರೈ ಕಟ್ಟ ಉಪಸ್ಥಿತರಿದ್ದರು.

12 ಸಾವಿರ ಗ್ರಂಥಗಳು | 43 ಬಗೆಯ ರೂ.1 ನಾಣ್ಯ | ಪತ್ರಿಕಾ ಲೇಖನಗಳ ಆಗರ

ಈ ದಂಪತಿಯ ಮನೆಯೇ ಗ್ರಂಥಾಲಯ

• **ಸುಬ್ರಹ್ಮಣ್ಯ:** ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆಯ ಉಜಿರೆಯ ತರಬೇತಿ ಸಂಸ್ಥೆಯ ನಿವೃತ್ತ ಪ್ರಾಂಶುಪಾಲ ಅಶೋಕ್ ಕುಮಾರ್ ಮೂಲೆಮಜಲು ಮತ್ತು ಕೆಎಸ್‌ಎಸ್ ಕಾಲೇಜಿನ ನಿವೃತ್ತ ಗ್ರಂಥಪಾಲಕಿ ಸುನೀತಾ ಕೆ. ದಂಪತಿಯ ಪುಸ್ತಕ ವ್ಯಾಮೋಹವು ಸುಬ್ರಹ್ಮಣ್ಯದ ಪರ್ವತಮುಖಿಯಲ್ಲಿನ ತಮ್ಮ ನಿವಾಸವನ್ನೇ ಗ್ರಂಥಾಲಯವನ್ನಾಗಿಸಿದೆ. ಮನೆಯಲ್ಲಿಯೇ ಸುಮಾರು 12 ಸಾವಿರ ಪುಸ್ತಕಗಳ ಗ್ರಂಥಾಲಯವನ್ನು ನಿರ್ಮಿಸಿ ದಂಪತಿ ತಮ್ಮ ಗ್ರಂಥಗಳ ಮೇಲಿನ ಪ್ರೀತಿಯನ್ನು ಅನಾವರಣಗೊಳಿಸಿದ್ದಾರೆ.





ಆಸಕ್ತಿ ಮೂಡಿದ ದಿನಗಳು

ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಅಶೋಕ್ ಮೂಲೆಮಜಲು ಅವರಿಗೆ ಪುಸ್ತಕಗಳ ಮೇಲೆ ವಿಶೇಷ ಆಸಕ್ತಿ ಬೆಳೆಯಿತು. ಕಥೆ, ಕಾದಂಬರಿ, ಸಾಮಾನ್ಯ ಜ್ಞಾನ, ಸಾಹಿತ್ಯ, ಇತಿಹಾಸ, ಧರ್ಮ, ರಾಜಕೀಯ, ವಿಜ್ಞಾನ, ಕ್ರೀಡೆ ಸೇರಿದಂತೆ ಹಲವು ಕ್ಷೇತ್ರಗಳಿಗೆ ವಿಸ್ತರಿಸಿತು. ಓದಿದ ಪುಸ್ತಕಗಳನ್ನು ಸಂರಕ್ಷಿಸುವ ಹವ್ಯಾಸದಿಂದ ಗ್ರಂಥಾಲಯ ನಿರ್ಮಿತವಾಯಿತು.

12 ಸಾವಿರ ಪುಸ್ತಕಗಳ ಭಂಡಾರ

ಮನೆಯ ಕಪಾಟುಗಳಲ್ಲಿ 12 ಸಾವಿರಕ್ಕೂ ಅಧಿಕ ಪುಸ್ತಕಗಳು ಇವೆ. ಕನ್ನಡ, ಆಂಗ್ಲ ಸೇರಿದಂತೆ ವಿವಿಧ ಭಾಷೆಗಳ ಕೃತಿಗಳು ಇಲ್ಲಿ ಜೋಪಾನವಾಗಿ ಸಂಗ್ರಹಗೊಂಡಿವೆ. ಸಾಹಿತ್ಯದಿಂದ ಹಿಡಿದು ಸಂಶೋಧನಾ ಕೃತಿಗಳವರೆಗೆ ನಾನಾ ವಿಷಯಗಳ ಪುಸ್ತಕಗಳು,ಏಳು ಧರ್ಮಗಳು ಸಂಗ್ರಹಿತವಾಗಿದೆ. ಮೊದಲ ಮಹಡಿಯ ವಿಶಾಲವಾದ ಒಂದು ಕೊಠಡಿ ಮತ್ತು ಹಜಾರ ಗ್ರಂಥಾಲಯವಾಗಿ ಮಾರ್ಪಾಟಾಗಿದೆ.

> **ಪುಸ್ತಕಗಳು ನನ್ನ ಬದುಕಿನ ಅವಿಭಾಜ್ಯ ಅಂಗ. ಓದುವುದು ಎಂದರೆ ಕೇವಲ ಮಾಹಿತಿ ಸಂಗ್ರಹಿಸುವುದಲ್ಲ ಬದಲಾಗಿ ಚಿಂತನೆಗಳನ್ನು ವಿಸ್ತರಿಸಿಕೊಳ್ಳುವುದು. ಒಂದು ಒಳ್ಳೆಯ ಪುಸ್ತಕ ನಮ್ಮ ಬದುಕಿನ ದೃಷ್ಟಿಕೋನವನ್ನೇ ಬದಲಾಯಿಸುವ ಶಕ್ತಿ ಹೊಂದಿರುತ್ತದೆ. ಆದ್ದರಿಂದ ಓದು ಎಂಬ ಹವ್ಯಾಸವನ್ನು ಯಾವತ್ತೂ ಕೈಬಿಡಬಾರದು.**
> ■ ಅಶೋಕ್ ಕುಮಾರ್, ಮೂಲೆಮಜಲು

ಪತ್ರಿಕಾ ಲೇಖನಗಳ ಸಂಗ್ರಹ

ಪುಸ್ತಕಗಳಷ್ಟೇ ಅಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗುವ ಮಹತ್ವದ ಲೇಖನಗಳು, ರಾಜಕೀಯ ವಿಶ್ಲೇಷಣೆಗಳು, ಕ್ರೀಡಾ ಬರಹಗಳು, ವಿಶೇಷ ವರದಿಗಳನ್ನು ಹಲವು ವರ್ಷಗಳಿಂದ ಸಂಗ್ರಹಿಸಿ ಇಡಲಾಗಿದೆ. ದಿನಕ್ಕೆ 7ರಿಂದ 13 ಪತ್ರಿಕೆಗಳನ್ನು ಓದುವ ಅಭ್ಯಾಸದ ಜತೆಗೆ ಅನೇಕ ಪುಸ್ತಕಗಳನ್ನು ಓದುವುದು ಇವರ ಹವ್ಯಾಸವಾಗಿದೆ.

ನಾಣ್ಯ ಸಂಗ್ರಹ

ನಾಣ್ಯ ಹಾಗೂ ಚಲಾವಣಾ ನೋಟುಗಳ ಸಂಗ್ರಹವೂ ಇದೆ. 1 ಪೈಸೆಯಿಂದ ಆರಂಭಿಸಿ ವಿವಿಧ ಕಾಲಘಟ್ಟಗಳ ನಾಣ್ಯ, ಒಂದು ರೂಪಾಯಿಯ 43 ಬಗೆಯ ನಾಣ್ಯ, ಬ್ರಿಟಿಷ್ ಆಡಳಿತದ ಕಾಲದ ಹಾಗೂ ವಿಕ್ಟೋರಿಯಾ ಮಹಾರಾಣಿಯ ಕಾಲದ ಬೆಳ್ಳಿ ನಾಣ್ಯಗಳು ಇಲ್ಲಿದೆ.

600 ಪೆನ್, 567 ಕ್ಯಾಸೆಟ್‌ಗಳು...!

ಸುಮಾರು 600 ಪೆನ್‌ಗಳು ಅವರ ಬಳಿಯಿದೆ. ಇಂಗ್ಲೆಂಡ್ ಹಾಗೂ ಫ್ರಾನ್ಸ್‌ನಿಂದ ತಂದ ಅಪರೂಪದ ಪೆನ್‌ಗಳು ಇದರಲ್ಲಿ ಸೇರಿವೆ. ಅಲ್ಲದೆ, 567 ಕ್ಯಾಸೆಟ್‌ಗಳು ಮತ್ತು ಸುಮಾರು 600 ಸಿ.ಡಿ.ಗಳನ್ನು ಅವರು ಸಂರಕ್ಷಿಸಿಕೊಂಡಿದ್ದಾರೆ. ಹಳೆಯ ಅಪರೂಪದ ಸಂಗೀತ ವಾದ್ಯಗಳ ಸಂಗ್ರಹವೂ ಇಲ್ಲಿದೆ. ಅಶೋಕ್ ಕುಮಾರ್ ಮತ್ತು ಸುನಿತಾ ಅಶೋಕ್ ಅವರಿಗೆ ಪುತ್ರಿ ಸಹನಾ ಹಾಗೂ ಪುತ್ರ ಶ್ರೇಯಾಸ್ ಸದಾ ಸಹಕಾರ ನೀಡುತ್ತಾ ಬಂದಿದ್ದಾರೆ.

ಬಜರಂಗದಳದವರಿಂದ ಮಾಹಿತಿ

ದನ ಅಕ್ರಮ ಸಾಗಾಟ ಪತ್ತೆ: ಮೂವರು ವಶಕ್ಕೆ

• **ಪುತ್ತೂರು:** ಅಕ್ರಮವಾಗಿ ಹಸುವನ್ನು ಸಾಗಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪುತ್ತೂರು ಬಜರಂಗದಳ ಕಾರ್ಯಕರ್ತರು ನೀಡಿದ ಮಾಹಿತಿಯ ಮೇರೆಗೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಮೂವರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ.

ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಆರ್ಯಾಪು ಗ್ರಾಮದ ಮರಕ್ಕ ಸಮೀಪ ಈ ಘಟನೆ ನಡೆದಿದೆ. ಬಜರಂಗದಳ ಕಾರ್ಯಕರ್ತರಿಂದ ಖಚಿತ ಮಾಹಿತಿ ದೊರೆತ ಹಿನ್ನೆಲೆ, ಗ್ರಾಮಾಂತರ ಪೊಲೀಸ್ ಉಪನಿರೀಕ್ಷಕಿ (ತನಿಖೆ) ಸುಷ್ಮಾ ಜಿ. ಭಂಡಾರಿ ಅವರ ನೇತೃತ್ವದ ತಂಡ ಸ್ಥಳಕ್ಕೆ ತೆರಳಿ ಪಿಕಪ್ ವಾಹನವನ್ನು ತಡೆದು ಪರಿಶೀಲನೆ ನಡೆಸಿದರು.

ಕೈಲ್‌ಚಿತ್ರ



ಪರಿಶೀಲನೆ ವೇಳೆ ಹಸುವಿನ ಬಾಯಿ ಹಾಗೂ ಕಾಲುಗಳನ್ನು ಹಗ್ಗದಿಂದ ಬಿಗಿದು, ಆಹಾರ ಮತ್ತು ನೀರು ನೀಡದೇ ಹಿಂಸಾತ್ಮಕವಾಗಿ ಸಾಗಿಸಲಾಗುತ್ತಿರುವುದು ಪತ್ತೆಯಾಗಿದೆ.

ದಾಖಲೆ ಇರಲಿಲ್ಲ

ಜಾನುವಾರು ಸಾಗಾಟಕ್ಕೆ ಅಗತ್ಯವಾದ ಯಾವುದೇ ಪರವಾನಿಗೆ ಅಥವಾ ಪಶುವೈದ್ಯಾಧಿಕಾರಿಯ ಪ್ರಮಾಣಪತ್ರವೂ ಆರೋಪಿಗಳ ಬಳಿ ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಮೊಯ್ದುಕುಂಞ, ನಾರಾಯಣ ಹಾಗೂ ಮೇಗಿನಪಂಜದ ಬಾಲಕೃಷ್ಣ ವಿರುದ್ಧ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ–2020ರ ಕಲಂ 5, 7, 12 ಹಾಗೂ ಪ್ರಾಣಿ ಹಿಂಸೆ ನಿಷೇಧ ಕಾಯ್ದೆ 1960ರ ಕಲಂ 11(ಡಿ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪೊಲೀಸರು ಸುಮಾರು 4 ಲಕ್ಷ ಮೌಲ್ಯದ ಪಿಕಪ್ ವಾಹನ ಹಾಗೂ ರೂ.10 ಸಾವಿರ ಮೌಲ್ಯದ ಹಸುವನ್ನು ವಶಪಡಿಸಿಕೊಂಡಿದ್ದು, ಪ್ರಕರಣದ ಕುರಿತು ತನಿಖೆ ಮುಂದುವರೆದಿದೆ.

ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಕಂಬಳದ ಸ್ಥಳ ವೀಕ್ಷಿಸಿದ ಅಶೋಕ್ ರೈ

• **ಪುತ್ತೂರು:** ಈ ಬಾರಿಯ ದಸರಾಗೆ ಮೈಸೂರಿನಲ್ಲಿ ಕಂಬಳ ನಡೆಸಲು ಬೇಕಾದ ಸಿದ್ಧತೆಗಳನ್ನು ಕೈಗೊಳ್ಳುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ಕಂಬಳದ ರೂವಾರಿ ಪುತ್ತೂರು ಶಾಸಕ ಅಶೋಕ್ ರೈಗೆ ಸೂಚನೆ ನೀಡಿದ್ದು, ಶುಕ್ರವಾರ ಮೈಸೂರಿನ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ಬಳಿಕ ಅಶೋಕ್ ರೈ ಅವರು ಕಂಬಳದ ಸ್ಥಳ ವೀಕ್ಷಿಸಿದರು.



ಬೆಂಗಳೂರು ಕಂಬಳ ನಡೆದ ಬಳಿಕ ಮೈಸೂರಿನಲ್ಲಿ ಕಂಬಳ ನಡೆಸುವ ಬಗ್ಗೆ ಉಪಮುಖ್ಯಮಂತ್ರಿಯಾಗಿದ್ದ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದ್ದರು. ಇದೀಗ ಕಂಬಳ ಪ್ರೇಮಿ ಡಿ. ಕೆ. ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಿದ್ದು ಮತ್ತೆ ಮೈಸೂರಿನಲ್ಲಿ ಕಂಬಳ ನಡೆಸುವಂತೆ ಅಶೋಕ್ ರೈ ಅವರಿಗೆ ಸೂಚನೆ ನೀಡಿದ್ದಾರೆ. ಮಾತ್ರವಲ್ಲದೆ ಕಂಬಳ ನಡೆಸುವುದಾದರೆ ಸರಕಾರವೇ ನಿಮ್ಮ ಜೊತೆಗಿರಲಿದೆ. ಇದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ನಡೆಸುವಂತೆ ಸೂಚನೆ ನೀಡಿದ್ದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಭೇಟಿ

ಕಂಬಳದ ಜಾಗ ವೀಕ್ಷಣೆ ಮಾಡುವ ಮುನ್ನ ಶಾಸಕ ಅಶೋಕ್ ರೈ ಅವರು ನಾಡದೇವತೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಮೊದಲ ಬಾರಿಗೆ ದಸರಾದಲ್ಲಿ ಕಂಬಳ ಕ್ರೀಡೆ ನಡೆಯಲಿರುವ ಕಾರಣ ತಾಯಿ ಚಾಮುಂಡೇಶ್ವರಿಯ ಆಶೀರ್ವಾದವನ್ನು ಬೇಡಿಕೊಂಡರು.

> **ಮೈಸೂರು ದಸರಾದಲ್ಲಿ ಮೊದಲ ಬಾರಿಗೆ ಕಂಬಳ ಪ್ರದರ್ಶನ ನಡೆಯಲಿದೆ. ಇಂಥಹದೊಂದು ಕಾರ್ಯಕ್ರಮದಲ್ಲಿ ಈ ಬಾರಿ ಕಂಬಳ ನಡೆಯಲಿರುವುದು ಸಂತೋಷದ ವಿಚಾರ. 2 ಕಡೆ ಜಾಗ ವೀಕ್ಷಣೆ ನಡೆದಿದೆ. ವಿವಿಧ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳಲಾಗುತ್ತದೆ.**
> ■ ಅಶೋಕ್ ರೈ, ಶಾಸಕರು, ಪುತ್ತೂರು

ಜಾಗ ವೀಕ್ಷಣೆ

ಮೈಸೂರಿನ ಸರ್.ಎಂ. ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಬಳಿ ಇರುವ 20 ಎಕ್ರೆ ಜಾಗ ಮತ್ತು ಮೈಸೂರು ಜಯಲಕ್ಷ್ಮೀಪುರಂನಲ್ಲಿ ಪ್ರೀಮಿಯಂ ಸ್ಟುಡಿಯೋ ಬಳಿ ಇರುವ 17 ಎಕ್ರೆ ಜಾಗವನ್ನು ವೀಕ್ಷಣೆ ಮಾಡಲಾಗಿದೆ. ಈ ಎರಡು ಜಾಗದಲ್ಲಿ ಯಾವುದು ಸೂಕ್ತ ಎಂಬುದನ್ನು ಪರಿಗಣಿಸಿ ಅಂತಿಮಗೊಳಿಸಲು ನಿರ್ಧರಿಸಲಾಗಿದೆ. ಈ ಸಂದರ್ಭದಲ್ಲಿ ಕಂಬಳ ಪ್ರಮುಖರಾದ ಮುರಲೀಧರ್ ರೈ ಮಠಂತಬೆಟ್ಟು ಹಾಗೂ ರಾಜೀವ್ ಶೆಟ್ಟಿ ಎಡ್ತೂರು ಉಪಸ್ಥಿತರಿದ್ದರು.

ಜೂ.27: ವಿವೇಕಾನಂದ ಕಾಲೇಜಿನ ಸುವರ್ಣ ಮಹೋತ್ಸವ

'ಬಿಲ್ಡ್ ವಿತ್ ಎಐ' ಬೂಟ್ ಕ್ಯಾಂಪ್

• **ಪುತ್ತೂರು:** ನಗರದ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ (ಸ್ವಾಯತ್ತ) ಕಾಲೇಜಿನ ಗಣಕ ಶಾಸ್ತ್ರ ವಿಭಾಗ ಹಾಗೂ ಗೂಗಲ್ ಡೆವಲಪರ್ ಗ್ರೂಪ್ ಆನ್ ಕ್ಯಾಂಪಸ್ (ಜಿಡಿಜಿ ಆನ್ ಕ್ಯಾಂಪಸ್) ವತಿಯಿಂದ, ಹ್ಯಾಕ್2ಸ್ಕಿಲ್ ಸಹಯೋಗದಲ್ಲಿ, ವಿದ್ಯಾರ್ಥಿಗಳಿಗಾಗಿ ವಿಶೇಷ 'ಬಿಲ್ಡ್ ವಿತ್ ಎಐ ಬೂಟ್ ಕ್ಯಾಂಪ್' ಜೂ.27ರಂದು ಪದವಿ ಕಾಲೇಜಿನ ಸುವರ್ಣ ಮಹೋತ್ಸವ ಸಭಾಭವನದಲ್ಲಿ ಆಯೋಜಿಸಲಾಗಿದೆ.



ಕೃತಕ ಬುದ್ಧಿಮತ್ತೆ ಮತ್ತು ಕ್ಲೌಡ್ ತಂತ್ರಜ್ಞಾನಗಳ ಪ್ರಾಯೋಗಿಕ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಗೂಗಲ್ ಡೆವಲಪರ್ ಎಕ್ಸ್‌ಪರ್ಟ್‌ಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ತಾಂತ್ರಿಕ ವಿಷಯಗಳ ಕುರಿತು ಮಾರ್ಗದರ್ಶನ ನೀಡುವುದರ ಜೊತೆಗೆ ಪ್ರಾಯೋಗಿಕ ಕಾರ್ಯಾಗಾರಗಳನ್ನು ನಡೆಸಲಿದ್ದಾರೆ. ಕೃತಕ ಬುದ್ಧಿಮತ್ತೆಯ ನೈಜ ಬಳಕೆಗಳು, ಕ್ಲೌಡ್ ತಂತ್ರಜ್ಞಾನ, ನವೀನ ತಂತ್ರಾಂಶ ಪರಿಕಲ್ಪನೆಗಳು ಹಾಗೂ ಅವುಗಳ ಅನ್ವಯಿಕತೆಯ ಕುರಿತು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ.

ಬೂಟ್ ಕ್ಯಾಂಪ್ ಎರಡು ಅವಧಿಗಳಲ್ಲಿ ನಡೆಯಲಿದೆ. ಮೊದಲ ಅವಧಿ ಕಾಲೇಜಿನ ಆಂತರಿಕ ವಿದ್ಯಾರ್ಥಿಗಳಿಗಾಗಿ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದ್ದು, ನೋಂದಣಿ ಪ್ರಕ್ರಿಯೆ ಬೆಳಗ್ಗೆ 9ರಿಂದ 9.45ರವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಸುಮಾರು 200ರಿಂದ 250 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. 2ನೇ ಅವಧಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಇತರ ಶಿಕ್ಷಣ ಸಂಸ್ಥೆಗಳ ಆಸಕ್ತ ವಿದ್ಯಾರ್ಥಿಗಳಿಗಾಗಿ ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ನಡೆಯಲಿದೆ.ನೋಂದಣಿಪ್ರಕ್ರಿಯೆಮಧ್ಯಾಹ್ನ 2ರಿಂದ 2.45ರವರೆಗೆ ನಡೆ ಯಲಿದ್ದು ಸುಮಾರು 200ರಿಂದ 250 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಕಾರ್ಯಕ್ರಮದ ಯಶಸ್ವಿ ನಿರ್ವಹಣೆಗಾಗಿ ಅಗತ್ಯ ತಾಂತ್ರಿಕ ವ್ಯವಸ್ಥೆ, ವೇದಿಕೆ ನಿರ್ವಹಣೆ, ಬ್ರ್ಯಾಂಡಿಂಗ್ ಮತ್ತು ವಿದ್ಯಾರ್ಥಿ ಸ್ವಯಂಸೇವಕರ ಸಹಕಾರವನ್ನು ಕಲ್ಪಿಸಲಾಗಿದೆ. ಈ ಬೂಟ್‌ಕ್ಯಾಂಪ್ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳನ್ನು ಅರಿ ಯಲು ಹಾಗೂ ತಜ್ಞರೊಂದಿಗೆ ನೇರವಾಗಿ ಸಂವಾದ ನಡೆಸಲು ಉತ್ತಮ ಅವಕಾಶವಾಗಲಿದೆ.

ಉದ್ದೇಶವೇನು...

ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಮತ್ತು ಕ್ಲೌಡ್ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಾಯೋಗಿಕ ಅನುಭವ ಒದಗಿಸುವುದರೊಂದಿಗೆ, ನವೀನ ಆಲೋಚನೆ, ತಾಂತ್ರಿಕ ಕೌಶಲ್ಯ ಮತ್ತು ಉದ್ಯಮಮುಖಿ ಜ್ಞಾನವನ್ನು ಬೆಳೆಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

ಎಜುಕಾರುಣ್ಯ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ವತಿಯಿಂದ 9 ವಿದ್ಯಾರ್ಥಿಗಳಿಗೆ ಬಾಳೇಪುಣಿ ದತ್ತಿನಿಧಿ ಪ್ರತಿಭಾ ಪುರಸ್ಕಾರ ವಿತರಣೆ

ಒಳ್ಳೆಯ ಕಾರ್ಯಗಳಿಗೆ ಸಮಾಜದ ಸಹಕಾರವಿರಲಿ: ಕಾಜವ

• **ಮಂಗಳೂರು:** ಪ್ರಾಮಾಣಿಕ, ನೇರ ಮತ್ತು ನಿಷ್ಠುರ ಪತ್ರಕರ್ತರಾಗಿದ್ದ ಹಿರಿಯ ಪತ್ರಕರ್ತ ಗುರುವಪ್ಪ ಎನ್.ಟಿ.ಬಾಳೇಪುಣಿಯವರ ಸ್ಮರಣಾರ್ಥ ದತ್ತಿ ನಿಧಿ ಯೋಜನೆ ಆರಂಭಿಸಿರುವ ಎಜು ಕಾರುಣ್ಯ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯ ಸಮಾಜಕ್ಕೆ ಪ್ರೇರಣಾದಾಯಿ ಎಂದು ನರಿಂಗಾನ ಕಂಬಳೋತ್ಸವ ಸಮಿತಿಯ ಅಧ್ಯಕ್ಷ ಪ್ರಶಾಂತ್ ಕಾಜವ ಶ್ಲಾಘಿಸಿದರು.



ಮಂಗಳೂರಿನ ಪ್ರೆಸ್‌ಕ್ಲಬ್ ಸಭಾಂಗಣದಲ್ಲಿ ಶುಕ್ರವಾರ ಎಜುಕಾರುಣ್ಯ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಮಂಗಳೂರು ವತಿಯಿಂದ ಹಿರಿಯ ಪತ್ರಕರ್ತ ಗುರುವಪ್ಪ ಎನ್.ಟಿ. ಬಾಳೇಪುಣಿಯವರ ಸ್ಮರಣಾರ್ಥ ಆಯೋಜಿಸಿದ್ದ ದತ್ತಿನಿಧಿ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ 1.50 ಲಕ್ಷ ರೂ. ಮೊತ್ತದ ದತ್ತಿನಿಧಿಯನ್ನು ವಿವಿಧ ಶಾಲೆ – ಕಾಲೇಜುಗಳ ಒಟ್ಟು 9 ಮಂದಿ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಯಿತು.

ಸದಾ ಸಮಾಜಮುಖಿಯಾಗಿ ಯೋಚಿಸುತ್ತಿದ್ದ ಬಾಳೇಪುಣಿಯವರು ನ್ಯಾಯಕ್ಕಾಗಿ ಹೋರಾಟ ಮಾಡುವ ವ್ಯಕ್ತಿತ್ವವುಳ್ಳವರಾಗಿದ್ದರು. ಅವರ ಹೆಸರಿನಲ್ಲಿ ಕಳೆದ ಎರಡು ವರ್ಷದಿಂದ ನೀಡುತ್ತಿರುವ ದತ್ತಿ ನಿಧಿ ಯೋಜನೆ ಮತ್ತಷ್ಟು ಮಂದಿಗೆ ಪ್ರೇರಣೆ ನೀಡುವಂತಾಗಲಿ. ಇಂತಹ ಒಳ್ಳೆಯ ಕಾರ್ಯಗಳಿಗೆ ಸಮಾಜ ಕೈಜೋಡಿಸಬೇಕು ಎಂದರು.

ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ಎ.ಖಾದರ್ ಶಾ ಮಾತನಾಡಿ, ಓರ್ವ ಉತ್ತಮ ಪತ್ರಕರ್ತರಾಗಿ ಮಾದರಿಯಾಗಿದ್ದ ಬಾಳೇಪುಣಿಯವರು ಜಿಲ್ಲೆಯಲ್ಲಿ ಹಲವು ಬದಲಾವಣೆಗೂ ಕಾರಣರಾಗಿದ್ದರು ಎಂದರು.

ದ.ಕ.ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್ ಹಾಗೂ ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಬಾಳೇಪುಣಿಯವರೊಂದಿಗಿನ ಒಡನಾಟದ ನೆನಪುಗಳನ್ನು ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕ ಶೀನ ಶೆಟ್ಟಿ ಮಾತನಾಡಿ, ಬಾಳೇಪುಣಿಯವರದ್ದು ಆದರ್ಶ ವ್ಯಕ್ತಿತ್ವ. ತಮ್ಮ ಬದುಕಿನುದ್ದಕ್ಕೂ ಕೆಲವೊಂದು ಮೌಲ್ಯಗಳನ್ನು ಅಳವಡಿಸಿಕೊಂಡು ಅದಕ್ಕೆ ಬದ್ಧರಾಗಿ ಬೆಳೆದವರು. ಅವರ ಆಶಯದಂತೆ ಎಜುಕಾರುಣ್ಯ ಟ್ರಸ್ಟ್ ಕೂಡಾ ಕಾರ್ಯನಿರ್ವಹಿಸುತ್ತಿದ್ದು, ಶಿಕ್ಷಣದ ಮೂಲಕ ದೇಶವನ್ನು ಕಟ್ಟುವ ಕೆಲಸ ಮಾಡುತ್ತಿದೆ ಎಂದರು.

ಕಾವೂರು ವ್ಯವಸಾಯ ಸೇವಾಸಹಕಾರಿ ಸಂಘದ ಅಧ್ಯಕ್ಷ ಲೋಕೇಶ್ ಭಂಡಾರಿ, ಜನ ಶಿಕ್ಷಣ ಟ್ರಸ್ಟ್ ನ ಇನ್ನೋರ್ವ ನಿರ್ದೇಶಕ ಕೃಷ್ಣ ಮೂಲ್ಯ, ಕರಾವಳಿ ಕುರುಬರ ಸಂಘದ ಅಧ್ಯಕ್ಷ ನಿರಂಜನ್ ಎಲ್.ಆರ್. ಗಾಂಧಿನಗರ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ರಮೇಶ್ ಶೆಟ್ಟಿ ಪಂಜಿಮೊಗರು, ಟ್ರಸ್ಟಿಗಳಾದ ಪ್ರಶಾಂತ್ ಅಬ್ಬೆಟ್ಟು, ದಿನೇಶ್ ನಾಯ್ಕ ಕಾಶಿಪಟ್ನ, ಬಾಳೇಪುಣಿ ಅವರ ಪತ್ನಿ ಜಯಂತಿ ಬಾಳೇಪುಣಿ, ಪುತ್ರ ಮನೀಶ್ ಬಾಳೇಪುಣಿ ಉಪಸ್ಥಿತರಿದ್ದರು.

ಟ್ರಸ್ಟ್ ಅಧ್ಯಕ್ಷ ಮೋಹನ್ ದಾಸ್ ಮರಕಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಪತ್ರಕರ್ತ ಅನ್ಸಾರ್ ಇನೋಳಿ ಸ್ವಾಗತಿಸಿ, ಮಾನಸ ವಂದಿಸಿದರು. ಬಬಿತಾ ಎಂ. ಮರಕಡ ಕಾರ್ಯಕ್ರಮ ನಿರೂಪಿಸಿದರು.

> **ಬಾಳೇಪುಣಿಯವರ ವ್ಯಕ್ತಿತ್ವ ಮಾದರಿಯಾದುದು. ಪತ್ರಕರ್ತರಾಗಿದ್ದುಕೊಂಡು ಅವರು ಮಾಡಿದ ಕಾರ್ಯ ಸದಾ ನೆನಪಿನಲ್ಲಿ ಉಳಿಯುವಂತದ್ದು. ಅಕ್ಷರ ಸಂತ ಹರೇಕಳ ಹಾಜಬ್ಬರನ್ನು ಮೊದಲ ಬಾರಿಗೆ ಸಮಾಜಕ್ಕೆ ಪರಿಚಯಿಸಿದ ಹೆಗ್ಗಳಿಕೆ ಬಾಳೇಪುಣಿಯವರದ್ದು. ಅವರ ಹೆಸರಿನಲ್ಲಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕೆಲಸ ಎಜುಕಾರುಣ್ಯ ಟ್ರಸ್ಟ್ ಮಾಡುತ್ತಿರುವುದು ಹೆಮ್ಮೆಯ ವಿಷಯ.**
> ■ ರಾಧಾಕೃಷ್ಣರೈ ಉಮಿಯ, ಉದ್ಯಮಿ

ಶನಿವಾರದ ಪಂದ್ಯಗಳು

- ಕೇಪ್ ವರ್ದೆ-ಸೌದಿ ಅರೇಬಿಯಾ, (ಬೆಳಗ್ಗೆ 5:30)
- ಉರುಗ್ವೆ-ಸ್ಪೇನ್, (ಬೆಳಗ್ಗೆ 5:30)
- ಬೆಲ್ಜಿಯಂ-ನ್ಯೂಜಿಲೆಂಡ್, (ಬೆಳಗ್ಗೆ 8:30)
- ಈಜಿಪ್ಟ್-ಇರಾನ್, (ಬೆಳಗ್ಗೆ 8:30)
- ಪನಾಮಾ-ಇಂಗ್ಲೆಂಡ್, (ಮಧ್ಯರಾತ್ರಿ 2:30)
- ಕ್ರೊಯೇಷ್ಯಾ-ಘಾನಾ, (ಮಧ್ಯರಾತ್ರಿ 2:30)

ಕಿರುಸುದ್ದಿ

ಜರ್ಮನಿ ವಿರುದ್ಧ ಜಯ ಈಕ್ವೆಡಾರ್‌ನಲ್ಲಿ ರಜೆ

• **ದುಬೈ:** ಈಕ್ವೆಡಾರ್ ಫುಟ್ಬಾಲ್ ತಂಡವು ಜರ್ಮನಿ ವಿರುದ್ಧ 2–1 ಅಂತರದ ಭರ್ಜರಿ ಗೆಲುವಿನೊಂದಿಗೆ ವಿಶ್ವಕಪ್‌ನ ನಾಕೌಟ್ ಹಂತವನ್ನು ತಲುಪಿದ ನಂತರ ಈಕ್ವೆಡಾರ್ ಅಧ್ಯಕ್ಷ ಡೇನಿಯಲ್ ನೊಬೋವಾ ಶುಕ್ರವಾರ ರಾಷ್ಟ್ರೀಯ ರಜಾದಿನವೆಂದು ಘೋಷಿಸಿದರು.ಟೀಕೆಗಳು, ಅವಮಾನಗಳು ಮತ್ತು ಅವರು ಅನುಭವಿಸಿದ ಕಠಿಣ ಕ್ಷಣಗಳ ಹೊರತಾಗಿಯೂ, ಚೇತರಿಸಿಕೊಳ್ಳುವಲ್ಲಿ ಯಶಸ್ವಿಯಾದ ಆಟಗಾರರು ಮತ್ತು ತರಬೇತುದಾರರಿಗೆ ಧನ್ಯವಾದ ಗಳು. ನಾಳೆ, ರಜಾದಿನ! ಎಂದು ನೊಬೋವಾ ಎಕ್ಸ್(ಟ್ವಿಟ್ಟರ್) ಪೋಸ್ಟ್‌ನಲ್ಲಿ ಘೋಷಿಸಿ ದರು. ಐವರಿ ಕೋಸ್ಟ್ ವಿರುದ್ಧದ ಸೋಲು ಮತ್ತು ಕುರಾಕಾವೊ ವಿರುದ್ಧದ ಡ್ರಾ ನಂತರ ಗುರುವಾರ ನಡೆದ ತನ್ನ ಅಂತಿಮ ಲೀಗ್ ಪಂದ್ಯದಲ್ಲಿ ಈಕ್ವೆಡಾರ್‌ಗೆ ಗೆಲುವು ಅಗತ್ಯವಾಗಿತ್ತು.

ಶೂಟಿಂಗ್: ಭಾರತ ಅಗ್ರ

• **ಹೊಸದಿಲ್ಲಿ:** 7 ಚಿನ್ನದ ಸಹಿತ ಒಟ್ಟು 24 ಪದಕಗಳನ್ನು ಗೆದ್ದಿರುವ ಭಾರತ ತಂಡ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್ ಕೂಟದಲ್ಲಿ ಅಗ್ರಸ್ಥಾನ ಗಳಿಸಿತು. ಕೊನೆಯ ದಿನದಂದು ಅತ್ಯುತ್ತಮ ಪ್ರದರ್ಶನ ನೀಡಿರುವ ಭಾರತೀಯ ಶೂಟರ್‌ಗಳು ಪಿಸ್ತೂಲ್, ರೈಫಲ್ ವಿಭಾಗ ಗಳಲ್ಲಿ ಮಿಂಚಿದರು. ಆದಾಗ್ಯೂ ಶಾಟ್‌ಗನ್ ವಿಭಾಗದಲ್ಲಿ ಯಾವುದೇ ಪದಕ ದೊರಕಲಿಲ್ಲ. 7 ಚಿನ್ನ, 8 ಬೆಳ್ಳಿ, 9 ಕಂಚಿನ ಪದಕಗಳನ್ನು ಗೆದ್ದಿರುವ ಭಾರತೀಯ ಶೂಟರ್ ಗಳು ವೈಯಕ್ತಿಕ ತಟಸ್ಥ ಕ್ರೀಡಾಪಟುಗಳನ್ನು ಮೀರಿಸಿದರು. ಆ ಗುಂಪು 14 ಪದಕಗಳನ್ನು ಗೆದ್ದಿತ್ತು. ಇಟಲಿ ಮೂರನೇ ಸ್ಥಾನ ಪಡೆಯಿತು. 10 ಪದಕಗಳನ್ನು ಗೆದ್ದಿತ್ತು.

ಕಾಮನ್‌ವೆಲ್ತ್: ವೇಟ್ ಲಿಫ್ಟಿಂಗ್ ತಂಡ ಪ್ರಕಟ

• **ಹೊಸದಿಲ್ಲಿ:** ಗ್ಲಾಸ್ಗೋ ಕಾಮನ್‌ವೆಲ್ತ್ ಮಹಾ ಕೂಟದಲ್ಲಿ ಭಾರತ ವೇಟ್‌ಲಿಫ್ಟಿಂಗ್ ತಂಡವನ್ನು ಎರಡು ಒಲಿಂಪಿಕ್ ಪದಕ ವಿಜೇತೆ ಮೀರಾಬಾಯಿ ಚಾನು ಮುನ್ನಡೆಸಲಿದ್ದಾರೆ. ಜುಲೈ 23ರಿಂದ ಶುರುವಾಗಲಿರುವ ಈ ಕೂಟಕ್ಕೆ ಭಾರತ ವೇಟ್‌ಲಿಫ್ಟಿಂಗ್ ತಂಡವನ್ನು ಪ್ರಕಟಿಸಲಾಗಿದೆ. 48 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಲಿರುವ ಮೀರಾಬಾಯಿ ಪ್ರಮುಖ ಸ್ಪರ್ಧಿಯಾದರೆ, ಈ ತಂಡದಲ್ಲಿ ಲವ್‌ಪ್ರೀತ್ ಸಿಂಗ್(+110 ಕೆ.ಜಿ.), ರಿಶಿಕಾಂತಾ(60 ಕೆ.ಜಿ.), ಅಜಯ ಬಾಬು(79 ಕೆ.ಜಿ.), ದಿಲ್ಬಾಗ್ ಸಿಂಗ್(94 ಕೆ.ಜಿ.) ಸೇರಿದ್ದಾರೆ. ವೇಟ್‌ಲಿಫ್ಟಿಂಗ್ ಕೂಟವು ಜುಲೈ 26ರಿಂದ 30ರವರೆಗೆ ನಡೆಯಲಿದೆ.

ತಂಡ: ಮಹಿಳೆಯರಲ್ಲಿ(ಕೆ.ಜಿ.): ಮೀರಾಬಾಯಿ(48), ಜ್ಞಾನೇಶ್ವರಿ(53), ಬಿಂದ್ಯಾರಾಣಿ(58, ಹರ್ಜಿಂದರ್ ಕೌರ್(69), ಮಾರ್ಟಿನಾ(+86).
ಪುರುಷರಲ್ಲಿ(ಕೆ.ಜಿ.): ರಿಶಿಕಾಂತ(60), ರಾಜಾ(65), ಅಜಯ(79), ದಿಲ್ಬಗ್(94), ಲವ್‌ಪ್ರೀತ್(+110)

ರಗ್ಬಿ: ಹೈದರಾಬಾದ್‌ಗೆ ಜಯ

• **ಹೈದರಾಬಾದ್:** ಇಲ್ಲಿ ನಡೆಯುತ್ತಿರುವ ರಗ್ಬಿ ಪ್ರೀಮಿಯರ್ ಲೀಗ್‌ನಲ್ಲಿ ಹೈದರಾಬಾದ್ ಹೀರೋಸ್ ತಂಡವು ಕೋಲ್ಕತ್ತಾ ಬಂಗಾ ಟೈಗರ್ಸ್ ವಿರುದ್ಧ 28–0 ಅಂತರದ ಭರ್ಜರಿ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿತು. ಪಂದ್ಯದ ಆರಂಭದಿಂದಲೇ ಹೈದರಾಬಾದ್ ಹೀರೋಸ್ ವೇಗದ ದಾಳಿ ಮತ್ತು ಚುರುಕಿನ ಚೆಂಡಿನ ಚಲನೆಯ ಮೂಲಕ ತನ್ನ ಪ್ರಾಬಲ್ಯ ಮೆರೆದಿತು. ಮೈದಾನದಾದ್ಯಂತ ಕೋಲ್ಕತ್ತಾ ಬಂಗಾ ಟೈಗರ್ಸ್‌ನ ರಕ್ಷಣಾ ಪಡೆಯನ್ನು ಚದುರಿಸುತ್ತಾ ನಿರಂತರ ಒತ್ತಡ ಹೇರಿತು. ಕೊನೆಯಲ್ಲಿ ಅವಕಾಶ ಮಾಡಿಕೊಡದೆ ಗೆಲುವು ದಾಖಲಿಸಿತು.

ಮುನ್ನಡೆಯತ್ತ ಭಾರತ ಎ

• **ಗಾಲೆ:** 452 ರನ್ ಗಳಿಸಿ 6 ವಿಕೆಟ್ ಕಳೆದುಕೊಂಡಿದ್ದ ಭಾರತ ಎ ತಂಡ ಡಿಕ್ಲೇರ್ ಕೊಟ್ಟಿದ್ದು ಶ್ರೀಲಂಕಾ 113 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದೆ. ಗಾಲೆದಲ್ಲಿ ನಡೆಯುತ್ತಿರುವ ಭಾರತ ಮತ್ತು ಶ್ರೀಲಂಕಾ ಎ ತಂಡಗಳ ನಡುವಿನ ಅನಧಿಕೃತ ಟೆಸ್ಟ್ ಪಂದ್ಯವು ಎರಡನೇ ದಿನ ರೋಚಕ ಹಂತಕ್ಕೆ ಹೋಯಿತು. ಸುದರ್ಶನ್, ಧ್ರುವ್ ಜುರೇಲ್ ಅವರ ಶತಕ ಮತ್ತು ಶೇಕ್ ರಶೀದ್ ಅವರ ಅರ್ಧ ಶತಕದ ನೆರವಿನಿಂದ ಭಾರತ ಎ 452 ರನ್ ಗಳಿಗೆ ಡಿಕ್ಲೇರ್ ನೀಡಿತು. ಜುರೇಲ್ 141 ರನ್‌ಗಳಿಸಿ ಅಜೇಯರಾಗಿದ್ದರು. ಶ್ರೀಲಂಕಾ ಎ ತಂಡ ಕೂಡ ಫರ್ನಾಂಡೊ ಅವರ 65 ರನ್‌ಗಳ ಬ್ಯಾಟಿಂಗ್‌ನೊಂದಿಗೆ ಉತ್ತಮ ಸ್ಥಿತಿಯಲ್ಲಿದೆ. ಭಾರತ ಎ ವಿಕೆಟ್ ಕಿತ್ತಿದೆ.

2–1 ಅಂತರದಲ್ಲಿ ಜರ್ಮನಿ ಮಣಿಸಿ ನಾಕೌಟ್‌ಗೆ ಲಗ್ಗೆ | ಗೊನ್ಸಾಲೊ ಪ್ಲಾಟಾ ನಿರ್ಣಾಯಕ ಗೋಲು

ಈಕ್ವೆಡಾರ್ ಅಬ್ಬರ, ಜರ್ಮನಿಗೆ ಶಾಕ್!

• **ಈಸ್ಟ್ ರುದರ್‌ಫೋರ್ಡ್ (ಅಮೆರಿಕ):** ಗೊನ್ಸಾಲೊ ಪ್ಲಾಟಾ ಅಂತಿಮ ಹಂತದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಈಕ್ವೆಡಾರ್ 2–1 ಅಂತರದಲ್ಲಿ ಜರ್ಮನಿಯನ್ನು ಮಣಿಸಿ ವಿಶ್ವಕಪ್ ನಾಕೌಟ್ ಹಂತಕ್ಕೆ ಲಗ್ಗೆ ಇಟ್ಟಿತು. ಇದರೊಂದಿಗೆ ಜರ್ಮನಿ ವಿಶ್ವಕಪ್ ಪಂದ್ಯಾವಳಿಯಲ್ಲಿ ದೊಡ್ಡ ಆಘಾತವೊಂದು ಎದುರಿಸಿದೆ.

ಎರಡನೇ ನಿಮಿಷದಲ್ಲೇ ಲೆರಾಯ್ ಸಾನೆ ಗೋಲು ಬಾರಿಸಿ ಜರ್ಮನಿಗೆ ಮುನ್ನಡೆ ತಂದುಕೊಟ್ಟರು. ಆದರೆ ಒಂಬತ್ತನೇ ನಿಮಿಷದಲ್ಲಿ ನಿಲ್ಸನ್ ಅಂಗುಲೊ ಸಮಬಲ ಸಾಧಿಸಿದರು. 77ನೇ ನಿಮಿಷದಲ್ಲಿ ಕಾರ್ನರ್ ಕಿಕ್‌ನಿಂದ ಬಂದ ಚೆಂಡನ್ನು ಗೊನ್ಸಾಲೊ ಪ್ಲಾಟಾ ಗೋಲಾಗಿ ಪರಿವರ್ತಿಸಿ ಈಕ್ವೆಡಾರ್‌ಗೆ ರೋಚಕ ಗೆಲುವು ತಂದುಕೊಟ್ಟರು. ಮೊದಲ ಎರಡು ಪಂದ್ಯಗಳನ್ನು ಗೆದ್ದು ಈಗಾಗಲೇ ಗುಂಪಿನ ಅಗ್ರಸ್ಥಾನ ಖಚಿತಪಡಿಸಿಕೊಂಡಿದ್ದ ಜರ್ಮನಿಗೆ ಈ ಸೋಲು ಹಿನ್ನಡೆಯಾದರೂ, ತಂಡ ನಾಕೌಟ್ ಹಂತದಲ್ಲಿದೆ. ನಾಲ್ಕು ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದ ಈಕ್ವೆಡಾರ್, ಉತ್ತಮ ಮೂರನೇ ಸ್ಥಾನ ಪಡೆದ ತಂಡಗಳ ಪೈಕಿ ಒಂದಾಗಿ ಮುಂದಿನ ಸುತ್ತಿಗೆ ಅರ್ಹತೆ ಪಡೆಯಿತು.

ಸ್ಕೋರ್
- ಲೆರೋಯ್(ಜರ್ಮನಿ): 2ನೇ ನಿಮಿಷ
- ನಿಲ್ಸನ್ ಅಂಗುಲೊ(ಈಕ್ವೆಡಾರ್): 9ನೇ ನಿಮಿಷ
- ಗೊಂಜಾಲೊ(ಈಕ್ವೆಡಾರ್): 77ನೇ ನಿಮಿಷ



ನಾಕೌಟ್‌ಗೆ ನೆದರ್ಲೆಂಡ್ಸ್

• **ಕ್ಯಾನ್ಸಾಸ್ ಸಿಟಿ (ಅಮೆರಿಕ):** ಬ್ರಿಯಾನ್ ಬ್ರಾಬ್ಬೆ ಅವರ ಮೂರನೇ ಗೋಲು ಹಾಗೂ ಟ್ಯುನೀಶಿಯಾದಿಂದ ಬಂದ ಎರಡು ಆತ್ಮಹತ್ಯಾ ಗೋಲುಗಳ ನೆರವಿನಿಂದ ನೆದರ್ಲೆಂಡ್ಸ್ 3–1 ಅಂತರದಲ್ಲಿ ಟ್ಯುನೀಶಿಯಾವನ್ನು ಮಣಿಸಿ ಫಿಫಾ ವಿಶ್ವಕಪ್‌ನ ಗುಂಪು ಎಫ್‌ನಲ್ಲಿ ಅಗ್ರಸ್ಥಾನಿಯಾಗಿ ನಾಕೌಟ್ ಹಂತ ಪ್ರವೇಶಿಸಿತು.

ಪಂದ್ಯ ಆರಂಭವಾಗಿ ಕೇವಲ ಎರಡೇ ನಿಮಿಷಗಳಲ್ಲಿ ಟ್ಯುನೀಶಿಯಾ ನಾಯಕ ಎಲಿಸ್ ಸ್ಕಿರಿ ಕ್ಲಿಯರ್ ಮಾಡಲು ಯತ್ನಿಸಿದ ಚೆಂಡು ಸ್ವಂತ ಗೋಲು ಸೇರಿ ಡಚ್ ತಂಡಕ್ಕೆ ಉಚಿತ ಮುನ್ನಡೆ ದೊರೆಯಿತು. ಏಳನೇ ನಿಮಿಷದಲ್ಲಿ ಬ್ರಿಯಾನ್ ಬ್ರಾಬ್ಬೆ ಗೋಲು ಬಾರಿಸಿ ಮುನ್ನಡೆಯನ್ನು 2–0ಕ್ಕೆ ಹೆಚ್ಚಿಸಿದರು. ಇದು ಟೂರ್ನಿಯಲ್ಲಿ ಅವರ ಮೂರನೇ ಗೋಲಾಗಿತ್ತು.ದ್ವಿತೀಯಾರ್ಧದಲ್ಲಿ ಹಝೆಮ್ ಮಸ್ತೂರಿ ಟ್ಯುನೀಶಿಯಾ ಪರ ಒಂದು ಗೋಲು ಗಳಿಸಿ ಅಂತರವನ್ನು ಕಡಿಮೆ ಮಾಡಿದರೂ, ಕಾರ್ನರ್‌ನಿಂದ ಬಂದ ಚೆಂಡಿಗೆ ಜಾನ್ ಪಾಲ್ ವ್ಯಾನ್ ಹೆಕೆ ಹೊಡೆದ ಹೆಡರ್ ಆನೀಸ್ ಸ್ಲಿಮಾನೆ ದೇಹಕ್ಕೆ ತಾಗಿ ಮತ್ತೊಮ್ಮೆ ಆತ್ಮಹತ್ಯಾ ಗೋಲಾಗಿ ಪರಿಣಮಿಸಿತು. ಇದರೊಂದಿಗೆ ನೆದರ್ಲೆಂಡ್ಸ್ 3–1 ಅಂತರದ ಸುಲಭ ಗೆಲುವು ದಾಖಲಿಸಿತು.

ಜಪಾನ್-ಸ್ವೀಡನ್ ಡ್ರಾ; ಎರಡೂ ತಂಡ ನಾಕೌಟ್‌ಗೆ

• **ಆರ್ಲಿಂಗ್ಟನ್ (ಅಮೆರಿಕ):** ಡೈಜೆನ್ ಮೈಡಾ ಹಾಗೂ ಆಂಥೋನಿ ಎಲಾಂಗಾ ತಲಾ ಒಂದು ಗೋಲು ದಾಖಲಿಸಿದ ಪರಿಣಾಮ ಜಪಾನ್ ಮತ್ತು ಸ್ವೀಡನ್ ನಡುವಿನ ಪಂದ್ಯ 1–1 ಗೋಲುಗಳ ಸಮಬಲದಲ್ಲಿ ಅಂತ್ಯಗೊಂಡಿತು. ಈ ಫಲಿತಾಂಶದೊಂದಿಗೆ ಎರಡೂ ತಂಡಗಳು ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿವೆ. ಪಂದ್ಯದ ಆರಂಭದಿಂದಲೇ ಚುರುಕಾಗಿ ಆಡಿದ ಜಪಾನ್, ಡೈಜೆನ್ ಮೈಡಾ ಅವರ ಗೋಲಿನ ಮೂಲಕ ಮುನ್ನಡೆ ಸಾಧಿಸಿತು. ಆದರೆ ಕೇವಲ ಆರು ನಿಮಿಷಗಳ ಬಳಿಕ ಸ್ವೀಡನ್‌ನ ಆಂಥೋನಿ ಎಲಾಂಗಾ ಸಮಬಲದ ಗೋಲು ಗಳಿಸಿ ಪಂದ್ಯವನ್ನು ಮತ್ತೆ ಸಮಬಲಕ್ಕೆ ತಂದರು. ಹೀಗಾಗಿ ಪಂದ್ಯ 1–1ರಲ್ಲಿ ಅಂತ್ಯಗೊಂಡಿತು. ಈ ಫಲಿತಾಂಶದೊಂದಿಗೆ ಜಪಾನ್ ಸತತ ಮೂರನೇ ವಿಶ್ವಕಪ್‌ನಲ್ಲಿ ಹಾಗೂ ಒಟ್ಟಾರೆ ಐದನೇ ಬಾರಿ ಗುಂಪು ಹಂತ ದಾಟಿ ನಾಕೌಟ್ ಪ್ರವೇಶಿಸಿತು.

ಐವರಿಗೆ ಗೆಲುವು

• **ಫಿಲಡೆಲ್ಫಿಯಾ:** ನಿಕೊಲಸ್ ಪೆಪೆ ಅವರ ದ್ವಿಗೋಲುಗಳ ನೆರವಿನಿಂದ ಐವರಿ ಕೋಸ್ಟ್ 2–0 ಅಂತರದಲ್ಲಿ ಕುರಸಾವೊ ತಂಡವನ್ನು ಮಣಿಸಿ, ವಿಶ್ವಕಪ್ ಇತಿಹಾಸದಲ್ಲೇ ಮೊದಲ ಬಾರಿಗೆ ನಾಕೌಟ್ ಹಂತಕ್ಕೆ ಅರ್ಹತೆ ಪಡೆಯಿತು. ಮೊದಲಾರ್ಧ ಹಾಗೂ ದ್ವಿತೀಯಾರ್ಧದಲ್ಲಿ ತಲಾ ಒಂದು ಗೋಲು ಗಳಿಸಿದ ಪೆಪೆ, ಐವರಿ ಕೋಸ್ಟ್ ಗೆ ಅಮೂಲ್ಯ ಜಯ ತಂದುಕೊಟ್ಟರು. ಮೊದಲ ಎರಡು ಪಂದ್ಯಗಳಲ್ಲಿ ಈಕ್ವೆಡಾರ್ ವಿರುದ್ಧ ಜಯ ಹಾಗೂ ಜರ್ಮನಿ ವಿರುದ್ಧ ಸೋಲು ಕಂಡಿದ್ದ ಐವರಿ ಕೋಸ್ಟ್, ನಿರ್ಣಾಯಕ ಪಂದ್ಯದಲ್ಲಿ ಗೆದ್ದು ಗುಂಪು ಹಂತ ದಾಟಿತು. ಗೆಲ್ಲಲೇಬೇಕಾದ ಒತ್ತಡದಲ್ಲಿದ್ದ ಕುರಸಾವೊಗೆ ಅವಕಾಶ ಸದುಪಯೋಗವಾಗದೆ ಟೂರ್ನಿಯಿಂದ ನಿರ್ಗಮಿಸ ಬೇಕಾಯಿತು. ನಾಕೌಟ್ ಹಂತದಲ್ಲಿ ಐವರಿ ಕೋಸ್ಟ್ ಫ್ರಾನ್ಸ್ ಅಥವಾ ನಾರ್ವೆ ವಿರುದ್ಧ ಸೆಣಸಲಿದೆ.

ಕೊನೆಯ ಕಿಕ್‌ನಲ್ಲಿ ಟರ್ಕಿ ಜಯಘೋಷ

ಗೋಲುಗಳ ಪಟ್ಟಿ
- ಆಸ್ಟಿನ್ ಟ್ರಸ್ಟಿ(ಅಮೆರಿಕ): 3ನೇ ನಿಮಿಷ
- ಆರ್ದಾ ಗುಲೇರ್(ಟರ್ಕಿ): 10ನೇ ನಿಮಿಷ
- ಬ್ಯಾರಿಸ್(ಟರ್ಕಿ): 31ನೇ ನಿಮಿಷ
- ಸಬ್‌ಸ್ಟೇನ್(ಅಮೆರಿಕ): 49ನೇ ನಿಮಿಷ
- ಕಾನ್ ಅಯಾನ್(ಟರ್ಕಿ): 90+8ನೇ ನಿಮಿಷ

ವಿಶ್ವಕಪ್: ಅಮೆರಿಕಕ್ಕೆ ಸೋಲು, ಟರ್ಕಿಗೆ ಗೆಲುವಿನ ಖುಷಿ

• **ಇಂಗಲ್‌ವುಡ್ (ಕ್ಯಾಲಿಫೋರ್ನಿಯಾ):** ಈಗಾಗಲೇ ನಾಕೌಟ್ ಹಂತದ ಸ್ಥಾನ ಖಚಿತಪಡಿಸಿಕೊಂಡಿದ್ದ ಅಮೆರಿಕ ವಿರುದ್ಧ ಟರ್ಕಿ ಕೊನೆಯ ಕ್ಷಣದ ಗೋಲಿನ ನೆರವಿನಿಂದ 3–2 ಅಂತರದ ರೋಚಕ ಗೆಲುವು ದಾಖಲಿಸಿತು.

ಪಂದ್ಯ ಆರಂಭವಾದ ಮೂರನೇ ನಿಮಿಷದಲ್ಲೇ ಆಸ್ಟಿನ್ ಟ್ರಸ್ಟಿ ಗೋಲು ಬಾರಿಸಿ ಅಮೆರಿಕಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಆರ್ದಾ ಗುಲರ್ ಹಾಗೂ ಒರ್ಕುನ್ ಕೊಕ್ಚು ಮೊದಲಾರ್ಧದಲ್ಲೇ ಗೋಲು ಗಳಿಸಿ ಟರ್ಕಿಗೆ 2–1ರ ಮುನ್ನಡೆ ಒದಗಿಸಿದರು. ದ್ವಿತೀಯಾರ್ಧದ ಆರಂಭದಲ್ಲೇ ಸೆಬಾಸ್ಟಿಯನ್ ಬೆರ್ಹಾಲ್ಟರ್ ಸಮಬಲದ ಗೋಲು ಬಾರಿಸಿ ಅಮೆರಿಕಕ್ಕೆ ಮತ್ತೆ ಆಶಾಕಿರಣ ಮೂಡಿಸಿದರು. ನಂತರ ಎರಡೂ ತಂಡಗಳು ಗೆಲುವಿಗಾಗಿ ಹೋರಾಟ ನಡೆಸಿದವು. ಹೆಚ್ಚುವರಿ ಸಮಯದ ಎಂಟನೇ ನಿಮಿಷದಲ್ಲಿ ಕ್ಯಾನ್ ಉಜುನ್ ನೀಡಿದ ಪಾಸ್ ಅನ್ನು ಕಾನ್ ಐಹಾನ್ ಗೋಲಾಗಿ ಪರಿವರ್ತಿಸಿ ಟರ್ಕಿಗೆ 3–2ರ ರೋಚಕ ಗೆಲುವು ತಂದುಕೊಟ್ಟರು.



9 ಹೊಸ ಆಟಗಾರರೊಂದಿಗೆ ಆಡಿದ ಅಮೆರಿಕ: ಈ ಪಂದ್ಯಕ್ಕೆ ಅಮೆರಿಕದ ಮುಖ್ಯ ಕೋಚ್ ಮೌರಿಸಿಯೋ ಪೊಚೆಟ್ಟಿನೊ ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಿ ಒಟ್ಟು ಒಂಬತ್ತು ಹೊಸ ಆಟಗಾರರನ್ನು ಕಣಕ್ಕಿಳಿಸಿದ್ದರು. ಗಾಯದಿಂದ ಚೇತರಿಸಿಕೊಂಡ ಕ್ರಿಶ್ಚಿಯನ್ ಪುಲಿಸಿಕ್ 58ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದರು. ಈಗಾಗಲೇ ಪರಾಗ್ವೆ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಗೆಲುವಿನೊಂದಿಗೆ ಡಿ ಗುಂಪಿನ ಅಗ್ರಸ್ಥಾನಿಯಾಗಿ ನಾಕೌಟ್ ಹಂತ ಪ್ರವೇಶಿಸಿರುವ ಅಮೆರಿಕ, ಮುಂದಿನ ಸುತ್ತಿನಲ್ಲಿ ಬೋಸ್ನಿಯಾ-ಹರ್ಜಗೋವಿನಾವನ್ನು ಎದುರಿಸಲಿದೆ. ಟರ್ಕಿ ಮಾತ್ರ ಟೂರ್ನಿಯಿಂದ ಹೊರಬಿದ್ದಿದ್ದರೂ, ಸಮಾಧಾನದ ಗೆಲುವಿನೊಂದಿಗೆ ಅಭಿಯಾನ ಮುಗಿಸಿತು.

ಆಸ್ಟ್ರೇಲಿಯಾ-ಪರಾಗ್ವೆ ಪಂದ್ಯ ಡ್ರಾ

• **ಫ್ರಾನ್ಸಿಸ್ಕೊ:** ದಿನದ ಮತ್ತೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾ ಹಾಗೂ ಪರಾಗ್ವೆ ತಂಡಗಳು ಡ್ರಾಗೆ ರಾಜಿಯಾದವು. ಹಿಂದಿನ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಆಸ್ಟ್ರೇಲಿಯಾ ತಂಡವನ್ನು ಪರಾಗ್ವೆ ಕಟ್ಟಿ ಹಾಕಿತು. ಆಸ್ಟ್ರೇಲಿಯಾಗೆ 3 ಪ್ರಮುಖ ಕಾರ್ನರ್‌ಗಳು ಸಿಕ್ಕರೂ ಬಳಸಿಕೊಳ್ಳಲಿಲ್ಲ. ಅತ್ತ ಪರಾಗ್ವೆಗೂ 1 ಕಾರ್ನರ್ ಸಿಕ್ಕಿತ್ತು. ಆದರೆ ಪಂದ್ಯದುದ್ದಕ್ಕೂ ಯಾವುದೇ ಗೋಲು ದಾಖಲಾಗಲೇ ಇಲ್ಲ.

ಭಾರತಕ್ಕೆ ಹೆಚ್ಚಿದ ಒತ್ತಡ | ಸೆಮಿಗಾಗಿ ಫೈಟ್

ದ.ಆಫ್ರಿಕಾಗೆ ಭರ್ಜರಿ ಗೆಲುವು

• **ಬ್ರಿಸ್ಟಾಲ್:** ನೆದರ್ಲೆಂಡ್ಸ್ ತಂಡವನ್ನು 88 ರನ್‌ಗಳಿಂದ ಸೋಲಿಸಿರುವ ದ.ಆಫ್ರಿಕಾ ಮಹಿಳೆಯರ ತಂಡವು ಟಿ20 ವಿಶ್ವಕಪ್ ಪಂದ್ಯಾವಳಿಯ ಸೆಮಿ ರೇಸ್ ಇನ್ನಷ್ಟು ರೋಚಕಗೊಳಿಸಿದೆ. ತಜ್ಮಿನ್ ಬ್ರಿಟ್ಸ್ ಅವರ ಸ್ಫೋಟಕ ಶತಕ ಮತ್ತು ಅಯಾಬೊಂಗಾ ಖಾಕಾ ಅವರ ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಪ್ರಾಬಲ್ಯ ಸಾಧಿಸಿರುವ ಹರಿಣರು ಭಾರತವನ್ನು ಮತ್ತೆ ಸಂಕಷ್ಟಕ್ಕೆ ಸಿಲುಕಿಸಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಫ್ರಿಕಾ 20 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 208 ರನ್ ಗಳಿಸಿತು. ಬ್ರಿಟ್ಸ್ 69 ಬಾಲ್‌ಗಳನ್ನು ಎದುರಿಸಿ 114 ರನ್ ಬಾರಿಸಿದರು. 15 ಬೌಂಡರಿ, 3 ಸಿಕ್ಸರ್‌ಗಳನ್ನು ಸಿಡಿಸಿದ ಅವರು, ಔಟಾಗದೆ ಉಳಿದರು. ಇನ್ನುಳಿದಂತೆ ನಾಯಕಿ ಲೌರಾ ವಾಲ್ವಾರ್ಡ್ಟ್ 45 ರನ್ ಗಳಿಸಿದರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಡೆರ್ಕ್‌ಸೆನ್ 16 ಬಾಲ್‌ಗಳಲ್ಲಿ 37★ ರನ್ ಗಳಿಸಿದರು.

ಗುರಿ ಬೆನ್ನತ್ತಿದ ನೆದರ್ಲೆಂಡ್ಸ್8 ವಿಕೆಟ್ ನಷ್ಟಕ್ಕೆ 120 ರನ್ ಮಾತ್ರ ಗಳಿಸಿತು. ಫೆಬೆ 41 ಬಾಲ್‌ಗಳಲ್ಲಿ 41 ರನ್ ಗಳಿಸಿದರು. ಸನ್ಯಾ 36 ರನ್ ಗಳಿಸಿದರು. ಸ್ಟೆರ್ರಿ 26 ರನ್ ಗಳಿಸಿದರು. ಆಫ್ರಿಕಾ ಪರ ಖಾಕಾ 19 ರನ್ ಗೆ 3 ವಿಕೆಟ್ ಕಿತ್ತರು. ಚೋಲೆ 16 ರನ್‌ಗೆ 2 ವಿಕೆಟ್ ಕಿತ್ತರು.

ಮೊದಲನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಹೀನಾಯವಾಗಿ ಸೋತಿದ್ದ ದ.ಆಫ್ರಿಕಾ ಬಳಿಕ ನಡೆದ 3 ಸತತ ಪಂದ್ಯಗಳಲ್ಲಿ ಜಯಭೇರಿ ಬಾರಿಸಿದೆ. ಇದರೊಂದಿಗೆ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದು, ಸೆಮಿಗಾಗಿ ಬಲಿಷ್ಠ ಪೈಪೋಟಿ ನಡೆಸಲು ಸಜ್ಜಾಗಿದೆ. ಮುಂದಿನ ಪಂದ್ಯದಲ್ಲಿ ಆಫ್ರಿಕನ್ನರು ಬಾಂಗ್ಲಾವನ್ನು ಎದುರಿಸಲಿದ್ದರೆ, ಭಾರತ ತಂಡ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಆ ಪಂದ್ಯದಲ್ಲಿ ಸೋಲು ತಂಡ ವಿಶ್ವಕಪ್‌ನಿಂದ ಬಹುತೇಕ ಹೊರಬೀಳಬಹುದು. ಆದಾಗ್ಯೂ ಭಾರತದ ರನ್‌ರೇಟ್ 2ಕ್ಕೂ ಹೆಚ್ಚಾಗಿರುವುದು ಬಲ ತಂದಿದೆ. ಹೀಗಾಗಿ ದ.ಆಫ್ರಿಕಾ ಬಾಂಗ್ಲಾ ವಿರುದ್ಧ ಗೆದ್ದರೂ ಹೆಚ್ಚಿನ ರನ್‌ರೇಟ್‌ನಿಂದ ಗೆಲ್ಲಬೇಕು. ಭಾರತ ಏನಾದರೂ ಆಸ್ಟ್ರೇಲಿಯಾ ವಿರುದ್ಧ ಗೆದ್ದರೆ ಸೆಮಿ ಟಿಕೆಟ್ ಖಚಿತವಾಗಬಹುದು.



ಪ್ರವಾಸಿ ಭಾರತಕ್ಕೆ ಹೀನಾಯ ಸೋಲು | ಶ್ರೇಯಸ್ ಅಯ್ಯರ್‌ಗೆ ಕಳಪೆ ಆರಂಭ

ಐರ್ಲೆಂಡ್‌ಗೆ ಐತಿಹಾಸಿಕ ಜಯ!

• **ಬೆಲ್‌ಫಾಸ್ಟ್:** ಭಾರತ ಟಿ20 ತಂಡಕ್ಕೆ 15ನೇ ನಾಯಕರಾಗಿ ಪದಾರ್ಪಣೆ ಮಾಡಿದ ಶ್ರೇಯಸ್ ಅಯ್ಯರ್ ಮೊದಲ ಪಂದ್ಯದಲ್ಲೇ ದೊಡ್ಡ ಆಘಾತ ಎದುರಿಸಿದ್ದು, ಇತಿಹಾಸದಲ್ಲಿ ಮೊದಲನೇ ಬಾರಿ ಭಾರತ ಐರ್ಲೆಂಡ್‌ನೊಂದಿಗೆ ಸೋಲು ಕಂಡಿದೆ.

ಹೊಸ ತಂಡ, ಹೊಸ ನಾಯಕನೊಂದಿಗೆ ಐರ್ಲೆಂಡ್ ಸರಣಿಗಿಳಿದ ಭಾರತ ತಂಡವು, ತೀವ್ರ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡು 182 ರನ್ ಬಿಟ್ಟುಕೊಟ್ಟಿತು, 9 ವಿಕೆಟ್ ಬಿದ್ದವು. ಗುರಿ ಬೆನ್ನತ್ತಿದ ಭಾರತ 18.5 ಓವರ್ ಗಳಲ್ಲಿ 148 ರನ್‌ಗಳಿಗೆ ಆಲೌಟ್ ಆಯಿತು. ಈ ಗೆಲುವಿನೊಂದಿಗೆ ಸರಣಿಯಲ್ಲಿ ಮುನ್ನಡೆ ಸಾಧಿಸಿರುವ ಐರ್ಲೆಂಡ್ ಇತಿಹಾಸದಲ್ಲಿ ಮೊದಲನೇ ಬಾರಿಗೆ ಭಾರತ ವಿರುದ್ಧ ಕ್ರಿಕೆಟ್ ಪಂದ್ಯವೊಂದನ್ನು ಗೆದ್ದಿದೆ.

ಅಭಿಷೇಕ್ ಶರ್ಮ ಹೋರಾಟ: ಗುರಿ ಬೆನ್ನತ್ತಿದ ಭಾರತಕ್ಕೆ ಅಭಿಷೇಕ್ ಶರ್ಮ ಸ್ಫೋಟಕ ಆರಂಭ ಕೊಟ್ಟರು. ಸರಳವಾಗಿ ಗೆಲ್ಲುವಂತೆ ಕಾಣಿಸಿಕೊಂಡ ನಂತರ ಸಂಜು 5, ಕಿಶನ್ 1 ರನ್‌ಗೆ ವಿಕೆಟ್ ಒಪ್ಪಿಸಿದರು. ಆದಾಗ್ಯೂ ಅಭಿ ಸುಮ್ಮನಿರಲಿಲ್ಲ. ಬಂದ ಬೌಲರ್ ಗಳನ್ನೆಲ್ಲಾ ದಂಡಿಸುತ್ತಾ ದಡದತ್ತ ಸಾಗುತ್ತಿದ್ದರು. ಪವರ್‌ಪ್ಲೇನಲ್ಲಿ ಭಾರತ 3 ವಿಕೆಟ್‌ಗೆ 68 ರನ್‌ಗಳಿಸಿತ್ತು. 20 ಬಾಲ್‌ಗಳಲ್ಲಿ 49 ರನ್‌ಗಳಿಸಿದ ಅಭಿಷೇಕ್ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಶ್ರೇಯಸ್ 3 ರನ್, ತಿಲಕ್ 19 ರನ್, ಸುಂದರ್ 9 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಭಾರತ ತೀವ್ರ ಆಘಾತ ಎದುರಿಸಿತು. ಆದಾಗ್ಯೂ ಶಿವಂ ದುಬೆ ಒಂದೆರಡು ಸಿಕ್ಸರ್‌ಗಳ ಮೂಲಕ ಪಂದ್ಯಕ್ಕೆ ಜೀವ ತುಂಬಿದರು. 14 ಬಾಲ್ ಗಳಲ್ಲಿ 25 ರನ್‌ಗಳಿಸಿ ದುಬೆ ಔಟಾದರು. ಅಕ್ಷರ್ 15 ರನ್‌ಗೆ ಹೋರಾಟ ನಿಲ್ಲಿಸಿದರು.

ವೈಭವ್‌ಗಿಲ್ಲ ಜಾಗ
ಬಹು ನಿರೀಕ್ಷಿತ ವೈಭವ್ ಸೂರ್ಯವಂಶಿ ಪದಾರ್ಪಣೆ ಶುಕ್ರವಾರ ಆಗಲಿಲ್ಲ. ಮೈದಾನದಲ್ಲಿ ಕಾಣಿಸಿಕೊಂಡರೂ ವೈಭವ್ ಆಡುವ 11ರ ಬಳಗದಲ್ಲಿ ಕಾಣಿಸಿಕೊಳ್ಳಲಿಲ್ಲ. ಇದೇ ಮೊದಲ ಬಾರಿಗೆ ಟಾಸ್‌ಗೆ ಬಂದ ನಾಯಕ ಶ್ರೇಯಸ್ ಅಯ್ಯರ್ ಸಮಯ ಬಂದಾಗ ವೈಭವ್ ಕಂಡಿತವಾಗ್ಯೂ ಆಡುತ್ತಾರೆ ಎಂದರು.

ಸಂಕ್ಷಿಪ್ತ ಸ್ಕೋರ್
ಐರ್ಲೆಂಡ್ 20 ಓವರ್‌ಗಳಲ್ಲಿ 182/9: ಟಕ್ಕರ್ 50★, ಗಾರೆತ್ 49; ಹರ್ಷಿತ್ 24/3
ಭಾರತ 18.5 ಓವರ್‌ಗಳಲ್ಲಿ 148/10: ಅಭಿಷೇಕ್ 49, ದುಬೆ 25; ಮ್ಯಾಥ್ಯೂ 38/3, ಹಾಲೊರ್ಡ್ 28/3

ಐರ್ಲೆಂಡ್‌ಗೆ ಟಕ್ಕರ್ ಆಸರೆ: ಟಾಸ್ ಗೆದ್ದ ಭಾರತ ಬೌಲಿಂಗ್ ಆಯ್ಕೆ ಮಾಡಿತು. ಟಿಮ್ 17, ರಾಸ್ 12 ರನ್ ಗಳಿಸಿ ವಿಕೆಟ್ ಒಪ್ಪಿಸಿದ ನಂತರ ಐರ್ಲೆಂಡ್ ಸಂಕಷ್ಟಕ್ಕೆ ಸಿಲುಕಿಕೊಂಡಿತ್ತು. ನಾಯಕ ಟಕ್ಕರ್ ತಂಡಕ್ಕೆ ಆಸರೆಯಾದರು. ಪವರ್‌ಪ್ಲೇನಲ್ಲಿ ಐರ್ಲೆಂಡ್ 36ರನ್ ಮಾತ್ರ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಟಕ್ಕರ್ ಜತೆಗೆ ಗಾರೆತ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಈ ಜೋಡಿ ಪಂದ್ಯದ ದಿಕ್ಕನ್ನೇ ಬದಲಾಯಿಸಿತು. ಟಕ್ಕರ್ 50, ಗಾರೆತ್ 49 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಐರ್ಲೆಂಡ್ ಸಂಕಷ್ಟಕ್ಕೆ ಸಿಲುಕಿಕೊಂಡಿತು. ಡೆತ್ ಓವರ್‌ಗಳಲ್ಲಿ ಜಾರ್ಜ್ 19 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿದರು. ಭಾರತ ಪರ ಹರ್ಷಿತ್ ರಾಣಾ 3, ಅಕ್ಷರ್, ಅರ್ಷದೀಪ್ 2 ವಿಕೆಟ್ ಕಿತ್ತರು.

ಯುಎಸ್ ಓಪನ್: ಶ್ರೀಕಾಂತ್, ರೌಣಕ್ ಮುನ್ನಡೆ

• **ನ್ಯೂ ಯಾರ್ಕ್:** ತಮ್ಮ ಕರಾರುವಾಕ್ ಪ್ರದರ್ಶನ ಮುಂದುವರಿಸಿರುವ ಭಾರತದ ಕಿಡಂಬಿ ಶ್ರೀಕಾಂತ್ ಮತ್ತು ರೌಣಕ್ ಚೌಹಾಣ್ ಪ್ರತಿಷ್ಠಿತ ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಮೂರನೇ ಸುತ್ತಿಗೆ ಮುನ್ನಡೆದರು.ಜೆ. ಲೀ ಅವರನ್ನು ಎದುರಿಸಿದ್ದ ಅನುಭವಿ ಕಿಡಂಬಿ ಶ್ರೀಕಾಂತ್ 21–14, 21–13ರಿಂದ ಗೆಲುವು ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ಟಿ. ಸಿ. ಚೌ ಅವರನ್ನು ಎದುರಿಸಿದ್ದ ರೌಣಕ್ 21–17, 26–26ರಿಂದ ಗೆಲುವು ಸಾಧಿಸಿ ಮುನ್ನಡೆದರು. ಇದೇ ಮೊದಲ ಬಾರಿಗೆ ಮುಖ್ಯ ಡ್ರಾಗೆ ಅರ್ಹತೆ ಪಡೆದ ರೌಣಕ್ ಗಮನ ಸೆಳೆದಿದ್ದಾರೆ. ಮಹಿಳೆಯರ ವಿಭಾಗದಲ್ಲೂ ಭಾರತೀಯರ ಪ್ರಾಬಲ್ಯ ಮುಂದುವರಿಯುತು. ದೇವಿಕಾ ಸಿಹಾಗ್, ಸೇಹಾಂಗ್ ಅವರೊಂದಿಗೆ 21–17, 21–19ರಿಂದ ಗೆಲುವು ಸಾಧಿಸಿದರು. ತುಂಗ್ ಅವರನ್ನು ಎದುರಿಸಿದ್ದ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮ, 21–12, 21–19ರಿಂದ ಭರ್ಜರಿ ಗೆಲುವು ದಾಖಲಿಸಿದರು. ರಕ್ಷಿತಾ ರಾಮ್‌ರಾಜ್ ಅವರು ಚೇನ್ ವಿರುದ್ಧ 21–4, 21–19ರಿಂದ ಗೆಲುವು ಸಾಧಿಸಿದರು.

ಇಂದು ಎರಡು ಪಂದ್ಯ | ವೀಕ್ಷಣೆಗೆ ಅಭಿಮಾನಿಗಳ ಕಾತರ

ಹುಬ್ಬಳ್ಳಿಯಲ್ಲಿ ಮಹಾರಾಜ ಟ್ರೋಫಿ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ಇಲ್ಲಿಯ ನೃಪತುಂಗ ಬೆಟ್ಟದಿಂದ ಬೀಸುವ ತಣ್ಣನೆಯ ಮಳೆ ಗಾಳಿಯೂ ಈಗ ಕ್ರಿಕೆಟ್ ಕಂಪು ಸೂಸುತ್ತಿದೆ. ಏಳು ವರ್ಷದ ಬಳಿಕ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಟಿ–20 ಚುಟುಕು ಕ್ರಿಕೆಟ್ ಪಂದ್ಯಗಳ ವೀಕ್ಷಣೆಗೆ ಅಭಿಮಾನಿಗಳು ಕಾತರರಾಗಿದ್ದಾರೆ.

ಮೈಸೂರಿನಲ್ಲಿ ಮೊದಲ ಹಂತದ ಪಂದ್ಯಗಳು ಮುಗಿದಿದ್ದು, ಶನಿವಾರದಿಂದ(ಜೂ.27) ಮಹಾರಾಜ ಟ್ರೋಫಿಯ ಕ್ರಿಕೆಟ್ ಟೂರ್ನಿಯ ಎರಡನೇ ಹಂತದ ಪಂದ್ಯಗಳು ಹುಬ್ಬಳ್ಳಿಯಲ್ಲಿ ಆರಂಭವಾಗಲಿವೆ. ಟೂರ್ನಿಗೆಂದು ಕಳೆದ 1 ತಿಂಗಳಿನಿಂದ ಕ್ರೀಡಾಂಗಣ ಸಜ್ಜುಗೊಳಿಸಲಾಗಿದೆ. ನಗರದಲ್ಲಿ ಮೋಡ ಕವಿದು ಆಗಾಗ ತುಂತುರು ಮಳೆಯಾಗುತ್ತಿದೆ. ಟೂರ್ನಿಗೆ ಮಳೆಯ ಆತಂಕ ಎದುರಾದರೂ ಸಹ 50ಕ್ಕೂ ಹೆಚ್ಚು ಸಿಬ್ಬಂದಿ ನಿರ್ವಹಣೆಗೆ ಸಿದ್ಧರಿದ್ದಾರೆ.

ಏಳು ದಿನ ಒಟ್ಟು 12 ಪಂದ್ಯಗಳ ಪೈಕಿ ಆರು ಪಂದ್ಯಗಳು ಹೊನಲು ಬೆಳಕಿನಲ್ಲಿ ನಡೆಯಲಿವೆ. ಕರ್ನಾಟಕ ತಂಡದ ಜನಪ್ರಿಯ ಆಟಗಾರರಾದ ಮನೀಶ್ ಪಾಂಡೆ, ಕರುಣ ನಾಯರ್, ವೈಶಾಕ ವಿಜಯಕುಮಾರ, ಶ್ರೇಯಸ್ ಗೋಪಾಲ ಆಕರ್ಷಕರಾಗಿದ್ದಾರೆ. ಶುಕ್ರವಾರ ಬೆಂಗಳೂರ ಬ್ಲಾಸ್ಟರ್ಸ್, ಶಿವಮೊಗ್ಗ ಹಾಗೂ ಗುಲ್ಬರ್ಗಾ ತಂಡದ ಆಟಗಾರರು ಮೈದಾನದಲ್ಲಿ ಅಭ್ಯಾಸ ನಡೆಸಿದರು. ಪಂದ್ಯ ವೀಕ್ಷಣೆಗೆ ಕ್ರೀಡಾಂಗಣದಲ್ಲಿ 8 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಪ್ರವೇಶಕ್ಕೆ ರೂ.150 ಹಾಗೂ 200 ದರ ನಿಗದಿ ಮಾಡಲಾಗಿದೆ. ಮೂರು ಹಾಗೂ ನಾಲ್ಕನೇ ದ್ವಾರದಲ್ಲಿ ಟಿಕೆಟ್ ದೊರೆಯಲಿವೆ.

ಇಂದು ಬೆಂಗಳೂರು -ಶಿವಮೊಗ್ಗ ಮುಖಾಮುಖಿ: ಹುಬ್ಬಳ್ಳಿ ನಡೆಯುವ ಮೊದಲ ಪಂದ್ಯದಲ್ಲಿ ಶುಭಾಂಗ ಹೆಗ್ಡೆ ನಾಯಕತ್ವದ ಕಲ್ಯಾಣಿ ಬೆಂಗಳೂರ ಬ್ಲಾಸ್ಟರ್ಸ್ ಹಾಗೂ ಸ್ಮರಣ ರವಿಚಂದ್ರ ನಾಯಕತ್ವದ ಶಿವಮೊಗ್ಗ ಯೋಧಾಸ್ ಮುಖಾಮುಖಿಯಾಗಲಿವೆ. ನಾಲ್ಕು ಪಂದ್ಯದಲ್ಲಿ ಮೂರು ಪಂದ್ಯಗಳ ಗೆಲ್ಲುವ ಮೂಲಕ ಬೆಂಗಳೂರು ಬ್ಲಾಸ್ಟರ್ಸ್ ತಂಡ 6 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಹುಬ್ಬಳ್ಳಿಯಲ್ಲಿಯೂ ಶಿವಮೊಗ್ಗ ತಂಡದ ವಿರುದ್ಧ ಜಯಗಳಿಸುವ ಮೂಲಕ ಅಗ್ರಸ್ಥಾನ ಭದ್ರ ಪಡಿಸಿಕೊಳ್ಳುವ ಆತ್ಮ ವಿಶ್ವಾಸವಿದೆ.

ಮೈಸೂರು ವಾರಿಯರ್ಸ್-ಗುಲ್ಬರ್ಗ್ ಮಿಸ್ಟಿಕ್ಸ್ ಹಣಾಹಣಿ: ಶರತ್ ಬಿಆರ್ ನಾಯಕತ್ವದ ಗುಲ್ಬರ್ಗಾ ಮಿಸ್ಟಿಕ್ಸ್ ಹಾಗೂ ವೈಶಾಕ್ ವಿಜಯಕುಮಾರ್ ನೇತೃತ್ವದ ಮೈಸೂರು ವಾರಿಯರ್ಸ್ ತಂಡ ಇಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ಸೆಣಸಲಿವೆ. ಗುಲ್ಬರ್ಗಾ ತಂಡ ಎರಡು ಪಂದ್ಯಗಳ ಗೆಲ್ಲುವ ಮೂಲಕ 2 ನೇ ಸ್ಥಾನದಲ್ಲಿದೆ. ಮೈಸೂರ ತಂಡ ಕೊನೆಯ ಸ್ಥಾನದಲ್ಲಿದ್ದು, ಪುಟಿದೇಳುವ ವಿಶ್ವದಲ್ಲಿ ಇದೆ.

ಮಧ್ಯಾಹ್ನ 2 ಗಂಟೆಗೆ ಕಲ್ಯಾಣಿ ಬೆಂಗಳೂರ ಬ್ಲಾಸ್ಟರ್ಸ್ ಹಾಗೂ ಶಿವಮೊಗ್ಗ ಯೋಧಾಸ್
ಸಂಜೆ 7 ಗಂಟೆಗೆ ಮೈಸೂರು ವಾರಿಯರ್ಸ್- ಗುಲ್ಬರ್ಗ್ ಮಿಸ್ಟಿಕ್ಸ್

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



6027

ಎಡದಿಂದ ಬಲಕ್ಕೆ
1.ವಿಶ್ವವಿದ್ಯಾಲಯದಿಂದ ಡಿಗ್ರಿ ಪಡೆದವ (5)
5.ಎಣೆ–ಹೋಲಿಕೆಯ ಸಮಾನಪದ (2)
6.ತೀವ್ರವಾದ ಕೋಪ–ಉದ್ರೇಕದ ಸ್ಥಿತಿ (3)
7.ಒಳ್ಳೆಯ ಗುರುತು–ಸೊಗಸಿನಿಂದ ಕೂಡಿದ್ದು (4)
8.ಹಮ್ಮುಬಿಮ್ಮುಗಳಿಲ್ಲದ ಗುಣ ತಿರುಗಿದೆ (3)
10.ಹಣೆಯ ಮೇಲಿಟ್ಟುಕೊಳ್ಳುವ ಬೊಟ್ಟು (3)
12.ಗಣಿಯ ನಡುವೆ ಗುಂಪಿನ ಮುಂದಾಳು ಇದ್ದಾನೆ (4)
14.ಎರಡು ಅಥವಾ ಹೆಚ್ಚು ನದಿಗಳ ಕೂಟ (3)
16.ಚಟ–ನಡವಳಿಕೆಯಲ್ಲಿ ತಿರುಗಿದೆ (2)
17.ಜೀವಧಾರಕ ನೆತ್ತರಿನ ಹರಿಯುವಿಕೆ (5)

ಮೇಲಿನಿಂದ ಕೆಳಕ್ಕೆ
1.10ನೆ ತರಗತಿಯ ನಂತರದ ಶಿಕ್ಷಣ ಹಂತ (5)
2.ನೋಡು–ಗಮನಿಸುವಿಕೆ (3)
3.ಭೂಮಿಯ ಅಡಿಯಲ್ಲಿದೆಯೆನ್ನುವ ಲೋಕ (4)
4.ಒಳಹೋಗುವಿಕೆ–ಪ್ರಾರಂಭವಿದು (3)
6.ಆಜ್ಞೆ–ಅಪ್ಪಣೆಯ ಸಮಾನಪದ (3)
9.ಸರ್ಕಾರ ಸ್ಥಾಪಿಸಿದ ಸ್ವತಂತ್ರ ಸಂಸ್ಥೆ (3)
11.ತಾವರೆಗಳಿಂದ ತುಂಬಿದ ಕೊಳ (5)
13.ಆಕಾಶಕಾಯಗಳು ಕಕ್ಷೆಯಲ್ಲಿ ಸುತ್ತುವಿಕೆ (4)
14.ಖಚಿತತೆ ಇಲ್ಲದ್ದು–ನಂಬಲು ಕಷ್ಟವಾದುದು (3)
15.ಶಬ್ದ–ಲಯಗಳ ಸಂಯೋಜನೆ ತಲೆಕೆಳಗಾಗಿದೆ (3)

6026 ಉತ್ತರ

ಎಡದಿಂದ ಬಲಕ್ಕೆ:
1.ಸರಸ್ವತಿ 3.ಸುಖೀರಾಜ್ಯ
5.ಸಮಾಪ್ತ 6.ಅವಯವ
8.ಗಂಧಕ 10.ನಮನ
12.ಬಗೆಹರಿ 14.ಫಕೀರ
15.ಜನಬಲ
16.ಹರಮಾರಿ

ಮೇಲಿನಿಂದ ಕೆಳಕ್ಕೆ :
1.ಅಕ್ಕಸ 2.ವಸತಿ
3.ಸುಪ್ತಚೇತನ
4.ರಾಜಕೇತನ 7.ಧಡಿಯ
8.ಗಂಧರ್ವಗಾನ
9.ಕದಳೀಫಲ 11.ಮಜ್ಜಿಗೆ
12.ಬರಹ 13.ರಿಪೇರಿ

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ | ಸಂಸದ, ಶಾಸಕರ ಉಪಸ್ಥಿತಿ

ಬರಗಾಲ ತೊಲಗಿ ಮಳೆ -ಬೆಳೆಗಾಗಿ ಪ್ರಾರ್ಥನೆ




ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಬಳಿಕ ಸಂಸದರ ಹಾಗೂ ಶಾಸಕರೊಂದಿಗೆ ಧರ್ಮಾಧಿಕಾರಿಯವರನ್ನು ಭೇಟಿ ಮಾಡಿದರು.

ಧರ್ಮಸ್ಥಳ: ರಾಜ್ಯದಲ್ಲಿ ಭೀಕರ ಬರಗಾಲದ ಸನ್ನಿವೇಶವಿದ್ದು ಇದೆಲ್ಲ ನಿವಾರಣೆಯಾಗಿ ಒಳ್ಳೆಯ ಮಳೆ-ಬೆಳೆ ಆಗಲಿ. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗಲಿ. ಜನರ ಬದುಕು ಹಸನಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದು ಬಿ.ಜೆ.ಪಿ. ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಹೇಳಿದರು.

ಅವರು ಧರ್ಮಸ್ಥಳದಲ್ಲಿ ದೇವರ ದರ್ಶನ ಮಾಡಿ, ವಿಶೇಷ ಪೂಜೆಯೊಂದಿಗೆ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರನ್ನು ಬೀಡಿನಲ್ಲಿ ಭೇಟಿಯಾಗಿ ಆಶೀರ್ವಾದ ಪಡೆದರು. ನಂತರ ಶ್ರೀ ಸನ್ನಿಧಿ ಅತಿಥಿಗೃಹದಲ್ಲಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಹಿಂದುಗಳ ರಕ್ಷಣೆ ಮಾಡುವ ಬಿಜೆಪಿ ಸರಕಾರ ಬರಲಿ : ಕೋರಿಕೆ

ಕಳೆದ ನಾಲ್ಕು ದಿನಗಳಲ್ಲಿ ದಿಲ್ಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿಯಾಗಿ ಮಾತುಕತೆ ನಡೆಸಿ ಮಂಗಳೂರು ಮೂಲಕ ನೇರವಾಗಿ ಧರ್ಮಸ್ಥಳಕ್ಕೆ ಬಂದಿದ್ದೇನೆ. ಹಿಂದುಗಳ ರಕ್ಷಣೆ ಮಾಡುವ ಬಿ.ಜೆ.ಪಿ. ನೇತೃತ್ವದ ಒಳ್ಳೆಯ ಸರ್ಕಾರ ಆಡಳಿತಕ್ಕೆ ಬರಲಿ ಎಂದು ಹಾಗೂ ರಾಜ್ಯದ ಸರ್ವತೋಮುಖ ಪ್ರಗತಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇವೆ ಎಂದರು.

ಅಡ್ಡಮತದಾನದಿಂದ ಕಾರ್ಯಕರ್ತರಿಗೆ ನೋವು

ವಿಧಾನಪರಿಷತ್ ಚುನಾವಣೆಯಲ್ಲಿ ನಮ್ಮ ಇಬ್ಬರು ಅಭ್ಯರ್ಥಿಗಳು ಗೆಲುವು ಪಡೆದಿದ್ದಾರೆ. ಚುನಾವಣೆಯಲ್ಲಿ ಅಡ್ಡಮತದಾನದ ಬಗ್ಗೆ ಲಕ್ಷಾಂತರ ಮಂದಿ ಪಕ್ಷದ ಕಾರ್ಯಕರ್ತರು ನೋವನ್ನು ಅನುಭವಿಸಿದ್ದಾರೆ. ಇದು ಬೇರೆ ಬೇರೆ ಚರ್ಚೆಗಳಿಗೆ ಗ್ರಾಸವಾಗಿತ್ತು. ತಾನು ಧರ್ಮಸ್ಥಳದ ಅಭಿಮಾನಿ ಭಕ್ತನಾಗಿದ್ದು, ಯಾವುದೇ ನೋವಾದಾಗ ಇಲ್ಲಿಗೆ ಬಂದು ಪರಿಹರಿಸಿಕೊಳ್ಳುತ್ತೇನೆ. ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ ನಡೆಯಬೇಕು. ಸತ್ಯಾಸತ್ಯತೆ ಹೊರಬರಬೇಕು ಎಂದು ಹೇಳಿದ್ದೆ, ಹಿರಿಯರ ಸಲಹೆಯಂತೆ ದಿಲ್ಲಿಗೆ ಹೋಗಿ ವರಿಷ್ಠರ ಜೊತೆ ಮಾತನಾಡಿದ್ದೇನೆ. ಅವರ ಸಲಹೆಯಂತೆ ನಿರ್ಧಾರ ಕೈಬಿಟ್ಟು ದೇವರ ಭಕ್ತನಾಗಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದರು.

ಅಡ್ಡ ಮತದಾನ ಆದಾಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ತನ್ನ ನಡುವಿನ ಆತ್ಮೀಯತೆ ಹಾಗೂ ವ್ಯವಹಾರದ ಬಗ್ಗೆ ಸಾಕಷ್ಟು ಅಪಪ್ರಚಾರವಾಗಿತ್ತು. ತಮ್ಮ ಮಧ್ಯೆ ಯಾವುದೇ ಅವ್ಯವಹಾರ, ಅಕ್ರಮ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದ ವಿಜಯೇಂದ್ರ, ಮುಖ್ಯಮಂತ್ರಿ ಹಾಗೂ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಅವರಿಗೆ ಕೊಡಬೇಕಾದ ಗೌರವವನ್ನು ನಾನು ಕೊಟ್ಟಿದ್ದೇನೆ. ಯಾರು ಅಪಪ್ರಚಾರ ಮಾಡಿದ್ದಾರೋ ಅವರಿಗೆ ದೇವರು ಒಳ್ಳೆದು ಮಾಡಲಿ ಎಂದು ಪ್ರಾರ್ಥಿಸಿದರು.

ರಾಜ್ಯದಲ್ಲಿ ಜನರ ಅನೇಕ ಸಮಸ್ಯೆಗಳು ತಾಂಡವವಾಡುತ್ತಿವೆ. ಭ್ರಷ್ಟ ಕಾಂಗ್ರೆಸ್ ಸರ್ಕಾರದಲ್ಲಿ ಅನ್ಯಾಯ, ಅವ್ಯವಹಾರಗಳು ಅತಿಯಾಗುತ್ತಿವೆ. ಬಿ.ಜೆ.ಪಿ. ಪಕ್ಷದ ಬಗ್ಗೆ ತನಗೆ ಭರವಸೆ ಇದ್ದು ಜನರು ಹಾಗೂ ಬಡವರ ವಿರೋಧಿ ಕಾಂಗ್ರೆಸ್ ಸರ್ಕಾರವನ್ನು ಬುಡ ಸಮೇತ ಕಿತ್ತು ಹಾಕಿ, ಬಿ.ಜೆ.ಪಿ. ಸರ್ಕಾರ ಮತ್ತೆ ಆಡಳಿತಕ್ಕೆ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಅನಗತ್ಯ ಚರ್ಚೆ ನಿಲ್ಲಿಸಿ ಪಕ್ಷ ಬಲಪಡಿಸಲು ಹೋರಾಟ

ಅನಗತ್ಯ ಚರ್ಚೆ ನಿಲ್ಲಿಸಿ ಮುಂದೆ ರಾಜ್ಯಾದ್ಯಂತ ಪ್ರವಾಸ ಮಾಡಿ ತಾನು ಬಿ.ಜೆ.ಪಿ. ಪಕ್ಷದ ಸಂಘಟನೆ ಮತ್ತು ಬಲವರ್ಧನೆ ಮಾಡುವುದಾಗಿ ತಿಳಿಸಿದರು.ಎಸ್.ಟಿ. ಸೋಮಶೇಖರ್ ಗೊಂದಲದ ಹೇಳಿಕೆಗಳನ್ನು ನೀಡುವ ಮೂಲಕ ಸ್ವ-ರಕ್ಷಣೆಯ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ತನ್ನ ಬಗ್ಗೆ ಏನೇ ಅಪಪ್ರಚಾರ ಮಾಡಿದರೂ ನನಗೆ ಬೇಸರವಿಲ್ಲ. ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಸಂಘಟನೆ ಮಾಡುತ್ತೇನೆ ಎಂದು ಹೇಳಿದರು.

ರಾಷ್ಟ್ರ ನಾಯಕರಲ್ಲಿ ಎಲ್ಲಾ ವಿಚಾರಗಳನ್ನು ತಿಳಿಸಿದ್ದೇನೆ. ಪಕ್ಷ ಕಟ್ಟಲು ಅಧಿಕಾರ ನೀಡಿದ್ದಾರೆ. ಮುಖ್ಯಮಂತ್ರಿ ಆಗಲು ಅಲ್ಲ. ಏನಿದ್ದರೂ ಸತ್ಯ ಸದ್ಯದಲ್ಲಿಯೆ ಪ್ರಕಟವಾಗಲಿದೆ.

ಬಿಡದಿ ವಿಚಾರದಲ್ಲಿಯೂ ದಿಲ್ಲಿಯಲ್ಲಿ ಚರ್ಚೆ ನಡೆಸಲಾಗಿದೆ. ರೈತರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ. ಅವರ ಪರ ಹೋರಾಟಕ್ಕಾಗಿ ಪಕ್ಷ ಸಿದ್ಧವಿದೆ ಎಂದರು.

ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರವಗಿದೆ. ಸಿ.ಐ.ಜಿ. ವರದಿಯಲ್ಲಿ ಬಂದಿರುವ ಗ್ಯಾರಂಟಿ ಅಧ್ಯಕ್ಷರುಗಳನ್ನು ಬರಕಾಸ್ತುಗೊಳಿಸಿ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮುಂದುವರಿಸಲಿ. ನೂರಾರು ಕೋ.ರೂ. ಅವ್ಯವಹಾರಕ್ಕೆ ಕಾಂಗ್ರೆಸ್ ಪಕ್ಷವೇ ಕಾರಣ ಎಂದು ವಿಜಯೇಂದ್ರ ಆರೋಪಿಸಿದರು.

ಎಸ್.ಐ.ಆರ್. ಬಗ್ಗೆ ಅಪಪ್ರಚಾರವಾಗುತ್ತಿದೆ. ಪಕ್ಷ ಯಾವ ರೀತಿ ಕೆಲಸ ಮಾಡಬೇಕು ಎಂದು ಕಾರ್ಯಕರ್ತರಿಗೆ ಮಾಹಿತಿ ನೀಡಿದ್ದು ಅವರು ಅದನ್ನು ಗಮನಿಸುತ್ತಾರೆ ಎಂದು ತಿಳಿಸಿದರು.

ಡಿ. ವಿ. ಸದಾನಂದ ಗೌಡ ತಮ್ಮನ್ನು ಸಂಪರ್ಕಿಸಿದ್ದಾರೆ. ಯಾವುದೇ ವಿಶಿಷ್ಟ ಮಾಹಿತಿ ನೀಡಿಲ್ಲ. ಬೆಂಗಳೂರಿಗೆ ಹೋದ ಮೇಲೆ ಅವರನ್ನು ಹಾಗೂ ಸಿ.ಟಿ. ರವಿ ಅವರನ್ನೂ ಸಂಪರ್ಕಿಸುವುದಾಗಿ ತಿಳಿಸಿದರು.

ಸಂಸದ ಕ್ಯಾ.ಬ್ರಿಜೇಶ್ ಚೌಟ, ಬಿ.ಜೆ.ಪಿ. ದ.ಕ. ಜಿಲ್ಲಾ ಅಧ್ಯಕ್ಷ ಸತೀಶ್ ಕುಂಪಲ, ಶಾಸಕರುಗಳಾದ ವೇದವ್ಯಾಸ ಕಾಮತ್, ಡಾ.ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ಗುರುರಾಜ ಗಂಟಿಹೊಳೆ, ಯಶಪಾಲ್ ಸುವರ್ಣ, ರಾಜೇಶ್ ನ್ಯಾಕ್, ಸುರೇಶ್ ಶೆಟ್ಟಿ ಗುರ್ಮೆ, ಕಿರಣ್ ಕೊಡ್ಗಿ, ಕೆ. ಪ್ರತಾಪಸಿಂಹನಾಯಕ್, ಕಿಶೋರ್ ಕುಮಾರ್ ಮತ್ತು ಪಕ್ಷದ ಕಾರ್ಯಕರ್ತರಾದ ಜಯಂತ್ ಕೋಟ್ಯಾನ್ ಹಾಗೂ ಶ್ರೀನಿವಾಸ ರಾವ್ ಧರ್ಮಸ್ಥಳ ಉಪಸ್ಥಿತರಿದ್ದರು. ಶಾಸಕ ಹರೀಶ್ ಪೂಂಜ ಸ್ವಾಗತಿಸಿದರು.

ಈಶ್ವರಪ್ಪ ಹೇಳಿಕೆಗೆ ಪ್ರತಿಕ್ರಿಯೆ ಇಲ್ಲ

ಹಿಂದೆ 17 ಮಂದಿ ಶಾಸಕರು ಯಡಿಯೂರಪ್ಪ ಅವರ ನಾಯಕತ್ವದಲ್ಲಿ ವಿಶ್ವಾಸವಿಟ್ಟು ಪಕ್ಷ ತೊರೆದು ಬಂದಿದ್ದರು. ಆಗ ಒಳ್ಳೆಯ ಸರ್ಕಾರ ಇತ್ತು. ಈಶ್ವರಪ್ಪ ಮರೆತಿರಬಹುದು. ಅನೇಕ ಕಾರ್ಯಕರ್ತರ ಹತ್ಯೆಯಾಗಿತ್ತು. ಅನೇಕರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಬೆದರಿಕೆ ಹಾಕಲಾಗಿತ್ತು. ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಒಳ್ಳೆ ಕೆಲಸ ಮಾಡಿದ್ದರು. ಆಗ ಗುತ್ತಿಗೆದಾರನ ಹತ್ಯೆಯಾಗಿತ್ತು ಎಂದು ನೆನಪಿಸಿದರು. ಈಶ್ವರಪ್ಪ ಶಾಸಕರೂ ಅಲ್ಲ. ಪಕ್ಷದಲ್ಲಿಯೂ ಇಲ್ಲ. ಹಾಗಾಗಿ ಅವರ ಹೇಳಿಕೆ ಮಹತ್ವ ನೀಡುತ್ತಿಲ್ಲ ಎಂದರು.

ಕಾಂಗ್ರೆಸ್ ಪಕ್ಷದವರು ಹೆಸರುಗಳನ್ನು ತೇಲಿ ಬಿಡುತ್ತಾರೆ. ಇದರಿಂದ ಶಾಸಕರುಗಳಿಗೆ ಬೇಸರವಾಗಿದೆ. ಪಕ್ಷಕ್ಕೆ ದ್ರೋಹ ಬಗೆದವರು ಯಾರು ಎಂಬ ಸತ್ಯ ಇಂದಲ್ಲ ನಾಳೆ ಹೊರ ಬರಲಿದೆ ಎಂದು ವಿಜಯೇಂದ್ರ, ವಿಶ್ವಾಸ ವ್ಯಕ್ತಪಡಿಸಿ ತಾನು ಎಂದೂ ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ ಎಂದು ಭರವಸೆ ನೀಡಿದರು. ಕೇಂದ್ರದಲ್ಲಿ ತಮ್ಮ ಪಕ್ಷದ ಸರ್ಕಾರ ಇರುವುದರಿಂದ ಸತ್ಯ ಸದ್ಯದಲ್ಲಿಯೇ ಹೊರಬರಲಿದೆ ಎಂದರು.

- ಹಿಂದುಗಳ ರಕ್ಷಣೆ ಮಾಡುವ ಬಿ.ಜೆ.ಪಿ. ನೇತೃತ್ವದ ಒಳ್ಳೆಯ ಸರ್ಕಾರ ಆಡಳಿತಕ್ಕೆ ಬರಲಿ.
- ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಸಂಘಟನೆ ಮಾಡುತ್ತೇನೆ.

ಮಗನ ಬಲವಂತದ ಮತಾಂತರ: ತಂದೆ ಆರೋಪ; ಮಹಿಳೆಯ ಬಂಧನ

ಮಡಿಕೇರಿ: ತನ್ನ ಸ್ವಂತ ಮಗನನ್ನೇ ಬಲವಂತವಾಗಿ ಮತಾಂತರ ಮಾಡಿದ ಆರೋಪದಡಿ ಮಹಿಳೆಯೊಬ್ಬರನ್ನು ಕುಶಾಲನಗರ ಪೊಲೀಸರು ಬಂಧಿಸಿದ್ದಾರೆ.

ಮಹಿಳೆಯ ಪತಿ ರಾಜೀವ್ ಎಂಬವರು ನೀಡಿದ ದೂರಿನ ಆಧಾರ ದಲ್ಲಿ ಪೊಲೀಸರು ಕೇರಳದಿಂದ ಆರೋಪಿ ಸಜಿತಾ ಎಂಬಾಕೆಯನ್ನು ಕರೆತಂದು ವಿಚಾರಣೆ ನಡೆಸಿ ಬಂಧಿಸಿದ್ದು, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಈ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಈ ಹಿಂದೆ ಮೊಹಮ್ಮದ್ ಸಲೀಂ ಹಾಗೂ ಜಲೀಲ್ ಎಂಬವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಪ್ರಕರಣದ ತನಿಖಾಧಿಕಾರಿ, ಕುಶಾಲ ನಗರ ನಗರ ಪೊಲೀಸ್ ಠಾಣಾಧಿಕಾರಿ ಪ್ರದೀಪ್ ಕುಮಾರ್ ನೇತೃತ್ವದಲ್ಲಿ ತನಿಖೆ ಮುಂದುವರಿದಿದ್ದು, ಈ ಪ್ರಕರಣದಲ್ಲಿ ಶಾಮೀಲಾಗಿರುವ ಇನ್ನೂ ಕೆಲವು ಆರೋಪಿಗಳ ಪತ್ತೆಗಾಗಿ ಪೊಲೀಸ್ ತಂಡ ಕೇರಳಕ್ಕೆ ತೆರಳಲು ಸಿದ್ಧತೆ ನಡೆಸಿದೆ.

ಘಟನೆಗೆ ಸಂಬಂಧಿಸಿದಂತೆ ಹಿಂದೂ ಪರ ಸಂಘಟನೆಗಳು ಹಾಗೂ ವಿವಿಧ ಸಮುದಾಯದ ಸಂಘಟನೆಗಳು ಜೂ.30ರಂದು ಕುಶಾಲನಗರದಲ್ಲಿ ಜನಜಾಗೃತಿ ಮತ್ತು ಕಠಿಣ ಕಾನೂನು ಕ್ರಮಕ್ಕೆ ಆಗ್ರಹಿಸಿ ಜನಾಂದೋಲನ ನಡೆಸಲು ನಿರ್ಧರಿಸಿರುವ ಬೆನ್ನಲ್ಲೇ ಪೊಲೀಸ್ ಇಲಾಖೆ ಇದೀಗ ತನಿಖೆಯನ್ನು ಚುರುಕುಗೊಳಿಸಿದೆ.

ಪ್ರಕರಣದ ಆರೋಪಿ ಮೊಹಮ್ಮದ್ ಸಲೀಂ ಎಂಬಾತ ಕೊಡಗಿನ ಹೆಸರಾಂತ ಪ್ರವಾಸಿತಾಣವಾದ ಕಾವೇರಿ ನಿಸರ್ಗಧಾಮ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆಯನ್ನು ನಡೆಸುತ್ತಿದ್ದು, ಸಜಿತಾ ಆ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದಳು. ಕಳೆದ ಒಂದೂವರೆ ತಿಂಗಳ ಹಿಂದೆ ಆಕೆ ತನ್ನ 9 ವರ್ಷದ ಮಗುವಿನೊಂದಿಗೆ ದಿಢೀರ್ ನಾಪತ್ತೆಯಾಗಿದ್ದು, ಪತಿ ರಾಜೀವ್ ನೀಡಿದ ದೂರಿನ ಅನ್ವಯ ಪೊಲೀಸರು ಕೇರಳ ರಾಜ್ಯದ ಮಲಪ್ಪುರಂ ಜಿಲ್ಲೆಯಲ್ಲಿ ತಾಯಿ ಹಾಗೂ ಮಗುವನ್ನು ಪತ್ತೆ ಮಾಡಿ ಮಗುವನ್ನು ಕರೆತಂದು ಬಾಲಕರ ಮಂದಿರಕ್ಕೆ ಒಪ್ಪಿಸಿದರು.

ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಅಂಗಡಿಯ ಮಾಲಕ ಮೊಹಮ್ಮದ್ ಸಲೀಂ ಜೂ. 14ರಿಂದ ಅಂಗಡಿಯನ್ನು ಬಂದ್ ಮಾಡಿದ್ದ. ಬಳಿಕ ಆತನನ್ನು ಆತನ ಸಹಚರರನ್ನು ಪೊಲೀಸರು ಬಂಧಿಸಿದ್ದರು.

ಮಾದಕ ವಸ್ತು ಮಾರಾಟ ಆರೋಪಿ ಸೆರೆ

ಮಂಗಳೂರು: ಮಾದಕ ವಸ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯೊಬ್ಬನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಸುರತ್ಕಲ್ ಹೊಸಬೆಟ್ಟು ಈಶ್ವರ್ ನಗರ ನಿವಾಸಿ ಪ್ರಸ್ತುತ ಕುಳಾಯಿಗುಡ್ಡೆ ವಾಟರ್ ಟ್ಯಾಂಕ್ ಬಳಿ ವಾಸ ಇರುವ ಅಣ್ಣಪ್ಪ ಸ್ವಾಮಿ ಯಾನೆ ಮನು ಪ್ರಕರಣದ ಆರೋಪಿ. ಕುಳಾಯಿಗುಡ್ಡೆ ಪರಿಸರದಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಮಾದಕ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಪಡೆದ ಪೊಲೀಸರು ದಾಳಿ ನಡೆಸಿದ್ದರು.

ಕುಳಾಯಿ ಗುಡ್ಡೆ ಪರಿಸರದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಬಂಧಿತನಿಂದ ಸುಮಾರು 1,50,000ರೂ. ಮೌಲ್ಯದ 15 ಗ್ರಾಂ ಎಂಡಿಎಂಎ ಹಾಗೂ ಮೊಬೈಲ್ ಫೋನ್, ಜಿಪ್ ಲಾಕ್ ಕವರ್, ಡಿಜಿಟಲ್ ತೂಕಮಾಪನವನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಸೊತ್ತುಗಳ ಒಟ್ಟು ಮೌಲ್ಯ- 2,10,500ರೂ. ಎಂದು ಪೊಲೀಸರು ಅಂದಾಜಿಸಿದ್ದಾರೆ.

ಈ ಕುರಿತು ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯ ವಿರುದ್ಧ ಪಣಂಬೂರು, ಬಜಪೆ ಠಾಣೆಗಳಲ್ಲಿ ಎನ್‌ಡಿಪಿಎಸ್ ಪ್ರಕರಣ, ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಹಲ್ಲೆ ಹಾಗೂ ಮಸೀದಿಗೆ ಕಲ್ಲು ಎಸೆದಿರುವ ಪ್ರಕರಣ ಮತ್ತು ಉಳ್ಳಾಲ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿರುತ್ತದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 30° 25°
ಉಡುಪಿ 30° 25°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 27, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಹೆದ್ದಾರಿ ಬದಿ ತ್ಯಾಜ್ಯರಾಶಿ, ನೇತ್ರಾವತಿ ನೀರು ಮಾಲಿನ್ಯ: ಶಾಸಕ ನ್ಯಾಕ್ ಗರಂ


ಪುಟ 6
ಉಡುಪಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ 5 ಅಡಿ ಕುಸಿತ!

ನದಿಯಂತಾಗಿದೆ ಪಡೀಲ್ ಬಳಿಯ ರೈಲ್ವೆ ಅಂಡರ್ ಪಾಸ್ ರಸ್ತೆ !




ಮಳೆಗಾಲ ಆರಂಭವಾಗುತ್ತಿದ್ದಂತೆ ಮಂಗಳೂರಿನಲ್ಲಿ ಸಮಸ್ಯೆಗಳ ಸರಮಾಲೆ ಎದುರಾಗುತ್ತಿದೆ. ಒಂದೆಡೆ ಚರಂಡಿಯ ನೀರು ರಸ್ತೆಗಳಲ್ಲಿಯೇ ಹರಿಯುವ ಸ್ಥಿತಿಯೂ ಇದೆ. ಪಡೀಲ್ ಬಳಿಯ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ಸರಿಯಾಗಿ ಹರಿದುಹೋಗಲು ವ್ಯವಸ್ಥೆಯೇ ಇಲ್ಲದ ಕಾರಣ ವಾಹನ ಸವಾರರು ಸಂಕಷ್ಟಕ್ಕೀಡಾಗುವ ಸ್ಥಿತಿ ಎದುರಾಗಿದೆ. ಇದು ಇಲ್ಲಿನ ನಿತ್ಯದ ಪರಿಸ್ಥಿತಿಯಾಗಿದೆ. ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಲ್‌ಬಾಗ್

ಸುತ್ತಮುತ್ತ

ಪ್ಲಾಸ್ಟಿಕ್ ತ್ಯಾಜ್ಯ ಉರಿಸಿದ ಅಂಗಡಿ ಮಾಲಕರಿಗೆ ಬಿತ್ತು ದಂಡದ ಬಿಸಿ

ಸುಳ್ಯ: ಹರಿಹರ ಪಳ್ಳತ್ತಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯಾಚರಿಸುತ್ತಿರುವ ಅಂಗಡಿಯೊಂದಕ್ಕೆ ಪ್ಲಾಸ್ಟಿಕ್ ಉರಿಸಿದಕ್ಕಾಗಿ ದಂಡ ವಿಧಿಸಿ ಎಚ್ಚರಿಕೆ ನೀಡಿದ ಘಟನೆ ನಡೆದಿದೆ.
ಹರಿಹರ ಪಲ್ಲತ್ತಡ್ಕದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅಂಗಡಿ ಹಿಂಬದಿಯಲ್ಲಿ ಪ್ಲಾಸ್ಟಿಕ್ ಮತ್ತು ಇತರ ತ್ಯಾಜ್ಯ ವಸ್ತುಗಳನ್ನು ಗುಡ್ಡೆಹಾಕಿ ಸುಟ್ಟು ಹಾಕಿದ ಬಗ್ಗೆ ಮಾಹಿತಿ ಪಡೆದ ಗ್ರಾಮ ಪಂಚಾಯತ್ ಅಧಿಕಾರಿಗಳು ಪರಿಶೀಲಿಸಿ, ತ್ಯಾಜ್ಯ ಸುಟ್ಟಿರುವುದನ್ನು ದೃಢಪಡಿಸಿಕೊಂಡು ನೋಟೀಸ್ ಜಾರಿ ಮಾಡಿರುವುದಲ್ಲದೇ ಮಾಲಿಕರಿಗೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸುಟ್ಟ ಹಿನ್ನಲೆಯಲ್ಲಿ ರೂ.3 ಸಾವಿರ ದಂಡ ವಿಧಿಸಿದ್ದಾರೆ.

ಕರಾವಳಿ ಜಿಲ್ಲೆಗಳಲ್ಲಿ ಬಿಸಿಲು-ಮೋಡದ ವಾತಾವರಣ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಯಲ್ಲಿ ಶುಕ್ರವಾರ ಮೋಡ ಹಾಗೂ ಬಿಸಿಲಿನ ವಾತಾವರಣ ಕಂಡು ಬಂದಿದೆ. ಗ್ರಾಮೀಣ ಭಾಗದ ಅಲ್ಲಲ್ಲಿ ಒಂದೆರಡು ಸಾಮಾನ್ಯ ಮಳೆಯಾಗಿದೆ. ಮುಂದಿನ ಎರಡು ದಿನಗಳ ಕಾಲವೂ ಇದೇ ವಾತಾವರಣ ಇರುವ ಸಾಧ್ಯತೆಯಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಶೇ.50ಕ್ಕಿಂತಲೂ ಅಧಿಕ ಮುಂಗಾರು ಮಳೆ ಕೊರತೆ ಉಂಟಾಗಿದ್ದು, ಇದರ ಪ್ರಮಾಣ ಮತ್ತಷ್ಟು ಅಧಿಕವಾಗುವ ಸಾಧ್ಯತೆ ಇದೆ.

ರಿಯಾಯಿತಿ ದರದಲ್ಲಿ ಪ್ರಕರಣ ಇತ್ಯರ್ಥಕ್ಕೆ ಸಾರಿಗೆ ಇಲಾಖೆ ಅವಕಾಶ

ಉಡುಪಿ: ರಾಜ್ಯ ಸರಕಾರದ ಆದೇಶದಂತೆ ಸಾರಿಗೆ ಇಲಾಖೆಯಲ್ಲಿ 1991ರಿಂದ 2022 ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ. 50ರಷ್ಟು ರಿಯಾಯಿತಿ ನೀಡಿ, ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಲು ಜುಲೈ 10ರವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ ಎಂದು ಪ್ರಭಾರ ಸಾರಿಗೆ ಅಧಿಕಾರಿಗಳ ಕಚೇರಿ ಪ್ರಕಟನೆ ತಿಳಿಸಿದೆ.

ಮತ್ತೆ ಏರಿಕೆ ಕಂಡ ರಬ್ಬರ್ ಧಾರಣೆ


ಮಂಗಳೂರು: ಕಳೆದ ಕೆಲ ದಿನಗಳಿಂದ ಸ್ಥಿರವಾಗಿದ್ದ ರಬ್ಬರ್ ಧಾರಣೆ ಇದೀಗ ಕೊಂಚ ಏರಿಕೆಯ ಹಾದಿ ಹಿಡಿದಿದ್ದು, ಪ್ರಸ್ತುತ ಆರ್‌ಎಸ್‌ಎಸ್ 1: 268.50 ರೂ., ಆರ್‌ಎಸ್‌ಎಸ್ 2– 224 ರೂ., ಸ್ಕ್ರ್ಯಾಪ್ 1 – 154 ರೂ. ಸ್ಕ್ರ್ಯಾಪ್ 2 – 145 ರೂ. ನಲ್ಲಿ ಸ್ಥಿರವಾಗಿದೆ.

ಪ್ರವಾಸಿಗರನ್ನು ಚಕಿತಗೊಳಿಸುತ್ತಿದೆ ಚಕತ್‌ಕಲ್!
ಚಾರಣ ಪ್ರಿಯರ ಸ್ವರ್ಗ
ಪ್ರಕೃತಿಯ ಸೊಬಗನ್ನು ಹೆಚ್ಚಿಸಿದ ಜಲಪಾತ

ಬೈಂದೂರು: ಮಳೆಗಾಲ ಬಂದಾಕ್ಷಣ ಪಶ್ಚಿಮ ಘಟ್ಟದ ಸಹ್ಯಾದ್ರಿ ಪರ್ವತ ಶ್ರೇಣಿಗಳಲ್ಲಿ ಹಲವು ಜಲಪಾತಗಳ ಉಗಮವಾಗುತ್ತದೆ. ಬೈಂದೂರು, ಕುಂದಾಪುರ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಹಲವು ಜಲಪಾತಗಳು ಚಾರಣ ಪ್ರಿಯರನ್ನು ನಿತ್ಯ ಕೈಬೀಸಿ ಕರೆಯುತ್ತಿದೆ. ಬಹುತೇಕ ಜಲಪಾತಗಳು ಮಳೆಗಾಲದ ಬಳಿಕ ಮರೆಯಾದರೆ ಕೆಲವು ಝರಿಗಳು ಡಿಸೆಂಬರ್‌ವರಗೆ ಜಲಧಾರೆ ಸುರಿಯುತ್ತದೆ. ಅಂತಹ ಅಪರೂಪದ ಜಲಪಾತಗಳಲ್ಲಿ ಬೈಂದೂರು ಸಮೀಪದ ಚಕತ್‌ಕಲ್ ಕೂಡ ಒಂದಾಗಿದೆ.

ಉಡುಪಿಯಿಂದ 80 ಕಿ.ಮೀ ದೂರ

ಉಡುಪಿ ಜಿಲ್ಲೆಯಿಂದ 80 ಕಿ.ಮೀ ಉತ್ತರಕ್ಕೆ ಶಿರೂರು ಎನ್ನುವ ಊರು ಸಿಗುತ್ತದೆ. ಇಲ್ಲಿಂದ ತೂದಳ್ಳಿ ರಸ್ತೆಯಲ್ಲಿ ಹನ್ನೆರಡು ಕಿ.ಮೀ. ಅತ್ಯಾಡಿ ಚರ್ಚ್ ಬಳಿ ತೆರಳಿದಾಗ ಸಿಗುವ ಕಾಲುದಾರಿಯಲ್ಲಿ ಈ ಸ್ಥಳಕ್ಕೆ



ತಲುಪಬಹುದಾಗಿದೆ. ಅತ್ಯಾಡಿಯವರೆಗೆ ಮಾತ್ರ ವಾಹನ ಸಂಚರಿಸುತ್ತದೆ. ಬಳಿಕ 2 ಕಿ.ಮೀ. ಕಾಡುದಾರಿ ಹಾಗೂ 1.5 ಕಿ.ಮೀ. ಹೊಳೆಯಲ್ಲಿ ನಡೆದುಕೊಂಡು ಹೋದಾಗ ಚಕತ್‌ಕಲ್ ಫಾಲ್ಸ್ ಸಿಗುತ್ತದೆ. ಅತ್ಯಂತ ದುರ್ಗಮ ಕಾಡಿನಲ್ಲಿ ತೆರಳಬೇಕಾಗಿರುವುದರಿಂದ ಬಹುತೇಕ ಜನರು ಈ ಫಾಲ್ಸ್‌ಗೆ ಬಾರದೆ ಸಮೀಪದಲ್ಲಿರುವ ಕೊಸಳ್ಳಿ ಫಾಲ್ಸ್‌ಗೆ ತೆರಳುತ್ತಾರೆ.
ಡಿಸೆಂಬರ್ ಅಂತ್ಯದವರೆಗೆ ಈ ಜಲಪಾತದಲ್ಲಿ ನೀರು ಹರಿಯುತ್ತದೆ, ಹಾಲ್ನೊರೆಯಂತೆ ಧುಮ್ಮಿಕ್ಕುವ ಜಲಧಾರೆ ಇರುವ ಕಾರಣ ಬಿಳಿಗುಂಡಿ ಜಲಪಾತ ಎಂದು ಕೂಡ ಕರೆಯುತ್ತಾರೆ. ಪ್ರವಾಸೋದ್ಯಮ ಇಲಾಖೆ ಇಂತಹ ಜಲಪಾತ ಬಗ್ಗೆ ಇಲಾಖೆ ಕೈಪಿಡಿಯಲ್ಲಿ ದಾಖಲಿಸಬೇಕಾಗಿದೆ. ಇತ್ತೀಚೆಗೆ ಸಾಹಸ ಚಾರಣ ಪ್ರಿಯರು ಜಾಲತಾಣಗಳಲ್ಲಿ ಪ್ರಚಾರ ನೀಡಿರುವುದು ಉತ್ತಮ ಬೆಳವಣಿಗೆ.

ಸಿದ್ಧತೆಯಲ್ಲಿಯೇ ಚಾರಣಕ್ಕೆ ತೆರಳಬೇಕು

ಚಕತ್‌ಕಲ್ ಭಾಗದಲ್ಲಿ ಯಾವುದೇ ಅಂಗಡಿಗಳಿಲ್ಲದ ಕಾರಣ ಊಟ, ತಿಂಡಿ, ತಿನಿಸುಗಳನ್ನು ಶಿರೂರಿನಿಂದಲೇ ತೆಗೆದು ಕೊಂಡು ಹೋಗಬೇಕು. ಈ ಸಮಯದಲ್ಲಿ ಇಂಬಳ ಕಾಟ ಇರುವುದರಿಂದ ಚಾರಣಕ್ಕೆ ಬೇಕಾಗುವ ಸಲಕರಣೆಗಳ ಜೊತೆಗಿಟ್ಟು ತೆರಳ ಬೇಕು. ಸ್ಥಳೀಯರು ಇಲ್ಲಿಗೆ ಬರುವ ಪ್ರವಾಸಿಗರಿಗೆ ಮಾಹಿತಿ, ಸಹಕಾರ ನೀಡುತ್ತಾರೆ.

> **ಅತ್ಯುತ್ತಮ ಜಲಪಾತ**
> ಚಕತ್‌ಕಲ್ ಈ ಭಾಗದ ಅತ್ಯುತ್ತಮ ಜಲಪಾತವಾಗಿದೆ. ಆದರೆ ಇದರ ಮಾಹಿತಿ ಹೊರ ಪ್ರಪಂಚಕ್ಕಿಲ್ಲ. ಈ ಬಗ್ಗೆ ಇಲಾಖೆ, ಸರಕಾರ ನೈಸರ್ಗಿಕವಾಗಿ ಸಿಗುವ ಇಂತಹ ಪ್ರವಾಸಿ ಸ್ಥಳಗಳ ಬಗ್ಗೆ ಒಂದಿಷ್ಟು ಮಾಹಿತಿ ದಾಖಲಿಸಿದರೆ ಇಂತಹ ಅನೇಕ ತೆರೆಮರೆ ಗ್ರಾಮಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಾಧ್ಯವಾಗ ಬಹುದು. ಈ ಬಗ್ಗೆ ಸಂಬಂಧಿಸಿದ ಇಲಾಖೆ, ಜನಪ್ರತಿನಿಧಿಗಳು ಕಾರ್ಯಪ್ರವೃತ್ತರಾಗಬೇಕಿದೆ.
> ● ಲಿಮೋನ್, ಸ್ಥಳೀಯರು

ನಾಡದೋಣಿ ಮೀನುಗಾರರಿಗೆ ಮತ್ತೆ ಸಂಕಷ್ಟ!
ಸೀಮೆ ಎಣ್ಣೆಯ ದರ ಏರಿಕೆಯಿಂದ ಸಮಸ್ಯೆ
ಅತಂತ್ರ ಸ್ಥಿತಿಯಲ್ಲಿದೆ ಕಡಲ ಮಕ್ಕಳ ಬದುಕು

ಸುರತ್ಕಲ್: ಕರ್ನಾಟಕ ಕರಾವಳಿಯ ಮೂಲ ನಾಡದೋಣಿ ಮೀನುಗಾರರ ಬದುಕಿಗೆ ಸೀಮೆಎಣ್ಣೆ ದರ ಏರಿಕೆ ಬರೆ ಎಳೆದಿದೆ. ಲೀಟರಿಗೆ 58 ರೂ. ಇದ್ದ ಸೀಮೆಎಣ್ಣೆ ಇದೀಗ 118 ರೂ.ಗೆ ಏರಿಕೆಯಾಗಿದೆ.
ಒಂದೆಡೆ ಮಳೆಗಾಲದ ಕಾರಣ ಆಳ ಸಮುದ್ರ ಮೀನುಗಾರಿಕೆಗೆ ನಿಷೇಧವಿದೆ. ನಾಡದೋಣಿ ಮೂಲಕ ನಡೆಸುವ ಮೀನುಗಾರಿಕೆ ಈಗ ಸಂಕಷ್ಟದ ಹಾದಿಯಲ್ಲಿ ಸಾಗುವಂತಾಗಿದೆ.
ಒಂದು ನಾಡದೋಣಿ ದಿನಕ್ಕೆ ಸರಾಸರಿ 50 ಲೀ. ಸೀಮೆ ಎಣ್ಣೆ ಬಳಸುತ್ತಿದ್ದು, 2 ದೋಣಿಗೆ ದಿನಕ್ಕೆ 100 ಲೀ. ಆಗತ್ಯವಿದೆ. ಅಂದರೆ ದಿನಕ್ಕೆ 11,800 ರೂ. ಕೇವಲ ಸೀಮೆ ಎಣ್ಣೆಗೆ ಖರ್ಚು. ಅಷ್ಟು ಖರ್ಚು ಮಾಡಿ ಕಡಲಿಗೆ ಇಳಿದರೂ ಮೀನು ಸಿಗದಿದ್ದರೆ ಸಂಪೂರ್ಣ ನಷ್ಟ. ಈ ದುಬಾರಿ ನಷ್ಟದ ಭೀತಿ ಬಹುತೇಕ ಮೀನುಗಾರರನ್ನು ದೋಣಿ ಕಟ್ಟಿ ನಿಲ್ಲುವಂತೆ ಮಾಡಿದೆ. ಜೀವವನ್ನೇ ಪಣಕ್ಕಿಟ್ಟು ಕಡಲಲ್ಲಿ ದುಡಿಯುವ ಈ ಸಾಂಪ್ರದಾಯಿಕ ಮೀನುಗಾರರಿಗೆ ಸರಕಾರದಿಂದ ಮಾತ್ರ ಯಾವುದೇ ರಿಯಾಯಿತಿ ಸಿಗುತ್ತಿಲ್ಲ. »ಪುಟ 6



ಮೀನುಗಾರರ ಆಗ್ರಹ

ಕೈಗಾರಿಕಾ ಸೀಮೆಎಣ್ಣೆಯನ್ನು ಮೀನುಗಾರಿಕಾ ಸೀಮೆಎಣ್ಣೆ ಎಂದು ಘೋಷಿಸಿ ಶೂನ್ಯ ತೆರಿಗೆ ವಿಧಿಸಬೇಕು. ಶೇ.70 ಸಹಾಯಧನ ನೀಡಿ, ತಮಿಳುನಾಡು- ಆಂಧ್ರ ಮಾದರಿಯಲ್ಲಿ ರಿಯಾಯಿತಿ ದರದಲ್ಲಿ ನಿರಂತರ ಸರಬರಾಜು ಮಾಡಬೇಕು. ಕೇಂದ್ರ-ರಾಜ್ಯ ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಟ್ಟು ನೈಜ ನಾಡ ದೋಣಿ ಮೀನುಗಾರರ ಬದುಕು ಉಳಿಸಬೇಕೆಂದು ಮೀನುಗಾರರು ಆಗ್ರಹಿಸಿದ್ದಾರೆ.

25 ಸಾವಿರಕ್ಕೂ ಹೆಚ್ಚು ಮಂದಿಯಿಂದ ಅನ್ನ ಪ್ರಸಾದ ಸ್ವೀಕಾರ
ಕಟೀಲು ದೇಗುಲದಲ್ಲಿ ಹೆಚ್ಚಿದ ಭಕ್ತ ಸಂದಣಿ

ಕಟೀಲು: ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಕಟೀಲು ಶ್ರೀ ಕ್ಷೇತ್ರವು ನಂದಿನಿ ನದಿಯ ಮಧ್ಯಭಾಗದಲ್ಲಿರುವ ಈ ಕ್ಷೇತ್ರ ದಕ್ಷಿಣ ಭಾರತದ ಪ್ರಮುಖ ಶಕ್ತಿ ಪೀಠಗಳಲ್ಲಿ ಒಂದಾಗಿದೆ. ಇಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ಭಕ್ತಾದಿಗಳ ಸಂಖ್ಯೆ ತುಸು ಹೆಚ್ಚೇ ಇರುತ್ತದೆ. ಆದರೆ ಇಂದು ಸರಕಾರಿ ರಜೆ ಹಾಗೂ ಮಳೆ ಇರದ ಕಾರಣ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇಗುಲದಲ್ಲಿ ಸಾವಿರಾರು ಭಕ್ತರು ಭೇಟಿ ನೀಡಿದರು. ಬೆಳಿಗ್ಗೆ ಗಂಜಿ ಊಟ, ಮಧ್ಯಾಹ್ನ ಹಾಗೂ ರಾತ್ರಿ ಹೀಗೆ ಮೂರು ಹೊತ್ತು ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಮಂದಿ ಅನ್ನ ಪ್ರಸಾದವನ್ನು ಶುಕ್ರವಾರ ಸ್ವೀಕರಿಸಿದರು. ದೇವಸ್ಥಾನದಲ್ಲಿ ವಿಶೇಷ ದಿನಗಳು, ರಜಾದಿನಗಳಲ್ಲಿ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಿರುತ್ತದೆ. ಅಲ್ಲದೆ ಮಕ್ಕಳಿಗೆ ಅನ್ನಪ್ರಾಶನ ನಡೆಯುತ್ತದೆ.



ಭರತನಾಟ್ಯ

ಕಟೀಲು ದೇಗುಲದಲ್ಲಿ ಪ್ರತಿ ಶುಕ್ರವಾರ ಭರತನಾಟ್ಯ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಅನೇಕರು ದೇವಿ ಸನ್ನಿಧಿಯಲ್ಲಿ ನೃತ್ಯ ಸೇವೆ ಸಲ್ಲಿಸುತ್ತಿದ್ದಾರೆ. ನೃತ್ಯ ಸೇವೆಯ 163ನೇ ಕಾರ್ಯಕ್ರಮವಾಗಿ ವಿದುಷಿ ಡಾ. ಲಕ್ಷ್ಮೀ ರೇಖಾ ಬಳಗ ಬೆಂಗಳೂರು ಇವರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಿತು.

> **ದಾಖಲೆ ಸೇವೆಗಳು**
> ದಾಖಲೆಯ ಸಂಖ್ಯೆಯಲ್ಲಿ ಹೂವಿನ ಪೂಜೆ, ದೇವರಿಗೆ ಸೀರೆ ಕಾಣಿಕೆ, ಕುಂಕುಮಾರ್ಚನೆ ಸೇವೆಗಳು ಸಮರ್ಪಿಸಲ್ಪಟ್ಟಿವೆ. ಅಲ್ಲದೆ 3 ಹೊತ್ತು 25 ಸಾವಿರಕ್ಕೂ ಹೆಚ್ಚು ಮಂದಿ ಅನ್ನ ಪ್ರಸಾದ ಸ್ವೀಕರಿಸಿದರು.

ಕಾಸರಗೋಡಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಒತ್ತು
ಪ್ರವಾಸಿಗರ ಸೆಳೆಯಲು 'ನಗರವನ ಯೋಜನೆ'

ಕಾಸರಗೋಡು: ಕಾಸರಗೋಡು ನಗರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ನಗರವನ ಎಂಬ ವಿಶೇಷ ಯೋಜನೆ ಮುಂದಿನ 3 ತಿಂಗಳೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

3 ತಿಂಗಳೊಳಗೆ ಪೂರ್ಣ

ಕಾಸರಗೋಡು ನಗರದ ಪಳ್ಳಂ ಕಸಬಾ ಸೇತುವೆ ಸಮೀಪದಲ್ಲಿ ಸಾಮಾಜಿಕ ಅರಣ್ಯೀಕರಣ ವಿಭಾಗದ ನೇತೃತ್ವದಲ್ಲಿ ನಿರ್ಮಿಸಲಾಗುತ್ತಿರುವ ನಗರವನ ಯೋಜನೆ ಅಂತಿಮ ಕಾಮಗಾರಿಗಳು ಇದೀಗ ಭರದಿಂದ ಸಾಗುತ್ತಿವೆ. ಮುಂದಿನ 3 ತಿಂಗಳೊಳಗೆ ಈ ಎಲ್ಲಾ ಕೆಲಸ ಕಾರ್ಯ ಪೂರ್ಣಗೊಳಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಪಳ್ಳಂ ಕಸಬಾ ಸೇತುವೆ ಬಳಿ 21 ಹೆಕ್ಟೇರ್ ಭೂ ಪ್ರದೇಶ ಆವರಿಸಿಕೊಂಡಿರುವ ವಿಶಿಷ್ಟ ಕಾಂಡ್ಲಾವನ ನಗರವನವಾಗಿ ಅಭಿವೃದ್ಧಿಪಡಿಸ ಲಾಗುತ್ತಿದೆ. ಈ ಮಧ್ಯೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಕಳೆದ ಕೆಲವು ದಿನಗಳ ಹಿಂದೆ ಸ್ಥಳಕ್ಕಾಗಮಿಸಿ ನಿರ್ಮಾಣ ಕಾರ್ಯ ಪ್ರಗತಿ ಕುರಿತು ಅವಲೋಕನ ನಡೆಸಿದ್ದರು. ಅಲ್ಲದೆ ರೇಂಜ್ ಫಾರೆಸ್ಟ್ ಆಫೀಸರ್ ಸಿ.ವಿನೋದ್‌ಕುಮಾರ್ ಅವರು ನಗರವನ ಯೋಜನೆ ಬಗ್ಗೆ ಸಮಗ್ರ ಮಾಹಿತಿ ನೀಡಿ ಕಾಸರಗೋಡು ನಗರವನ್ನು ಪ್ರವಾಸೋದ್ಯಮ ಹಬ್ ಆಗಿ ಮಾರ್ಪಡಿಸಲು ಅನೇಕ ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. »ಪುಟ 6



ಕಾರ್ಯ ಯೋಜನೆ

ನಗರವನ ಯೋಜನೆಯಡಿ ಮಕ್ಕಳಿಗಾಗಿ ಆತ್ಯಾಕರ್ಷಕ, ಆಧುನಿಕ ಶೈಲಿಯ ಕಿರು ಪಾರ್ಕ್ ನಿರ್ಮಿಸುವ ನಿಟ್ಟಿನಲ್ಲಿ ಅಗತ್ಯದ ಆರ್ಥಿಕ ನೆರವು ಒದಗಿಸಲು ಕಾಸರಗೋಡು ನಗರಸಭೆ ರೂಪುರೇಷೆ ತಯಾರಿಸಿದೆ. ಈ ಮೂಲಕ ಕಾಂಡ್ಲಾವನವಿರುವ ಪಳ್ಳಂ ಕಸಬಾ ಪ್ರದೇಶ ನಗರವನವನ್ನಾಗಿ ಪರಿವರ್ತಿಸಿ ಜಿಲ್ಲೆ ಪ್ರಮುಖ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಒಂದಾಗಿ ಮಾರ್ಪಡಿಸಲು ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸುತ್ತ ಮುತ್ತ

ಜೂ.29-ಜು.8: ಯೋಗ ಶಿಬಿರ

ಮುಲ್ಕಿ: ಅಂಗರಗುಡ್ಡೆ ರಾಮನಗರ ಶ್ರೀರಾಮ ಭಜನಾ ಮಂಡಳಿ ಆಶ್ರಯದಲ್ಲಿ ಉಚಿತ ಯೋಗ ಶಿಬಿರವು ಜೂ.29ರಿಂದ ಜು. 8ವರೆಗೆ ಬೆಳಿಗ್ಗೆ 6ರಿಂದ 7 ಗಂಟೆಯವರೆಗೆ ಯೋಗ ಗುರು ಜಯ ಸಾಲ್ಯಾನ್ ಅಂಗರಗುಡ್ಡೆ ನೇತೃತ್ವದಲ್ಲಿ ಶ್ರೀರಾಮ ಭಜನಾ ಮಂದಿರದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಮಾನವ ಸರಪಳಿ ಪ್ರತಿಭಟನೆ

ಕೈಕಂಬ: ಸರ್ಕಾರದ ಹಲವು ಜನವಿರೋಧಿ ನೀತಿಗಳನ್ನು ವಿರೋಧಿಸಿ ಸಿಪಿಎಂ ಗುರುಪುರ ವಲಯ ಸಮಿತಿ ಜೂ. 28ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಗಂಜಿಮಠ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಲಿದೆ. ಸರಕಾರಿ ಆಸ್ಪತ್ರೆಗಳನ್ನು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹಸ್ತಾಂತರ ಮಾಡುವ ಖಾಸಗೀಕರಣದ ಆದೇಶ ವಾಪಾಸು ಪಡೆಯಬೇಕು, ಗಂಜಿಮಠ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಬೇಕು, ಜಿಲ್ಲೆಯಲ್ಲಿ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ, ಜಯದೇವ ಹೃದ್ರೋಗ ಆಸ್ಪತ್ರೆಯ ಘಟಕ ಸ್ಥಾಪಿಸಬೇಕು ಮತ್ತು ಕುಪ್ಪೆಪದವು, ವಾಮಂಜೂರು, ಕೊಂಪದವು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೂರ್ಣ ಪ್ರಮಾಣದ ವೈದ್ಯರು, ಸಿಬ್ಬಂದಿ, ಔಷಧಿ ಒದಗಿಸುವಂತೆ ಸಿಪಿಎಂ ಆಗ್ರಹಿಸಿದೆ ಎಂದು ಸಿಪಿಎಂ ಗುರುಪುರ ವಲಯ ಸಮಿತಿ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಬೆಟ್ಟಂಪಾಡಿ ಸರಕಾರಿ ಪ್ರೌಢ ಶಾಲಾ ಮಂತ್ರಿ ಮಂಡಲ ರಚನೆ



ನಿಡ್ಪಳ್ಳಿ: ಬೆಟ್ಟಂಪಾಡಿಯ ಸರಕಾರಿ ಪ್ರೌಢ ಶಾಲೆಯ 2026–27ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ನಾಯಕನಾಗಿ 10ನೇ ತರಗತಿಯ ಗಗನ್, ಉಪ ನಾಯಕನಾಗಿ 9ನೇ ತರಗತಿಯ ಅಕ್ಷಯ್ ಮತ್ತು ವಿರೋಧ ಪಕ್ಷದ ನಾಯಕಿಯಾಗಿ 10ನೇ ತರಗತಿಯ ಮರಿಯಮ್ ಅಫ್ನ ಆಯ್ಕೆಯಾಗಿದ್ದಾರೆ. ಗೃಹ ಮಂತ್ರಿಯಾಗಿ ತೇಜಸ್, ವಿದ್ಯಾಮಂತ್ರಿಯಾಗಿ ತ್ರಿಶಾ, ಕ್ರೀಡಾ ಮಂತ್ರಿಯಾಗಿ ಜಸ್ಮಿತಾ, ಆರೋಗ್ಯ ಮಂತ್ರಿಯಾಗಿ ಮೋಕ್ಷಿತ, ಸಾಂಸ್ಕೃತಿಕ ಮಂತ್ರಿಯಾಗಿ ಹಿತಾಶ್ರೀ, ನೀರಾವರಿ ಮಂತ್ರಿಯಾಗಿ ಅನ್ವಿತ್, ಆಹಾರ ಮಂತ್ರಿಯಾಗಿ ಅರ್ಪಿತ, ಕೃಷಿ ಮಂತ್ರಿಯಾಗಿ ಆದರ್ಶ, ರಕ್ಷಣಾ ಮಂತ್ರಿಯಾಗಿ ತ್ರೀಶಾಲ್, ವಾರ್ತಾ ಮಂತ್ರಿಯಾಗಿ ಸುಶಾಂತ್, ಸ್ವಚ್ಛತಾ ಮಂತ್ರಿಯಾಗಿ ಹಿತಾಶ್ರೀ, ಶಿಸ್ತು ಮತ್ತು ಸಮಯ ಪಾಲನಾ ಮಂತ್ರಿಯಾಗಿ ಅಂಕಿತ ಮತ್ತು ಜೀವಿಕ, ವಿದ್ಯುತ್ ಮಂತ್ರಿಯಾಗಿ ಲೋಹಿತ್, ಸ್ಪೀಕರ್ ಆಗಿ ಶ್ರೀಯ ಅವರನ್ನು ಆಯ್ಕೆ ಮಾಡಲಾಯಿತು. ಮತದಾನವನ್ನು ಇವಿಎಂ ಆ್ಯಪ್ ಮೂಲಕ ನಡೆಸಲಾಯಿತು. ಮುಖ್ಯ ಶಿಕ್ಷಕ ವಿಜಯ ಕುಮಾರ್ ಅವರ ಮಾರ್ಗದರ್ಶನದಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿ ಚಂದ್ರಕಲಾ ಕೆ.ವಿ. ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಸಹ ಶಿಕ್ಷಕರಾದ ಸಿಂಧು ವಿ.ಕೆ., ಮಂಜುಳಾ ಭಟ್, ಉಮಾ ಪಿ.ಆರ್., ವಿನುತಾ ಸಿ.ಕೆ. ಮತ್ತು ನಳಿನಿ ಜಿ. ಸಹಕರಿಸಿದರು.

ಕುಮಾರಸ್ವಾಮಿ ವಿದ್ಯಾಲಯ: ಮಂತ್ರಿಮಂಡಲ ರಚನೆ



ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯದಲ್ಲಿ ಪ್ರೌಢಶಾಲಾ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿ ನಾಯಕರ ಆಯ್ಕೆಯು ಮತದಾನದ ಮೂಲಕ ನಡೆಯಿತು. ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿ ನಾಯಕನಾಗಿ ಜಸ್ವಿತ್ ಕೆ.ಸಿ., ಉಪನಾಯಕಿಯಾಗಿ ಸಹನಾ ಎನ್., ಪ್ರಾಥಮಿಕ ವಿಭಾಗದ ನಾಯಕನಾಗಿ ಜನಿತ್ ಕೆ.ಎಂ., ಉಪನಾಯಕಿಯಾಗಿ ಪೂರ್ವಿ ಪಿ.ವಿ. ಆಯ್ಕೆಯಾಗಿದ್ದರು. ಶಾಲಾ ಮುಖ್ಯ ಶಿಕ್ಷಕಿ ವಿದ್ಯಾರತ್ನ ಎಚ್. ಮಾರ್ಗದರ್ಶನದಲ್ಲಿ ನಡೆದ ಚುನಾವಣೆಯಲ್ಲಿ ಚುನಾವಣಾಧಿಕಾರಿಯಾಗಿ ಶಿಕ್ಷಕ ಶಶಿಕಾಂತ್ ಸಹಕರಿಸಿದರು.

ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ತ್ಯಾಜ್ಯ ರಾಶಿ, ನೇತ್ರಾವತಿ ನೀರು ಮಲಿನ | ಅಧಿಕಾರಿಗಳು ತರಾಟೆಗೆ

ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಶಾಸಕರ ಸೂಚನೆ

ಬಂಟ್ವಾಳ: ಜಿಲ್ಲೆಯ ಜೀವನದಿ ನೇತ್ರಾವತಿ ಒಡಲಿಗೆ ಬಂಟ್ವಾಳ ಪುರಸಭಾ ವ್ಯಾಪ್ತಿಯ ವಿವಿಧೆಡೆ ನೇರವಾಗಿ ಕೊಳಚೆ ನೀರು, ತ್ಯಾಜ್ಯ ವಸ್ತು ಸೇರುವುದು ಹಾಗೂ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲೆ ಕಸದರಾಶಿ ಎಸೆದು ನಗರದ ಸೌಂದರ್ಯ ಕೆಡಿಸುವುದರ ಜತೆಗೆ ಜನರ ಮೇಲು ದುಷ್ಪರಿಣಾಮ ಬೀಳುತ್ತಿರುವ



ಹಿನ್ನಲೆಯಲ್ಲಿ ಹೊಸದಿಗಂತ ಸಹಿತ ಮಾಧ್ಯಮಗಳ ನಿರಂತರ ವರದಿ ಹಾಗೂ ಸಾರ್ವಜನಿಕರಿಂದಲೂ ಬಂದಿರುವ ದೂರಿನಿಂದಾಗಿ ಅಧಿಕಾರಿಗಳ ಕಾರ್ಯವೈಖರಿಗೆ ಗರಂ ಆಗಿರುವ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಅವರು ಸಂಬಂಧಿಸಿದ ಅಧಿಕಾರಿಗಳನ್ನುನೇರತರಾಟೆಗೆತೆಗೆದುಕೊಂಡಿದ್ದಲ್ಲದೆ ಸೂಕ್ತ ಕ್ರಮಕ್ಕೆ ತಾಕೀತು ಮಾಡಿದ್ದಾರೆ.

ಪುರಸಭೆ ಮುಖ್ಯಾಧಿಕಾರಿ ತೀರ್ಥಪ್ರಸಾದ್‌ಗೆ ಕರೆ ಮಾಡಿ ಪ್ರಶ್ನಿಸಿದ ಶಾಸಕರು, ಪಾಣೆಮಂಗಳೂರು ಸಹಿತ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ತ್ಯಾಜ್ಯ ರಾಶಿಯಾಗಿರುವುದು ಕ್ಷೇತ್ರದ ಘನತೆಗೆ ಧಕ್ಕೆತರುತ್ತದೆ. ಇದು ಸಾರ್ವಜನಿಕ ಆರೋಗ್ಯ ಮತ್ತು ಪರಿಸರದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ಅವರು, ಕಳವಳ ವ್ಯಕ್ತಪಡಿಸಿದರು. ಕೂಡಲೇ ಎಲ್ಲ ತ್ಯಾಜ್ಯ ತೆರವುಗೊಳಿಸಿ, ಇಂತಹ ಪರಿಸ್ಥಿತಿ ಮರುಕಳಿಸದಂತೆ



ಶಾಶ್ವತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಿಸಿ ಕ್ಯಾಮರಾ ಅಳವಡಿಸಿ

ರಸ್ತೆ ಬದಿಯಲ್ಲಿ ಕಸ ಎಸೆಯುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕಾನೂನು ಕ್ರಮ ಜರುಗಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ ಶಾಸಕರು, ತ್ಯಾಜ್ಯ ಎಸೆಯುವ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವಂತೆ ಆದೇಶಿಸಿದರು. ಕ್ಯಾಮೆರಾ ಅಳವಡಿಕೆಗೆ ಅಗತ್ಯವಿರುವ ವೆಚ್ಚವನ್ನು ಶಾಸಕರ ಅನುದಾನದಿಂದಲೇ ಭರಿಸಲಾಗುವುದು ಎಂದು ಭರವಸೆ ನೀಡಿದರು. ಕ್ಯಾಮೆರಾ ಅಳವಡಿಸಿದ ನಂತರವೂ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಕಸ ರಾಶಿಯಾದರೆ, ಅದು ಅಧಿಕಾರಿಗಳ ವೈಫಲ್ಯವೆಂದು ಪರಿಗಣಿಸಲಾಗುವುದು.

ಕಾರ್ಯಾಚರಿಸದ ಸಿಸಿಕ್ಯಾಮರಾ

ಪುರಸಭಾ ವ್ಯಾಪ್ತಿ ಆಯಕಟ್ಟಿನ ಕೆಲ ಸ್ಥಳಗಳಲ್ಲಿ 20ಕ್ಕೂ ಹೆಚ್ಚುಕಡೆಗಳಲ್ಲಿ ಕಳೆದ ಚುನಾಯಿತ ಪ್ರತಿನಿಧಿಗಳ ಆಡಳಿತವಿದ್ದಾಗಲೇ ಸಿಸಿ ಕ್ಯಾಮರ ಅಳವಡಿಸಲಾಗಿತ್ತಾದರೂ ಅದು ಸದ್ಯ ಕಾರ್ಯಾಚರಿಸುತ್ತಿಲ್ಲ ಎಂದು ತಿಳಿದುಬಂದಿದೆ. ಸಿಸಿ ಕ್ಯಾಮರ ಅಳವಡಿಕೆಯಲ್ಲಿ ಗೋಲ್‌ಮಾಲ್ ನಡೆದಿರುವ ಬಗ್ಗೆ ಪುರಸಭೆ ಸಾಮಾನ್ಯಸಭೆಯಲ್ಲಿ ಮಾಡುತ್ತಿದ್ದ ಸದ್ದು ಈಗ ಅಡಗಿದೆ.

ಅಂತಹ ಪರಿಸ್ಥಿತಿ ನಿರ್ಮಾಣವಾದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು ಎಂದು ಶಾಸಕ ನ್ಯಾಕ್ ಎಚ್ಚರಿಸಿದರು.

ನದಿ ಮಾಲಿನ್ಯವಾಗದಂತೆ ನೋಡಿಕೊಳ್ಳಿ

ಇದೇ ವೇಳೆ ನೇತ್ರಾವತಿ ನದಿ ಮಾಲಿನ್ಯದ ವಿಚಾರವನ್ನೂ ಗಂಭೀರವಾಗಿ ಪ್ರಸ್ತಾಪಿಸಿದ ಶಾಸಕರು, ಬಂಟ್ವಾಳ ಬಡ್ಡಕಟ್ಟೆ ಗೂಡಿನಬಳಿ, ತಲಪಾಡಿ ಸಹಿತ ಪುರಸಭಾ ವ್ಯಾಪ್ತಿಯ ಅನೇಕ ವಾಣಿಜ್ಯ ಸಂಕೀರ್ಣಗಳು, ವಸತಿ ಸಮುಚ್ಚಯಗಳು, ಹೋಟೆಲ್ ಹಾಗೂ ವಿವಿಧ ಅಂಗಡಿಗಳಿಂದ ಹೊರಬರುವ ಕೊಳಚೆ ನೀರು ನೇರವಾಗಿ ನೇತ್ರಾವತಿ ನದಿಗೆ ಸೇರುತಿರುವ ಬಗ್ಗೆಯು ಶಾಸಕರು ತೀವ್ರ ಕಳವಳ ವ್ಯಕ್ತಪಡಿಸಿದರು. ಪುರಸಭೆಗೊಳಪಟ್ಟ ವಾಣಿಜ್ಯ ಸಂಕೀರ್ಣಗಳಲ್ಲಿನ ಕೊಳಚೆ ನೀರನ್ನು ಕೂಡ ನದಿಗೆ ಬಿಡಲಾಗುತ್ತಿದ್ದು, ಅವರ ಮೇಲೆಯೂ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಶಾಸಕರು ಮುಖ್ಯಾಧಿಕಾರಿಗೆ ಸೂಚಿಸಿದ್ದಾರೆ. ನೇತ್ರಾವತಿ ನದಿ ಕೇವಲ ಬಂಟ್ವಾಳದ ಜೀವನಾಡಿಯಲ್ಲ, ಮಂಗಳೂರು ಸಹಿತ ಸಾವಿರಾರು ಜನರಿಗೆ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ.

ಹೊಸದಿಗಂತ ಗಮನಸೆಳೆದಿತ್ತು

ಪುರಸಭಾ ವ್ಯಾಪ್ತಿಯ 10ಕ್ಕೂ ಹೆಚ್ಚು ಕಡೆಗಳಲ್ಲಿ ವಸತಿ, ವಾಣಿಜ್ಯ, ಮಾಂಸದಂಗಡಿ, ಹೋಟೇಲ್‌ಗಳಿಂದ ನೇರವಾಗಿ ನೇತ್ರಾವತಿನದಿ ನೀರಿಗೆ ಸೇರುವ ಕುರಿತು ಸಚಿತ್ರ ಸಹಿತ ವಿಶೇಷ ವರದಿಯನ್ನು ಹೊಸದಿಗಂತ ಹಲವು ಬಾರಿ ಪ್ರಕಟಿಸಿ ಗಮನಸೆಳೆದಿತ್ತು. ಈ ವರದಿ ಆಧರಿಸಿ ಪರಿಸರ ಇಲಾಖೆ ನದಿ ನೀರಿನ ಸ್ಯಾಂಪಲ್ ತೆಗೆದು ಪರೀಕ್ಷೆಗೂ ಒಳಪಡಿಸಿದ್ದು, ಈ ನೀರು ಕುಡಿಯಲು ಯೋಗ್ಯವಲ್ಲ ಎಂಬ ವರದಿಯನ್ನು ನೀಡಿತ್ತಾದರೂ ಪುರಸಭೆ ಈ ಕೆಟ್ಟಿನಲ್ಲಿ ಸಂಬಂಧಿಸಿದ ಯಾರ ಮೇಲೆಯು ಕ್ರಮ ಕೈಗೊಂಡ ಉದಾಹರಣೆ ಇಲ್ಲ.

ಇಂತಹ ನದಿ ಕಲುಷಿತಗೊಳಿಸುವವರ ವಿರುದ್ಧ ರಾಜಿ ಮಾಡಿಕೊಳ್ಳುವುದಿಲ್ಲ, ಕಾನೂನು ಉಲ್ಲಂಘಿಸುವವರ ವಿರುದ್ಧ ಪ್ರಕರಣ ದಾಖಲಿಸಿ ಕಠಿಣ ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು. ಈ ಕುರಿತು ಹಲವು ಸಭೆಗಳಲ್ಲಿ ಈಗಾಗಲೇ ಸೂಚನೆ ನೀಡಿದ್ದರೂ ಸಮಸ್ಯೆ ಮುಂದುವರಿದಿರುವ ಬಗ್ಗೆ ಮುಖ್ಯಾಧಿಕಾರಿಯವರಲ್ಲಿ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಪರಿಸರ ಸಂರಕ್ಷಣೆ ಮತ್ತು ಸಾರ್ವಜನಿಕ ಆರೋಗ್ಯದ ವಿಚಾರದಲ್ಲಿ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಪಂಚಾಯಿತಿ ವ್ಯಾಪ್ತಿಯಲ್ಲೂ ಕಸ

ಗ್ರಾ.ಪಂ. ವ್ಯಾಪ್ತಿಯ ರಸ್ತೆ ಬದಿಯಲ್ಲಿ ತ್ಯಾಜ್ಯ ರಾಶಿಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ತಾ.ಪಂ. ಇಒ ಸಚಿನ್ ಕುಮಾರ್ ಅವರಿಗೂ ಕರೆ ಮಾಡಿ ಈ ವಿಚಾರದಲ್ಲಿ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು. ಬಂಟ್ವಾಳ ವಿಧಾನಸಭಾ ಕ್ಷೇತ್ರದಲ್ಲಿ ತ್ಯಾಜ್ಯ ವಿಲೇವಾರಿ ಸಮಸ್ಯೆ ಎದುರಾಗುವ ಪ್ರದೇಶಗಳಿಂದ ಒಣ ಹಾಗೂ ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಶಾಸಕರ ಗಂಜಿಮಠದಲ್ಲಿರುವ ಒಡೂರು ಫಾರ್ಮ್ ಹೌಸ್‌ಗೆ ಸಾಗಿಸಿ ವೈಜ್ಞಾನಿಕ ವಿಲೇವಾರಿಗೆ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯದ ಆವರಣದಲ್ಲಿದ್ದ ಜೇನುಹಿಂಡು

ವಿದ್ಯಾರ್ಥಿಯಿಂದ ಸುರಕ್ಷಿತವಾಗಿ ತೆರವು

ಉಪ್ಪಿನಂಗಡಿ: ಶಾಲಾ ಆವರಣದಲ್ಲಿ ನೆಲೆಸಿದ್ದ ಜೇನು ಗೂಡನ್ನು ಶಾಲಾ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ 13 ಹರೆಯದ ಶಾಲಾ ವಿದ್ಯಾರ್ಥಿಯೇ ಸುರಕ್ಷಿತವಾಗಿ ತೆರವುಗೊಳಿಸಿದ ಘಟನೆ ಉಪ್ಪಿನಂಗಡಿಯ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ನಡೆದಿದೆ.

ಶಾಲಾ ಆವರಣದ ಪೊಟರೆಯಿಂದ ಜೇನು ನೊಣಗಳು ಕಾಣಿಸಿಕೊಳ್ಳುತ್ತಿದ್ದು, ಕ್ರೀಡಾಂಗಣದಲ್ಲಿ ಆಡುತ್ತಿದ್ದ ಮಕ್ಕಳಿಗೆ ಕಚ್ಚಿರುವ ಘಟನೆಗಳು ನಡೆದಿತ್ತು. ಇದರಿಂದ ಕಳವಳಕ್ಕೀಡಾದ ಶಾಲಾಡಳಿತ ಪೊಟರೆಯಲ್ಲಿ ಆಶ್ರಯ ಪಡೆದಿರಬಹುದಾದ ಜೇನು ಸಂತತಿ ತೆರವುಗೊಳಿಸಲು ನಿರ್ಧರಿಸಿತ್ತು. ಆದರೆ, ಬೆಂಕಿಯ ಹೊಗೆಯನ್ನು ಪ್ರಸಹರಿಸಿ ಜೇನು ನೊಣಗಳನ್ನು ಓಡಿಸಬಹುದೆಂಬ ಸಲಹೆ ವ್ಯಕ್ತವಾಗಿತ್ತು. ಈ ಸಲಹೆಯನ್ನು ಆಲಿಸಿದ ವಿದ್ಯಾಲಯದ 8ನೇ ತರಗತಿಯ ವಿದ್ಯಾರ್ಥಿ ಗವಿನ್ ರೇಶಿಮೆ, 'ಜೇನು ನೊಣಗಳ ರಕ್ಷಣೆಗಾಗಿ ಬೆಂಕಿಯ ಹೊಗೆಯನ್ನು ಹಾಕಿ ಜೇನು ನೊಣಗಳನ್ನು ತೆರವುಗೊಳಿಸಿದರೆ



ನೊಣಗಳು ಸಾಯುವ ಸಂಭವವಿದೆ. ಅವಕಾಶ ಕೊಟ್ಟರೆ ತಾನೇ ಜೇನು ನೊಣಗಳನ್ನು ತೆರವುಗೊಳಿಸುವೆನೆಂದು ಶಾಲಾಡಳಿತದೊಂದಿಗೆ ವಿನಂತಿಸುತ್ತಾನೆ. 13 ವರ್ಷದ ವಿದ್ಯಾರ್ಥಿಯಿಂದ ಅಪಾಯಕಾರಿ ಜೇನು ನೊಣಗಳನ್ನು ತೆರವುಗೊಳಿಸುವಕಾರ್ಯಕ್ಕೆಶಾಲಾಡಳಿತ ಒಪ್ಪಿಗೆ ನೀಡದಿದ್ದರೂ, ಜೇನು ನೊಣಗಳ ಸುರಕ್ಷತೆಯ ಬಗ್ಗೆ ಈಗಾಗಲೇ ಸಂಶೋಧನಾ ನಿರತನಾಗಿರುವ ಗವಿನ್ ಬಗ್ಗೆ ಆತನ ಹೆತ್ತವರು ಬೆಂಗಾವಲು ಆಗಿ ತಾವು ನಿಲ್ಲುತ್ತೇವೆ ಎಂದು ಭರವಸೆ ನೀಡಿದ ಕಾರಣ ಶಾಲಾಡಳಿತ ಒಪ್ಪಿಗೆ ನೀಡಿತ್ತು. ಈ ಕಾರಣದಿಂದ ಗುರುವಾರ ರಾತ್ರಿ ಕಾರ್ಯಾಚರಣೆ ನಡೆಸಿದ ಈತನಿಗೆ ಅಚ್ಚರಿ ಕಾದಿತ್ತು. ಪೊಟರೆಯಲ್ಲಿ ಸಣ್ಣ ಪ್ರಮಾಣದ ಜೇನು ನೊಣಗಳಿರಬಹುದೆಂದು ಅಂದಾಜಿಸಿದ್ದ ಆತನಿಗೆ ಪೊಟರೆಯೊಳಗೆ ಹಲವು ಹಂತಗಳಲ್ಲಿ ಗೂಡು ಕಟ್ಟಿಕೊಂಡಿದ್ದ ಜೇನುತುಪ್ಪ ಭರಿತ ದೊಡ್ಡ ಪ್ರಮಾಣದ ಜೇನು ಗೂಡು ಕಾಣಿಸಿತ್ತು. ಯಾವೊಂದೂ ಜೇನು ನೊಣಗಳಿಗೆ ಹಾನಿಯಾಗದಂತೆ ತಾನು ಮೊದಲೇ ತಂದಿರಿಸಿದ ಜೇನು ಗೂಡಿಗೆ ಜೇನು ನೊಣಗಳನ್ನು ಸ್ಥಳಾಂತರಿಸಿ, ಗೂಡಿನಲ್ಲಿದ್ದ ಜೇನು ತುಪ್ಪವನ್ನು ಸಂಗ್ರಹಿಸಿದನು. ಮಾತ್ರವಲ್ಲದೆ ಕ್ರೀಡಾಂಗಣದಲ್ಲಿನ ಚಿಕ್ಕು ಮರದಲ್ಲಿದ್ದ ಕೋಲ್ಜೇನನ್ನು ಕೂಡಾ ಸ್ಥಳಾಂತರಿಸಿದ. ತನ್ಮೂಲಕ ತಾನೇ ಕಲಿಯುತ್ತಿರುವಶಾಲೆಯವಿದ್ಯಾರ್ಥಿಗಳ ಸುರಕ್ಷತೆಯನ್ನು ಖಾತರಿಪಡಿಸಿದನು. ಜೊತೆಗೆ ಪ್ರಕೃತಿಯಲ್ಲಿ ಪರೋಪಕಾರಿ ಜೀವಿಯಾಗಿರುವ ಜೇನು ನೊಣಗಳನ್ನೂ ಸುರಕ್ಷಿತವಾಗಿ ರಕ್ಷಿಸುವಲ್ಲಿ ಸಫಲನಾದನು.

ನೈಸರ್ಗಿಕ ಕೃಷಿ, ಸಮತೋಲಿತ ರಸಗೊಬ್ಬರ ಬಳಕೆ ಮಾಹಿತಿ ಕಾರ್ಯಾಗಾರ

ಸಮಗ್ರ ಪೋಷಕಾಂಶ ನಿರ್ವಹಣೆ ಮಾಹಿತಿ

ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕೃಷಿ ಇಲಾಖೆ, ಬಂಟ್ವಾಳ ತಾಲೂಕು 2026–27 ಸಾಲಿನ ರಾಷ್ಟ್ರೀಯ ಕೃಷಿ ವಿಸ್ತರಣೆ ಉಪ ಅಭಿಯಾನ ಆತ್ಮ ಯೋಜನೆಯಡಿಯಲ್ಲಿ ಜಿಲ್ಲೆಯೊಳಗಿನ ರೈತರಿಗೆ ನೈಸಗಿಕ ಕೃಷಿ ಹಾಗೂ ಸಮತೋಲಿತ ರಸಗೊಬ್ಬರ ಬಳಕೆ ಕುರಿತು ಕೃಷಿ ಮಾಹಿತಿ ಕಾರ್ಯಾಗಾರವು ವೀರಕಂಬ ಗ್ರಾಮದ ಮಜೊನಿ ಕುಸುಮಾ ರವೀಂದ್ರ ಶೆಟ್ಟಿ ಅವರ ಮನೆ ವಠಾರದಲ್ಲಿ ಜರಗಿತು.

ಕಾರ್ಯಾಗಾರವನ್ನು ಉದ್ಘಾಟಿಸಿ, ಅಧ್ಯಕ್ಷತೆಯನ್ನು ವಹಿಸಿದ್ದ ಕುಸುಮ ರವೀಂದ್ರ ಶೆಟ್ಟಿ ಮಾತನಾಡಿ, ಕೃಷಿ ವಿಜ್ಞಾನಿಗಳು ನೀಡುವಂತ ಉಪಯುಕ್ತವಾದ ಮಾಹಿತಿಯನ್ನು ರೈತರು ಅರಿತುಕೊಂಡು ಅದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಮಂಗಳೂರಿನ ಕೆವಿಕೆ ಮಣ್ಣು ಆರೋಗ್ಯ ವಿಜ್ಞಾನಿ ಡಾ. ಮಲ್ಲಿಕಾರ್ಜುನ್ ಅವರು ಮಾಹಿತಿ ನೀಡಿ, ಸಮತೋಲಿತ ಗೊಬ್ಬರ ಬಳಕೆ, ರಾಸಾಯನಿಕ ಹೊರೆ ಕಡಿಮೆ, ನೈಸರ್ಗಿಕ ಕೃಷಿಗೆ ಉತ್ತೇಜನ, ವಿಷಮುಕ್ತ



ಆಹಾರ, ಜಲ– ಪರಿಸರ ಸಂರಕ್ಷಣೆ ಮಾಡುವ ಮೂಲಕ ಭೂಮಿಯ ಫಲವತ್ತತೆಯನ್ನು ಕಾಪಾಡಬೇಕೆಂದರಲ್ಲದೆ ಸಮಗ್ರ ಪೋಷಕಾಂಶ ನಿರ್ವಹಣೆಯ ಬಗ್ಗೆಯು ಮಾಹಿತಿಯನ್ನು ನೀಡಿದರು.

ಮಂಗಳೂರಿನ ಕೆವಿಕೆ ಹೈನುಗಾರಿಕಾ ವಿಜ್ಞಾನಿ ಡಾ. ದರ್ಶನ್ ಸಾವಯುವ ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ ಬಗ್ಗೆ ಮಾಹಿತಿ ನೀಡಿದರು. ಕೃಷಿ ಇಲಾಖೆ ಬಂಟ್ವಾಳ ತಾಲೂಕು ವಿಟ್ಲ ಹೋಬಳಿಯ ಆತ್ಮ ಯೋಜನೆಯ ತಾಂತ್ರಿಕ ಸಹಾಯಕ ವಿರೂಪಾಕ್ಷಹಡುಪದ್ ಕೃಷಿಇಲಾಖೆಯಿಂದ ದೊರಕುವ ಸೌಲಭ್ಯದ ಮಾಹಿತಿ ನೀಡಿದರು. ವೀರಕಂಬ ಪಿಡಿಒ ಶಂಭು ಕುಮಾರ್ ಶರ್ಮ, ಪ್ರಗತಿಪರ ಕೃಷಿಕ ತಿರುಮಲ ಕುಮಾರ್ ಮಜಿ ಇದ್ದರು. ಬೋಳಂತೂರು ಮತ್ತು ಪೆರುವಾಯಿ ಕೃಷಿ ಸಖಿ, ಪಶು ಸಖಿಯರು ಹಾಗೂ ವೀರಕಂಬ ಗ್ರಾಮದ ಸ್ನೇಹ ಸಂಜೀವಿನಿ ಸಿಬ್ಬಂದಿ ರೂಪ, ಜಯಂತಿ, ಪ್ರವೀಣ ಇದ್ದರು. ರೈತರಿಗೆ ಮಣ್ಣು ಪರೀಕ್ಷೆ ಮಾಡಿದಮಣ್ಣುಕಾರ್ಡ್ ವಿತರಿಸಲಾಯಿತು. ಕೆಲಿಂಜ ಶಾಖೆ ಯೋಗ ಶಿಕ್ಷಕರಾದ ಬಾಬಾ ಕಿರಣ್ ಪ್ರಾರ್ಥಿಸಿದರು.ಎನ್ ಆರ್ ಎಲ್ ಎಂ ವೀರಕಂಭ ಗ್ರಾಮದ ಎಂ ಬಿ ಕೆ ಮಲ್ಲಿಕಾ ಶೆಟ್ಟಿ ಸ್ವಾಗತಿಸಿದರು,ವೀರಕಂಭ ಗ್ರಾಮದ ಕೃಷಿ ಸಖಿ ನಮಿತಾ ರೈ ವಂದಿಸಿದರು. ವೀರಕಂಭ ಗ್ರಾಮದ ಸಿ ಆರ್ ಪಿ ಪುಷ್ಪಾವತಿ ಕಾರ್ಯಕ್ರಮ ನಿರೂಪಿಸಿದರು.

ಶಾರದಾ ವಿದ್ಯಾಲಯದಲ್ಲಿ ಸ್ಟುಡೆಂಟ್ಸ್ ಕೌನ್ಸಿಲ್ ಉದ್ಘಾಟನೆ



ಮಂಗಳೂರು: ನಗರದ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದಲ್ಲಿ ಈ ದಿನ 2026–27ನೇ ಶೈಕ್ಷಣಿಕವರ್ಷದನೂತನಸ್ಟೂಡೆಂಟ್‌ಕೌನ್ಸಿಲ್ ಉದ್ಘಾಟನಾ ಸಮಾರಂಭವು ವಿದ್ಯಾಲಯದ ಮುಖ್ಯ ಸಭಾಂಗಣದಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾದ ಮಂಗಳೂರಿನ ಬೈಟ್‌ಗ್ಲೋಬ್ ಪ್ರೈ.ಲಿ. ಆಡಳಿತ ನಿರ್ದೇಶಕ ಮೋಹನ್‌ರಾಜ್ ಉದ್ಘಾಟಿಸಿದರು. ವಿದ್ಯಾರ್ಥಿಗಳು ಎಳವೆಯಲ್ಲೇ ನಾಯಕತ್ವಗುಣವನ್ನು ಅಳವಡಿಸಿಕೊಳ್ಳುವುದರ ಜತೆಗೆಗುರು–ಹಿರಿಯರ ಬಗ್ಗೆ ಭಕ್ತಿ–ಗೌರವ, ಸಾಮಾಜಿಕಕಾರ್ಯ ಚಟುವಟಿಕೆಗಳ ಬಗ್ಗೆ ಆಸಕ್ತಿಯನ್ನು ರೂಢಿಸಿಕೊಳ್ಳಬೇಕು ಎಂದರು.

ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ನಾಯಕತ್ವದಗುಣವೆಂದರೆ ತಮ್ಮ ವ್ಯಕ್ತಿತ್ವವನ್ನುವೃದ್ಧಿಸಿಕೊಳ್ಳುವುದಾಗಿದೆ. ನಾಯಕನಾದವನು ಶಿಸ್ತು ಬದ್ಧತೆ, ಸಮಯ ಪಾಲನೆ, ಉತ್ತಮಗುಣ–ನಡತೆಗಳನ್ನು ರೂಢಿಸಿಕೊಂಡು ಇತರರಿಗೆ ಮೇಲ್ಪಂಕ್ತಿಯಾಗಿರಬೇಕು. ವಿಶ್ವದಲ್ಲೇಅತೀದೊಡ್ಡ ಪ್ರಜಾ ಪ್ರಭುತ್ವರಾಷ್ಟ್ರವಾದ ನಮ್ಮದೇಶದ ಸಂಸ್ಕೃತಿಯ ಹಿರಿಮೆಯ ಬಗ್ಗೆ ಗುರು–ಹಿರಿಯರ ಬಗ್ಗೆ ಗೌರವಭಾವವನ್ನು ಹೊಂದಿರಬೇಕು ಎಂದರು.

ಶಾರದಾ ಸಮೂಹ ಸಂಸ್ಥೆಗಳ ಆಡಳಿತ ಮಂಡಳಿ ಟ್ರಸ್ಟಿ ಸುಧಾಕರ ಪೇಜಾವರ, ನಿರ್ದೇಶಕ, ಟ್ರಸ್ಟಿ ಸಮೀರ್ ಪುರಾಣಿಕ್, ಪ್ರಾಂಶುಪಾಲೆ ಚಂದ್ರಿಕಾ ಭಂಡಾರಿ, ಆಡಳಿತ ಪ್ರಾಂಶುಪಾಲ ದಯಾನಂದ ಕಟೀಲ್ ವೇದಿಕೆಯಲ್ಲಿದ್ದರು. ವಿದ್ಯಾರ್ಥಿ ನಾಯಕಿ, ಉಪನಾಯಕ, ಸ್ಟುಡೆಂಟ್ಸ್ ಕೌನ್ಸಿಲಿನ ವಿವಿಧ ವಿಭಾಗದ ಪ್ರಮುಖರಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕಡೇಶಿವಾಲಯ ದೇಗುಲ ಜೀರ್ಣೋದ್ಧಾರ: ಗರ್ಭಗುಡಿ, ತೀರ್ಥಮಂಟಪ, ಸುತ್ತುಪೌಳಿ ತೆರವು



ಮಂಗಳೂರು: ಬಂಟ್ವಾಳ ತಾಲೂಕಿನ ಕಡೇ ಶಿವಾಲಯ ಇಲ್ಲಿನ ಮಹಾತೋಭಾರ ಚಿಂತಾಮಣಿ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರದ ಪ್ರಯುಕ್ತ ದೇವಸ್ಥಾನದ ಹಳೇ ಕಟ್ಟಡಗಳಾದ ಗರ್ಭ ಗುಡಿ, ತೀರ್ಥ ಮಂಟಪ, ಸುತ್ತು ಪೌಳಿ, ಆಂಜನೇಯ ಗುಡಿ, ತೆರವುಗೊಳಿಸುವ ಕಾರ್ಯ ಆರಂಭಗೊಂಡಿದೆ.

ಕಡೇಶಿವಾಲಯ ಗ್ರಾಮದ ಸಂಘ –ಸಂಸ್ಥೆಗಳಾದ ಶ್ರೀ ಲಕ್ಷ್ಮೀ ನರಸಿಂಹ ಗೆಳೆಯರ ಬಳಗ ರಥಬೀದಿ, ಗೆಳೆಯರ ಬಳಗ ಅರಿಕಲ್ಲು, ಗೆಳೆಯರ ಬಳಗ ಕಲ್ಲಾಜೆ, ಶ್ರೀ ಲಕ್ಷ್ಮೀ ಗೆಳೆಯರ ಬಳಗ ಕೊರತಿಗುರಿ, ಶಿವಂ ಕಡೇ ಶಿವಾಲಯ, ಶ್ರೀ ಸತ್ಯ ದೇವತಾ ಗೆಳೆಯರ ಬಳಗ ಬೊಲ್ಲರ್, ಸತ್ಯ ದೇವತಾ ಗೆಳೆಯರ ಬಳಗ ನೆತ್ತರ, ಉದಯ ಯುವಕ ಮಂಡಲ ಶೇರಾ, ಶ್ರೀ ರಾಮ ಭಜನಾ ಮಂಡಳಿ ಪ್ರತಾಪ ನಗರ, ಯುವ ಶಕ್ತಿ ಕಡೇ ಶಿವಾಲಯ, ಬಿರುವೆರ್ ಕಡೇ ಶಿವಾಲಯ ಸೇವಾ ಟ್ರಸ್ಟ್, ಛತ್ರಪತಿ ಶಿವಾಜಿ ಸಮಾಜ ಸೇವಾ ಸಂಘ ಕಡೇ ಶಿವಾಲಯ, ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ ಕಡೇ ಶಿವಾಲಯ, ಬಂಟರ ಸಂಘ ಕಡೇ ಶಿವಾಲಯ, ನವೋದಯ ಸ್ವ ಸಹಾಯ ಸಂಘ ಕಡೇ ಶಿವಾಲಯ, ಸ್ತ್ರೀ ಶಕ್ತಿ ಸ್ವ ಸಹಾಯ ಸಂಘ, ಒಡಿಯೂರು ಸ್ವ ಸಹಾಯ ಸಂಘ, ಮಾತೃ ಸಂಜೀವಿನಿ ಸ್ವ ಸಹಾಯ ಸಂಘ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸದಸ್ಯರುಗಳು ಪ್ರತಿ ದಿನ ಸುಮಾರು 400ಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಕರ ಸೇವೆ ಮಾಡಿದ್ದಾರೆ.

ಈ ಸಂದರ್ಭ ಕರ ಸೇವಾ ಸಮಿತಿಯ ಸಂಚಾಲಕ ಪುಷ್ಪರಾಜ್ ಹೆಗ್ಡೆ ಸತ್ತಿಕಲ್ಲು, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪುರುಷೋತ್ತಮ್ ಶೆಟ್ಟಿ ನುಳಿಯಲು, ಸಮಿತಿ ಸದಸ್ಯರು, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಡಾ. ಶ್ರೀಪತಿ ರಾವ್ ದಾಳಿಂಬ, ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಉಳ್ಳಾಲ ಮಾರುತಿ ಜನಸೇವಾ ಟ್ರಸ್ಟ್‌ನಿಂದ ಸಸಿ ವಿತರಣಾ ಕಾರ್ಯಕ್ರಮ



ಉಳ್ಳಾಲ: ವನ ಬೆಳೆಸುವ ಮೂಲಕ ಪ್ರಕೃತಿಯಲ್ಲಿನ ಅಸಮತೋಲನ ತಪ್ಪಿಸಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ಪ್ರಾರಂಭಿಸಿದ ಕಾರ್ಯಕ್ರಮವನ್ನು ಸಂಘ ಸಂಸ್ಥೆಗಳು ಮುನ್ನಡೆಸಿಕೊಂಡು ಹೋದ ಕಾರಣ ಇಂದು ಅಲ್ಲಲ್ಲಿ ಸಸ್ಯರಾಶಿ ಕಾಣಲು ಸಾಧ್ಯವಾಗಿದೆ ಎಂದು ಉಳ್ಳಾಲ ಮೊಗವೀರ ಸಂಘದ ಅಧ್ಯಕ್ಷ ಯಶವಂತ್ ಪಿ.ಅಮೀನ್ ಹೇಳಿದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಉಳ್ಳಾಲ ಮೊಗವೀರಪಟ್ಣದಮಾರುತಿಜನಸೇವಾ ಟ್ರಸ್ಟ್, ಮಾರುತಿ ಯುವಕ ಮಂಡಲ ವತಿಯಿಂದ ವನಮಹೋತ್ಸವ ಪ್ರಯುಕ್ತ ಗುರುವಾರ ಮೊಗವೀರಪಟ್ನ ಕಡಲ ಕಿನಾರೆಯಲ್ಲಿ ನಡೆದ ಗಾಳಿಮರ ನೆಡುವ ಹಾಗೂ ಗಿಡ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಾರುತಿ ಯುವಕ ಮಂಡಲ ಮತ್ತು ಮಾರುತಿ ಜನಸೇವಾ ಸಂಘದ ಅಧ್ಯಕ್ಷ ಅನಿಲ್ ಚರಣ್ ಉಳ್ಳಾಲ್ ಮಾತನಾಡಿದರು.

ಉಳ್ಳಾಲ ಶ್ರೀ ವ್ಯಾಘ್ರ ಚಾಮುಂಡೇಶ್ವರಿ ದೇವಸ್ಥಾನದ ಗುರಿಕಾರ ವಸಂತ್ ಅಮೀನ್, ಮೊಗವೀರ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ವನಜ, ಶಿವಾಜಿ ಜೀವರಕ್ಷಕ ಈಜುಗಾರರ ಸಂಘದ ಅಧ್ಯಕ್ಷ ಕಿರಣ್ ಪುತ್ರನ್, ಪರಿಸರ ಪ್ರೇಮಿ ಮಾಧವ ಉಳ್ಳಾಲ್, ಮಾರುತಿ ಜನಸೇವಾ ಸಂಘದ ಗೌರವಾಧ್ಯಕ್ಷ ಕಿರಣ್ ಪುತ್ರನ್, ಉಪಾಧ್ಯಕ್ಷ ಪ್ರಶಾಂತ್ ಬಿ. ಉಳ್ಳಾಲ್, ಪ್ರಧಾನ ಸಂಚಾಲಕ ಸುಧೀರ್ ವಿ. ಅಮೀನ್, ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು ಹಾಗೂ ಸದಸ್ಯರು ಇದ್ದರು. ಮಾರುತಿ ಜನಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಕಪಿಲ್ ಎಸ್. ಬಂಗೇರ ನಿರೂಪಿಸಿದರು.

ಕಡಬದಲ್ಲಿ ಜೇಸಿಐ ಕಡಬ ಕದಂಬ, ರೈತ ಕುಡ್ಲ ಪ್ರತಿಷ್ಠಾನದ ಆಶ್ರಯದಲ್ಲಿ ಹಲಸು ಉತ್ಸವ ಕೃಷಿ ಮೇಳ, ಕೃಷಿ ಉತ್ಸವಕ್ಕೆ ಚಾಲನೆ | ಶಾಸಕಿ ಭಾಗೀರಥಿ ಸಲಹೆ

ಕೃಷಿಕರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಮುಂದಾಗಲಿ

ಕಡಬ: ಕೃಷಿಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆಗಳು ನಡೆಯಬೇಕು. ಧಾರಣೆ ಕುಸಿತ, ರೋಗ ಬಾಧೆಗಳು, ಕಾರ್ಮಿಕರ ಕೊರತೆಯಂತಹ ಸಮಸ್ಯೆಗಳಿಂದ ಕಂಗಾಲಾಗಿರುವ ಕೃಷಿಕರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ತಾವು ಬೆಳೆದ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಮುಂದಾಗಬೇಕು ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಅವರು ಗುರುವಾರ ಕಡಬದ ಅನುಗ್ರಹ ಸಭಾಭವನದಲ್ಲಿ ಜೇಸಿಐ ಕಡಬ ಕದಂಬ ಹಾಗೂ ರೈತ ಕುಡ್ಲ ಪ್ರತಿಷ್ಠಾನದ ಆಶ್ರಯದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಮೂರುದಿನಗಳ ಕಾಲ ನಡೆಯುವ 'ಹಲಸು ಮೇಳ–2026' ಕೃಷಿ ಉತ್ಸವವನ್ನು ಹಲಸಿನ ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.



ಅಂತಾರಾಷ್ಟ್ರೀಯ ಹಲಸು ರಾಯಭಾರಿ ಶ್ರೀಪಡ್ರೆ ದಿಕ್ಸೂಚಿ ಭಾಷಣ ಮಾಡಿ, ಇಡೀ ಜಗತ್ತಿನಲ್ಲಿ ಹಲಸಿನ ಬಗ್ಗೆ ಆಗಿರುವ ಸಂಶೋಧನೆ ತೀರಾ ಕಡಿಮೆ. ಭಾರತದಲ್ಲಿ ಹಲಸಿನ ಬಗ್ಗೆ ಸಂಶೋಧನೆಗೆ ಸಂಶೋಧನಾ ಕೇಂದ್ರವಾಗಬೇಕು. ಹಲಸು ಕೊಳೆತು ಹೋಗುವುದರ ಬದಲು ಮೌಲವರ್ಧಿತ ಉತ್ಪಾದನೆಯಾಗಿ ಹೊಟ್ಟೆಗೆ ಹೋಗುವಂತೆ ಮಾಡಿದರೆ ಅದರ ಮಹತ್ವ ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಾಗಲಿದೆ ಎಂದರು.

ಜೇಸಿಐ ಕಡಬ ಕದಂಬದ ಅಧ್ಯಕ್ಷ ಜೇಮ್ಸ್ ಕ್ರಿಶಲ್ ಡಿ'ಸೋಜಾ ಅಧ್ಯಕ್ಷತೆ ವಹಿಸಿದ್ದರು. ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾ ಜಬೀನ್, ಜೇಸಿ ವಲಯ 15ರ ಅಧ್ಯಕ್ಷ ಸಂತೋಷ್ ಶೆಟ್ಟಿ ಶುಭಾಶಂಸನೆಗೈದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವಿಜಯಕುಮಾರ್ ಸೊರಕೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರೈತ ಕುಡ್ಲ ಪ್ರತಿಷ್ಠಾನದ ಅಧ್ಯಕ್ಷ ಭರತ್‌ರಾಜ್ ಸೊರಕೆ ಇದ್ದರು. ಕೃಷಿಕ ಸಮಾಜದ ಅಧ್ಯಕ್ಷ ರಾಕೇಶ್ ರೈ ಕೆಡೆಂಜಿ ಸ್ವಾಗತಿಸಿ, ಜೇಸಿ ವಲಯ ಉಪಾಧ್ಯಕ್ಷ ಕಾಶೀನಾಥ್ ಗೋಗಟೆ ವಂದಿಸಿದರು. ತಾಲೂಕು ಯುವಜನ ಒಕ್ಕೂಟದ ಅಧ್ಯಕ್ಷಶಿವಪ್ರಸಾದ್ ರೈ ಮೈಲೇರಿ ಸನ್ಮಾನಪತ್ರ ವಾಚಿಸಿದರು. ರೈತ ಕುಡ್ಲ ಪ್ರತಿಷ್ಠಾನದ ಸುಹಾಸ್ ಮರಿಕೆ ನಿರ್ವಹಿಸಿದರು.

ಆಕರ್ಷಕ ಮಳಿಗೆಗಳು

ಹಲಸು ಮೇಳದಲ್ಲಿ ಹಲಸು ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ ಮಳಿಗೆ ಹಾಗೂ ಇತರ ಮಳಿಗೆಗಳು ಜನರನ್ನು ಆಕರ್ಷಿಸಿದವು. ವಿಶೇಷ ಆಕರ್ಷಣೆಯಾಗಿ ಕೆಂಪು, ಬಿಳಿ, ಬಂಗಾರ ವರ್ಣದ ಹಲಸಿನ ಸೊಳೆ ಮಾರಾಟ, ಸಾವಯವ ಮಾದರಿಯಲ್ಲಿ ಬೆಳೆಸಿದ ವಿವಿಧ ತಳಿಗಳ ಮಾವು ಮಾರಾಟ, ಕೃಷಿ ಯಂತ್ರಗಳ ಪ್ರದರ್ಶನ ಮಳಿಗೆ, ಅಗತ್ಯ ಕೃಷಿ ಸಲಕರಣೆ ಮಾರಾಟ, ಹಲಸಿನಿಂದ ತಯಾರಿಸಿದ ವಿವಿಧ ಬಗೆಯ ತಿನಿಸುಗಳ ಮಳಿಗೆ, ಮಹಿಳಾ ಗೃಹೋದ್ಯಮಿಗಳ ಉತ್ಪನ್ನಗಳ ಮಾರಾಟ, ಸಾವಯವ ಸಿರಿಧಾನ್ಯ, ಖಾದಿ ವಸ್ತುಗಳ ಮಳಿಗೆಗಳು ಜನರನ್ನು ಆಕರ್ಷಿಸಿದವು.

ಸ್ಟಾಲ್‌ಗಳ ಉದ್ಘಾಟನೆ

ಹಿರಿಯ ಕೃಷಿಕ ಪಿ. ವಿಶ್ವೇಶ್ವರ ಭಟ್ ಎಲಿಯೂರು ಸ್ಟಾಲ್‌ಗಳನ್ನು ಉದ್ಘಾಟಿಸಿದರು. ಅತಿಥಿಗಳಾಗಿದ್ದ ಜಿಲ್ಲಾ ಪರಿಷತ್ ಮಾಜಿ ಸದಸ್ಯ ಸಯ್ಯದ್ ಮೀರಾ ಸಾಹೇಬ್ ಹಾಗೂ ಪ್ರಗತಿಪರ ಕೃಷಿಕ, ಆಯುರ್ವೇದ ವೈದ್ಯ ಡಾ. ಸುರೇಶ್ ಕುಮಾರ್ ಕೂಡೂರು ಮಾತನಾಡಿದರು. ರೈತ ಕುಡ್ಲ ಪ್ರತಿಷ್ಠಾನದ ಅಧ್ಯಕ್ಷ ಭರತ್‌ರಾಜ್ ಸೊರಕೆ, ಜೇಸಿ ವಲಯಾಧಿಕಾರಿಗಳಾದ ಕಾಶೀನಾಥ್ ಗೋಗಟೆ, ವಿಶ್ರುತಾ ರಾಜೇಶ್, ಜಿ.ಪಂ. ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ, ಮಾಜಿ ಸದಸ್ಯ ಕೃಷ್ಣ ಶೆಟ್ಟಿ ಕಡಬ, ತಾ.ಪಂ. ಮಾಜಿ ಅಧ್ಯಕ್ಷೆ ಪುಲಸ್ತ್ಯಾ ರೈ, ಪ್ರಕಾಶ ಎನ್.ಕೆ. ಇದ್ದರು. ಜೇಸಿಐ ಕಡಬ ಕದಂಬ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ನಾಗರಾಜ್ ಎನ್.ಕೆ. ಸ್ವಾಗತಿಸಿ, ಜೇಸಿ ಅಧ್ಯಕ್ಷ ಜೇಮ್ಸ್ ಕ್ರಿಶಾಲ್ ಡಿ'ಸೋಜ ವಂದಿಸಿದರು. ಜೇಸಿ ವಲಯಾಧಿಕಾರಿ ಸುಹಾಸ್ ಮರಿಕೆ ಕಾರ್ಯಕ್ರಮ ನಿರ್ವಹಿಸಿದರು.

ಸುತ್ತಮುತ್ತ

ಶ್ರೀ ನಾರಾಯಣ ಗುರು ಪಿಯು ಕಾಲೇಜಿನಲ್ಲಿ ಜಾಗೃತಿ ಕಾರ್ಯಕ್ರಮ

ಮುಲ್ಕಿ: ಶ್ರೀ ನಾರಾಯಣ ಗುರು ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಮಾದಕ ವ್ಯಸನ ಅಪರಾಧ ತಡೆ ದಿನಾಚರಣೆ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಪೊಲೀಸ್ ಠಾಣೆಯ ರೇವಣ್ಣ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಕುರಿತು ಮಾಹಿತಿ ನೀಡಿದರು. ಮುಲ್ಕಿ ಪೊಲೀಸ್ ಕಾನ್ಸ್‌ಟೇಬಲ್ ಶ್ರೀದೇವಿ ಅವರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಸಂಸ್ಥೆಯ ಪ್ರಾಂಶುಪಾಲ ಯತೀಶ್ ಅಮೀನ್ ಸ್ವಾಗತಿಸಿ, ಆಡಳಿತಾಧಿಕಾರಿ ಮಂಜುಳಾ ಕೆ.ವಿ. ಉಪಸ್ಥಿತರಿದ್ದರು.ಸಾವಿತ್ರಿ ವಂದಿಸಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು

ಎಸ್‌ವಿಎಸ್ ಆಂಗ್ಲ ಮಾಧ್ಯಮ ಶಾಲೆ: ವಾರ್ಷಿಕ ಮಹಾಸಭೆ

ಬಂಟ್ವಾಳ: ಎಸ್.ವಿ.ಎಸ್. ದೇವಳ ಆಂಗ್ಲ ಮಾಧ್ಯಮ ಶಾಲೆ ಬಂಟ್ವಾಳ ಇದರ ರಕ್ಷಕ–ಶಿಕ್ಷಕ ಸಂಘದ ವಾರ್ಷಿಕ ಮಹಾಸಭೆಯು ಬಂಟ್ವಾಳ ಶ್ರೀ ತಿರುಮಲ ವೆಂಕಟರಮಣ ದೇವಳದ ಸಭಾಂಗಣದಲ್ಲಿ ನಡೆಯಿತು. ಶಾಲಾ ಸಂಚಾಲಕರಾದ ಬಿ.ಸುರೇಶ್ ವಿ.ಬಾಳಿಗಾ ಅವರು ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ತೀರ್ಥವತಿ ಮತ್ತು ಮುಖ್ಯೋಪಾಧ್ಯಾಯಿನಿ ರೋಶನಿ ತಾರಾ ಡಿಸೋಜ 2025–26 ನೇ ಸಾಲಿನ ಆಯ–ವ್ಯಯ ಮಂಡಿಸಿದರು. ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ಶಿಕ್ಷಕ ಚಂದ್ರಹಾಸ್ ಎಂ ಸ್ವಾಗತಿಸಿದರು ಶಿಕ್ಷಕ ಮುರಳೀಧರ ಪಿ. ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಅನುಪಮಾ ವಂದಿಸಿದರು.

ಪಡುಮಲೆ ದೇವಸ್ಥಾನದಲ್ಲಿ ಸೀಯಾಳ ಅಭಿಷೇಕ

ಬಡಗನ್ನೂರು: ಸಕಾಲಕಾಲದಲ್ಲಿ ಮಳೆ, ಬೆಳೆಯಾಗಿ ಕೃಷಿ ಚಟುವಟಿಕೆ ಚೆನ್ನಾಗಿ ನಡೆದು ಸರ್ವರಿಗೂ ಸುಭಿಕ್ಷೆ ಉಂಟು ಮಾಡುವಂತೆ ವರುಣ ದೇವರ



ಕೃಪೆ ತೋರಲೆಂದು ಪಡುಮಲೆ ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ ದೇವರಿಗೆ ಸಾಮೂಹಿಕ ಸೀಯಾಳ ಅಭಿಷೇಕ ನಡೆಯಿತು. ದೇವಸ್ಥಾನದ ಪ್ರಧಾನ ಅರ್ಚಕ ಮಹಾಲಿಂಗ ಭಟ್ ನೇತೃತ್ವದಲ್ಲಿ ಶ್ರೀ ದೇವರಿಗೆ ಸೀಯಾಳಾಭಿಷೇಕ ನೆರವೇರಿಸಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಈ ಸಂದರ್ಭ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸತೀಶ್ ರೈ ಕಟ್ಟಾವು, ಸದಸ್ಯರಾದ ಜನಾರ್ದನ ಪೂಜಾರಿ ಪದಡ್ಕ, ಉದಯ ಕುಮಾರ್ ಪಡುಮಲೆ, ಶ್ರೀನಿವಾಸ್ ಗೌಡ ಕನ್ನಯ ಹಾಗೂ ಊರ ಭಕ್ತಾದಿಗಳು ಭಾಗವಹಿಸಿದ್ದರು.

ಟ್ರಾಫಿಕ್ ರೂಲ್ಸ್ ಬ್ರೇಕ್: ದಂಡನೆಗೆ ಮತ್ತೊಮ್ಮೆ ಶೇ.50 ರಿಯಾಯಿತಿ

ಪುತ್ತೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಟ್ರಾಫಿಕ್ ರೂಲ್ಸ್ ಬ್ರೇಕ್ ಮಾಡಿದ ಕಾರಣಕ್ಕೆ ದಂಡನೆ ಪಾವತಿಗೆ ಮತ್ತೊಮ್ಮೆ ಶೇ.50ರಷ್ಟು ರಿಯಾಯಿತಿ ನೀಡಲಾಗಿದೆ. ಆದರೆ, ಈ ರಿಯಾಯಿತಿ ಕೇವಲ 20 ದಿನ ಮಾತ್ರ ಇರಲಿದೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಶೇ.50ರ ರಿಯಾಯಿತಿಯಡಿ ದಂಡ ಪಾವತಿಸಲು ಮತ್ತೊಮ್ಮೆ ಅವಕಾಶ ಕಲ್ಪಿಸಿದ್ದು ಜೂ.21ರಿಂದ ಜು.10ರವರೆಗೆ ಕಾಲಾವಕಾಶವನ್ನು ನೀಡಿ ಆದೇಶಿಸಿದೆ.

20 ದಿನ ನೀಡಿರುವ ಕಾಲಾವಕಾಶ ಬಳಸಿಕೊಂಡು ವಾಹನಗಳ ಮಾಲೀಕರು ದಂಡ ಪಾವತಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. 2026ರ ಮೇ ಮೊದಲು ಪೊಲೀಸ್ ಇಲಾಖೆಯ ಸಂಚಾರ ಇ–ಚಲನ್‌ಗಳಲ್ಲಿ ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತು ಸಾರಿಗೆ ಇಲಾಖೆಯಲ್ಲಿ 1991ರಿಂದ 2022ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಿಯಾಯಿತಿಯ ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಉಚಿತ ಸಹಾಯವಾಣಿ ನಂಬರ್ 15100 ಸಂಪರ್ಕಿಸುವಂತೆ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಡಿಯಲ್ಲಿ ಪರಿಸರ ಸ್ನೇಹಿ ಅಭಿಯಾನ

ಕೋಟ: ಕೋಡಿ ಗ್ರಾಮ ಪಂಚಾಯತ್ ಕೋಡಿ, ಶಿಶು ಅಭಿವೃದ್ಧಿ ಯೋಜನೆ ಬ್ರಹ್ಮಾವರ, ಸಮನ್ವಯ ಸಂಜೀವಿನಿ ಒಕ್ಕೂಟ ಕೋಡಿ ಇವರ ನೇತೃತ್ವದಲ್ಲಿ ಪಂಚವರ್ಣ ಸಂಘಟನೆ ಕೋಟ,ಗೀತಾನಂದ ಫೌಂಡೇಶನ್ ಮಣೂರು, ಅನ್ನಪೂರ್ಣ ನರ್ಸರಿ ಪೇತ್ರಿ ಸಂಯೋಜನೆಯೊಂದಿಗೆ 3ನೇ ವರ್ಷದ ಪರಿಸರ ಸ್ನೇಹಿ ಹಸಿರುಹೆಜ್ಜೆ ಅಭಿಯಾನ ಕೋಡಿ ಕನ್ಯಾನ ಸತೀಶ್ ತಿಂಗಳಾಯ ರವರ ಮನೆಯಿಂದ ಚಾಲನೆ ನೀಡಲಾಯಿತು. ಕೋಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಭಾಕರ ಮೆಂಡನ್ ಮತ್ತು ಎಪಿಎಂಸಿ ಉಪಾಧ್ಯಕ್ಷ ಕೃಷ್ಣ ಪೂಜಾರಿ ಪಿ. ಹಾಗೂ ಗ್ರಾ.ಪಂ. ಮಾಜಿ ಸದಸ್ಯೆ ಸರಸ್ವತಿ ಇದ್ದರು. ಅಂಗನವಾಡಿ ಕಾರ್ಯಕರ್ತೆ ಪ್ರೀತಿ.ಎಸ್,ಸಹಾಯಕಿ ಸಂಗೀತಾ,ಸಂಜೀವಿನಿ ಎಲ್ ಸಿಆರ್‌ಪಿ ಸುಮಿತ್ರ, ಕೃಷಿ ಸಖಿ ತನುಜಾ, ಎಸ್‌ಎಲ್‌ಆರ್‌ಎಂ ಘಟಕದ ಸಿಬ್ಬಂದಿ ಕಿರಣ್ ಪುತ್ರನ್ ಹಾಗೂ ಸ್ಥಳೀಯ ಗೀತಾ ಇದ್ದರು. ಕೋಡಿ ಗ್ರಾ.ಪಂ. ವ್ಯಾಪ್ತಿಯಲ್ಲಿ ವಿವಿಧ ಭಾಗಗಳಲ್ಲಿ ಹಸಿರು ಹೆಜ್ಜೆ ಕಾರ್ಯಕ್ರಮ ಮನೆ ಮನೆಗೆ ತೆರಳಿ ಗಿಡವನ್ನು ನೆಡಲಾಯಿತು.ಕೋಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಭಾಕರ ಮೆಂಡನ್ ಮತ್ತು ಎಪಿಎಂಸಿ ಉಪಾಧ್ಯಕ್ಷ ಕೃಷ್ಣ ಪೂಜಾರಿ ಪಿ. ಹಾಗೂ ಗ್ರಾ.ಪಂ. ಮಾಜಿ ಸದಸ್ಯ ಕುಮಾರಿ ಸರಸ್ವತಿ ,ಅಂಗನವಾಡಿ ಕಾರ್ಯಕರ್ತೆ ಪ್ರೀತಿಎಸ್ ಇದ್ದರು.







ಕರಾವಳಿ ಜಿಲ್ಲೆಯಾದ್ಯಂತ ವಿವಿಧೆಡೆ ಮಾದಕ ದ್ರವ್ಯ ಸೇವನೆ, ಅಕ್ರಮ ಸಾಗಣೆ ವಿರೋಧಿ ದಿನಾಚರಣೆ

ಮ್ಯಾರಥಾನ್, ಕಾರ್ಯಾಗಾರದ ಮೂಲಕ ಜನಜಾಗೃತಿ

ಪುತ್ತೂರು/ಸುಬ್ರಹ್ಮಣ್ಯ/ಉಪ್ಪಿನಂಗಡಿ/ಬದಿಯಡ್ಕ/ಕುಂದಾಪುರ: ಅಂತಾರಾಷ್ಟ್ರೀಯ ಮಾದಕ ದ್ರವ್ಯ ಸೇವನೆ, ಅಕ್ರಮ ಸಾಗಣೆ ವಿರೋಧಿ ದಿನಾಚರಣೆಯ ಅಂಗವಾಗಿ ಕರಾವಳಿ ಜಿಲ್ಲೆಯಾದ್ಯಂತ ವಿವಿಧೆಡೆ ಶುಕ್ರವಾರ ಜಾಗೃತಿ ಕಾರ್ಯಕ್ರಮ ನಡೆಯಿತು.

ಪುತ್ತೂರಿನಲ್ಲಿ ಮ್ಯಾರಥಾನ್

ಪುತ್ತೂರಿನಲ್ಲಿ ಶುಕ್ರವಾರ ಬೆಳಗ್ಗೆ 'ಫಿಟ್ ಇಂಡಿಯಾ ಮಾದಕ ದ್ರವ್ಯ ಮುಕ್ತ 5ಕೆ ಮ್ಯಾರಥಾನ್' ಯಶಸ್ವಿಯಾಗಿ ನಡೆಯಿತು. ವಿವಿಧ ವಿಭಾಗದಲ್ಲಿ ಸುಮಾರು 642 ಮಂದಿ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದರು.

ಪುತ್ತೂರು ಉಪವಿಭಾಗದ ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ಪುತ್ತೂರಿನ ಎಲ್ಲಾ ರೋಟರಿ ಸಂಸ್ಥೆಗಳು, ಲಯನ್ಸ್ ಕ್ಲಬ್ ಪುತ್ತೂರು, ಲಯನ್ಸ್ ಪುತ್ತೂರ್ದ ಮುತ್ತು, ಇನ್ನರ್ ವೀಲ್ ಕ್ಲಬ್, ರೋಟರಾಕ್ಟ್ ಕ್ಲಬ್, ಜೆಸಿಐ ಸಂಸ್ಥೆ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಇತರ ವಿವಿಧ ಸಾಮಾಜಿಕ ಮತ್ತು ಸೇವಾ ಸಂಘ, ಸಂಸ್ಥೆಗಳ ಸಹಕಾರದೊಂದಿಗೆ ಕಳೆದ 5 ದಿನಗಳಿಂದ ವಿವಿಧ ಜನಜಾಗೃತಿ ಅಭಿಯಾನ ನಡೆದ ಬಳಿಕ ಸಮಾರೋಪದ ಅಂಗವಾಗಿ ಮ್ಯಾರಥಾನ್ ನಡೆಯಿತು.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಎದುರು ಗದ್ದೆಯಿಂದ ಮ್ಯಾರಥಾನ್ ಆರಂಭಗೊಂಡಿತು. 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್ ಅವರು ಶ್ವೇತವಸ್ತ್ರದ ನಿಶಾನೆಯ ಮೂಲಕ ಮ್ಯಾರಥಾನ್‌ಗೆ ಚಾಲನೆ ನೀಡಿ, ಪ್ರತಿ ವರ್ಷ ರೂ.12 ಸಾವಿರ ಕೋಟಿ ಮೌಲ್ಯದ ಡ್ರಗ್ಸ್ ದಂಧೆ ನಡೆಯುತ್ತಿದೆ. ಆದರಲ್ಲಿ ಪೊಲೀಸರಿಗೆ ಡ್ರಗ್ಸ್ ಸಿಗುವುದು 5 ಅಥವಾ 10 ಪರ್ಸೆಂಟ್ ಮಾತ್ರ. ಜಗತ್ತಿನಲ್ಲಿ ಯುವ ಜನತೆಯನ್ನೇ ಈ ಮಾದಕ ವಸ್ತುಗಳು ಗುರಿ ಮಾಡುತ್ತಿವೆ. ಯುವ ಜನತೆಯನ್ನು ಡ್ರಗ್ಸ್‌ಗೆ ಬಲಿಯಾಗಿಸಿ ಭಯೋತ್ಪಾದನಾ ಚಟುವಟಿಕೆಗಳಿಗೆ ಬಳಕೆ ಮಾಡುವ ಸಮಾಜಘಾತುಕ ಶಕ್ತಿಗಳಿವೆ. ಈ ನಿಟ್ಟಿನಲ್ಲಿ ಯುವ ಜನತೆ ಯಾವತ್ತು ಕೂಡಾ ಡ್ರಗ್ಸ್‌ಗೆ ಬಲಿಯಾಗದಿರಿ ಎಂದು ಕರೆ ನೀಡಿದರು.

ದ.ಕ.ಜಿಲ್ಲಾ ಅಡಿಷನಲ್ ಎಸ್ಪಿ ಅನಿಲ್ ಎಸ್. ಬೂಮಾರೆಡ್ಡಿ ಮಾತನಾಡಿದರು. ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ, ಶ್ರೀ ರಾಮಕೃಷ್ಣ ಪ್ರೌಢ ಶಾಲೆಯ ಸಂಚಾಲಕ ಕಾವು ಹೇಮನಾಥ ಶೆಟ್ಟಿ ಮುಳಿಯ ಜುವೆಲ್ಸ್‌ನ ಕೃಷ್ಣ ನಾರಾಯಣ ಮುಳಿಯ, ಜಿ.ಎಲ್. ಆಚಾರ್ಯ ಜುವೆಲ್ಸ್‌ನ ಬಲರಾಮ ಆಚಾರ್ಯ ವೇದಿಕೆಯಲ್ಲಿ



ಉಪಸ್ಥಿತರಿದ್ದರು. ರೋಟರಿ ಕ್ಲಬ್ ಎಲೈಟ್‌ನ ನಿಯೋಜಿತ ಅಧ್ಯಕ್ಷ ವಕೀಲ ಶಾಕೀರ್, ಲಯನ್ಸ್ ಪುತ್ತೂರ್ದ ಮುತ್ತು ಅಧ್ಯಕ್ಷೆ ವೇದಾವತಿ, ಲಯನ್ಸ್ ಕ್ಲಬ್ ಅಧ್ಯಕ್ಷೆ ಪ್ರೇಮಲತಾ ರಾವ್, ದ.ಕ. ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷ ಸಂತೋಷ್ ಶೆಟ್ಟಿ ರೋಟರಿ ಕ್ಲಬ್ ನಿಯೋಜಿತ ಕಾರ್ಯದರ್ಶಿ ಸುಶಾಂತ್, ರೋಟರಿ ಕ್ಲಬ್‌ನ ಕುಸುಮ್ ರಾಜ್, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಪದ್ಮನಾಭ ಶೆಟ್ಟಿ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್‌ನ ಅಧ್ಯಕ್ಷ ಶಿವರಾಮ್ ಮತಾವು, ರೂಪೇಶ್ ಶೇಟ್, ಪುತ್ತೂರು ನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಜಾನ್ಸನ್ ಡಿಸೋಜ, ಮಹಿಳಾ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್, ಸುಳ್ಯ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ತಿಮ್ಮಪ್ಪ ನಾಯ್ಕ್, ಕಡಬ ಪೊಲೀಸ್ ಠಾಣೆಯ ಎಸ್.ಐ. ಜಂಬುರಾಜ್ ಮಹಾಜನ್, ವೇಣೂರು ಪೊಲೀಸ್ ಠಾಣೆಯ ಎಸ್.ಐ. ಓಮನ, ಸುಬ್ರಹ್ಮಣ್ಯ ಪೊಲೀಸ್ ಠಾಣೆ ಎಸ್.ಐ. ಆಂಜನೇಯ ರೆಡ್ಡಿ, ಸಂಪ್ಯ ಪೊಲೀಸ್ ಠಾಣೆ ಎಸ್.ಐ. ಸುಷ್ಮಾ, ಬೆಳ್ಳಾರೆಯ ಈರಯ್ಯ, ಉಪ್ಪಿನಂಗಡಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ನಾಗರಾಜ್, ಎಸ್.ಐ. ಸುತೇಶ್, ಜಿಲ್ಲಾ ಸ್ಪೆಷಲ್ ಬ್ರಾಂಚ್‌ನ ಎಸ್.ಐ. ನಂದಕುಮಾರ್, ಪುತ್ತೂರು ನಗರ ಪೊಲೀಸ್ ಠಾಣೆ ಎಸ್.ಐ. ಸೇಸಮ್ಮ ಸಂಚಾರ ಪೊಲೀಸ್ ಠಾಣೆ ಎಸ್.ಐ.ಗಳಾದ ಚಕ್ರಪಾಣಿ, ಸುಹಾಸ್, ವಿಟ್ಲ ಪೊಲೀಸ್ ಠಾಣೆಯ ಪ್ರಕಾಶ್ ದೇವಾಡಿಗ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭ ಇಕ್ಬಾಲ್ ಬಾಳಿಲ ಅವರ ಮಾದಕ ವಸ್ತುವಿನ ದುಷ್ಪರಿಣಾಮದ ಕುರಿತು ಬರೆದ ಕೃತಿಯನ್ನು ಅತಿಥಿಗಳಿಗೆ ವಿತರಿಸಲಾಯಿತು. ವಿದುಷಿ ಪವಿತ್ರ ರೂಪೇಶ್ ಪ್ರಾರ್ಥಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಎವರೆಸ್ಟ್ ರೋಡ್ರಿಗಸ್, ನರೇಶ್ ಲೋಬೊ, ದಾಮೋದರ್, ಪ್ರವೀಣ ಪಾಪೆಮಜಲು, ರಾಜೇಶ್ ಪಿಡಿ, ಅಶ್ರಫ್, ಪ್ರಕಾಶ್ ಡಿಸೋಜ, ಪ್ರಮೀಳಾ, ಅಜಿತ್ ತೀರ್ಪುಗಾರಾಗಿ ಸಹಕರಿಸಿದರು. ಒಟ್ಟು 642 ಮಂದಿ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದರು. ಅನಿಲ್ ಮುಂಡೋಡಿ ಮ್ಯಾರಥಾನ್ ಓಟದ ಕಾರ್ಯಕ್ರಮ ನಿರ್ವಹಿಸಿದರು.

ಇಂದ್ರಪ್ರಸ್ಥ ವಿದ್ಯಾಲಯ

ಉಪ್ಪಿನಂಗಡಿಯ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ಮಾದಕ ವ್ಯಸನದ ಬಗ್ಗೆ ಜಾಗೃತಿ ಕಾರ್ಯಾಗಾರ ಆಯೋಜಿಸಲಾಯಿತು. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸುತೇಶ್ ಕೆ.ಪಿ. ಭಾಗವಹಿಸಿ, ಮಾತನಾಡಿದರು. ವಿದ್ಯಾಲಯದ ಮುಖ್ಯ ಗುರು ವೀಣಾ ಆರ್. ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಸಹ ಶಿಕ್ಷಕಿ ನಿವೇದಿತಾ ಕಾರ್ಯಕ್ರಮ ನಿರ್ವಹಿಸಿದರು.

ಬದಿಯಡ್ಕದಲ್ಲಿ ಜಾಗೃತಿ ರ್‍ಯಾಲಿ

ಮಾದಕ ದ್ರವ್ಯ ಅಥವಾ ಡ್ರಗ್ಸ್ ಎಂಬುದು ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ನಾಶ ಮಾಡುವುದಿಲ್ಲ, ಬದಲಾಗಿ ಅದು ಇಡೀ ಕುಟುಂಬವನ್ನು ಬೀದಿಗೆ ತರುತ್ತದೆ ಮತ್ತು ಸಮಾಜದ ಶಾಂತಿಯನ್ನು ಕೆಡಿಸುತ್ತದೆ. ಇಂದು ನಮ್ಮ ದೇಶದ ಅತಿ ದೊಡ್ಡ ಆಸ್ತಿ ಎಂದರೆ ಯುವಶಕ್ತಿ. ಆದರೆ ಈ ಯುವಶಕ್ತಿಯನ್ನು ದಾರಿ ತಪ್ಪಿಸಲು ಕೆಲವು ದುಷ್ಟ ಶಕ್ತಿಗಳು ಮಾದಕ ವಸ್ತುವಿನ ಜಾಲವನ್ನು ಹರಡುತ್ತಿವೆ. ಇದಕ್ಕೆ ಬದಿಯಡ್ಕದ ಯಾವುದೇ ಕುಟುಂಬ ಬಲಿಯಾಗಲು ಬಿಡುವುದಿಲ್ಲ ಎಂದು ಪ್ರತಿಜ್ಞೆ ತೊಡಬೇಕಾಗಿದೆ ಎಂಬುದಾಗಿ ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ. ಹೇಳಿದ್ದಾರೆ.

ಬದಿಯಡ್ಕ ಗ್ರಾಮ ಪಂಚಾಯತ್, ಬದಿಯಡ್ಕ ಪೊಲೀಸ್ ಠಾಣೆ, ಎಸ್‌ಪಿಸಿ ಮತ್ತು ಎನ್‌ಸಿಸಿ ಘಟಕ ನವಜೀವನ ಶಾಲೆ ಪೆರಡಾಲ, ಪೆರಡಾಲ ಸರಕಾರಿ ಶಾಲೆ, ಶ್ರೀ ಭಾರತೀ ವಿದ್ಯಾಪೀಠ ಬದಿಯಡ್ಕ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳು, ವ್ಯಾಪಾರಿ ಸದಸ್ಯರು, ಸಾರ್ವಜನಿಕರ ಪಾಲ್ಗೊಳ್ಳುವಿಕೆಯೊಂದಿಗೆ ಬದಿಯಡ್ಕದಲ್ಲಿ ಶುಕ್ರವಾರ ಜರಗಿದ ಮಾದಕ ದ್ರವ್ಯ ವಿರೋಧಿ ದಿನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬದಿಯಡ್ಕ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ ಈ ಮಾದಕ ದ್ರವ್ಯ ವಿರೋಧಿ ಜಾಗೃತಿ ರ್‍ಯಾಲಿ ಕೇವಲ ಒಂದು ಕಾರ್ಯಕ್ರಮವಲ್ಲ, ಇದು ನಮ್ಮ ಭವಿಷ್ಯವನ್ನು, ನಮ್ಮ ಮಕ್ಕಳನ್ನು ಮತ್ತು ನಮ್ಮ ಸಮಾಜವನ್ನು ಉಳಿಸಿಕೊಳ್ಳಲು ನಾವು ಒಟ್ಟಾಗಿ ಹೂಡಿರುವ ಒಂದು ಯುದ್ಧ ಎಂದು ಅವರು ನುಡಿದರು.

ಸರ್ಕಲ್ ಇನ್‌ಸ್ಪೆಕ್ಟರ್ ಅನೂಪ್‌ಕೃಷ್ಣ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ., ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಬದಿಯಡ್ಕ ಘಟಕದ ಅಧ್ಯಕ್ಷ ನರೇಂದ್ರ ಬಿ.ಎನ್., ಕಾರ್ಯದರ್ಶಿ ರವಿ ನವಶಕ್ತಿ, ಪಂಚಾಯತ್‌ನ ಆರೋಗ್ಯ ಅಧಿಕಾರಿ ಬಾಬುರಾಜ್ ಎ. ಮೊದಲಾದವರು ಮಾತನಾಡಿದರು.

ಗ್ರಾಮ ಪಂಚಾಯತ್ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಕಡಾರು, ಗಂಗಾಧರ ಗೋಳಿಯಡ್ಕ, ಶ್ಯಾಮಪ್ರಸಾದ ಮಾನ್ಯ, ಮಧುಸೂದನ ಕಂಗಿಲ, ಶ್ಯಾಮಪ್ರಸಾದ ಸರಳಿ, ಅನ್ವತ್ ಬೀವಿ, ಉಷಾ ಪಳ್ಳತ್ತಡ್ಕ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಮಾದಕ ದ್ರವ್ಯದ ವಿರುದ್ಧ ಪ್ರತಿಜ್ಞೆ ಕೈಗೊಳ್ಳಲಾಯಿತು. ಬದಿಯಡ್ಕ ಪೊಲೀಸ್ ಠಾಣಾಧಿಕಾರಿಗಳಾದ ಸುಕುಮಾರನ್ ಸ್ವಾಗತಿಸಿ, ರೂಪೇಶ್ ವಂದಿಸಿದರು. ಬದಿಯಡ್ಕ ಪೇಟೆಯಲ್ಲಿ ಜಾಗೃತಿ ಸಂದೇಶ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಯಿತು.

ಸುಬ್ರಹ್ಮಣ್ಯದಲ್ಲಿ ಜಾಗೃತಿ

ಆರೋಗ್ಯಪೂರ್ಣ ನಾಳೆಗಳಿಗೆ ವ್ಯಸನಮುಕ್ತ ಬದುಕು ರಹದಾರಿಯಾಗುತ್ತದೆ. ಮಾದಕ ದ್ರವ್ಯಗಳ ವ್ಯಸನವು ವ್ಯಕ್ತಿಯ ಆರೋಗ್ಯ ಮತ್ತು ಕುಟುಂಬದ ನೆಮ್ಮದಿ ಹಾಗೂ ಸಮಾಜದ ಶಾಂತಿಗೆ ದೊಡ್ಡ ಅಪಾಯವಾಗಿದೆ. ಪ್ರತಿಯೊಬ್ಬರೂ ವ್ಯಸನಗಳಿಂದ ದೂರವಿದ್ದು ಆರೋಗ್ಯಕರ ಮತ್ತು ಜವಾಬ್ದಾರಿಯುತ ಜೀವನ ನಡೆಸಬೇಕು ಎಂದು ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ ಹೇಳಿದರು.

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ, ಸುಬ್ರಹ್ಮಣ್ಯ ಪೊಲೀಸ್ ಠಾಣೆಯ ಆಶ್ರಯದಲ್ಲಿ ಕುಕ್ಕೆಶ್ರೀ ಆಟೋ ಚಾಲಕ ಸಂಘ, ಕುಕ್ಕೆಶ್ರೀ ಖಾಸಗಿ ಟ್ಯಾಕ್ಸಿ ಚಾಲಕ ಸಂಘ, ಬಿಎಂಎಸ್ ಆಟೋ ಚಾಲಕ ಸಂಘದ ಸಹಕಾರದಲ್ಲಿ ಸುಬ್ರಹ್ಮಣ್ಯದಲ್ಲಿ ನಡೆದ ಮಾದಕ ದ್ರವ್ಯಗಳ ವ್ಯಸನದ ವಿರುದ್ಧ ಜಾಗೃತಿ ಜಾಥಾ ಉದ್ಘಾಟಿಸಿ ಅವರು ಮಾತನಾಡಿದರು.

ವ್ಯಸನಮುಕ್ತ ಚಾಲಕರಿಗೆ ಗೌರವ

ಯಾವುದೇ ರೀತಿಯ ಮದ್ಯ, ತಂಬಾಕು ಅಥವಾ ಇತರ ವ್ಯಸನಗಳಿಗೆ ಒಳಗಾಗದೆ ಉತ್ತಮ ಜೀವನ ನಡೆಸುತ್ತಿರುವ ಆಟೋ ಚಾಲಕರಾದ ಅನಿಲ್ ವಾಲಗದಕೇರಿ, ಮೋಹನ್ ದೋಣಿಮಕ್ಕಿ ರಾಧಾಕೃಷ್ಣ ಹಾಗೂ ಟ್ಯಾಕ್ಸಿ ಚಾಲಕ ಉದಯ ಶೆಟ್ಟಿ ಅವರನ್ನು ಸುಬ್ರಹ್ಮಣ್ಯ ಪೊಲೀಸ್ ಠಾಣೆಯ ವತಿಯಿಂದ ಠಾಣಾಧಿಕಾರಿ ಆಂಜನೇಯ ರೆಡ್ಡಿ ಸನ್ಮಾನಿಸಿ ಪಾರಿತೋಷಕ ನೀಡಿ ಗೌರವಿಸಿದರು.

ಜಾಗೃತಿ ಜಾಥಾ

ಬಳಿಕ ಠಾಣಾಧಿಕಾರಿ ಅಂಜನೇಯ ರೆಡ್ಡಿ ನೇತೃತ್ವದಲ್ಲಿ ಮಾದಕ ದ್ರವ್ಯಗಳ ವಿರುದ್ಧ ಜಾಗೃತಿ ಜಾಗೃತಿ ಜಾಥಾ ನಡೆಯಿತು. ಎಎಸ್‌ಐ ಎಂ. ನಾರಾಯಣ ಪಾಟಾಳಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು, ಕುಕ್ಕೆಶ್ರೀ ಆಟೋ ಚಾಲಕ ಸಂಘ, ಕುಕ್ಕೆಶ್ರೀ ಖಾಸಗಿ ಟ್ಯಾಕ್ಸಿ ಚಾಲಕ ಸಂಘ, ಬಿಎಂಎಸ್ ಆಟೋ ಚಾಲಕ ಸಂಘದ ಪದಾಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರು ಜಾಥಾದಲ್ಲಿ ಭಾಗವಹಿಸಿದ್ದರು. ರಥಬೀದಿಯಿಂದ ಆರಂಭವಾದ ಜಾಥಾವು ಕಾಶಿಕಟ್ಟೆ ಮಾರ್ಗವಾಗಿ ಸಂಚರಿಸಿ ಮತ್ತೆ ದೇವಸ್ಥಾನದ ರಥಬೀದಿ ತಟಕ ನಡೆದು ಸಮಾಪ್ತಿಗೊಂಡಿತು. ಜಾಥಾದಲ್ಲಿ ವಿವಿಧ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಸಾಗಿದರು.

ಭಂಡಾರ್ಕಾರ್ಸ್ ಪಿಯು ಕಾಲೇಜು

ಭಂಡಾರ್ಕಾರ್ಸ್ ಪದವಿ ಪೂರ್ವ ಕಾಲೇಜು ಕುಂದಾಪುರ ಮತ್ತು ಮಣಿಪಾಲದ ಮಾಹೆ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಮತ್ತು ಅಕ್ರಮ ಸಾಗಾಟ ವಿರೋ ದಿನ ಪ್ರಯುಕ್ತ ಮಾದಕ ವಸ್ತುಗಳ ಸೇವನೆ ಮತ್ತು ಅಕ್ರಮ ಸಾಗಾಟ ಬಗ್ಗೆ ಅರಿವು ಕಾರ್ಯಕ್ರಮ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಶುಭಕರ ಆಚಾರಿ ಅಧ್ಯಕ್ಷತೆ ವಹಿಸಿದ್ದರು. ಮಾಹೆ ವಿಶ್ವವಿದ್ಯಾನಿಲಯಮಣಿಪಾಲದಸ್ಟುಡೆಂಟ್‌ಅಫೇರ್ಸ್ ನಿರ್ದೇಶಕಿ ಡಾ. ಪೂರ್ಣಿಮಾ ಪಿ. ಕುಂದಾಪುರ ಕಾರ್ಯಕ್ರಮ ಉದ್ಘಾಟಿಸಿ ಮಾದಕ ವಸ್ತುಗಳ ಸೇವನೆ ಮತ್ತು ಸಾಗಾಟದ ನಕಾರಾತ್ಮಕ ದುಷ್ಪರಿಣಾಮಗಳು ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾದ ಮಾಹೆ ವಿಶ್ವವಿದ್ಯಾನಿಲಯ ಮಣಿಪಾಲದ ಸ್ಟುಡೆಂಟ್ ಅಫೇರ್ಸ್ ಇದರ ಉಪನಿರ್ದೇಶಕಿ ಡಾ. ರಶ್ಮಿ ಮತ್ತು ಡಾ.ಅರವಿಂದ್ ಅವರು ಮಾದಕ ವಸ್ತು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಉಪನ್ಯಾಸ ನೀಡಿದರು. ಸಲಹೆಗಾರರಾದ ಡಾ.ರಯಾನ್, ಅಚಲಾ, ಜೀವನ್ ಲೆವಿಸ್ ಮತ್ತು ಕರುಣಾ ಮಾದಕ ವಸ್ತುಗಳ ಸೇವನೆ ಮತ್ತು ಅಕ್ರಮ ಸಾಗಾಟದ ವಿರೋ ದಿನದ ಅರಿವು ಮೂಡಿಸುವ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಡಾ.ಸರೋಜಾ ಎಂ. ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಆಂಗ್ಲ ಭಾಷಾ ಉಪನ್ಯಾಸಕ ಡೊಮಿನಿಕ್ ಬ್ರಗಾಂಝಾ ವಂದಿಸಿದರು. ಉಪನ್ಯಾಸಕಿ ರೇಣುಕಾ ಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

ಮಣಿನಾಲ್ಕೂರು: ಬಡ ಕುಟುಂಬಕ್ಕೆ ನೂತನ 'ನಮೋ' ಗೃಹದ ಹಸ್ತಾಂತರ



ಬಂಟ್ವಾಳ: ತಾಲೂಕಿನ ಮಣಿನಾಲ್ಕೂರು ಹಾಗೂ ದೇವಶ್ಯಮೂಡೂರುವಿನ ಬಿಜೆಪಿ ಕಾರ್ಯಕರ್ತರ ಮುತುವರ್ಜಿಯಿಂದ ಮಣಿನಾಲ್ಕೂರು ಗ್ರಾಮದ ಅರ್ಬಿ ನಿವಾಸಿ ಯಮುನಾ ಅವರ ಕುಟುಂಬಕ್ಕೆ ನಿರ್ಮಿಸಲಾದ ನೂತನ 'ನಮೋ' ಗೃಹ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಸಮಾರಂಭದಲ್ಲಿ ದ.ಕ.ಸಂಸದ ಕ್ಯಾ.ಬ್ರಿಜೇಶ್ ಚೌಟ, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್, ಬಂಟ್ವಾಳ ಬಿಜೆಪಿ ಅಧ್ಯಕ್ಷ ಆರ್.ಚೆನ್ನಪ್ಪ ಕೋಟ್ಯಾನ್, ಸಂದೇಶ್ ಶೆಟ್ಟಿ ಅರೆಬೆಟ್ಟು, ಜಿಲ್ಲಾ ಬಿಜೆಪಿ ಕಾರ್ಯದರ್ಶಿಗಳಾದ ದೇವಪ್ಪ ಪೂಜಾರಿ, ದಿನೇಶ್ ಅಮ್ಟೂರು, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಸುದರ್ಶನ್ ಬಜ, ಸಾಮಾಜಿಕ ಮುಂದಾಳು ಡಾ.ರವಿ ಕಕ್ಯಪದವು, ಕಾರಿಂಜ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ ಪುಳಿಮಜಲು, ವಿಹಿಂಪ ಬಂಟ್ವಾಳ ಅಧ್ಯಕ್ಷ ಪ್ರಸಾದ್ ಕುಮಾರ್ ರೈ, ಪ್ರಮುಖರಾದ ರಾಮಕೃಷ್ಣ ಮಯ್ಯ, ಧರಣೇಂದ್ರ ಜೈನ್ ಕೊಲ್ಯ, ಹರೀಶ್ ಪಾದೆಕೋಡಿ, ಸಾಂತಪ್ಪ ಪೂಜಾರಿ ಹಟ್ಟದಡ್ಕ ಶಿವಪ್ಪ ಗೌಡ ನಿನ್ನಿಕಲ್ಲು ಮೊದಲಾದವರಿದ್ದರು.

ಮಲ್ಲಿಗೆ ಗಿಡ ಹಸ್ತಾಂತರ

ಯಮುನಾ ಅವರು ತಮ್ಮ ಪುತ್ರಿಯೊಂದಿಗೆ ವಾಸವಿದ್ದು ಅವರಿಗೆ ದುಡಿಯಲು ಅಸಾಧ್ಯವಾಗಿರುವ ಹಿನ್ನಲೆಯಲ್ಲಿ ಜೀವನ ನಿರ್ವಹಣೆಗಾಗಿ ಬಿಜೆಪಿ ಕಾರ್ಯಕರ್ತರು ಸುಮಾರು 50 ಮಲ್ಲಿಗೆ ಗಿಡಗಳನ್ನು ಈ ಸಂದರ್ಭದಲ್ಲಿ ಹಸ್ತಾಂತರಿಸಿದರು. ಇದೇ ವೇಳೆ ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ಸಾನ್ವಿ ಪೂಜಾರಿ ಕೋಡ್ಲೆ ಅವರನ್ನು ಅಭಿನಂದಿಸಿ ಆರ್ಥಿಕ ನೆರವು ನೀಡಲಾಯಿತು.

ಹಳ್ಳಿಯಲ್ಲಿ ಸ್ವ ಉದ್ಯೋಗಕ್ಕೆ ವಿಪುಲ ಅವಕಾಶವಿದೆ: ಶಾಸಕ ರಾಜೇಶ್ ನಾಯ್ಕ್



ಬಂಟ್ವಾಳ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಘುಮಂತು ಕಾರ್ಯ ಮಂಗಳೂರು ವಿಭಾಗದ ಆಶ್ರಯದಲ್ಲಿ ವಾಮದಪದವು ಶ್ರೇಯಾ ಎಂಟರ್‌ಪ್ರೈಸಸ್ ಮತ್ತು ಪ್ರಾಪರ್ಟೀಸ್ ವತಿಯಿಂದ ಹಳ್ಳಿಯಲ್ಲಿ ಉದ್ಯೋಗ ಸೃಷ್ಟಿಸೋಣ ಬನ್ನಿ ಬ್ಯಾಕ್ ಟು ಊರು ಕಾರ್ಯಕ್ರಮವು ವಾಮದಪದವು ಸಮೀಪದ ಪಾಂಗಲ್ಪಾಡಿ ಶ್ರೀ ದುರ್ಗಾ ಯಾತ್ರಿ ನಿವಾಸ ಸಭಾಂಗಣದಲ್ಲಿ ಜರಗಿತು.

ಶಾಸಕ ರಾಜೇಶ್ ನಾಯ್ಕ್ ಕಾರ್ಯಕ್ರಮ ಉದ್ಘಾಟಿಸಿ, ಪಟ್ಟಣದ ಉದ್ಯೋಗಕ್ಕಿಂತಲೂ ಹಳ್ಳಿಯಲ್ಲಿ ಕಡಿಮೆ ಬಂಡವಾಳದೊಂದಿಗೆ ಹೆಚ್ಚು ಆದಾಯ ಗಳಿಸುವ ಸ್ವ ಉದ್ಯೋಗ ಅವಕಾಶಗಳಿವೆ. ಯುವಕರು ಇಂತಹ ಅವಕಾಶಗಳನ್ನು ಬಳಸಿಕೊಂಡಾಗ ಯಶಸ್ವಿಯಾಗಲು ಸಾಧ್ಯ, ಗ್ರಾಮಗಳ ಅಭಿವೃದ್ಧಿಯಿಂದ ದೇಶದ ಅಭಿವೃದ್ಧಿಯಾಗುವುದು. ಇಂತಹ ಕಾರ್ಯಕ್ರಮಗಳ ಆಯೋಜನೆ ಅಭಿನಂದನೀಯ ಎಂದು ಹೇಳಿದರು.

ಮಂಗಳೂರು ಉದ್ಯಮಿ ಸಂದೇಶ್ ಶೆಟ್ಟಿ ಬಾಲಭವನ ಮಾಜಿ ಅಧ್ಯಕ್ಷೆ ಸುಲೋಚನಾ ಜಿ.ಕೆ. ಭಟ್, ಸಿದ್ಧಕಟ್ಟೆ ಹಾ.ಉ.ಸ.ಸಂಘದ ಅಧ್ಯಕ್ಷ ರತ್ನಕುಮಾರ್ ಚೌಟ, ಪ್ರಮುಖರಾದ ಶಂಕರ್ ಶೆಟ್ಟಿ ಬೆದ್ರಮಾರ್, ಮೋಹನ್ ಶೆಟ್ಟಿ ನರ್ವಲ್ದಡ್ಡ ಪುರುಷೋತ್ತಮ ಶೆಟ್ಟಿ ವಾಮದಪದವು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಗಳೂರು ವಿಭಾಗ ಶಾರೀರಿಕ ಪ್ರಮುಖ್ ವಿನೋದ್ ಕುಮಾರ್ ಕೊಡ್ಯಾಣ್, ಘುಮಂತು ಕಾರ್ಯ ಮಂಗಳೂರು ವಿಭಾಗ ಸಂಯೋಜಕ ಸುದರ್ಶನ್ ಕನ್ನಾಡಿ, ಗೋಸೇವಾ ವಿಭಾಗ ಮಾರಾಟ ಪ್ರತಿನಿಧಿ ಅಶೋಕ್ ಇಳಂತಿಲ, ರಕ್ಷಿತ್ ಬುಡೋಳಿ, ರೂಪೇಶ್ ಕಾರ್ಕಳ, ಸಚಿನ್ ಕಲ್ಲಂಜ ಮತ್ತಿತರರಿದ್ದರು. ಬಳಿಕ ಸ್ವ ಉದ್ಯೋಗಕ್ಕೆ ಸಾಲದ ಬಗ್ಗೆ ಎಂಎಸ್‌ಎಂಇ ಸಹಾಯಕ ನಿರ್ದೇಶಕ ಸುಂದರ್ ಎಸ್. ಮಾಳ, ಪ್ರಜ್ಞಾ ನಾರಾವಿ ಹಾಗೂ ಘುಮಂತು ಕಾರ್ಯ ವಿಭಾಗದ ಬಗ್ಗೆ ಲಕ್ಷ್ಮಣ್ ದಾಸ್ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಗ್ರಾಮೀಣ ಉದ್ಯಮ ಸಾಧಕರಾದ ಕಾರ್ತಿಕ್ (ಹಾಳೆತಟ್ಟೆ ತಯಾರಿಕೆ) ಸುಲೋಚನಾ(ಹೈನುಗಾರಿಕೆ), ರೇಖಾ (ಕೃಷಿ ಉತ್ಪನ್ನ ತಯಾರಿಕೆ) ಇವರನ್ನು ಸನ್ಮಾನಿಸಲಾಯಿತು. ಸಂಘಟಕ ಶರತ್ ಕುಮಾರ್ ಶೆಟ್ಟಿ ಅವರು ಸ್ವಾಗತಿಸಿ, ಲಕ್ಷ್ಮಣದಾಸ ವಂದಿಸಿದರು.



ಕಲ್ಲಡ್ಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 'ನಮ್ಮ ಶಾಲೆ ನನ್ನ ಕೊಡುಗೆ' ಕಾರ್ಯಕ್ರಮದಡಿ ಪೀಠೋಪಕರಣ ವ್ಯವಸ್ಥೆಗೆ ಶಾಲಾ ಹಳೆ ವಿದ್ಯಾರ್ಥಿ, ಪ್ರಸ್ತುತ ಬೆಂಗಳೂರಿನಲ್ಲಿ ಉದ್ಯಮಿಯಾಗಿರುವ ರಾಧಾಕೃಷ್ಣ ರಾವ್ ಅವರು ಶಾಲೆಗೆ ಭೇಟಿ ನೀಡಿ 2 ಲ. ರೂ.ಗಳ ಸಹಾಯಧನ ಹಸ್ತಾಂತರಿಸಿದರು. ಈ ಸಂದರ್ಭ ಅವರ ಸಹೋದರ ಪುತ್ತೂರಿನ ಉದ್ಯಮಿ ರಘುನಾಥ್ ರಾವ್ ಜೊತೆಗಿದ್ದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಮಧುಸೂಧನ್ ಐತಾಳ್, ಸದಸ್ಯರುಗಳಾದ ಸುರೇಶ್ ನಾಯ್ಕ್, ನಝೀರ್, ಶಾಲಾ ಮುಖ್ಯೋಪಾಧ್ಯಾಯ ಅಬೂಬಕ್ಕರ್ ಅಶ್ರಫ್, ಶಿಕ್ಷಕ ಸವಿತಾ ಭಟ್, ವೀಣಾ, ಮಲ್ಲಿಕಾ ಮೊದಲಾದವರು ಉಪಸ್ಥಿತರಿದ್ದರು.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾದ ವಿಶೇಷ ಅನುದಾನ 20 ರೂ.ಲಕ್ಷಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಬಂಟ್ವಾಳ ತಾಲೂಕಿನ ಅರಳ ಗ್ರಾಮದ ಅರ್ಬಿ–ದೆಂಬುದೆ ರಸ್ತೆಯನ್ನು ಮಾಜಿ ಸಚಿವ ಬಿ. ರಮಾನಾಥ ರೈ ಉದ್ಘಾಟಿಸಿದರು. ಬಂಟ್ವಾಳ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಬೇಬಿ ಕುಂದರ್,ಗ್ರಾಮಪಂಚಾಯತ್ ಮಾಜಿ ಸದಸ್ಯರಾದ ದೇಜಪ್ಪ ಪೂಜಾರಿ, ನಳಿನಿ ನಾಯ್ಕ್, ಜಗದೀಶ್ ಕೊಯಿಲ, ಎಂ.ಬಿ. ಅಶ್ರಫ್, ಬಂಟ್ವಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಆರ್ .ಅಂಚನ್, ಅರಳ ವಲಯ ಅಧ್ಯಕ್ಷ ಲತೀಫ್ ಸುಂಟಿಹಿಟ್ಲು, ಅಶ್ರಫ್ ಕುಟ್ಟಿಕಲ, ಸಂತೋಷ್ ಪಿಂಟೋ,ಸುರೇಶ್ ಜೋರ, ಅಶ್ರಫ್ ಮುಲ್ಲರಪಟ್ನ ಮತ್ತಿತರರು ಉಪಸ್ಥಿತರಿದ್ದರು.

ವಾಮದಪದವಿನಲ್ಲಿ 8 ದಿನಗಳ 2076ನೇ ಮದ್ಯವರ್ಜನ ಶಿಬಿರಕ್ಕೆ ಚಾಲನೆ | ಶ್ರೀಪಾದ ಪಾಂಗಣ್ಣಾಯ ಅಭಿಪ್ರಾಯ

ಮದ್ಯವ್ಯಸನಿಗಳು ಸಮಾಜಮುಖಿಯಾಗಿ ಸುಧಾರಣೆಯಾಗಲು ಮೊದಲ ಹೆಜ್ಜೆ

ಬಂಟ್ವಾಳ: ಮದ್ಯ ವ್ಯಸನಿಗಳ ಮನ ಪರಿವರ್ತನೆಯ ಕಾರ್ಯ ಮದ್ಯವರ್ಜನ ಶಿಬಿರದ ಮೂಲಕ ಆಗುತ್ತಿದ್ದು, ಸಮಾಜಮುಖಿಯಾಗಿ ಸುಧಾರಣೆಯಾಗಲು ಇದು ಮೊದಲ ಹೆಜ್ಜೆ ಎಂದು ಪಾಂಗಲ್ಪಾಡಿ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಅಧ್ಯಕ್ಷ ಶ್ರೀಪಾದ ಪಾಂಗಣ್ಣಾಯ ಹೇಳಿದರು.

ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ವಾಮದಪದವು ಇದರ ಆಶ್ರಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 8 ದಿನಗಳ ಕಾಲ ವಾಮದಪದವು ಬಸ್ತಿಕೋಡಿಯ ಪದ್ಮಾವತಿ ಸಭಾಭವನದಲ್ಲಿ ನಡೆಯಲಿರುವ 2076ನೇ ಮದ್ಯವರ್ಜನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಶಿಬಿರದ ವ್ಯವಸ್ಥಾಪನ ಸಮಿತಿ ಗೌರವಾಧ್ಯಕ್ಷ, ಉದ್ಯಮಿ ಹರೀಂದ್ರ ಪೈ ನೈನಾಡು ಅಧ್ಯಕ್ಷತೆ ವಹಿಸಿ ಮಾತನಾಡಿ, ವ್ಯಸನ ಮುಕ್ತ ಜೀವನ ನಡೆಸುವ ನಿಟ್ಟಿನಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉತ್ತಮವಾದ ಕಾರ್ಯವನ್ನು ಮಾಡುತ್ತಿದೆ. ದುಶ್ಚಟವನ್ನು ದೂರ ಮಾಡಿ ಉತ್ತಮ ಜೀವನ ನಡೆಸಲು ಈ ಶಿಬಿರ ಪ್ರೇರಣೆಯಾಗಲಿದೆ ಎಂದರು.

ಬಂಟ್ವಾಳ ತಾಲೂಕು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಅಧ್ಯಕ್ಷ ರೋನಾಲ್ಡ್ ಡಿಸೋಜಾ, ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್, ಜಿ.ಪಂ. ಮಾಜಿ ಸದಸ್ಯರಾದ ತುಂಗಪ್ಪ ಬಂಗೇರ, ಪದ್ಮಶೇಖರ್ ಜೈನ್, ಸುಲೋಚನಾ ಜಿ.ಕೆ ಭಟ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಡಿ. ಶಿಬಿರಕ್ಕೆ ಶುಭ ಹಾರೈಸಿದರು. ಜನಜಾಗೃತಿ ವೇದಿಕೆಯ ನಿಯೋಜಿತ ಅಧ್ಯಕ್ಷ ರಾಜಾರಾಮ ಶೆಟ್ಟಿ ಕೇಂದ್ರ ಒಕ್ಕೂಟದ ಅಧ್ಯಕ್ಷ ಚಿದಾನಂದ ರೈ ಕಕ್ಯ, ಪುಂಜಾಲಕಟ್ಟೆ ಪೊಲೀಸ್ ಠಾಣೆಯ ಎಎಸ್ಐ ಚಿದಾನಂದ, ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನವೀನ್ ಚಂದ್ರ ಶೆಟ್ಟಿ ಉಪಾಧ್ಯಕ್ಷರಾದ ಗೋಪಾಲಕೃಷ್ಣ ಚೌಟ, ಪುರುಷೋತ್ತಮ ಶೆಟ್ಟಿ ವಾಮದಪದವು, ಪ್ರವೀಣ್ ಕಾಡಬೆಟ್ಟು, ಸದಾನಂದನಾವೂರು, ಕೃಷ್ಣಪ್ಪ ಅಲ್ಲಿಪಾದೆ ಜಗದೀಶ್ ಕೊಯಿಲ, ಮಾಣಿಕ್ಯ ರಾಜ್ ಜೈನ್, ಅರ್ಕಕೀರ್ತಿ ಇಂದ್ರ, ಆನಂದ ಆಚಾರ್ಯ, ಮೋಹನ್ ಸಾಲ್ಯಾನ್, ಪುರುಷೋತ್ತಮ ಪೂಜಾರಿ ಸರಪಾಡಿ, ಪ್ರಕಾಶ್ ಪೂಜಾರಿ, ಸದಾನಂದ ಶೀತಲ್, ಭಾರತಿ ಚೌಟ, ಅರುಣ್ ಕುಮಾರ್ ಇಂದ್ರ, ಶೇಖರ್ ಸಾಮಾನಿ, ಹರೀಶ್ ಪ್ರಭು, ಶಿಬಿರಾಧಿಕಾರಿ ರಮೇಶ್, ಆರೋಗ್ಯ ಸಹಾಯಕಿ ಜಯಲಕ್ಷ್ಮಿ, ಚೆನ್ನೈತ್ತೋಡಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ವನಿತಾ, ಪ್ರಕಾಶ್ ಉಪಸ್ಥಿತರಿದ್ದರು. ಯೋಜನಾಧಿಕಾರಿ ಜಯಾನಂದ ಪಿ. ಸ್ವಾಗತಿಸಿದರು. ಜನಜಾಗೃತಿ ವೇದಿಕೆ ಉಡುಪಿ ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಜ್ಞಾನ ವಿಕಾಸ ಸಮನ್ವಯಾಧಿಕಾರಿ ಅಶ್ವಿನಿ ನಿರೂಪಿಸಿದರು. ಸೇವಾ ಪ್ರತಿನಿಧಿ ಮಾಧವ ವಂದಿಸಿದರು.

4 ಹೊಸ ದಿಗಂತ ಸಂಗಮ ನಿಮ್ಮೂರಿನ ಸುದ್ದಿ
ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶನಿವಾರ 27, ಜೂನ್ 2026

ಸುತ್ತಮುತ್ತ

ರಾಮ ಮಂದಿರದಲ್ಲಿ ಯೋಗ ದಿನಾಚರಣೆ


ಸುಂಟಿಕೊಪ್ಪ: ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ರಾಮ ಮಂದಿರದಲ್ಲಿ ಸೋಮವಾರ ಸಂಜೆ ಯೋಗ ದಿನ ನಡೆಸಲಾಯಿತು. ಕೊಡಗು ವೈದ್ಯಕೀಯ ಶಿಕ್ಷಣ ಸಂಸ್ಥೆ ಪತ್ನಿ ಚಿತ್ರಕಾ ಮತ್ತು ಸಲಹೆಗಾರ ಡಾ. ಪಿ.ಜಿ. ಅರುಣ್ ಕುಮಾರ್ ಯೋಗದ ಮಹತ್ವದ ಕುರಿತು ವಿವರಿಸಿದರು. ಗಗನ್ ಕ್ಲಿನಿಕ್ ನ ವೈದ್ಯ ಪಾರ್ವತಿ ಮಾತನಾಡಿದರು.

ಯೋಗ ಶಿಕ್ಷಕ ರಾಜು, ಯೋಗ ತರಬೇತಿ ನೀಡು ತ್ತಿರುವ ಎ.ಎ.ಸಂತೋಷ್, ರಾಜು, ಕನಕ ಜ್ಯೋತಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಓಂ ಶಕ್ತಿ ಯೋಗ ಸಂಘದ ಮಹಿಳಾ ಸದಸ್ಯರು, ಮಕ್ಕಳು, ಹಿರಿಯರು ಯೋಗ ಸಮೂಹ ಪ್ರದರ್ಶನ ನೀಡಿದರು. ಈ ಸಂದರ್ಭ ಪವಿತ್ರ,ಅಂಕಿತ, ಕ್ರಿಷಲ್ ಸ್ಟ್ಯಾನ್, ಗಂಗೊಬಾಯ್,ಮಹಿಮ ಸತ್ಯ, ಮಂಗಳ ಕಾಮತ್, ಮನುಲಿಚ್ಚಯ್ಯ, ರಾಕೇಶ್ ,ಇನ್ನಿತರರು ಇದ್ದರು.

ಏಕತ್ತಡ್ಕ ಶಾಲಾ ಮಂತ್ರಿಮಂಡಲ ರಚನೆ

ನಿಡ್ಪಳ್ಳಿ: ಏಕತ್ತಡ್ಕ ಅಜ್ಜಿಕಲ್ಲಿನ ದ.ಕ.ಜಿ.ಪಂ. ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಯ ನಾಯಕಿಯಾಗಿ ಸಾನ್ವಿ.ಎಂ. ಮತ್ತು ಉಪ ನಾಯಕಿಯಾಗಿ ಚಾರ್ವಿ ಎಸ್.ಬಿ.





ಆಯ್ಕೆಯಾಗಿದ್ದಾರೆ. ಶಾಲಾ ಮಂತ್ರಿ ಮಂಡಲ ರಚನೆಯ ಚುನಾವಣೆ ಮೂಲಕ ನಡೆಯಿತು. ಆರೋಗ್ಯ ಮಂತ್ರಿ ಶ್ರೇಯಸ್, ಉಪ ಆರೋಗ್ಯ ಮಂತ್ರಿ ಬಿಂದುಶ್ರೀ, ಶಿಕ್ಷಣ ಮಂತ್ರಿ ರಜನಿ, ಉಪ ಶಿಕ್ಷಣ ಮಂತ್ರಿ ಆಯಿಷಾ ರಿಫಾ, ವಾರ್ತಾ ಮಂತ್ರಿ ರಜನಿ, ಉಪ ವಾರ್ತಾ ಮಂತ್ರಿ ಮನ್ವಿತ್, ಕ್ರೀಡಾ ಮಂತ್ರಿ ಜೀವಿತ್ ಕುಮಾರ್, ಉಪ ಕ್ರೀಡಾ ಮಂತ್ರಿ ಯಶ್ವಿತ್, ಸಭಾಪತಿ ಯಶ್ವಿನ್ ಧ್ಯೆ, ಉಪಸಭಾಪತಿ ಜೀವನ್, ಸ್ವಚ್ಛತಾ ಮಂತ್ರಿ ಸಿಮಾಖ್, ಉಪ ಸ್ವಚ್ಛತಾ ಮಂತ್ರಿ ಮೋಕ್ಷಿತ್, ವಿರೋಧ ಪಕ್ಷದ ನಾಯಕ ಪ್ರಿತೇಶ್, ವಿರೋಧ ಪಕ್ಷದ ಉಪ ನಾಯಕ ಯಶಿಕ, ತೋಟಗಾರಿಕಾ ಮಂತ್ರಿ ಯಶ್ವಿತ್, ಉಪತೋಟಗಾರಿಕಾ ಮಂತ್ರಿ ಶೋಭಿತ್, ಪ್ರವಾಸೋದ್ಯಮ ಮಂತ್ರಿ ಅಶ್ ಫಾಕ್, ಉಪ ಪ್ರವಾಸೋದ್ಯಮ ಮಂತ್ರಿ ಜೀವಿತ, ನೀರಾವರಿ ಮಂತ್ರಿ ಜಶ್ಮಿತ್, ಉಪ ನೀರಾವರಿ ಮಂತ್ರಿ ಸಾನ್ವಿ, ಗೃಹ ಮಂತ್ರಿ ಶ್ರೇಯಸ್, ಉಪ ಗೃಹ ಮಂತ್ರಿ ರಿಂಶಾ ಆಯ್ಕೆಯಾಗಿದ್ದಾರೆ.

ಮುಖ್ಯ ಶಿಕ್ಷಕ ತನುಜ ಎಂ.ಕೆ. ಅವರ ಮಾರ್ಗದರ್ಶನದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಸಹ ಶಿಕ್ಷಕರಾದ ಪ್ರೀತಂ ಎಸ್., ವಿದ್ಯಾ ಪ್ರತಿಮಾ ಪಾಯಸ್, ಅತಿಥಿ ಶಿಕ್ಷಕಿಯರಾದ ಚೇತನಾ ಸತೀಶ್, ಚಂದ್ರಕಲಾ, ಲಕ್ಷ್ಮೀ, ಜ್ಯೋತಿ ಸಹಕರಿಸಿದರು.

ಸಂತ ರವಿದಾಸ ಅವರ 650ನೇ ಜನ್ಮ ದಿನಾಚರಣೆ

ಸುರತ್ಕಲ್: ಕರ್ನಾಟಕ ರಾಜ್ಯ ಮಹಾ ವಿದ್ಯಾಲಯ ಶಿಕ್ಷಕರ ಸಂಘ ಮಂಗಳೂರು ವಿಭಾಗ ಹಾಗೂ ಸುರತ್ಕಲ್ ಶ್ರೀಮಹಾಲಿಂಗೇಶ್ವರ ಆಂಗ್ಲಮಾಧ್ಯಮ ಶಾಲೆಯ ಜಂಟಿ ಆಶ್ರಯದಲ್ಲಿ ಸಂತ ರವಿದಾಸ ಅವರ 650ನೇ ಜನ್ಮ ದಿನಾಚರಣೆಯ ಪ್ರಯುಕ್ತ ಭಾರತೀಯ ಸಂತ ಪರಂಪರೆ ಉಪನ್ಯಾಸ ಮಾಲಿಕೆ ಕಾರ್ಯಕ್ರಮ ನಡೆಯಿತು. ಅಖಿಲ ಭಾರತ ಸಾಹಿತ್ಯ ಪರಿಷದ್ ಮೂಲ್ಕಿಘಟಕದ ಅಧ್ಯಕ್ಷ ಎಂ. ಸರ್ವೋತ್ತಮ ಅಂಚನ್ ಅವರು ಉದ್ಘಾಟಿಸಿದರು. ಭಾರತೀಯ ಸಾಹಿತ್ಯ ಪರಿಷದ್‌ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆಶೀಶ್ ಬಾಳ್ತಬಲು, ಶ್ರೀಮಹಾಲಿಂಗೇಶ್ವರ ಆಂಗ್ಲಮಾಧ್ಯಮ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿ ಮಾಲಿನಿ ಬಂಗೇರ, ಕೆ.ಆರ್.ಎಂ.ಎಸ್.ಎಸ್. ಮಂಗಳೂರು ವಿಭಾಗದ ಅಧ್ಯಕ್ಷ ಡಾ. ಸುಧಾ ಶೆಟ್ಟಿ ಕೆ.ಆರ್.ಎಂ.ಎಸ್.ಎಸ್. ರಾಜ್ಯ ಜಂಟಿ ಕಾರ್ಯದರ್ಶಿ ಡಾ.ಮಾಧವ ಎಂ.ಕೆ., ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಲಕ್ಷ್ಮಣ ಪೂಜಾರಿ ವೇದಿಕೆಯಲ್ಲಿದ್ದರು.ಶ್ರೀ ಮಹಾಲಿಂಗೇಶ್ವರ ಆಂಗ್ಲಮಾಧ್ಯಮ ಹೈಸ್ಕೂಲ್‌ನ ಶಿಕ್ಷಕ ಪ್ರಮೀಳಾ ಕಾರ್ಯಕ್ರಮ ನಿರ್ವಹಿಸಿದರು.

ವಿದ್ಯುತ್ ವ್ಯತ್ಯಯ

ಕುಂದಾಪುರ: ಹಾಲಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11 ಕೆ.ವಿ ಬೆಳ್ವೆ ಮತ್ತು ಹೈಕಾಡಿ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿಸುವುದರಿಂದ ಜೂ.30ರಂದು ಬೆಳಿಗ್ಗೆ 9.ರಿಂದ ಸಂಜೆ 5 ಗಂಟೆಯವರೆಗೆ ಹಾಲಾಡಿ-28, ಆರ್ಡಿ, ಬೆಳ್ವೆ ಹೆಂಗವಳ್ಳಿ, ಸೂರ್ಗೋಳಿ, ಮಡಾಮಕ್ಕಿ ಹೈಕಾಡಿ, ಗೋಳಿಯಂಗಡಿ, ಅಲ್ಬಾಡಿ ಮತ್ತು ಶೇಡಿಮನೆ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಕುಂದಾಪುರ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆ | ಅಧಿಕಾರಿಗಳಿಗೆ ಸಮಿತಿ ಅಧ್ಯಕ್ಷರ ಸೂಚನೆ

ಅರ್ಹ ಫಲಾನುಭವಿಗಳಿಗೆ ಪಂಚ ಯೋಜನೆಗಳು ತಲುಪಲಿ

ಕುಂದಾಪುರ: ಪಂಚಗ್ಯಾರಂಟಿ ಯೋಜನೆ ಅನುಷ್ಠಾನಗೊಂಡು ಮೂರು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಯೋಜನೆಯಲ್ಲಿ ಆಡಳಿತಾತ್ಮಕವಾಗಿ ಪಾರದರ್ಶಕತೆ ಕಾಪಾಡಿಕೊಳ್ಳುವ ಸಲುವಾಗಿ ಪರಿಷ್ಕರಣೆ ಆಗುತ್ತದೆ. ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸುವುದು, ಗ್ಯಾರಂಟಿ ಯೋಜನೆಯ ದುರ್ಬಳಕೆ ತಡೆ, ನಿಜವಾದ ಫಲಾನುಭವಿ ಸೌಲಭ್ಯದಿಂದ ವಂಚಿತವಾಗಬಾರದು ಎನ್ನುವುದು ಸರಕಾರ ಉದ್ದೇಶವಾಗಿದೆ. ಹಾಗಾಗಿ ಪರಿಷ್ಕರಣೆ ನಡೆಯುತ್ತಿದ್ದು ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಜವಾಬ್ದಾರಿಯೂ ಇದೆ ಎಂದು ಕುಂದಾಪುರ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಹರಿಪ್ರಸಾದ್ ಶೆಟ್ಟಿ ಹೇಳಿದರು.

ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ಕೆಎಸ್ ಆರ್‌ಟಿಸಿ ಬಸ್ ಸಂಚರಿಸಲು ಅಧಿಕಾರಿಗಳು ಗಮನ



ಹರಿಸಬೇಕು. ಯಾವ ಮಾರ್ಗಕ್ಕೆ ಬಸ್ ತುರ್ತು ಅಗತ್ಯವಿದೆ ಎನ್ನುವುದನ್ನು ಬಸ್ ಹೊಂದಾಣಿಕೆ ಮಾಡಿಕೊಂಡು ಬಸ್ ಓಡಿಸಲು ಕ್ರಮ ಕೈಗೊಳ್ಳಬೇಕು. ಪಂಚ ಗ್ಯಾರಂಟಿ ಯೋಜನೆಯನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪಿಸಬೇಕು ಎಂದರು.

ಗೃಹಲಕ್ಷ್ಮೀ ಯೋಜನೆಯಲ್ಲಿ ಫೆಬ್ರವರಿ ತಿಂಗಳ ತನಕ ಹಣ ಪಾವತಿಯಾಗಿದೆ. 2756 ಫಲಾನುಭವಿಗಳ ಒಂದಕ್ಕಿಂತ ಹೆಚ್ಚು ಖಾತೆಗಳಿಗೆ ಹಣ ಪಾವತಿಯಾಗುವ ಮಾಹಿತಿ ಸಿಕ್ಕಿದೆ. ಫಲಾನುಭವಿಗಳು ಬೇರೆ ಬೇರೆ ಬ್ಯಾಂಕುಗಳಲ್ಲಿ ಆಧಾರ್ ಸಿಡೀಂಗ್ ಮಾಡಿರುವುದರಿಂದ ಈ ರೀತಿ ಗೊಂದಲ ಉಂಟಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಯೋಜನೆಗೆ ಪುನಃ ಅರ್ಜಿ ಸಲ್ಲಿಸುವ ಬಗ್ಗೆ ನಮಗೆ ಯಾವುದೇ ಮಾಹಿತಿ ಬಂದಿಲ್ಲ, ಗೊಂದಲ ಬೇಡ ಎಂದು ಅಧಿಕಾರಿಗಳು ತಿಳಿಸಿದರು.

ವಿದ್ಯುತ್ ತಂತಿಯ ಮೇಲ್ಭಾಗದಲ್ಲಿ ಅಕೇಶಿಯಾ ಮರಗಳ ರೆಂಬೆ ಕೊಂಬೆಗಳು ಬಾಗಿಕೊಂಡಿದ್ದು ಅನಾಹುತ ಸಂಭವಿಸುವ ಸಾಧ್ಯತೆಗಳು ಇದೆ ಎಂದು ಸಮಿತಿ ಸದಸ್ಯರಾದ ವಸುಂಧರ ಹೆಗ್ಡೆ ಹಾಗೂ ಚಂದ್ರ ಅಮೀನ್ ಅಸಮಾಧಾನ ವ್ಯಕ್ತಪಡಿಸಿದರು.

ಪಂಚ ಯೋಜನೆಗಳ

ಗೃಹಲಕ್ಷ್ಮೀ ಯೋಜನೆಯಲ್ಲಿ ಈ ತನಕ ತಾಲೂಕಿಗೆ 287,24,44,,000, ಗೃಹ ಜ್ಯೋತಿ ಯೋಜನೆಯಲ್ಲಿ ಮೇ ತಿಂಗಳಲ್ಲಿ 4,48,80,698, ಒಟ್ಟು 141,57,76,520, ಅನ್ನಭಾಗ್ಯ ಈ ತನಕ 63,73,39,224, ಯುವನಿಧಿ ಮೇ ತಿಂಗಳಲ್ಲಿ 31,59,000, ಒಟ್ಟು 3,54,84,000, ಶಕ್ತಿ ಯೋಜನೆ ಮೇ ತಿಂಗಳಲ್ಲಿ 3,43,96,060, ಒಟ್ಟು ಈ ತನಕ 86,39,98,271 ಬಿಡುಗಡೆಯಾಗಿದೆ. ಮೇ ತಿಂಗಳಲ್ಲಿ ಒಟ್ಟು 8,24,35,758, ಇಲ್ಲಿನ ತನಕ ಒಟ್ಟು 582,50,42,015 ಬಿಡುಗಡೆಯಾಗಿದೆ.

ಹಾಲಾಡಿ- ಹುಣ್ಸೆಮಕ್ಕಿ ರಸ್ತೆಯಲ್ಲಿ ಎರಡು ಕಡೆ ಅಕೇಶಿಯ ಮರಗಳು ವಿದ್ಯುತ್ ತಂತಿಗೆ ತಾಗಿಕೊಂಡಿವೆ. ಮಳೆಗಾಲದಲ್ಲಿ ಈ ಮರಗಳು ಬಿದ್ದರೆ ವಿದ್ಯುತ್ ಸಂಚಾರಕ್ಕೆ ಸಮಸ್ಯೆಯಾಗುತ್ತದೆ. ಕೂಡಲೇ ತೆರವುಮಾಡಬೇಕು ಎಂದು ಸದಸ್ಯರು ಆಗ್ರಹಿಸಿದರು.

ಅದಕ್ಕೆ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಮಾತನಾಡಿ, ಮುಂದಿನ ಸಭೆಗೆ ಅರಣ್ಯ ಇಲಾಖೆ ಅಧಿಕಾರಿಗಳನ್ನು ಕರೆಸುವುದಾಗಿ ತಿಳಿಸಿದರು.

ಸ್ಮಾರ್ಟ್‌ಮೀಟರ್ ಬಗ್ಗೆಯೂ ಚರ್ಚೆ ನಡೆಯಿತು. ಸದಸ್ಯರಾದ ನಾರಾಯಣ ಆಚಾರ್ ಕೋಣಿ ಮಾತನಾಡಿ, ಖಾಸಗಿ ಅರ್ಜಿಯ ಬಗ್ಗೆ ಗಮನ ಸೆಳೆದರು. ಈ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು ಮೆಸ್ಕಾಂ ನೌಕರರು ಕೂಡಾ ಇದಕ್ಕೆ ವಿರೋಧ ಇದ್ದೇವೆ ಎಂದರು.

ಅನ್ನಭಾಗ್ಯ ಯೋಜನೆಯಲ್ಲಿ ಗಂಭೀರ ಕಾಯಿಲೆಯಿಂದ ಬಳಲುತ್ತಿರುವವರಿಗೆ, ವಿಕಲಚೇತನರಿಗೆ ಬಿಪಿಎಲ್ ಕಾರ್ಡು ನೀಡುವ ಬಗ್ಗೆ ಇರುವ ಅವಕಾಶಗಳ ಬಗ್ಗೆ ಚರ್ಚೆ ನಡೆಯಿತು.

ಹಕ್ಲಾಡಿ ಮಾರ್ಗಕ್ಕೆ ಬಸ್ ಕಲ್ಪಿಸಲಾಗಿಲ್ಲ, ಪರವಾನಿಗೆ ಇದ್ದರೂ ಬಸ್ ಓಡಿಸುತ್ತಿಲ್ಲ, ಶಾಲಾ ಕಾಲೇಜು ಸಮಯಕ್ಕಾದರೂ ಕನಿಷ್ಠ ನಾಲ್ಕು ಟ್ರಿಪ್ ಆದರೂ ಕೊಡಿ ಎಂದು ಸದಸ್ಯ ಅರುಣ ಮನವಿ ಮಾಡಿದರು. ಇದಕ್ಕೆ ಮಂಜು ಕೊಠಾರಿ ಧ್ವನಿಗೂಡಿಸಿದರು. ಜಹೀರ್ ಅಹಮದ್, ಅಭಿಜಿತ್, ಗಣೇಶ ಕುಂಭಾಸಿ ಅವರು ಬಸ್ ಸಮಸ್ಯೆಯನ್ನು ಸಭೆಯ ಗಮನಕ್ಕೆ ತಂದರು.

ಎಸ್ಸೆಸೆಲ್ಸಿ, ಪಿಯುಸಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮಂಗಳೂರು: ಸರ್ವಶಕ್ತಿ ಮಹಿಳಾ ಮಂಡಳಿ ಪಡೀಲ್ ಹಾಗೂ ಸರ್ವಶಕ್ತಿ ನೃತ್ಯ ಭಜನಾ ತಂಡ ಪಡೀಲ್ ಸಹಯೋಗದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ. 90ಕ್ಕಿಂತ ಅಧಿಕ ಅಂಕ ಗಳಿಸಿದ ಮಂಗಳೂರು ನಗರದ ಕುಣಿತ ಭಜನಾ ತಂಡದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಪಡೀಲ್‌ನ ಶ್ರೀ ಬ್ರಾಮರಿ ಸಭಾಂಗಣದಲ್ಲಿ ನಡೆಯಿತು.

ಬಂಟ್ವಾಳ ತಾ. ಪಂ. ಕಾರ್ಯನಿರ್ವಹಣಾಧಿಕಾರಿ ಸಚಿನ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಯಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಶ್ವಿನಿ ಸಂತೋಷ್, ಇನ್ಫೋಸಿಸ್‌ನ ತಂತ್ರಜ್ಞಾನ ಮುಖ್ಯಸ್ಥೆ ಸ್ಮಿತಾ ಉದಯಶಂಕರ್ ಗಟ್ಟಿ ಭಜಕ ಸಾಧಕ ಪ್ರಶಸ್ತಿ ಪುರಸ್ಕೃತರಾದ ದೀನ ರಾಜ್ ಕಳವಾರ್, ಸರ್ವಶಕ್ತಿ ಮಹಿಳಾ ಮಂಡಳಿಯ ಅಧ್ಯಕ್ಷೆ ತೇಜಾಕ್ಷಿ ಮೋಹನ್, ಸರ್ವಶಕ್ತಿ ನೃತ್ಯ ಭಜನಾ ತಂಡದ ಸಂಚಾಲಕ ಉದಯ ಕೆ. ಪಿ. ಉಪಸ್ಥಿತರಿದ್ದರು. 20 ವಿದ್ಯಾರ್ಥಿಗಳಿಗೆ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ವನಿತಾ ಆಳ್ವ ಪ್ರಾಸ್ತವಿಕವಾಗಿ ಮಾತನಾಡಿದರು. ರಶ್ಮಿತಾ ಮೋಹನ್ ಸ್ವಾಗತಿಸಿದರು. ಗೌತಮಿ ಪೂಜಾರಿ ವಂದಿಸಿ ದರು. ಶಕುಂತಲಾ ಸೀತಾರಾಮ್ ಗಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಮಂಚಿ- ಕೊಳ್ನಾಡು ಶಾಲೆಯಲ್ಲಿ 'ಯಕ್ಷಧ್ರುವ ಯಕ್ಷ ಶಿಕ್ಷಣ'ಕ್ಕೆ ಚಾಲನೆ



ಬಂಟ್ವಾಳ: ತಾಲೂಕಿನ ಮಂಚಿ- ಕೊಳ್ನಾಡು ಸ. ಪ್ರೌಢ ಶಾಲೆ ಮತ್ತು ಹಿರಿಯ ವಿದ್ಯಾರ್ಥಿ ಸಂಘದ ಸಂಯುಕ್ತಾಶ್ರಯದಲ್ಲಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಮಂಗಳೂರು, ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ವಿಟ್ಲ ಘಟಕದ ಸಹಯೋಗದೊಂದಿಗೆ ಮಂಚಿ ಕೊಳ್ನಾಡು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಯಕ್ಷಗಾನ ನಾಟ್ಯ ತರಗತಿಯ 'ಯಕ್ಷಧ್ರುವ ಯಕ್ಷ ಶಿಕ್ಷಣ- 2026'ಕ್ಕೆ ಶಾಲಾ ಸಭಾಂಗಣದಲ್ಲಿ ಚಾಲನೆ ನೀಡಲಾಯಿತು.

ಹಿರಿಯ ವಿದ್ಯಾರ್ಥಿ, ಯಕ್ಷಗಾನ ಕಲಾವಿದೆ ಶಾಲಿನಿ ಶೆಟ್ಟಿ ಯಕ್ಷಶಿಕ್ಷಣ ಉದ್ಘಾಟಿಸಿ ಮಾತನಾಡಿ, ಪಟ್ಲ ಫೌಂಡೇಶನ್ ವತಿಯಿಂದ ನಡೆಸಲಾಗುವ ಉಚಿತ ಯಕ್ಷ ಶಿಕ್ಷಣ ಯೋಜನೆಯು ಮಕ್ಕಳ ಪ್ರತಿಭೆ ಮತ್ತು ಬೌದ್ಧಿಕ ವಿಕಾಸಕ್ಕೆ ಮಾತ್ರವಲ್ಲದೆ ಸಂಸ್ಕಾರದ ಗುಣವನ್ನು ಬೆಳೆಸುವಲ್ಲಿಯೂ ಸಹಕಾರಿಯಾಗಿದೆ. ಗ್ರಾಮೀಣ ಭಾಗದ ಸರಕಾರಿ ಶಾಲೆಯ ಮಕ್ಕಳು ಕೂಡ ಯಕ್ಷಗಾನ ಕಲೆಯನ್ನು ಕಲಿ ಯುವ ಅವಕಾಶ ದೊರೆತಿರುವುದು ವಿದ್ಯಾ ರ್ಥಿಗಳ ಭಾಗ್ಯದ ಜೊತೆಗೆ ಕರಾವಳಿ ಭಾಗದ ವಿಶಿಷ್ಟ ಕಲೆಯನ್ನು ಉಳಿಸಿ ಬೆಳೆಸುವಂತಾಗಲಿದೆ ಎಂದರು.

ಬಂಟ್ವಾಳ ತಾಲೂಕು ಘಟಕದ ಸಂಚಾಲಕಿ ಸಾಯಿಸುಮಾ ನಾವಡ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಎಸ್ಸೆಸೆಲ್ಸಿಯಲ್ಲಿ ಅತ್ಯಧಿಕ ಅಂಕಗಳಿಸಿದ ಪ್ರತಿಭಾನ್ವಿತ ಯಕ್ಷಗಾನದ ವಿದ್ಯಾರ್ಥಿನಿ ಪ್ರತೀಕ್ಷ ಅವರಿಗೆ ಹಿರಿಯ ವಿದ್ಯಾರ್ಥಿ ಸಂಘ ಮತ್ತು ಪಟ್ಲ ಫೌಂಡೇಶನ್ ವತಿಯಿಂದ ವಿದ್ಯಾರ್ಥಿ ವೇತನ ವಿತರಿಸಿ ಅಭಿನಂದಿಸಲಾಯಿತು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶಿವಶಂಕರ ರಾವ್ ಸಭಾಧ್ಯಕ್ಷತೆ ವಹಿಸಿದ್ದರು.ಯಕ್ಷಗಾನ ಗುರುಗಳಾದ ಕಟೀಲು ಮೇಳದ ಕಲಾವಿದ ಅಶ್ವತ್ಥ ಮಂಜನಾಡಿ ಯಕ್ಷಶಿಕ್ಷಣದ ವಿದ್ಯಾರ್ಥಿಗಳಿಗೆ ಹೆಜ್ಜೆಗಾರಿಕೆಯನ್ನು ಬೋಧಿಸಿದರು.

ಮಂಗಳೂರು ಪಟ್ಲ ಫೌಂಡೇಶನ್ ಸಂಸ್ಥೆಯ ಪ್ರಧಾನ ಸಂಚಾಲಕ ಪಣಂಬೂರು ವಾಸುದೇವ ಐತಾಳ್, ಪಟ್ಲ ಫೌಂಡೇಶನ್ ಟ್ರಸ್ಟ್ ವಿಟ್ಲ ಘಟಕದ ಅಧ್ಯಕ್ಷ ಪೂವಪ್ಪ ಶೆಟ್ಟಿ ಪಟ್ಲ ಫೌಂಡೇಶನ್ ಟ್ರಸ್ಟ್ ವಿಟ್ಲ ಘಟಕದ ಗೌರವ ಸಲಹೆಗಾರ ರಾಧಾಕೃಷ್ಣ ಶೆಟ್ಟಿ ಚೆಲ್ಲಡ್ಕ ಪ್ರಧಾನ ಸಂಚಾಲಕ ಸುಂದರ ಶೆಟ್ಟಿ ಕಾರ್ಯದರ್ಶಿ ಅರವಿಂದ ರೈ ಉಪಸ್ಥಿತರಿದ್ದರು.

ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಾಮ್ ಪ್ರಸಾದ್ ರೈ ತಿರುವಾಜೆ ಸ್ವಾಗತಿಸಿದರು. ಶಾಲಾ ಮುಖ್ಯ ಶಿಕ್ಷಕ ಸುಶೀಲ ವಿಟ್ಲ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಲಾ ಶಿಕ್ಷಕ ಜಗನ್ನಾಥ ಪಿ. ವಂದಿಸಿದರು. ಕಲಾವಿದ ತಾರಾನಾಥ್ ಕೈರಂಗಳ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಕಳ ಎಸ್‌ವಿಟಿ ಶಾಲೆಯಲ್ಲಿ ನಶಾ ಮುಕ್ತ ಭಾರತ ಕಾರ್ಯಕ್ರಮ



ಕಾರ್ಕಳ: ಇಲ್ಲಿನ ಎಸ್‌ವಿಟಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜೆಸಿಐ ರೂರಲ್ ಕಾರ್ಕಳ ಇದರ ಸಹಯೋಗದಲ್ಲಿ 'ನಶಾ ಮುಕ್ತ ಭಾರತ' ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಕಳ ನಗರ ಠಾಣೆಯ ಪಿಎಸ್‌ಐ ಶಿವಕುಮಾರ್ ಅವರು ಮುಖ್ಯ ವಕ್ತಾರರಾಗಿ ಆಗಮಿಸಿ, ಸ್ವಸ್ಥ ನಾಗರಿಕ ಸಮಾಜದ ನಿರ್ಮಾಣದಲ್ಲಿ ವಿದ್ಯಾರ್ಥಿಗಳು ಹಾಗೂ ಯುವಜನತೆಯ ಪಾತ್ರ ಮತ್ತು ವ್ಯಸನ ಮುಕ್ತ ಸಮಾಜದ ರಕ್ಷಣೆಗಾಗಿ ಪೊಲೀಸ್ ಇಲಾಖೆ ನಡೆಸುತ್ತಿರುವ ಪ್ರಯತ್ನಗಳನ್ನು ವಿವರಿಸಿದರು. ಜೂನಿಯರ್ ಜೆಸಿ ಅಧ್ಯಕ್ಷೆ ದಿಯಾ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಜೆಸಿಐ ರೂರಲ್‌ನ ಪದಾಧಿಕಾರಿಗಳು, ಪೊಲೀಸ್ ಇಲಾಖೆಯ ಅಧಿಕಾರಿಗಳು, ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕೆ.ಪಿ. ಶೆಣೈ ಮುಖ್ಯೋಪಾಧ್ಯಾಯಿನಿ ಮಾಲಿನಿ ಕೆ. ಮತ್ತು ಅಧ್ಯಾಪಕ ವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕುಶೆ ವಿದ್ಯಾಸಂಸ್ಥೆಯಲ್ಲಿ ಮಾದಕ ವ್ಯಸನ ವಿರೋಧಿ ದಿನ ಆಚರಣೆ



ಮಂಗಳೂರು: ಸರೋಜಿನಿ ಮಧುಸೂದನ ಕುಶೆ ವಿದ್ಯಾಸಂಸ್ಥೆಯಲ್ಲಿ ಜಿಲ್ಲಾಡಳಿತ, ಜಿ. ಪಂ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಂಗಳೂರು, ನಮ್ಮ ಕ್ಲಿನಿಕ್ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಾದಕ ವ್ಯಸನ ವಿರೋಧಿ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಾಯಿನಾಥ ಮಲ್ಲಿಗೆಮಾಡು, ಮಾದಕ ವ್ಯಸನದಿಂದಾಗುವ ತೊಂದರೆಗಳನ್ನು, ಹಾಗೂ ಈ ರೀತಿಯಾದ ಮಕ್ಕಳಲ್ಲಿ ಜಾಗೃತಿ ಮೂಡುವ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದರು.

ವೆನ್ಲಾಕ್ ಆಸ್ಪತ್ರೆಯ ಮನೋಶಾಸ್ತ್ರಜ್ಞ ವಿಜಯ ಕುಮಾರ್ ಮಾತನಾಡಿ, ಎರಡು ಸಾವಿರದಿಂದ ಮೂರು ಸಾವಿರ ರಾಸಾಯನಿಕ ವಸ್ತುಗಳಿಂದ ಕೂಡಿರುವ ತಂಬಾಕು ಹೇಗೆ ಸಿದ್ಧವಾಗುತ್ತದೆ. ಅವುಗಳ ವಿಧಗಳನ್ನು, ಹಾಗೂ ಇದರಿಂದ ಆಗುವ ತೊಂದರೆಗಳನ್ನು ವಿಸ್ತೃತವಾಗಿ ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಜೆಪ್ಪುವಿನ ಸಿಬ್ಬಂದಿಗಳಾದ ಸುಪ್ರೀತಾ, ನೈತಿಕಾ ಮೊದಲಾದವರು ಉಪಸ್ಥಿತರಿದ್ದರು. ಉಪಪ್ರಾಂಶುಪಾಲೆ ಪವಿತ್ರಾ ಸಹಕರಿಸಿದರು. ವಿದ್ಯಾರ್ಥಿ ಪ್ರತೀಕ್ಷಾ ಕಾರ್ಯಕ್ರಮವನ್ನು ನಿರೂಪಿಸಿದರು.



ಕೊಲ್ಲಮೊಗ್ರು ಗ್ರಾಮದ ಕಟ್ಟ ಗೋವಿಂದನಗರ ಅಂಗನವಾಡಿ ಕೇಂದ್ರಕ್ಕೆ ಸತೀಶ್ ಮತ್ತು ಪುಷ್ಪಾ ದಂಪತಿ 12 ಮಕ್ಕಳ ಚೆಯರ್ ಹಾಗೂ ಯತೀಂದ್ರ ಮತ್ತು ಜ್ಯೋತಿ ದಂಪತಿ 13 ಜೊತೆ ಸಮವಸ್ತ್ರವನ್ನು ವಿತರಿಸಿದರು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆ ವಿದ್ಯಾ ಎ.ಜೆ., ಬಾಲವಿಕಾಸ ಸಮಿತಿಯ ಅಧ್ಯಕ್ಷೆ ಮೀನಾಕ್ಷಿ ಕಟ್ಟ ಹಾಗೂ ಪೋಷಕರು ಉಪಸ್ಥಿತರಿದ್ದರು.

ಮಣಿಪಾಲ ಆಸ್ಪತ್ರೆ: ರೋಬೋಟಿಕ್ ಶ್ವಾಸನಾಳದ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಯಶಸ್ವಿ

ಉಡುಪಿ: ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯು ತಾಂತ್ರಿಕವಾಗಿ ಅತ್ಯಂತ ಸಂಕೀರ್ಣವಾದ ಶ್ವಾಸನಾಳದ(ಎದೆಯೊಳಗಿನ) ರೋಬೋಟಿಕ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ಸುಧಾರಿತ ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ.

ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ 36 ವರ್ಷದ ಪುರುಷ ರೋಗಿಯೊಬ್ಬರ ಶ್ವಾಸನಾಳದ ಕೆಳಭಾಗದಲ್ಲಿದ್ದ ಗೆಡ್ಡೆಯನ್ನು ರೋಬೋ ಟಿಕ್ ತಂತ್ರಜ್ಞಾನದ ಮೂಲಕ ಸಂಪೂರ್ಣವಾಗಿ ತೆಗೆದು ಹಾಕಿ, ಶ್ವಾಸನಾಳದ ಪುನರ್ನಿರ್ಮಾಣ ಮಾಡಲಾಗಿದೆ. ಕನಿಷ್ಠ ಆಕ್ರಮಣಕಾರಿ ವಿಧಾನ ಬಳಸಿದ್ದರಿಂದ, ರೋಗಿಯು ಶೀಘ್ರ ಚೇತರಿಸಿಕೊಂಡು ನಾಲ್ಕನೇ ದಿನದಲ್ಲೇ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ (ಸರ್ಜಿಕಲ್ ಆಂಕೊಲಾಜಿ) ವಿಭಾಗದ ಮುಖ್ಯಸ್ಥ ಡಾ. ನವೀನ ಕುಮಾರ್ ಎ.ಎನ್. ನೇತೃತ್ವದ ತಂಡ ಶಸ್ತ್ರಚಿಕಿತ್ಸೆ ನಡೆಸಿತು. ತಂಡದಲ್ಲಿ ಶಸ್ತ್ರಚಿಕಿತ್ಸಕರಾದ ಡಾ. ನವಾಜ್ ಉಸ್ಮಾನ್, ಡಾ. ಅಖಿಲ್ ಪಲೋಡ್, ಡಾ. ಅನಂತ್ ಬಾಲಕೃಷ್ಣನ್, ಡಾ. ಪ್ರೀತಿ ಹಾಗೂ ಅರಿವಳಿಕೆ ವಿಭಾಗದ ಪ್ರಾಧ್ಯಾಪಕಿ ಡಾ. ಅನಿತಾ ಎನ್. ಮತ್ತು ಡಾ. ಶ್ರೇಯಾ ಭಾಗವಹಿಸಿದ್ದರು. ಈ ಯಶಸ್ವಿ ಶಸ್ತ್ರಚಿಕಿತ್ಸಾ ಮತ್ತು ಅರಿವಳಿಕೆ ತಂಡಗಳ ನಡುವಿನ ನಿಖರ ಸಮನ್ವಯವೇ ಕಾರಣ ಎಂದು ಡಾ. ನವೀನ ಕುಮಾರ್ ತಿಳಿಸಿದ್ದಾರೆ. ವೈದ್ಯರ ತಂಡವನ್ನು ಮಾಹೆ ಬೋಧನಾ ಆಸ್ಪತ್ರೆಗಳ ಸಿಒಒ ಡಾ. ಸುಧಾಕರ್ ಕಂಟಿಪುಡಿ ಅವರು ಶ್ಲಾಘಿಸಿದ್ದಾರೆ.

ಉಡುಪಿ: ವಿದ್ಯಾರ್ಥಿಗಳಿಗೆ 'ಸಂಸ್ಕಾರ' ನೋಟ್ ಪುಸ್ತಕಗಳ ಉಚಿತ ವಿತರಣೆ



ಉಡುಪಿ: ಹಿಂದು ಜನಜಾಗೃತಿ ಸಮಿತಿಯ ವತಿಯಿಂದ ಉಡುಪಿಯ ಪಟ್ಲದ ಲೋಕಮಾನ್ಯ ತಿಲಕ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ 100 ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಕಾರ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಸಂಸ್ಕಾರ ವಹಿಯ ಮುಖಪುಟ ಹಾಗೂ ಹಿಂಬದಿಯ ಪುಟಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಪುರುಷರ ಹಾಗೂ ಉತ್ತಮ ರಾಜ್ಯಾಡಳಿತ ನಡೆಸಿ ಪ್ರಜೆಗಳ ಹಿತಕ್ಕಾಗಿ ಹೋರಾಡಿದ ರಾಜ- ಮಹಾರಾಜರ ಆದರ್ಶಗಳು ನೀಡಲಾಗಿದೆ. ಒಳಗಿನ ಪುಟಗಳಲ್ಲಿ ಸುಸಂಸ್ಕಾರ ಮತ್ತು ನೈತಿಕತೆ ಕುರಿತು ವಿಷಯಗಳು ಒಳಗೊಂಡಿವೆ. ಅವುಗಳನ್ನು ಓದಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಮಕ್ಕಳು 'ಆದರ್ಶ ವಿದ್ಯಾರ್ಥಿ'ಯಾಗಿ ರೂಪುಗೊಳ್ಳುವುದರಲ್ಲಿ ಸಂದೇಹವಿಲ್ಲ.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ರತ್ನ ಲಲಿತಾ, ಸುವರ್ಣ ಉಪಸ್ಥಿತರಿದ್ದರು. ಕಾರ್ಯಕ್ರಮದ ಯಶಸ್ವಿ ಆಯೋಜನೆಗೆ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಸಹಕಾರ ನೀಡಿದರು.



ಮಂಗಳೂರು ಶ್ರೀ ಗೋಕರ್ಣನಾಥೇಶ್ವರ ಪ. ಪೂ. ಕಾಲೇಜಿನಲ್ಲಿ ಯೋಗ ದಿನಾಚರಣೆ ನಡೆಯಿತು. ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಮಂಗಳೂರು ಇದರ ಉಪನ್ಯಾಸಕರು ಮತ್ತು ವೈದ್ಯಕೀಯ ಅಧಿಕಾರಿ ಡಾ.ಹರ್ಷಿತಾ ರಾವ್ ವಿವಿಧ ಯೋಗಾಸನ ಭಂಗಿಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಸಂಚಾಲಕ ವಸಂತ್ ಕಾರಂದೂರು, ಆಡಳಿತಾಧಿಕಾರಿ ನಾಗೇಶ್ ಕರ್ಕೇರ, ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಜಯಪ್ರಕಾಶ್, ಕಾಲೇಜಿನ ಪ್ರಾಂಶುಪಾಲ ರಘುರಾಜ್ ಕದ್ರಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ವನಿತಾ ಶೆಟ್ಟಿ, ದೈಹಿಕ ಶಿಕ್ಷಣ ನಿರ್ದೇಶಕ ಅಮಿತ್ ಎನ್. ಉಪಸ್ಥಿತರಿದ್ದರು. ಕಾಲೇಜಿನ ಎನ್‌ಎಸ್‌ಎಸ್ ಸ್ವಯಂ ಸೇವಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಯೋಗಾಸನ ಮಾಡಿದರು.

ಕೊಡಗಿನಲ್ಲಿ ನಾರಾಯಣ ಗುರು ಜಯಂತಿ ಪೂರ್ವಭಾವಿ ಸಭೆ

ಬೃಹತ್ ಮೆರವಣಿಗೆಯೊಂದಿಗೆ ಜಯಂತಿ ಆಚರಣೆ

ಮಡಿಕೇರಿ: ಬ್ರಹ್ಮಶ್ರೀ ನಾರಾಯಣ ಗುರುಗಳ 172 ನೇ ಜಯಂತಿಯ ಅಂಗವಾಗಿ ಕೊಡಗು ಎಸ್.ಎನ್ .ಡಿ.ಪಿ ಯೂನಿಯನ್ ವತಿಯಿಂದ ಆಯೋಜಿಸುವ ಕಾರ್ಯಕ್ರಮ ಕುರಿತ ಪೂರ್ವಭಾವಿ ಸಭೆ ಸಿದ್ದಾಪುರದ ಎಸ್.ಎನ್ ಡಿ.ಪಿ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ವಿ.ಕೆ.ಲೋಕೇಶ್, ಬ್ರಹ್ಮಶ್ರೀ ನಾರಾಯಣ ಗುರು ಗಳು ತುಳಿತಕ್ಕೊಳಗಾದ ಸಮಾಜದ ಏಳಿಗೆಗೆ ಶ್ರಮಿಸಿ ದ್ದರು. ಪ್ರತಿ ವರ್ಷವೂ ಕೊಡಗು ಎಸ್‌ಎನ್ ಡಿಪಿ ಯೂನಿಯನ್ ವತಿಯಿಂದ ಅದ್ದೂರಿಯಾಗಿ ಗುರುಗಳ ಜಯಂತಿಯನ್ನು ಆಚರಿಸುತ್ತಿದ್ದು, ಈ ವರ್ಷ ಬಹಳ ವಿಜೃಂಭಣೆಯಿಂದ ಜಯಂತಿ ಆಚರಿಸಲಾಗುವುದು ಎಂದರು.

ಜಿಲ್ಲೆಯಲ್ಲಿ 50 ಸಾವಿರಕ್ಕೂ ಹೆಚ್ಚು ಹಿಂದು ಮಲೆಯಾಳಿ ಜನರಿದ್ದು, ಆ.28 ರಂದು ಸಿದ್ದಾಪುರಲ್ಲಿ



ಬೃಹತ್ ಮೆರವಣಿಗೆಯೊಂದಿಗೆ ನಾರಾಯಣ ಗುರು ಜಯಂತಿ ಆಚರಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭ ಜಯಂತಿ ಆಚರಣಾ ಸಮಿತಿಗೆ ಅಧ್ಯಕ್ಷರಾಗಿ ಹರಿದಾಸ್, ಕಾರ್ಯದರ್ಶಿಯಾಗಿ ರೆಜಿತ್ ಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು. ಉಪ ಸಮಿತಿಗಳಾದ ವೇದಿಕೆ ಸಮಿತಿ, ಮೆರವಣಿಗೆ ಸಮಿತಿ, ಆಹಾರ ಸಮಿತಿ ಸೇರಿದಂತೆ ವಿವಿಧ ಉಪ ಸಮಿತಿಗಳ ಸಂಚಾಲಕರು ಹಾಗೂ ಸದಸ್ಯರನ್ನೂ ಆಯ್ಕೆ ಮಾಡಲಾಯಿತು. ಯೂನಿಯನ್ ಉಪಾಧ್ಯಕ್ಷ ಆರ್.ರಾಜನ್, ಪ್ರಮುಖರಾದ ಟಿ.ಆರ್ ಪಾಪಯ್ಯ, ಮೋಹನ್ ದಾಸ್, ರಾಜಶೇಖರ್, ಮೋಹನ್ ದಾಸ್, ಟಿ.ಸಿ. ನಾರಾಯಣ್, ವನಿತಾ ಘಟಕದ ಜಿಲ್ಲಾಧ್ಯಕ್ಷೆ ರೀಶಾ ಸುರೇಂದ್ರನ್ ಸೇರಿದಂತೆ ವಿವಿಧ ಶಾಖೆಗಳ ಪದಾಧಿಕಾರಿಗಳು ಹಾಜರಿದ್ದರು.

ಗೃಹಲಕ್ಷ್ಮೀ ಹಣ ದುರುಪಯೋಗ ಆರೋಪ | ರಾಕೇಶ್ ದೇವಯ್ಯ ಒತ್ತಾಯ

ಜನರೆದುರು ಅಂಕಿ ಅಂಶಗಳ ಸತ್ಯ ಬಹಿರಂಗಪಡಿಸಿ

ಮಡಿಕೇರಿ: ರಾಜ್ಯ ಸರಕಾರದ ಗೃಹಲಕ್ಷ್ಮಿ ಯೋಜನೆಯ ಮೂಲಕ ಹಣ ದುರುಪಯೋಗವಾಗಿದೆ ಮತ್ತು ಅನರ್ಹರಪಾಲಾಗಿದೆ ಎನ್ನುವುದು ಈಗಾಗಲೇ ಸಾಬೀತಾಗಿದೆ. ಕೊಡಗು ಜಿಲ್ಲೆಯಲ್ಲೂ ನಡೆದಿರಬಹುದಾದ ಇಂತಹ ಪ್ರಕರಣಗಳ ಬಗ್ಗೆ ಕೊಡಗು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಂಕಿ ಅಂಶ ಸಹಿತ ಸತ್ಯವನ್ನು ಜನರೆದುರು ಬಹಿರಂಗ ಪಡಿಸಬೇಕೆಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಅವರು ಒತ್ತಾಯಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಸೋರಿಕೆ ತಡೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪರಿಷ್ಕರಣೆಯ ಅಸ್ತ್ರ ಬಳಸಿದ್ದಾರೆ. ಇದನ್ನು ಗಮನಿಸಿದರೆ ಅವರಿಗೆ ಈ ಹಿಂದಿನ ಸಿಎಂ ಸಿದ್ದರಾಮಯ್ಯ ಅವರ ಆಡಳಿತಾವಧಿಯಲ್ಲಿ ಯೋಜನೆ ಯಡಿಯಲ್ಲಿ ಸಂದಾಯವಾದ ಹಣದ ಬಗ್ಗೆ ಸಂಶಯ ವ್ಯಕ್ತವಾದಂತೆ ಕಾಣುತ್ತಿದೆ ಎಂದು ಟೀಕಿಸಿದ್ದಾರೆ.

ಜಿಲ್ಲೆಯಲ್ಲಿ ಯೋಜನೆಯಡಿ ಅನರ್ಹರ ಅಥವಾ ಮೃತಪಟ್ಟರ ಖಾತೆಗೆ ಹಣ ಜಮಾ ಆಗಿರುವ ಬಗ್ಗೆ ಇಲ್ಲಿಯವರೆಗೆ ಮಾಹಿತಿ ಬಹಿರಂ ಗವಾಗಿಲ್ಲ, ಸರಕಾರ ನೇಮಕ ಮಾಡಿರುವ ಜಿಲ್ಲಾ ಮತ್ತು ತಾಲೂಕುವಾರು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಗಳು ಸೂಕ್ತ ಮಾಹಿತಿ ನೀಡಬೇಕಾಗಿದೆ.

ಯೋಜನೆಗಳು ಅರ್ಹ ಫಲಾನುಭವಿ ಗಳಿಗೆ ತಲುಪಬೇಕು ಎನ್ನುವ ಉದ್ದೇಶದಿಂದ ಸರಕಾರ ಮಾಸಿಕ ವೇತನ ಮತ್ತು ಎಲ್ಲಾ ಸೌಲಭ್ಯಗಳನ್ನು ನೀಡಿ ಸಮಿತಿಗಳನ್ನು ನೇಮಕ ಮಾಡಿವೆ. ಆದರೆ ಯೋಜನೆಯಲ್ಲಿ ಹಣ ಅನರ್ಹರ ಪಾಲಾಗಿರುವುದನ್ನು ಗಮನಿಸಿದರೆ ಈ ಅನುಷ್ಠಾನ ಸಮಿತಿಗಳ ಕಾರ್ಯ ವೈಖರಿಯ ಬಗ್ಗೆ ಸಂಶಯ ಮೂಡುತ್ತದೆ.

ಅಧಿಕಾರಕ್ಕೆ ಬರಬೇಕೆನ್ನುವ ಏಕೈಕ ಉದ್ದೇಶದಿಂದ ಆರ್ಥಿಕ ಹೊರೆಯ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ ಕಾಂಗ್ರೆಸ್, ಅಧಿಕಾರಕ್ಕೆ ಬಂದ ನಂತರ ಅನುದಾನ ಕ್ರೋಢೀಕರಣ ಮಾಡುವಲ್ಲಿ ವಿಫಲವಾಗಿದೆ. ಸರಕಾರ ಮಾಡಿದ ಸ್ವಯಂಕೃತ ಅಪರಾಧಕ್ಕೆ ಜನಸಾಮಾನ್ಯರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ರಾಜ್ಯದ ಜನರಿಗೆ ತೊಂದರೆ ನೀಡುವುದನ್ನು ಬಿಟ್ಟು ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಗಳನ್ನು ತನಿಖೆಗೆ ಒಳಪಡಿಸಬೇಕು. ಸಮಿತಿಯ ಅಧ್ಯಕ್ಷರನ್ನು ಹಾಗೂ ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ಕಾಸರಗೋಡು ಬಿಜೆಪಿಯಿಂದ ತುರ್ತು ಪರಿಸ್ಥಿತಿ ವಿರೋಧಿ ದಿನಾಚರಣೆ | ಜಯಚಂದ್ರನ್ ಮಾಸ್ತರ್ ಹೇಳಿಕೆ

ಕಾಂಗ್ರೆಸ್‌ನಿಂದ ಸಂವಿಧಾನ ರಕ್ಷಣೆಯ ಪಾಠದ ಅಗತ್ಯವಿಲ್ಲ

ಕಾಸರಗೋಡು: ತುರ್ತು ಪರಿಸ್ಥಿತಿ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಕಗ್ಗೊಲೆ ಮಾಡಿದ ಕಾಂಗ್ರೆಸ್ ಪಕ್ಷವು ಇದೀಗ ಪ್ರಜಾಸತ್ತಾತ್ಮಕ ಹಕ್ಕು ಸಂವಿಧಾನದ ರಕ್ಷಣೆ ಬಗ್ಗೆ ದಿನಂಪ್ರತಿ ಮಾತನಾಡುತ್ತಿರುವುದು ಹಾಸ್ಯಸ್ಪದ. ಸಂವಿಧಾನದ ಪ್ರತಿಯನ್ನು ಜೇಬಿನಲ್ಲಿ ಇಟ್ಟುಕೊಂಡು ಓಡಾಡುತ್ತಿರುವ ರಾಹುಲ್ ಗಾಂಧಿಯು ತನ್ನ ಪಕ್ಷದ ಹಿಂದಿನವರು ಮಾನವ ಹಕ್ಕುಗಳನ್ನು ನಾಶಗೈದಿರುವ ಬಗ್ಗೆ ಚಕಾರ ವೆತ್ತುತ್ತಿಲ್ಲವೆಂದು ಬಿಜೆಪಿ ಕೇರಳ ರಾಜ್ಯ ವಕ್ತಾರ ಟಿ.ಪಿ. ಜಯಚಂದ್ರನ್ ಮಾಸ್ತರ್ ಆರೋಪಿಸಿದರು.



ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ವತಿಯಿಂದ 1975ರ ತುರ್ತು ಪರಿಸ್ಥಿತಿ ವಿರೋಧಿ ದಿನಾಚರಣೆಯ ಕಾರ್ಯಕ್ರಮದ ಅಂಗವಾಗಿ ಪಕ್ಷದ ಜಿಲ್ಲಾ ಕಾರ್ಯಾಲಯ ಡಾ. ಶ್ಯಾಮ್‌ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ತುರ್ತು ಪರಿಸ್ಥಿತಿ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿರಾ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಭಾರತದ ಸಂವಿಧಾನವನ್ನು ಅನೇಕ ಬಾರಿ ತಿದ್ದುಪಡಿ ನಡೆಸಿದ್ದಾರೆ. ಈ ಮೂಲಕ ದೇಶದ ಪ್ರಜೆಗಳ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ. ಅಲ್ಲದೆ ತುರ್ತು ಪರಿಸ್ಥಿತಿಯ ಸಂದರ್ಭ ಬಲವಂತದಿಂದ ಕ್ರೂರ ರೀತಿಯಲ್ಲಿ ದೇಶದ ಪ್ರಜೆಗಳಿಗೆ ಚಿತ್ರಹಿಂಸೆ ನೀಡಲಾಗಿತ್ತು. ಕಾನೂನು ವಿರೋಧಿ ಧೋರಣೆ ಮತ್ತು ಅಂದಿನ ಕೇಂದ್ರ ಸರಕಾರದ ಕ್ರೂರ ದಬ್ಬಾಳಿಕೆಯ ವಿರುದ್ಧ ಶಾಂತಿಯುತವಾಗಿ ಭಾರತದ ಪ್ರಜೆಗಳು ಪ್ರತಿಭಟಿಸಿದ್ದರು. ಇದೀಗ ಕಾಂಗ್ರೆಸ್ ಬಿಜೆಪಿಗೆ ಸಂವಿಧಾನದ ರಕ್ಷಣೆಯ ಬಗ್ಗೆ ಬಿಜೆಪಿಗೆ ಪಾಠ ಮಾಡುವ ಅಗತ್ಯವಿಲ್ಲ ಎಂದು ಹೇಳಿದರು.

ತುರ್ತು ಪರಿಸ್ಥಿತಿ ಸಂದರ್ಭ ಪತ್ರಿಕಾ ಸ್ವಾತಂತ್ರ್ಯವನ್ನು ಧಮನ ಮಾಡಲಾಗಿತ್ತು. ಪತ್ರಕರ್ತರನ್ನು ಗುರಿಯಾಗಿಸಿ ಜೈಲಿಗೆ ಕಳುಹಿಸಲಾಗಿತ್ತು. ಆ ದಿನಗಳ ಘನಘೋರ ಎಂದು ಅವರು ಹೇಳಿದರು.

ತುರ್ತು ಪರಿಸ್ಥಿತಿ ಹೋರಾಟಗಾರರ ತ್ಯಾಗ ಮತ್ತು ಸಹಿಷ್ಣುತೆಯನ್ನು ನಾವು ಯಾವಾಗಲೂ ಕೃತಜ್ಞತೆಯಿಂದ ಸ್ಮರಿಸಬೇಕು. ಯುವ ಪೀಳಿಗೆಗೆ ತುರ್ತು ಪರಿಸ್ಥಿತಿ ಆಂದೋಲನದ ಬಗ್ಗೆ ಸಮಗ್ರ ಅರಿವು ಮೂಡಿಸಬೇಕು. ದೇಶಪ್ರೇಮ ಹಾಗೂ ಭಾರತದ ಅಖಂಡತೆಯ ಕುರಿತು ಯುವಜನಾಂಗಕ್ಕೆ ನಿರಂತರ ಮನವರಿಕೆ ಮಾಡಬೇಕು ಎಂದು ಟಿ.ಪಿ.ಜಯಚಂದ್ರನ್ ಮಾಸ್ತರ್ ತಿಳಿಸಿದರು.

> **ಇಂದಿರಾ ಗಾಂಧಿ ಪ್ರಧಾನಿ ಆಗಿದ್ದ ಸಂದರ್ಭ ರಾಷ್ಟ್ರದಲ್ಲಿ ಬಲವಂತವಾಗಿ ಹೇರಿದ್ದ ಕಾನೂನು ವಿರೋಧಿ ತುರ್ತು ಪರಿಸ್ಥಿತಿಯು ಕರಾಳ ಅಧ್ಯಾಯವಾಗಿದೆ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್‌ನ ಇತರ ನಾಯಕರು ಸಂವಿಧಾನ ಅಪಾಯದಲ್ಲಿದೆ ಎಂದು ಹೇಳುತ್ತಿದ್ದು ಆದರೆ ಇಂದಿರಾ ಗಾಂಧಿಯವರ ಇಂತಹ ಧೋರಣೆಗಳ ಬಗ್ಗೆ ಮಾತನಾಡುತ್ತಿಲ್ಲ. ಬಿಜೆಪಿ ನೇತೃತ್ವದ ಆಡಳಿತವು ಸಂವಿಧಾನ ವಿರೋಧಿ ನೀತಿ ಯಾವತ್ತೂ ಜಾರಿಗೆ ತಂದಿಲ್ಲ. ಕಾಸರಗೋಡು ಜಿಲ್ಲೆಯಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಅನೇಕ ಮಂದಿ ಹೋರಾಡಿದ್ದು ಅವರ ಹೋರಾಟದ ಕುರಿತು ಯುವಜನರಿಗೆ ತಿಳಿಸಬೇಕಿದೆ.**
> • **ಟಿ.ಪಿ.ಜಯಚಂದ್ರನ್**, ರಾಜ್ಯ ವಕ್ತಾರ

ಸಮಾರಂಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಎಲ್.ಅಶ್ವಿನಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ 125ನೇ ಜನ್ಮ ದಿನಾಚರಣೆಯ ಅಂಗವಾಗಿ ಬಿಜೆಪಿ ರಾಜ್ಯ ಸಮಿತಿ ಸದಸ್ಯ ಎ. ವೇಲಾಯುಧನ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಸುಮಾರು 60 ಮಂದಿ ತುರ್ತು ಹೋರಾಟಗಾರರನ್ನು ಗೌರವಿಸಲಾಯಿತು. ಬಿಜೆಪಿ ರಾಜ್ಯ ಸಮಿತಿ ಸದಸ್ಯ ವಿ.ರವೀಂದ್ರನ್, ಕೋಳಾರು ಸತೀಶ್ಚಂದ್ರ ಭಂಡಾರಿ, ಸವಿತಾ ಟೀಚರ್, ರಾಮಪ್ಪ ಮಂಜೇಶ್ವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್. ಬಾಬುರಾಜ್, ಒಬಿಸಿ ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಶೈಜು ಮತ್ತಿತರರು ಮಾತನಾಡಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್. ಸುನಿಲ್ ಸ್ವಾಗತಿಸಿ, ಮನುಲಾಲ್ ಮೇಲತ್ ವಂದಿಸಿದರು.

ಸುತ್ತ ಮುತ್ತ

ಚಾಮುಂಡಿ ದೈವಸ್ಥಾನ: ಪದಾಧಿಕಾರಿಗಳ ಆಯ್ಕೆ




ಮಂಜೇಶ್ವರ: ಪಾವೂರು ಬಜಾಲ್ ಪೊಯ್ಯೆ ಶ್ರೀ ಚಾಮುಂಡಿ ದೈವಸ್ಥಾನದ 2026-27ನೇ ಅವಧಿಗೆ ಆಡಳಿತ ಮಂಡಳಿಯ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ವಿನೋದ್‌ಕುಮಾರ್ ರೆಂಜೆಸಿದ್ದು ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಪುನೀತ್ ರೈ ಪಾವೂರು ಆಯ್ಕೆಯಾಗಿದ್ದಾರೆ.

ನಾಳೆ ಮೋಪಾಲ ಶ್ರೀ ಮಹಾವಿಷ್ಣು ಕ್ಷೇತ್ರ ಮಹಾಸಭೆ

ಕಾಸರಗೋಡು: ಎಡನೀರು ಚೂರಿಮೂಲೆ ಮೋಪಾಲ ಶ್ರೀ ಮಹಾವಿಷ್ಣು ಕ್ಷೇತ್ರದ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಸಮಿತಿ ರೂಪೀಕರಣ ಮಹಾಸಭೆಯು ಜೂ.28ರಂದು ಅಪರಾಹ್ನ 3 ಗಂಟೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರ ನಿರ್ದೇಶನದಲ್ಲಿ ನಡೆಯಲಿದೆ. ಸಭೆಯಲ್ಲಿ ಭಕ್ತಜನರು ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಸ್ವರ ಚಿನ್ನಾರಿ ನೂತನ ಪದಾಧಿಕಾರಿಗಳ ಆಯ್ಕೆ

ಕಾಸರಗೋಡು: ಕಾಸರಗೋಡಿನ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಯಾದ ರಂಗ ಚಿನ್ನಾರಿ ಕಾಸರಗೋಡು ಇದರ ಸಂಗೀತ ಘಟಕವಾದ ಸ್ವರ ಚಿನ್ನಾರಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವ ಸಲಹೆಗಾರರಾಗಿ ಶ್ರೀಕೃಷ್ಣಯ್ಯ ಅನಂತಪುರ, ಪುರುಷೋತ್ತಮ ಕೊಪ್ಪಲ, ಸತ್ಯನಾರಾಯಣ ಐಲ, ಗೌರವಾಧ್ಯಕ್ಷರಾಗಿ ಡಾ.ಕೆ.ಕೆ.ಶ್ಯಾನುಭೋಗ್, ಅಧ್ಯಕ್ಷರಾಗಿ ಕಿಶೋರ್ ಪೆರ್ಲ, ಉಪಾಧ್ಯಕ್ಷರಾಗಿ ರತ್ನಾಕರ ಓಡಂಗಲ್ಲು, ಕಾರ್ಯದರ್ಶಿಯಾಗಿ ಬಬಿತಾ ಆಚಾರ್ಯ, ಜೊತೆ ಕಾರ್ಯದರ್ಶಿಯಾಗಿ ಉಷಾ ರಾಮಚಂದ್ರ, ಕೋಶಾಧಿಕಾರಿಯಾಗಿ ದಿನೇಶ್ ಆಚಾರ್ಯ ಆಯ್ಕೆಯಾದರು. ಸದಸ್ಯರಾಗಿ ಜಗದೀಶ್ ಉಪ್ಪಳ, ಚಿತ್ರಾ ರಾಜೇಶ್ ಆಚಾರ್ಯ, ಉದಯ ಕಾರ್ಳೆ, ಎನ್.ಎಂ.ಭಟ್ ಧರ್ಮತ್ತಡ್ಕ, ರಾಜೇಶ್ ಎಲ್ಲಂಗಳ, ಪ್ರಿಯ ಸತ್ಯನ್, ಗಣೇಶ್ ಆಚಾರ್ಯ, ವಸಂತ ಶೆಟ್ಟಿ ಪ್ರದೀಪ್ ಆಚಾರ್ಯ, ಡಾ.ಹರಿಕಿರಣ್ ಬಂಗೇರ, ಡಾ.ಜನಾರ್ದನ ನಾಯ್ಕ್, ವಾಸುದೇವ ಶೆಟ್ಟಿ ಜನಾರ್ದನ ಅಣಂಗೂರು, ಉದಯಕುಮಾರ್ ಮನ್ನಿಪ್ಪಾಡಿ ಅವರನ್ನು ಆರಿಸಲಾಯಿತು.

ಒಬಿಸಿ ಮೀಸಲಾತಿ ಏಕೀಕರಿಸಲು ಎಚ್‌ಎಸ್‌ಎಸ್‌ವಿ ಆಗ್ರಹ

ಮಂಜೇಶ್ವರ: ಮಂಜೇಶ್ವರದಲ್ಲಿ ಹಮ್ಮಿಕೊಳ್ಳಲಾದ ಹಿಂದು ಸಮುದಾಯ ಸೌಹಾರ್ದ ವೇದಿಕೆ (ಎಚ್‌ಎಸ್‌ಎಸ್‌ವಿ) ಕಾಸರಗೋಡು ಜಿಲ್ಲಾ ಸಮಾವೇಶವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ,




ವಕೀಲ ಪಯ್ಯನ್ನೂರು ಶಾಜಿ ಉದ್ಘಾಟಿಸಿದರು.

ಕೇರಳ ಮತ್ತು ಕೇಂದ್ರ ಒಬಿಸಿ ಪಟ್ಟಿಯಲ್ಲಿರುವ ಕಾಗುಣಿತ ದೋಷಗಳು ಮತ್ತು ಲೋಪಗಳನ್ನು ಸರಿಪಡಿಸಬೇಕು. ರಾಜ್ಯ ಮತ್ತು ಕೇಂದ್ರ ಸರಕಾರಗಳು ದೋಷರಹಿತ ಒಬಿಸಿ ಪಟ್ಟಿಯನ್ನು ಮರುಪ್ರಕಟಿಸಲು ಸಿದ್ಧವಾಗಬೇಕು ಎಂದು ಸಮಾವೇಶದಲ್ಲಿ ಒತ್ತಾಯಿಸಲಾಯಿತು.

ವಾಣಿಯ, ಗಾಣಿಗ, ತೀಯಾ, ಪದ್ಮಶಾಲಿ, ವೇಳುತೇಡಂತ್ ನಾಯರ್, ಕೋಟೆಯಾರ್ (ರಾಮ ಕ್ಷತ್ರಿಯ), ಯೋಗಿ, ಹೆಗಡೆ, ಭಂಡಾರಿ, ಮಣಿಯಾಣಿ, ಗಟ್ಟಿ ಮಲ್ಲವ ಮೊದಲಾದ ಸಮುದಾಯಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಘಟನೆಯ ನೂತನ ಜಿಲ್ಲಾಧ್ಯಕ್ಷರಾಗಿ ಎಂ.ಹರಿಶ್ಚಂದ್ರ ಮಂಜೇಶ್ವರ, ಕಾರ್ಯಾಧ್ಯಕ್ಷರಾಗಿ ಬಾಲಕೃಷ್ಣ, ಪ್ರಧಾನ ಕಾರ್ಯದರ್ಶಿಯಾಗಿ ಸಂದೀಪ್ ಗಟ್ಟಿ ದೇವಿನಗರ, ಕೋಶಾಧಿಕಾರಿಯಾಗಿ ಯೋಗೀಶ್, ಉಪಾಧ್ಯಕ್ಷರಾಗಿ ಪಿ.ವಿ.ಉಷಾ, ನಾರಾಯಣನ್, ಶೋಭಾ, ಪ್ರಕಾಶ್, ಪಿ.ವೈ.ಕುಂಞಿಕೃಷ್ಣನ್, ಕಾರ್ಯದರ್ಶಿಗಳಾಗಿ ಪುರುಷೋತ್ತಮನ್, ರಮ್ಯಾ, ಪೂರ್ಣಿಮಾ ಅವರನ್ನು ಆರಿಸಲಾಯಿತು. ರಾಜ್ಯ ಕಾರ್ಯಾಧ್ಯಕ್ಷ ರಾಮಕೃಷ್ಣನ್ ವಾಳುನ್ನೋರಡಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ವಿನೋದನ್ ತುರುತ್ತಿ, ಮಹಿಳಾ ವಿಭಾಗದ ಪ್ರಧಾನ ಕಾರ್ಯದರ್ಶಿ ಓಮನಾ ಮುರಳಿ ಮತ್ತಿತರರು ಮಾತನಾಡಿದರು.

ಕಾಸರಗೋಡು ಬಿಲ್ಲವ ಸೇವಾ ಸಂಘ: ಸಾಧಕ ಮಕ್ಕಳಿಗೆ ಗೌರವ

ಕಾಸರಗೋಡು: ಕಾಸರಗೋಡು ಜಿಲ್ಲಾ ಬಿಲ್ಲವ ಸೇವಾ ಸಂಘದ ಆಶ್ರಯದಲ್ಲಿ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಎ+ ಪಡೆದು ತೇರ್ಗಡೆಯಾದ ಬಿಲ್ಲವ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಗೌರವಿಸುವ ಕಾರ್ಯಕ್ರಮ ಜುಲೈ ಕೊನೆಯ ವಾರದಲ್ಲಿ ಕಾಸರಗೋಡಿನಲ್ಲಿ ನಡೆಸಲು ತೀರ್ಮಾನಿಸಲಾಯಿಗಿದೆ.

ಆಯಾ ಶಾಲೆಯ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿದ ಅಂಕ ಪತ್ರವನ್ನು (ಭಾವಚಿತ್ರ, ಮೊಬೈಲ್ ನಂಬರ್ ಸಹಿತ) ಜು.15ರ ಮೊದಲು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿಸಲಾಗಿದೆ. ಕೆ.ಶಿವ, ಉಪಾಧ್ಯಕ್ಷರು, ಕಾಸರಗೋಡು ಬಿಲ್ಲವ ಸೇವಾ ಸಂಘ, ಯಶಸ್ಸು ನಿಲಯ, ಕೇಳುಗುಡ್ಡೆ ರಸ್ತೆ, ಕರಂದಕ್ಕಾಡು, ಕಾಸರಗೋಡು. ಮೊಬೈಲ್: 9446013320 ಎಂಬ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಿನ್ಮಯ ಮಿಷನ್‌ನಿಂದ ಮಾದಕ ದ್ರವ್ಯ ವಿರೋಧಿಸಿ ಮಿನಿ ಮ್ಯಾರಥಾನ್



ಕಾಸರಗೋಡು: ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನದ ಅಂಗವಾಗಿ ಚಿನ್ಮಯ ಮಿಷನ್‌ನ ಯುವ ಘಟಕವಾದ ಚಿನ್ಮಯ ಯುವಕೇಂದ್ರದ ಆಶ್ರಯದಲ್ಲಿ ಮಾದಕ ದ್ರವ್ಯ ವಿರೋಧಿ ಮಿನಿ ಮ್ಯಾರಥಾನ್ ಮತ್ತು ಮಾದಕ ದ್ರವ್ಯ ವಿರೋಧಿ ಪ್ರತಿಜ್ಞಾವಿಧಿ ಕಾರ್ಯಕ್ರಮವನ್ನು ಶುಕ್ರವಾರ ಆಯೋಜಿಸಲಾಗಿತ್ತು.

ಆಪರೇಷನ್ ತೂಫಾನ್‌ಗೆ ಬೆಂಬಲ

ರಾಜ್ಯ ಸರಕಾರದ ಆಪರೇಷನ್ ತೂಫಾನ್‌ಗೆ ಬೆಂಬಲ ಸೂಚಿಸಿ ನಡೆಸಲಾದ ಈ ಮ್ಯಾರಥಾನ್ ಕಾರ್ಯಕ್ರಮವು ಕಾಸರಗೋಡು ಹೊಸ ಬಸ್ ನಿಲ್ದಾಣದಿಂದ ಆರಂಭಗೊಂಡು ವಿದ್ಯಾನಗರದ ಚಿನ್ಮಯ ಕ್ಯಾಂಪಸ್‌ನಲ್ಲಿ ಮುಕ್ತಾಯಗೊಂಡಿತು. ಹೊಸ ಬಸ್ ನಿಲ್ದಾಣದಲ್ಲಿ ಕಾಸರಗೋಡು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಎಂ. ದೇವದಾಸನ್ ಹಾಗೂ ಎಕ್ಸೈಸ್ ಅಸಿಸ್ಟೆಂಟ್ ಕಮಿಷನರ್ ಮತ್ತು ವಿಮುಕ್ತಿ ಮೆನೇಜರ್ ಅಶ್ರಫ್ ಸಾದತ್ ಅವರು ಜಂಟಿಯಾಗಿ ಹಸಿರು ನಿಶಾನೆ ತೋರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಚಿನ್ಮಯ ವಿದ್ಯಾಲಯದ ಪ್ರಾಂಶುಪಾಲ ಟಿ.ವಿ. ಸುಕುಮಾರನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಚಾರಿಣಿ ದಿಶಾ ಚೈತನ್ಯ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ವಿ.ಗಣೇಶ್ ಪ್ರಭು, ಕೆ. ಬಾಲಚಂದ್ರನ್, ಎ. ಮುರಳೀಧರನ್, ಅಭಿಜಿತ್, ಪ್ರಿಯಾಂಕಾ ಪಿ., ನಿಖಿಲೇಶ್ ವಿ., ಗಣೇಶ್ ಪಿ. ಮತ್ತು ಸುಚಿತ್ರಾ ಪಿಳ್ಳೆ ಮುಂತಾದವರು ಮಾತನಾಡಿದರು. ಚಿನ್ಮಯ ವಿದ್ಯಾಲಯದಲ್ಲಿ ನಡೆದ ಸಮಾರೋಪದಲ್ಲಿ ಸ್ವಾಮಿ ವಿವಿಕ್ತಾನಂದ ಸರಸ್ವತೀ ಆಶೀರ್ವಚನ ನೀಡಿದರು.

ತಿರುವನಂತಪುರ ಬಿಜೆಪಿ ಮೇಯರ್, ಸದಸ್ಯರ ಮೇಲೆ ಸಿಪಿಎಂ ದಾಳಿ: ಖಂಡನೆ



ಕುಂಬಳೆ: ತಿರುವನಂತಪುರ ಕಾರ್ಪೋರೇಷನ್ ಮೇಯರ್ ಮತ್ತು ಇತರ ಬಿಜೆಪಿ ಕೌನ್ಸಿಲರ್‌ಗಳ ಮೇಲೆ ಸಿಪಿಎಂ ನಡೆಸಿದ ದಾಳಿಯನ್ನು ಪ್ರಬಲವಾಗಿ ಖಂಡಿಸಿ ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿ ನೇತೃತ್ವದಲ್ಲಿ ಕುಂಬಳೆ ಪೇಟೆಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಶುಕ್ರವಾರ ಹಮ್ಮಿಕೊಳ್ಳಲಾಯಿತು.

ಬಿಜೆಪಿ ಕಾಸರಗೋಡು ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಯಾದವ್ ಪ್ರತಿಭಟನೆಯನ್ನು ಉದ್ಘಾಟಿಸಿ, ಸಿಪಿಎಂ ಮತ್ತು ಡಿವೈಎಫ್ಐ ನಡೆಸಿದ ಭ್ರಷ್ಟಾಚಾರ ಬಹಿರಂಗಗೊಳ್ಳುವ ಭಯದಿಂದ ಮತ್ತು ಮುಂದಿನ ದಿನಗಳಲ್ಲಿ ತಿರುವನಂತಪುರ ಮೇಯರ್ ವಿ.ವಿ.ರಾಜೇಶ್ ಅವರು ಇನ್ನೂ ಹೆಚ್ಚಿನ ಜನಪರ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಸಿಪಿಎಂ ಪಕ್ಷಕ್ಕೆ ಉಳಿಗಾಲವಿಲ್ಲ ಎಂಬುದನ್ನರಿತು ಇಂತಹ ದುಷ್ಕೃತ್ಯಗಳಿಗೆ ತಂತ್ರ ರೂಪಿಸಲಾಗಿದೆ ಎಂದು ಆರೋಪಿಸಿದರು.

ಸಿಪಿಎಂ ಪಕ್ಷ ಮತ್ತು ಡಿವೈಎಫ್ಐ ಸಂಘಟನೆಯ ಈ ನೀಚ ಕೃತ್ಯಗಳಿಗೆ ಬಿಜೆಪಿ ಯಾವತ್ತೂ ಹೆದರುವುದಿಲ್ಲ. ಕೇಂದ್ರದಲ್ಲಿ ನರೇಂದ್ರ ಮೋದಿ ಸರಕಾರ ಇದೆ ಎಂಬುದನ್ನು ಸಿಪಿಎಂ ನೆನಪಿಸಿಕೊಳ್ಳುವುದು ಒಳಿತು. ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಪ್ರಬಲವಾಗಿ ಪ್ರವರ್ಧಮಾನ ಹೊಂದುತ್ತಿದೆ ಎಂದರು.

ಕುಂಬಳೆ ಪಂಚಾಯತ್ ಬಿಜೆಪಿ ಸಮಿತಿಗಳ ಅಧ್ಯಕ್ಷರಾದ ಕೆ.ಸುಜಿತ್ ರೈ, ಶಿವಪ್ರಸಾದ್ ರೈ ಮತ್ತು ಉಪಾಧ್ಯಕ್ಷ ರಾಜೇಶ್ ರೈ ಉಜಾರು, ಪ್ರಧಾನ ಕಾರ್ಯದರ್ಶಿ ವಿವೇಕಾನಂದ ಶೆಟ್ಟಿ ಮಂಡಲ ಉಪಾಧ್ಯಕ್ಷ ಬಿ.ವಿಕ್ರಂ ಪೈ ಒಬಿಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಮುಜುಂಗಾವು, ಜನಪ್ರತಿನಿಧಿಗಳಾದ ಕೆ. ರಮೇಶ್ ಭಟ್, ಅಜಿತ್‌ಕುಮಾರ್, ಕಾಂಚಾನ ಮತ್ತು ವಿದ್ಯಾ ಎನ್.ಪೈ, ಶ್ರೀಮತಿ ನಾಯ್ಕಾಪು, ಸತೀಶ, ಜಗದೀಶ್ ಪೇರಾಲ್, ಜಯರಾಮ, ಬಿಎಂಎಸ್ ಅಧ್ಯಕ್ಷ ದಿವಾಕರ ರೈ, ಉಪಾಧ್ಯಕ್ಷ ಭೋಜರಾಜ್ ಬೆದ್ರಡ್ಕ ಚಂದ್ರಶೇಖರ ಮತ್ತಿತರರು ಭಾಗವಹಿಸಿದ್ದರು. ಕೆ.ವಿನೋದನ್ ಕಡಪ್ಪುರ ಸ್ವಾಗತಿಸಿ, ಶಶಿ ಕುಂಬಳೆ ವಂದಿಸಿದರು.

ಪಿಂಚಣಿದಾರರ ಮಹಾಸಂಘದ ಕಾಸರಗೋಡು ಜಿಲ್ಲಾ ಸಮಾವೇಶ



ಕಾಸರಗೋಡು: ಭಾರತೀಯ ರಾಜ್ಯ ಪಿಂಚಣಿದಾರರ ಮಹಾಸಂಘ (ಬಿಆರ್‌ಪಿಎಂಎಸ್) ಕಾಸರಗೋಡು ಜಿಲ್ಲಾ ಸಮ್ಮೇಳನ ಮತ್ತು ಕುಟುಂಬ ಪುನರ್ಮಿಲನ ಕಾರ್ಯಕ್ರಮವು ಚಟ್ಟಂಚಾಲ್ ಶ್ರೀ ದುರ್ಗಾಪರಮೇಶ್ವರಿ ದೇವಳದ ಸಭಾಂಗಣದಲ್ಲಿ ಜರಗಿತು.

ಭಾರತೀಯ ರಾಜ್ಯ ಪಿಂಚಣಿದಾರರ ಮಹಾಸಂಘದ ರಾಷ್ಟ್ರಾಧ್ಯಕ್ಷ ಎಂ. ವಿಜಯಕುಮಾರ್ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಜಿಲ್ಲಾಧ್ಯಕ್ಷ ಕೆ.ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕ್ ಎ.ಸಿ. ಗೋಪಿನಾಥ್ ಮುಖ್ಯ ಭಾಷಣ ಮಾಡಿದರು. ಬಿಆರ್‌ಪಿಎಂಎಸ್ ಮುಖಂಡರಾದ ಸಿ.ಎಚ್.ಸುರೇಶ್, ಕೆ. ದಯಾನಂದ ಮುಜುಂಗಾವು, ರಾಜಲಕ್ಷ್ಮಿ, ಕುಂಞಮ್ಮ ಪಿ.ಆರ್. ಮುರಳೀಧರನ್, ಎಸ್.ಎಸ್. ಸುರೇಶ್ ಕುಮಾರ್, ರಘು ಕುಮಾರನ್ ನಾಯರ್, ಕೆ.ಕೃಷ್ಣನ್ ಕುಟ್ಟಿ ರವೀಂದ್ರನ್ ಚಾತಂಗೈ, ಎ. ಮುರಳೀಧರನ್, ಕೆ.ಮಾಧವನ್ ನಾಯರ್, ಕೆ.ಎಂ.ಮಾಧವ ಭಟ್, ಬೇಬಿ, ಉಮಾದೇವಿ, ಎ.ಬಾಲಕೃಷ್ಣನ್ ಮುಂತಾದವರು ಮಾತನಾಡಿದರು.

ಬಿಆರ್‌ಪಿಎಂಎಸ್ ಜಿಲ್ಲಾ ಕಾರ್ಯದರ್ಶಿ ಕೆ.ಶ್ರೀಕಂಠನ್ ನಾಯರ್ ಸ್ವಾಗತಿಸಿ, ಜಿಲ್ಲಾ ಜೊತೆಕಾರ್ಯದರ್ಶಿ ಪಿ.ಪ್ರದೀಪ್‌ಕುಮಾರ್ ವಂದಿಸಿದರು.

ಮಂಜೇಶ್ವರ: ದಿವ್ಯಾಂಗ ವಿದ್ಯಾರ್ಥಿಗಳ ಪೋಷಕರಿಗೆ ಕೊಡೆ ತಯಾರಿಕಾ ತರಬೇತಿ



ಮಂಜೇಶ್ವರ: ದಿವ್ಯಾಂಗ (ವಿಭಿನ್ನ ಸಾಮರ್ಥ್ಯ) ವಿದ್ಯಾರ್ಥಿಗಳ ಪೋಷಕರಿಗೆ ಕೌಶಲ್ಯಾಭಿವೃದ್ಧಿ ಹಾಗೂ ಸ್ವಯಂ ಉದ್ಯೋಗದ ಅವಕಾಶಗಳನ್ನು ಕಲ್ಪಿಸುವ ಉದ್ದೇಶದೊಂದಿಗೆ ಮಂಜೇಶ್ವರ ಬಿಆರ್‌ಸಿ ವತಿಯಿಂದ ಕೊಡೆ ತಯಾರಿಕಾ ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು.

ಮಂಜೇಶ್ವರ ಬಿಆರ್‌ಸಿ ಸಭಾಂಗಣದಲ್ಲಿ ನಡೆದ ತರಬೇತಿ ಕಾರ್ಯಕ್ರಮವನ್ನು ಮಂಗಲ್ಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಮಾನ್ ಉದ್ಘಾಟಿಸಿ ಮಾತನಾಡಿದರು. ಮಂಜೇಶ್ವರ ಎಇಒ ನಾರಾಯಣ ಡಿ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಂದರ್ಭ ಮಾಜಿ ಎಇಒ ಜಾರ್ಜ್ ಕ್ರಾಸ್ತಾ ಸಿ.ಎಚ್., ಎಚ್‌ಎಂ ಫೋರಂ ಸಂಚಾಲಕ ಸತ್ಯಪ್ರಕಾಶ್, ಡಯಟ್ ಫ್ಯಾಕಲ್ಟಿ ಡಾ.ಸಿದ್ದೀಕ್ ಅಸ್ಲಂ, ವಾರ್ಡ್ ಸದಸ್ಯೆ ನಸಿಯಾ ಅಜೀಜ್, ಮುಳಿಂಜ ಜಿಎಲ್‌ಪಿ ಶಾಲೆಯ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ ಉಪಸ್ಥಿತರಿದ್ದರು.

ದಿವ್ಯಾಂಗ ವಲಯದ ವಿದ್ಯಾರ್ಥಿಗಳ ಪೋಷಕರಿಗೆ ಆದಾಯದ ಮೂಲಗಳನ್ನು ಕಂಡುಹಿಡಿಯಲು ಹಾಗೂ ಸ್ವಾವಲಂಬನೆ ಸಾಧಿಸಲು ನೆರವಾಗುವ ಉದ್ದೇಶದಿಂದ ಈ ತರಬೇತಿಯನ್ನು ಆಯೋಜಿಸಲಾಗಿತ್ತು. ಬಿಆರ್‌ಸಿ ಶಿಕ್ಷಕಿಯರಾದ ಬಿಂದು ಮತ್ತು ಸರೋಜಿನಿ ತರಬೇತಿಗೆ ನೇತೃತ್ವ ವಹಿಸಿದ್ದರು. ಮಂಜೇಶ್ವರ ಬಿಪಿಸಿ ರಾಜಗೋಪಾಲನ್ ಪಿ. ಸ್ವಾಗತಿಸಿ, ವಂದಿಸಿದರು.

ತರಬೇತಿಯಲ್ಲಿ ಭಾಗವಹಿಸಿದ ತಾಯಂದಿರು ಒಟ್ಟು 25 ಕೊಡೆಗಳನ್ನು ತಯಾರಿಸಿದರು. ಈ ತರಬೇತಿಯ ಮೂಲಕ ಪೋಷಕರು ಹೊಸ ಉದ್ಯೋಗಾವಕಾಶಗಳನ್ನು ಕಂಡುಹಿಡಿದು ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿದೆ ಎಂಬ ನಿರೀಕ್ಷೆಯನ್ನು ಬಿಆರ್‌ಸಿ ಅಧಿಕಾರಿಗಳು ವ್ಯಕ್ತಪಡಿಸಿದರು.

ಕಾಸರಗೋಡಿನಲ್ಲಿ ಕೇರಳ ಗೆಜೆಟೆಡ್ ಆಫೀಸರ್ಸ್ ಸಂಘದ ಜಿಲ್ಲಾ ಸಮ್ಮೇಳನ



ಕಾಸರಗೋಡು: ಕೇರಳ ಗೆಜೆಟೆಡ್ ಆಫೀಸರ್ಸ್ ಸಂಘ (ಕೆಜಿಒ) ಜಿಲ್ಲಾ ಸಮ್ಮೇಳನವನ್ನು ಕಾಸರಗೋಡಿನ ಎನ್‌ಜಿಒ ಸಂಘ ಸಭಾಂಗಣದಲ್ಲಿ ರಾಜ್ಯ ಸಮಿತಿ ಸದಸ್ಯ ಕೆ.ರಾಜನ್ ಉದ್ಘಾಟಿಸಿದರು.

ಜಿಲ್ಲಾಧ್ಯಕ್ಷ ಎನ್.ಟಿ. ತುಳಸೀಧರನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎನ್‌ಜಿಒ ಸಂಘ ಜಿಲ್ಲಾಧ್ಯಕ್ಷ ಕೆ.ರಂಜಿತ್ ಮಾಣಿಕೋತ್, ಫೆಟೊ (ಎಫ್‌ಇಟಿಒ) ಜಿಲ್ಲಾ ಕಾರ್ಯದರ್ಶಿ ಕೆ.ರಾಜೇಶ್‌ಕುಮಾರ್, ಪೆನ್ಶನರ್ಸ್ ಸಂಘ ಬ್ಲಾಕ್ ಕಾರ್ಯದರ್ಶಿ ರಾಜೇಂದ್ರ ಕುಂಟಾರ್ ಹಾಗೂ ಕೆಜಿಒ ರಾಜ್ಯ ಕಾರ್ಯ ದರ್ಶಿ ಕೆ. ಕೌಶಿಕ್ ಮುಂತಾದವರು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಕೆ. ಕರುಣಾಕರ ಸ್ವಾಗತಿಸಿ, ಜಿಲ್ಲಾ ಕೋಶಾಧಿಕಾರಿ ಪಿ.ಬಾಲಸುಬ್ರಹ್ಮಣ್ಯ ವಂದಿಸಿದರು.

2024 ಜುಲೈ ತಿಂಗಳಿನಿಂದ ಲಭ್ಯವಾಗಬೇಕಿದ್ದ ವೇತನ ಪರಿಷ್ಕರಣೆಯನ್ನು ಎರಡು ವರ್ಷಗಳಾದರೂ ಜಾರಿಗೊಳಿಸದಿರುವುದು ನೌಕರರಿಗೆ ಮಾಡಿದ ವಂಚನೆಯಾಗಿದೆ. ಪಿಣರಾಯಿ ಸರಕಾರದ ಕೊನೆಯ ಅವಧಿಯಲ್ಲಿ ವೇತನ ಪರಿಷ್ಕರಣಾ ಆಯೋಗವನ್ನು ನೇಮಿಸಿ 3 ತಿಂಗಳ ಕಾಲಾವಕಾಶ ನೀಡಲಾಗಿತ್ತಾದರೂ, ಆಯೋಗವು ವರದಿಯನ್ನು ಸಲ್ಲಿಸಿಲ್ಲ ಅಥವಾ ಆಯೋಗದ ಅವಧಿಯನ್ನು ವಿಸ್ತರಿಸಿಲ್ಲ, ಆದ್ದರಿಂದ ತಕ್ಷಣವೇ ವೇತನ ಪರಿಷ್ಕರಣೆಯನ್ನು ಜಾರಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಇದರೊಂದಿಗೆ ತುಟ್ಟಿಭತ್ಯೆ (ಡಿಎ) ಬಾಕಿಯನ್ನು ಮಂಜೂರು ಮಾಡಬೇಕು, ಆಸ್ಪತ್ರೆಯಲ್ಲಿ ಲಭ್ಯವಿರುವ ಎಲ್ಲಾ ಚಿಕಿತ್ಸೆಗಳು ದೊರೆಯುವಂತೆ ಮೆಡಿಸೆಪ್ ಯೋಜನೆಯನ್ನು ಪರಿಷ್ಕರಿಸಬೇಕು ಮತ್ತು ಎನ್‌ಪಿಎಸ್ ಯೋಜನೆಯನ್ನು ಹಿಂಪಡೆಯಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಸಮ್ಮೇಳನವು ಠರಾವು ಮೂಲಕ ಒತ್ತಾಯಿಸಿದೆ.

ಉಪ್ಪಳ ಪೇಟೆಯಲ್ಲಿ ಮಾದಕ ವಸ್ತು ವಿರೋಧಿ ಕಾರ್ಯಕ್ರಮ ಆಯೋಜನೆ



ಮಂಜೇಶ್ವರ: ರಾಜ್ಯ ಸರಕಾರವು ಮಾದಕ ವಸ್ತುಗಳ ವಿರುದ್ಧ ನಡೆಸುತ್ತಿರುವ ಆಪರೇಶನ್ ತೂಫಾನ್ ಯೋಜನೆಗೆ ಬೆಂಬಲ ಸೂಚಿಸುವ ಉದ್ದೇಶದಿಂದ ಕೇರಳ ಅರೇಬಿಕ್ ಟೀಚರ್ಸ್ ಫೆಡರೇಷನ್ (ಕೆಎಟಿಎಫ್) ಮಂಜೇಶ್ವರ ಉಪ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಉಪ್ಪಳ ಪೇಟೆಯಲ್ಲಿ ಮಾದಕವಸ್ತು ವಿರೋಧಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಹೆಚ್ಚುತ್ತಿರುವ ಮಾದಕ ವಸ್ತುಗಳ ದುರುಪಯೋಗದ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಕಾರ್ಯಕ್ರಮವನ್ನು ಮಂಗಲ್ಪಾಡಿ ಗ್ರಾ. ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಮಾನ್ ಉದ್ಘಾಟಿಸಿ, ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣಕ್ಕಾಗಿ ಶಿಕ್ಷಕರು, ಪೋಷಕರು ಹಾಗೂ ಸಾರ್ವಜನಿಕರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು.

ಕೆಎಟಿಎಫ್ ಉಪಜಿಲ್ಲಾ ಅಧ್ಯಕ್ಷ ಇಬ್ರಾಹಿಂ ಕರೀಂ ಉಪ್ಪಳ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ. ಸ್ಥಾಯೀ ಸಮಿತಿ ಅಧ್ಯಕ್ಷೆ ಇರ್ಫಾನ ಇಕ್ಬಾಲ್ ಅತಿಥಿಯಾಗಿದ್ದರು. ಮಂಜೇಶ್ವರ ಬಿಆರ್‌ಸಿ ಸಂಯೋಜಕ ರಾಜಗೋಪಾಲ್ ಮಾಸ್ಟರ್ ಮಾದಕ ವಸ್ತು ವಿರೋಧಿ ಪ್ರತಿಜ್ಞಾ ವಿಧಿ ಬೋಧಿಸಿದರು.


ಕೆಎಟಿಎಫ್ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಯಹ್ಯಾಖಾನ್ ಮಾಸ್ಟರ್, ಮುಳಿಂಜ ಜಿಎಲ್‌ಪಿ ಶಾಲಾ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ, ಕೆ.ಕೆ.ಪಿ.ಅಬ್ದುಲ್ಲ, ರಿಯಾಝ್ ವಾಫಿ, ಬಶೀರ್ ಮಾಸ್ಟರ್ ಕಳಿಯೂರು, ಆಸಿಫ್ ಮಾಸ್ಟರ್ ಕಾಯರ್‌ಕಟ್ಟೆ, ಸಿರಾಜ್ ಮಾಸ್ಟರ್ ಕೊಡಿವಯಲ್, ಸಾಬಿದಾ ಟೀಚರ್ ಸೇರಿದಂತೆ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕೆಎಟಿಎಫ್ ಮಂಜೇಶ್ವರ ಉಪಜಿಲ್ಲಾ ಕಾರ್ಯದರ್ಶಿ ಶಾಹಿದ್ ಉಪ್ಪಳ ಸ್ವಾಗತಿಸಿ, ಕೋಶಾಧಿಕಾರಿ ಸಿದ್ದೀಕ್ ಪೆರೋಡಿ ವಂದಿಸಿದರು.

ಬದಿಯಡ್ಕದಲ್ಲಿ ಮಾದಕ ದ್ರವ್ಯ ವಿರೋಧಿ ಜಾಗೃತಿ ರ್‍ಯಾಲಿ ಉದ್ಘಾಟನೆ | ಗ್ರಾ.ಪಂ. ಅಧ್ಯಕ್ಷ ಶಂಕರ ಡಿ. ಅಭಿಪ್ರಾಯ

ಮಾದಕ ವ್ಯಸನಿಗಳು ಸಮಾಜಕ್ಕೆ ಮಾತ್ರವಲ್ಲ, ಇಡೀ ಕುಟುಂಬಕ್ಕೆ ಮಾರಕ

ಬದಿಯಡ್ಕ: ಮಾದಕ ದ್ರವ್ಯ ಅಥವಾ ಡ್ರಗ್ಸ್ ಎಂಬುದು ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರ ನಾಶ ಮಾಡುವುದಿಲ್ಲ ಬದಲಾಗಿ ಅದು ಇಡೀ ಕುಟುಂಬವನ್ನು ಬೀದಿಗೆ ತರುತ್ತದೆ ಮತ್ತು ಸಮಾಜದ ಶಾಂತಿಯನ್ನು ಕೆಡಿಸುತ್ತದೆ. ಇಂದು ನಮ್ಮ ದೇಶದ ಅತಿ ದೊಡ್ಡ ಆಸ್ತಿ ಎಂದರೆ ಯುವಶಕ್ತಿ. ಆದರೆ ಈ ಯುವ ಶಕ್ತಿಯನ್ನು ದಾರಿ ತಪ್ಪಿಸಲು ಕೆಲವು ದುಷ್ಟ ಶಕ್ತಿಗಳು ಇದರ ಜಾಲವನ್ನು ಹರಡುತ್ತಿವೆ. ಇದಕ್ಕೆ ಬದಿಯಡ್ಕದ ಯಾವುದೇ ಕುಟುಂಬ ಬಲಿಯಾಗಲು ಬಿಡುವುದಿಲ್ಲ ಎಂದು ಪ್ರತಿಜ್ಞೆ ತೊಡಬೇಕಾಗಿದೆ ಎಂದು ಬದಿಯಡ್ಕ ಗ್ರಾ. ಪಂ. ಅಧ್ಯಕ್ಷ ಶಂಕರ ಡಿ. ಹೇಳಿದ್ದಾರೆ.



ಬದಿಯಡ್ಕ ಗ್ರಾ. ಪಂ., ಬದಿಯಡ್ಕ ಪೊಲೀಸ್ ಠಾಣೆ, ಎಸ್‌ಪಿಸಿ ಮತ್ತು ಎನ್‌ಸಿಸಿ ಘಟಕ ನವಜೀವನ ಶಾಲೆ ಪೆರಡಾಲ, ಪೆರಡಾಲ ಸರಕಾರಿ ಶಾಲೆ, ಶ್ರೀ ಭಾರತೀ ವಿದ್ಯಾಪೀಠ ಬದಿಯಡ್ಕ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳು, ವ್ಯಾಪಾರಿ ಸದಸ್ಯರು, ಸಾರ್ವಜನಿಕರ ಪಾಲ್ಗೊಳ್ಳುವಿಕೆಯೊಂದಿಗೆ ಬದಿಯಡ್ಕದಲ್ಲಿ ಶುಕ್ರವಾರ ಜರಗಿದ ಮಾದಕ ದ್ರವ್ಯ ವಿರೋಧಿ ದಿನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬದಿಯಡ್ಕ ಗ್ರಾ.ಪಂ. ವ್ಯಾಪ್ತಿಯಲ್ಲಿ ಹಮ್ಮಿಕೊಂಡಿರುವ ಈ ಮಾದಕ ದ್ರವ್ಯ ವಿರೋಧಿ ಜಾಗೃತಿ ರ್‍ಯಾಲಿ ಕೇವಲ ಒಂದು ಕಾರ್ಯಕ್ರಮವಲ್ಲ, ಇದು ನಮ್ಮ ಭವಿಷ್ಯವನ್ನು, ನಮ್ಮ ಮಕ್ಕಳನ್ನು ಮತ್ತು ನಮ್ಮ ಸಮಾಜವನ್ನು ಉಳಿಸಿಕೊಳ್ಳಲು ನಾವು ಒಟ್ಟಾಗಿ ಹೂಡಿರುವ ಒಂದು ಯುದ್ಧ ಎಂದು ಅವರು ನುಡಿದರು.

ಸರ್ಕಲ್ ಇನ್‌ಸ್ಪೆಕ್ಟರ್ ಅನೂಪ್‌ಕೃಷ್ಣ ಪ್ರಾಸ್ತಾವಿಕ ಮಾತುಗಳನ್ನಾಡಿ, ಮಾದಕ ದ್ರವ್ಯಗಳ ಜಾಲವು ಹದಿಹರೆಯದವರನ್ನು ಸುಲಭವಾಗಿ ಆಕರ್ಷಿಸುತ್ತದೆ. ಕೇವಲ ಒಂದು ಬಾರಿಯ ಮೋಜು ಇಡೀ ಜೀವನದ ಕತ್ತಲೆಗೆ ಕಾರಣವಾಗಬಹುದು. ನಿಮ್ಮ ಮಕ್ಕಳ ನಡವಳಿಕೆಯಲ್ಲಿ ಹಠಾತ್ ಬದಲಾವಣೆಗಳು ಕಂಡು ಬಂದರೆ ಅವರ ಸ್ನೇಹಿತರ ಬಳಗ ಯಾರೆಂದು ಗಮನಿಸಿರಿ. ನಿಮ್ಮ ಆಸುಪಾಸಿನಲ್ಲಿ ಎಲ್ಲಿಯಾದರೂ ಮಾದಕ ವಸ್ತುಗಳ ಮಾರಾಟ ಅಥವಾ ಬಳಕೆ ಕಂಡು ಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರು.

ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ಎ., ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಬದಿಯಡ್ಕ ಘಟಕದ ಅಧ್ಯಕ್ಷ ನರೇಂದ್ರ ಬಿ.ಎನ್., ಕಾರ್ಯದರ್ಶಿ ರವಿ ನವಶಕ್ತಿ, ಪಂಚಾಯತ್‌ನ ಆರೋಗ್ಯ ಅಧಿಕಾರಿ ಬಾಬುರಾಜ್ ಎ. ಮಾತನಾಡಿದರು.

ಗ್ರಾ.ಪಂ. ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಕಡಾರು, ಗಂಗಾಧರ ಗೋಳಿಯಡ್ಕ, ಶ್ಯಾಮಪ್ರಸಾದ ಮಾನ್ಯ, ಮಧುಸೂದನ ಕಂಗಿಲ, ಶ್ಯಾಮಪ್ರಸಾದ ಸರಳಿ, ಅನ್ವರ್ ಬೀಎ, ಉಷಾ ಪಳ್ಳತ್ತಡ್ಕ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಮಾದಕ ದ್ರವ್ಯದ ವಿರುದ್ಧ ಪ್ರತಿಜ್ಞೆ ಕೈಗೊಳ್ಳಲಾಯಿತು. ಬದಿಯಡ್ಕ ಪೊಲೀಸ್ ಠಾಣಾಧಿಕಾರಿಗಳಾದ ಸುಕುಮಾರನ್ ಸ್ವಾಗತಿಸಿ, ರೂಪೇಶ್ ವಂದಿಸಿದರು. ಬದಿಯಡ್ಕ ಪೇಟೆಯಲ್ಲಿ ಜಾಗೃತಿ ಸಂದೇಶ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಯಿತು.

‘ತಿಂಗಳ ಅಂಗಳ’ ಸಂವಾದ | ಹಿರಿಯ ಭೂ ವಿಜ್ಞಾನಿ ಡಾ. ದಿನಕರ ಶೆಟ್ಟಿ ಕಳವಳ

ಉಡುಪಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ 5 ಅಡಿ ಕುಸಿತ!

ಉಡುಪಿ: ಉಡುಪಿ ಜಿಲ್ಲಾದ್ಯಂತ ಅಂತರ್ಜಲ ಮಟ್ಟವು ಸುಮಾರು 1.5 ಮೀಟರ್ (ಅಂದರೆ 5 ಅಡಿ) ನಷ್ಟು ಕೆಳಗೆ ಇಳಿದಿದೆ ಎಂದು ಉಡುಪಿ ಅಂತರ್ಜಲ ನಿರ್ದೇಶನಾಲಯದ ಹಿರಿಯ ಭೂ ವಿಜ್ಞಾನಿ ಡಾ. ದಿನಕರ ಶೆಟ್ಟಿ ಕಳವಳ ವ್ಯಕ್ತಪಡಿಸಿದ್ದಾರೆ.
ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ, ಉಡುಪಿ ಪತ್ರಿಕಾ ಭವನ ಸಮಿತಿಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ‘ತಿಂಗಳ ಅಂಗಳ’ ಸಂವಾದ ಹಾಗೂ ‘ಸನ್ಮತಿ’ ಪತ್ರಿಕೆಯ ಮೇ ತಿಂಗಳ ಸಂಚಿಕೆ ಬಿಡುಗಡೆ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

ಎಲ್ ನಿನೋ ಪರಿಣಾಮ , ಮಳೆ ಕೊರತೆ

ಪೆಸಿಫಿಕ್ ಸಮುದ್ರದಲ್ಲಿ ಉಂಟಾಗಿರುವ ‘ಎಲ್ ನಿನೋ’ ಹವಾಮಾನ ವೈಪರಿತ್ಯದ ಪರಿಣಾಮದಿಂದಾಗಿ ಈ ಬಾರಿ ತೀವ್ರ ಮಳೆ ಕೊರತೆ ಎದುರಾಗಿದೆ. 1950 ರಿಂದ 2025 ರವರೆಗೆ ಒಟ್ಟು 25 ಬಾರಿ ಎಲ್ ನಿನೋ ಸಂಭವಿಸಿದ್ದು, ಆದರಲ್ಲಿ 4 ಬಾರಿ ತೀವ್ರ ಮಳೆ ಕೊರತೆಯಾಗಿತ್ತು. ಈ ಬಾರಿಯೂ ಅದೇ ರೀತಿಯ ಲಕ್ಷಣಗಳು ಗೋಚರಿಸುತ್ತಿವೆ ಎಂದು ಎಚ್ಚರಿಸಿದರು.



ಮಳೆ ನೀರು ಕೊಯ್ಲು ಹಾಗೂ ಮರುಪೂರಣ ಅನಿವಾರ್ಯ

ಇಡೀ ಪ್ರಪಂಚದಲ್ಲಿರುವ ಒಟ್ಟು ನೀರಿನಲ್ಲಿ ಕೇವಲ ಶೇ.3 ಮಾತ್ರ ಶುದ್ಧ ಕುಡಿಯುವ ನೀರಾಗಿದೆ. ಆದರಲ್ಲಿ ನಾವು ಕೇವಲ ಶೇ.1 ನಷ್ಟು ನೀರನ್ನು ಮಾತ್ರ ಬಳಸಲು ಸಾಧ್ಯವಾಗುತ್ತಿದೆ. 5 ಜನ ಸದಸ್ಯರಿರುವ ಒಂದು ಕುಟುಂಬಕ್ಕೆ ವಾರ್ಷಿಕವಾಗಿ ಸುಮಾರು 2 ಲಕ್ಷ ಲೀಟರ್ ನೀರು ಬೇಕಾಗುತ್ತದೆ. ಸಾರ್ವಜನಿಕರು ತಮ್ಮ ಮನೆಯ ಛಾವಣಿಯ ಮೂಲಕ ಬೀಳುವ ಮಳೆ ನೀರನ್ನು ಬೋರ್‌ವೆಲ್ ಅಥವಾ ಇಂಗುಗುಂಡಿಗಳ ಮೂಲಕ ಮರುಪೂರಣ (ರಿಚಾರ್ಜ್) ಮಾಡಿದರೆ, ವಾರ್ಷಿಕ 2.70 ಲಕ್ಷ ಲೀಟರ್‌ನಷ್ಟು ನೀರನ್ನು ಸುಲಭವಾಗಿ ಸಂಗ್ರಹಿಸಬಹುದು. ಆದ್ದರಿಂದ ಮಳೆಗಾಲವಿರಲಿ, ಬೇಸಿಗೆಯಿರಲಿ ನೀರು ಸಂರಕ್ಷಣೆಗೆ ಪ್ರತಿಯೊಬ್ಬರೂ ಆದ್ಯತೆ ನೀಡಬೇಕು ಎಂದರು. ಪತ್ರಕರ್ತರು ಪತ್ರಿಕಾ ಭವನದ ಆವರಣದಲ್ಲಿ ಸಸಿ ನೆಟ್ಟು ಅಂತರ್ಜಲವೃದ್ಧಿಗೆ ಕೈಜೋಡಿಸಿರುವುದನ್ನು ಅವರು ಶ್ಲಾಘಿಸಿದರು.
ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಕುರ್ಯ ವಹಿಸಿದ್ದರು. ಉಡುಪಿ ಪತ್ರಿಕಾ ಭವನ ಸಮಿತಿಯ ಸಂಚಾಲಕ ಅಂಕಿತ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಝೀರ್ ಪೊಲ್ಯ ಸ್ವಾಗತಿಸಿದರು, ಉಮೇಶ್ ಮಾರ್ಪಳ್ಳಿ ವಂದಿಸಿದರು. ಪತ್ರಕರ್ತ ರಹೀಂ ಉಜಿರೆ ಇಡೀ ನಿರೂಪಿಸಿದರು.

ನೀರು ಮರುಪೂರಣಕ್ಕೆ ಸೂಚನೆ

- ದಿನನಿತ್ಯದ ಬಳಕೆಯಲ್ಲಿ ನೀರನ್ನು ಮಿತವಾಗಿ ಬಳಸಬೇಕು. ಕೃಷಿ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಪದ್ಧತಿ ಬದಿಗೆ ಸರಿಸಿ ತುಂತುರು , ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಬೇಕು.
- ಒಮ್ಮೆ ಬಳಸಿದ ನೀರನ್ನು ಗಿಡಗಳಿಗೆ ಅಥವಾ ಇತರೆ ಗೃಹ ಬಳಕೆಯ ಕೆಲಸಗಳಿಗೆ ಮರುಬಳಕೆ ಮಾಡಬೇಕು
- ಬಳಸಿದ ಕಲುಷಿತ ನೀರನ್ನು ಸಣ್ಣ ಮಟ್ಟದ ಸಂಸ್ಕರಣೆ , ಶುದ್ಧೀಕರಣದ ಮೂಲಕ ಮರುಬಳಕೆಗೆ ಯೋಗ್ಯವಾಗಿಸುವುದು.
- ಓಡುವ ನೀರನ್ನು ನಡೆಯುವಂತೆ ಮಾಡಿ, ನಡೆಯುವ ನೀರನ್ನು ನಿಲ್ಲುವಂತೆ ಮಾಡಿ, ನಿಲ್ಲುವ ನೀರನ್ನು ಭೂಮಿಯಲ್ಲಿ ಇಂಗುವಂತೆ ಮಾಡಿದರೆ" ನೀರನ್ನು ಶಾಶ್ವತವಾಗಿ ಉಳಿಸಿದಂತೆ.
- ನೀರನ್ನು ಪೋಲು ಮಾಡಬಾರದು, ಮಿತವಾಗಿ ಬಳಸಬೇಕು
- ನೀರಿನ ಮೂಲಗಳು ಕಲುಷಿತಗೊಳ್ಳದಂತೆ ತಡೆಯಬೇಕು, ಜಲಮೂಲಗಳ ಸಂರಕ್ಷಿಸಿ, ಮಳೆನೀರನ್ನು ಹಿಡಿದಿಟ್ಟುಕೊಳ್ಳುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು

ಸುತ್ತಮುತ್ತ

ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ

ಕುಂದಾಪುರ: ಜಿ.ಎಸ್.ವಿ.ಎಸ್.ಅಸೋಸಿಯೇಶನ್ ಗಂಗೊಳ್ಳಿ ಇದರ ವತಿಯಿಂದ ಗಂಗೊಳ್ಳಿಯ ಎಸ್ .ವಿ. ಪದವಿಪೂರ್ವ ಕಾಲೇಜು, ಎಸ್.ವಿ. ಕನ್ನಡ ಮಾಧ್ಯಮ ಪ್ರೌಢಶಾಲೆ, ಎಸ್.ವಿ. ಆಂಗ್ಲ ಮಾಧ್ಯಮ ಶಾಲೆ ಗಂಗೊಳ್ಳಿ ಇಲ್ಲಿನ 2025– 26ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಮ್ಮಾನ ಸಮಾರಂಭ ಕಾಲೇಜಿನ ಗುಜ್ಜಾಡಿ ಗೋಪಾಲ ನಾಯಕ್ ರೋಟರಿ ಒಳಾಂಗಣದಲ್ಲಿ ಜೂ.27ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ.
ಜಿ.ಎಸ್.ವಿ.ಎಸ್.ಅಸೋಸಿಯೇಶನ್ ಅಧ್ಯಕ್ಷ ಡಾ.ಕಾಶೀನಾಥ ಪೈ ಅಧ್ಯಕ್ಷತೆ ವಹಿಸಲಿದ್ದು, ಗಂಗೊಳ್ಳಿಯ ಉದ್ಯಮಿ ಜಿ.ವೆಂಕಟೇಶ ಶೆಣೈ ಮುಖ್ಯ ಅತಿಥಿಯಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ಪಲ್ಸ್ ಪೋಲಿಯೋ ಉದ್ಘಾಟನಾ ಸಮಾರಂಭ

ಉಡುಪಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಡುಪಿ, ರಾಷ್ಟ್ರೀಯ ಆರೋಗ್ಯ ಅಭಿಯಾನ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೋ) ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಜೂ. 28 ರಂದು ಬೆಳಗ್ಗೆ 8 ಗಂಟೆಗೆ ನಗರದ ಸರಕಾರಿ ತಾಯಿ –ಮಕ್ಕಳ ಆಸ್ಪತ್ರೆಯಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಆರೋಗ್ಯ–ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ ಖಾದರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಬಿ.ವೈ. ರಾಘವೇಂದ್ರ, ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ ಗಫೂರ್, ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ, ಶಾಸಕರುಗಳಾದ ವಿ. ಸುನಿಲ್ ಕುಮಾರ್, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ, ಗುರ್ಮೆ ಸುರೇಶ್ ಶೆಟ್ಟಿ, ವಿಧಾನಪರಿಷತ್ ಶಾಸಕರಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು , ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಉಡುಪಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರೋಹಿಣಿ ಸಿಂಧೂರಿ ದಾಸರಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಮತ್ತಿತರರು ಈ ಸಂದರ್ಭ ಭಾಗವಹಿಸಲಿದ್ದಾರೆ.

ಮಕ್ಕಳಲ್ಲಿ ನಾಯಕತ್ವ ಗುಣಗಳು ಬೆಳೆಯಬೇಕು

ಕುಂದಾಪುರ: ನಾಯಕತ್ವ ಗುಣಗಳು ನಿಮ್ಮಲ್ಲಿ ಬೆಳೆಯಬೇಕು. ಇಂದು ನೀವು ಸ್ವೀಕರಿಸಿರುವ ಈ ಹುದ್ದೆ ಸಮಾಜ ಸೇವೆಯಲ್ಲಿ ತೊಡಗುವಂತಾಗಬೇಕು. ನೀವು ವಿದ್ಯಾ ಸಂಸ್ಥೆಯಲ್ಲಿ ಮಿನುಗಬೇಕು, ನಿಮ್ಮ ಗುರಿ ಸಾಕಾರಗೊಳ್ಳಬೇಕು ಎಂದು ರೋಜರಿ ಚರ್ಚಿನ ಪ್ರಧಾನ ಧರ್ಮಗುರು ಹಾಗೂ ವಿದ್ಯಾಸಂಸ್ಥೆಗಳ ಜಂಟಿ ಕಾರ್ಯದರ್ಶಿ ಪಾವ್ಲ್ ರೇಗೊ ಹೇಳಿದರು. ಕುಂದಾಪುರದ ಸೈಂಟ್ ಮೇರಿಸ್ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಸತ್ತು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಿ ಅವರು ಮಾತನಾಡಿದರು.
ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬಸ್ರೂರು ಫಿಲಿಫ್ ನೇರಿ ಸೆಂಟ್ರಲ್ ಸ್ಕೂಲ್‌ನ ಪ್ರಾಂಶುಪಾಲ, ಧರ್ಮಗುರು ಡ್ಯಾನಿ ಸುನಿಲ್ ಮಾರ್ಟೀಸ್ ಶುಭ ಹಾರೈಸಿದರು. ಕಾಲೇಜಿನ ಪ್ರಾಂಶುಪಾಲ, ಧರ್ಮಗುರು ರೋಲ್ವಿನ್ ಫೆರ್ನಾಂಡಿಸ್, ಕಾಲೇಜಿನ ಶೈಕ್ಷಣಿಕ ಮಾರ್ಗದರ್ಶಕ ಪ್ರಾಧ್ಯಾಪಕಿ ರೇಷ್ಮಾ ಫೆರ್ನಾಂಡಿಸ್, ವಿದ್ಯಾರ್ಥಿ ನಾಯಕನಾಗಿ ಆಯ್ಕೆಯಾದ ಇಷಾನ್ ಡಿಸೋಜ ಉಪಸ್ಥಿತರಿದ್ದರು. ಉಪನ್ಯಾಸಕಿ ಕಾರ್ಯಕ್ರಮದ ಸಂಯೋಜಕಿ ಪ್ರಫುಲ್ಲಾ ಸ್ವಾಗತಿಸಿದರು, ವಿದ್ಯಾರ್ಥಿ ಪರಿಷತ್‌ನ ಕಾರ್ಯದರ್ಶಿ ಪ್ರಿನ್ಸಿಯ ಬರೆಟ್ಟೋ ವಂದಿಸಿದರು. ವಿದ್ಯಾರ್ಥಿನಿ ಜೆನೆಸ್ಸಾ ಬರೆಟ್ಟೋ ನಿರೂಪಿಸಿದರು.

ಮೊದಲನೇ ಪುಟದಿಂದ

ಸಮಸ್ಯೆ

ಹಲವು ವರ್ಷಗಳಿಂದ ಕಡಲನ್ನೇ ನಂಬಿದ ನಾಡದೋಣಿ ಮೀನುಗಾರರು ಇಂದು ಸಂಕಷ್ಟದಲ್ಲಿದ್ದಾರೆ. ದರ ದುಪ್ಪಟ್ಟಾದ ಪರಿಣಾಮ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಶೇ.70ರಷ್ಟು ನಾಡದೋಣಿಗಳು ಕಾರ್ಯ ಸ್ಥಗಿತಗೊಳಿಸಿವೆ. ಈ ವೃತ್ತಿಯನ್ನೇ ನಂಬಿದ ಸಾವಿರಾರು ಕುಟುಂಬಗಳು ಬೀದಿಗೆ ಬೀಳುವ ಭೀತಿ ಎದುರಿಸುತ್ತಿವೆ. ತಮಿಳುನಾಡಿನಲ್ಲಿ ಲೀಟರಿಗೆ 25 ರೂ., ಆಂಧ್ರದಲ್ಲಿ 25–30 ರೂ.ಗೆ ಸೀಮೆಎಣ್ಣೆ ನೀಡುತ್ತಿದ್ದರೂ ಕರ್ನಾಟಕದಲ್ಲಿ ಮಾತ್ರ ರಿಯಾಯಿತಿ ಇಲ್ಲ, ಇದು ಮಲತಾಯಿ ಧೋರಣೆ ಎಂದು ಮೀನುಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನಗರವನ ಯೋಜನೆ’

ಇನ್ನೊಂದೆಡೆ ಈ ಕಾಂಡ್ಲಾ ವನವಿರುವ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಸಹಿತ ವಿವಿಧ ಮಾಲಿನ್ಯಗಳನ್ನು ತಂದು ಸುರಿಯಲಾಗುತ್ತಿದೆ. ಅಂತಹವರನ್ನು ಗುರುತಿಸಿ ಕಾನೂನುಪರ ಕ್ರಮಗಳನ್ನು ಕೈಗೊಳ್ಳಲು ಹಲವೆಡೆಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲು ಒಪ್ಪಿಗೆ ಸೂಚಿಸಲಾಗಿದೆ. ಮಾತ್ರವಲ್ಲದೆ ಕಾಂಡ್ಲಾ ವನವಿರುವ ಚಂದ್ರಗಿರಿ ನದಿಯ ಸುತ್ತಲೂ ಕಬ್ಬಿಣದ ಬೇಲಿಯನ್ನು ನಿರ್ಮಿಸಿ ಪ್ರವಾಸಿಗರಿಗೆ ನಡೆದಾಡಲು ಅನುಕೂಲವಾಗುವಂತೆ ಸುಸಜ್ಜಿತ ಫುಟ್‌ಪಾತ್‌ಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ.

ಕೇಂದ್ರ ಯೋಜನೆ ಮನೆ ಮನೆಗೆ ತಲುಪಿಸಲು ಬೂತ್ ಸಮಿತಿಯ ಪ್ರಯತ್ನ ಅಗತ್ಯ: ಕೋಟ



ಕೋಟ: ಕುಂದಾಪುರ ವಿಧಾನಸಭಾ ಕ್ಷೇತ್ರದ ಕೋಟ ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ಕೋಟ ಹಾಗೂ ಮಣೂರು ಶಕ್ತಿ ಕೇಂದ್ರದ ಅಧ್ಯಕ್ಷ ಹಾಗೂ ಪ್ರಧಾನ ಕಾರ್ಯದರ್ಶಿ ಮತ್ತು ಬೂತ್ ಅಧ್ಯಕ್ಷರ ಆಯ್ಕೆ ಪ್ರಕ್ರಿಯ ಮಣೂರು ಮಹಾಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ಗುರುವಾರ ಜರಗಿತು.
ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹಾಗೂ ಉಡುಪಿ ಚಿಕ್ಕಮಗಳೂರು ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಸಮ್ಮುಖದಲ್ಲಿ ಆಯ್ಕೆ ಪ್ರಕ್ರಿಯೆಗಳು ನಡೆದವು.
ಸಂಸದರು ಮಾತನಾಡಿ, ಮೋದಿ ಸರ್ಕಾರದ ಯೋಜನೆ ಬಡವರ ಮನೆಗೆ ತಲುಪಬೇಕು. ಅದಕ್ಕೆ ಬೂತ್ ಸಮಿತಿ ಪ್ರತಿದಿನ ಕೆಲಸ ಮಾಡಬೇಕು ಎಂದರು.
ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನ ಕೋಟ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್ ಕುಂದರ್ ನಿರೂಪಿಸಿ, ಪ್ರಧಾನ ಅಜಿತ್ ಶೆಟ್ಟಿ ಕೊತ್ತಾಡಿ ವಂದಿಸಿದರು.
ಬಿಜೆಪಿ ನಿ.ಪೂ.ಅಧ್ಯಕ್ಷ ಶಂಕರ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಜಿಲ್ಲಾ ಕಾರ್‍ಯದರ್ಶಿ ಸದಾನಂದ ಬಳ್ಕೂರು, ಕೋಟ ನಿ.ಪೂ. ಶಕ್ತಿ ಕೇಂದ್ರದ ಅಧ್ಯಕ್ಷ ಅಜಿತ್ ದೇವಾಡಿಗ, ಮಣೂರು ಶಕ್ತಿ ಕೇಂದ್ರ ಅಧ್ಯಕ್ಷ ಮಹೇಶ್ ಹೊಳ್ಳ, ಮಂಡಲ ಕಾರ್‍ಯದರ್ಶಿ ರಾಜೇಶ್ ಶೆಟ್ಟಿ ಮತ್ತಿತರರಿದ್ದರು.

> **ಸಂಘಟನೆ ಇನ್ನಷ್ಟು ಚುರುಕಾಗಬೇಕು**
> ಕೋಟದಲ್ಲಿ ಸಂಘಟನೆ ಇನ್ನಷ್ಟು ಚುರುಕಾಗಬೇಕು. ಪ್ರತಿ ಮತಗಟ್ಟೆಗೆ ಒಬ್ಬ ಪ್ರಮುಖ, ಪ್ರತಿ ಪೇಜ್‌ಗೆ ಒಬ್ಬ ಕಾರ್ಯಕರ್ತ ಇದೇ ನಮ್ಮ ಗುರಿ.
> • ಸುರೇಶ್ ಶೆಟ್ಟಿ ಗೋಪಾಡಿ

ಕೊಡವೂರು ‘ದಿವ್ಯಾಂಗ ರಕ್ಷಣಾ ಸಮಿತಿ’: ಮಾಸಿಕ ಸವಲತ್ತು ವಿತರಣಾ ಕಾರ್ಯಕ್ರಮ



ಉಡುಪಿ: ನಗರಸಭೆ ಮಾಜಿ ಸದಸ್ಯ ವಿಜಯ್ ಕೊಡವೂರು ಅವರ ನೇತೃತ್ವದಲ್ಲಿ ಕೊಡವೂರಿನ ‘ದಿವ್ಯಾಂಗ ರಕ್ಷಣಾ ಸಮಿತಿ’ ವತಿಯಿಂದ ಆಯೋಜಿಸಲಾಗಿದ್ದ ಆರ್ಥಿಕವಾಗಿ ಹಿಂದುಳಿದ ಹಾಗೂ ಅಶಕ್ತ ದಿವ್ಯಾಂಗ ಬಾಂಧವರ ‘ಮಾಸಿಕ ಸವಲತ್ತು ವಿತರಣಾ ಕಾರ್ಯಕ್ರಮ’ವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಪ್ರಮುಖ ಪರಿಕರಗಳ ವಿತರಣೆ

ಜೂನ್ ತಿಂಗಳ ಕಾರ್ಯಕ್ರಮದಲ್ಲಿ ದಿವ್ಯಾಂಗ ಬಾಂಧವರಿಗೆ ಅತ್ಯಗತ್ಯವಾಗಿ ಬೇಕಾಗುವ ದಿನಸಿ ಕಿಟ್‌ಗಳು ಹಾಗೂ ಆರೋಗ್ಯ ರಕ್ಷಣೆಗೆ ಬೇಕಾದ ಔಷಧಗಳು ಹಾಗೂ ಚಲನಶೀಲತೆಗೆ ಸಹಕಾರಿಯಾಗುವ ವೀಲ್ ಚೇರ್ ಸೇರಿದಂತೆ ಪ್ರಮುಖ ಪರಿಕರಗಳನ್ನು ವಿತರಿಸಲಾಯಿತು.

‘ಕೃಷಿಗೆ ವಿಶೇಷ’ ಆದ್ಯತೆ

ಈ ಬಾರಿಯ ಸವಲತ್ತು ವಿತರಣೆಯ ಜೊತೆಗೆ, ದಿವ್ಯಾಂಗರಲ್ಲಿ ಕೃಷಿಯ ಬಗ್ಗೆ ವಿಶೇಷ ಆಸಕ್ತಿ ಮೂಡಿಸುವ ಸದುದ್ದೇಶದಿಂದ ವಿವಿಧ ತರಕಾರಿ ಬೀಜಗಳನ್ನೂ ವಿತರಿಸಲಾಯಿತು.

ವಿಶೇಷ ಪ್ರಯತ್ನ

ಇದು ಅವರಲ್ಲಿ ಸ್ವಾವಲಂಬನೆ ಹಾಗೂ ಹಸಿರು ಬೆಳೆಸುವ ನಿಟ್ಟಿನಲ್ಲಿ ಸಮಿತಿ ಕೈಗೊಂಡ ಒಂದು ವಿಶೇಷ ಪ್ರಯತ್ನವಾಗಿದೆ.

> **ಶೈಕ್ಷಣಿಕ ದತ್ತು ಸ್ವೀಕಾರ**
> ಆರ್ಥಿಕವಾಗಿ ತೀರಾ ಹಿಂದುಳಿದ ವಿದ್ಯಾರ್ಥಿಯೊಬ್ಬರ ಉಜ್ವಲ ಭವಿಷ್ಯಕ್ಕಾಗಿ, ಅವರ ವಿದ್ಯಾಭ್ಯಾಸದ ಸಂಪೂರ್ಣ ಖರ್ಚು–ವೆಚ್ಚಗಳನ್ನು ಭರಿಸುವ ‘ಶೈಕ್ಷಣಿಕ ದತ್ತು ಸ್ವೀಕಾರ’ ಕಾರ್ಯಕ್ರಮ ವನ್ನು ನೆರವೇರಿಸಲಾಯಿತು.

ಕುಂದಾಪುರ ಪತ್ರಕರ್ತರ ಸಂಘದಿಂದ ಜನಾರ್ದನ ಮರವಂತೆಗೆ ನುಡಿನಮನ



ಕುಂದಾಪುರ: ಪಂಚಾಯತ್ ರಾಜ್ ತಜ್ಞ, ಹಿರಿಯ ಪತ್ರಕರ್ತ ಎಸ್. ಜನಾರ್ದನ ಮರವಂತೆ ಅವರಿಗೆ ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಸಂಘದ ಕಚೇರಿಯಲ್ಲಿ ಶುಕ್ರವಾರ ಶ್ರದ್ಧಾಂಜಲಿ ಸಭೆ ಹಾಗೂ ನುಡಿ ನಮನ ಕಾರ್ಯಕ್ರಮ ನಡೆಯಿತು.
ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಜ ರಾಯಪ್ಪನಮಠ ಮಾತನಾಡಿದರು. ನಮ್ಮ ಸಂಘದಿಂದ ಕೆಲ ವರ್ಷದ ಹಿಂದೆ ಅವರಿಗೆ ಗೌರವ ಸಲ್ಲಿಸಿರುವುದನ್ನು ಸ್ಮರಿಸಿದರು.
ಪತ್ರಕರ್ತ ಪ್ರಶಾಂತ ಪಾದೆ ನುಡಿ ನಮನ ಸಲ್ಲಿಸಿದರು. ಸಂಘದ ಪದಾಧಿಕಾರಿಗಳು, ಪತ್ರಕರ್ತರು ನುಡಿನಮನ ಸಲ್ಲಿಸಿದರು. ಜಿಲ್ಲಾ ಸಂಘದ ಕಾರ್ಯಕಾರಿ ಮಂಡಳಿ ಸದಸ್ಯ ಚಂದ್ರಮ ತಲ್ಲೂರು, ತಾಲೂಕು ಸಂಘದ ಕೋಶಾಧಿಕಾರಿ ಶ್ರೀಕಾಂತ್ ಹೆಮ್ಮಾಡಿ, ಕಸಾಪ ತಾಲೂಕು ಸಂಘದ ಗೌರವ ಕಾರ್ಯದರ್ಶಿ ಅಕ್ಷತಾ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.
ಜಿಲ್ಲಾಸಂಘದಕಾರ್‍ಯಕಾರಿಮಂಡಳಿಸದಸ್ಯ ಬಿ. ರಾಘವೇಂದ್ರ ಪೈ ಸ್ವಾಗತಿಸಿದರು.

> **ಪರಿಣತಿ ಪಡೆದಿದ್ದರು**
> ಜನಾರ್ದನ ಮರವಂತೆ ಅವರು ನಮ್ಮ ಕುಂದಾಪುರ ಸಂಘದ ಹಿರಿಯ ಸದಸ್ಯರಾಗಿದ್ದು, ನಮಗೆ ಎಲ್ಲ ರೀತಿಯಿಂದಲೂ ಮಾರ್ಗದರ್ಶನ ನೀಡುತ್ತಿದ್ದರು. ಅನೇಕ ವಿಷಯಗಳಲ್ಲಿ ಪರಿಣತಿಯನ್ನು ಪಡೆದಿದ್ದರು
> • ನಾಗರಾಜ ರಾಯಪ್ಪನಮಠ

ಕೋಟತಟ್ಟು ಗ್ರಾ.ಪಂ. ಜನಸಂಪರ್ಕ ಸಭೆ: ವಿವಿಧ ಬೇಡಿಕೆ ಮುಂದಿಟ್ಟ ಸಾರ್ವಜನಿಕರು



ಕೋಟ: ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅಧ್ಯಕ್ಷತೆಯಲ್ಲಿ ಕೋಟತಟ್ಟು ಗ್ರಾ.ಪಂ. ವ್ಯಾಪ್ತಿಯ ಜನಸಂಪರ್ಕ ಸಭೆ ಕೋಟತಟ್ಟು ಕಾರಂತ ಕಲಾಭವನದಲ್ಲಿ ಜರಗಿತು. ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಜನಸಂಪರ್ಕ ಸಭೆಗಳು ಜನರನ್ನು ಜನಪ್ರತಿನಿಧಿಗಳು, ಅಧಿಕಾರಿಗಳ ಒಗ್ಗೂಡಿಸುವ ವೇದಿಕೆ. ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸಕಾಲಕ್ಕೆ ಸ್ಪಂದಿಸಬೇಕು.

ಸಮಸ್ಯೆಗಳಿಗೆ ಪರಿಹಾರ ನೀಡಿ

ಕೋಟದಿಂದ ಸಾಲಿಗ್ರಾಮ ತನಕ ರಾಷ್ಟ್ರೀಯ ಹೆದ್ದಾರಿಯಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳಿವೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಜನಸಂಚಾರವಿದೆ. ಆದರೆ ಇಲ್ಲಿ ಸರ್ವಿಸ್ ರಸ್ತೆ ಇಲ್ಲದ ಕಾರಣ ಅಪಘಾತಗಳು ಹೆಚ್ಚುತ್ತಿದೆ. ಆದ್ದರಿಂದ ಈ ಭಾಗಕ್ಕೆ ಸರ್ವಿಸ್ ರಸ್ತೆ ನಿರ್ಮಾಣವಾಗಬೇಕು ಎಂದು ಜಿ.ಪಂ. ಮಾಜಿ ಸದಸ್ಯ ರಾಘವೇಂದ್ರ ಕಾಂಚನ್ ಬಾರಿಕೆರೆ ಮನವಿ ಮಾಡಿದರು. 9–11 ಸಮಸ್ಯೆ ಬಗ್ಗೆ ಪ್ರಶಾಂತ್ ಪಡುಕರೆ ಗಮನಸೆಳೆದರು. ಅಕ್ರಮ ರೆಸಾರ್ಟ್‌ಗಳ ಕಾರ್‍ಯನಿರ್ವಹಣೆ ಬಗ್ಗೆ ಗಮನ ಹರಿಸುವಂತೆ ಹಾಗೂ ಪಡುಕರೆ ಗ್ರಾಮ ಆಡಳಿತಾಧಿಕಾರಿ ಕಚೇರಿ ನಿರ್ಮಿಸುವಂತೆ ರವೀಂದ್ರ ತಿಂಗಳಾಯ ಮನವಿ ಮಾಡಿದರು.
ಮತ್ಸ್ಯಾಶ್ರಯ ಯೋಜನೆ ಕೊನೆಕಂತಿನ ಹಣ ಪಾವತಿಯಾಗದ ಬಗ್ಗೆ ಶೇಖರ ಮರಕಾಲ ತಿಳಿಸಿದರು. ದಾನಗುಂದು ಅಂಗನವಾಡಿಗೆ ಕೇಂದ್ರಕ್ಕೆ ತೆರಳುವ ರಸ್ತೆಗೆ ಚರಂಡಿ ವ್ಯವಸ್ಥೆ ಮಾಡುವಂತೆ ಅಂಗನವಾಡಿ ಶಿಕ್ಷಕಿ ಉಷಾ ಮನವಿ ಮಾಡಿದರು. ರಸ್ತೆ ನಿರ್ಮಾಣ, ಚರಂಡಿ ಸಮಸ್ಯೆ ಸೇರಿದಂತೆ ವಿವಿಧ ಬೇಡಿಕೆ ವ್ಯಕ್ತವಾಯಿತು. ಕೆಲವೊಂದು ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ ನೀಡಿದರು. ಬಾಕಿ ಉಳಿದವುಗಳಿಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.
ಬ್ರಹ್ಮಾವರ ತಹಶಿಲ್ದಾರರಾದ ಶ್ರೀಕಾಂತ್ ಹೆಗ್ಡೆ, ಗ್ರಾ.ಪಂ. ಆಡಳಿತಾಧಿಕಾರಿ ಪ್ರತಾಪ್ ಶೆಟ್ಟಿ, ಮಹೇಶ್, ಪಿಡಿಒ ರವೀಂದ್ರ ರಾವ್ ಮತ್ತಿತರರು ಉಪಸ್ಥಿತರಿದ್ದರು.

ದೇವಾಲಯಗಳು ಸಮಾಜದ ಸಂಸ್ಕೃತಿ ಉಳಿಸುವ ಕೇಂದ್ರಗಳು: ಶಾಸಕ ಗುರ್ಮೆ



ಹಿರಿಯಡ್ಕ: ದೇವಾಲಯಗಳು ಕೇವಲ ಪೂಜಾ ಕೇಂದ್ರಗಳಲ್ಲ, ಅವು ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಸಾಮಾಜಿಕ ಐಕ್ಯತೆಯ ಪ್ರತೀಕಗಳಾಗಿವೆ ಎಂದು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹೇಳಿದ್ದಾರೆ.
ಅವರು ಹೀರೆಬೆಟ್ಟು ಶ್ರೀ ಮಹಾಲಿಂಗೇಶ್ವರ ದೇವರ ಜೀರ್ಣೋದ್ಧಾರ ಸಮಿತಿಯಿಂದ ನಡೆದ ದೇವಾಲಯದ ಜೀರ್ಣೋದ್ಧಾರ ಸಂಬಂಧಿತ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದರು. ದೇವಾಲಯ ಅಭಿವೃದ್ಧಿಗೆ ಅಗತ್ಯವಿರುವ ಸಹಕಾರ ನೀಡುವುದಾಗಿ ಭರವಸೆ ನೀಡಿದರು.
ದೇವಾಲಯ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶ್ರೀನಿಧಿ ಹೆಗ್ಡೆ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ನಾಯಕ್ ಸೇರಿದಂತೆ ಪ್ರಮುಖ ಪದಾಧಿಕಾರಿಗಳಾದ ಸೀತಾರಾಮ್ ಭಟ್, ಖಜಾಂಚಿ ಚಂದ್ರಶೇಖರ್ ನಾಯಕ್, ಜಯಪ್ರಕಾಶ್ ನಾಯಕ್, ಪಾಂಡುರಂಗ ಲಗ್ವಾಂಕರ್ , ಮಂದಾರ ಮೋಘೆ, ಶಿಲ್ಪಿ ಕುಪ್ಪು ಸ್ವಾಮಿ, ಪಾಂಡುರಂಗ ಲಾಗ್ವಂಕರ್, ಶ್ರೀಧರ ಭಟ್, ರಾಜಾರಾಮ್ ಭಟ್, ಹರೀಶ್ ಶೆಟ್ಟಿ, ಕಾಳಿದಾಸ್ ಭಂಡಾರಿ,ಕೃಷ್ಣ ಭಂಡಾರಿ, ಮಹೇಶ್ ಭಟ್, ಅಶೋಕ್ ನಾಯಕ್, ಶ್ರೀಧರ ನಾಯ್ಕ್, ಹರ್ಷಿತ್ ಆಚಾರ್ಯ, ರಮೇಶ್ ನಾಯಕ್ ಕಾಳಬೆಟ್ಟು, ವಾಸುದೇವ ನಾಯಕ್, ಸತೀಶ್ ಶೆಟ್ಟಿ, ಬಾಲಕೃಷ್ಣ ಭಟ್, ಮಹೇಶ್ ಪುತ್ರನ್, ಸುಧೀರ್ ಪೂಜಾರಿ, ಭಾಸ್ಕರ್ ಕುಲಾಲ್ ಮತ್ತಿತರರಿದ್ದರು.

> **ಸಹಕಾರ ಅಗತ್ಯ**
> ಶತಮಾನಗಳ ಇತಿಹಾಸ ಹೊಂದಿರುವ ದೇವಾಲಯಗಳ ಜೀರ್ಣೋದ್ಧಾರ ಕೇವಲ ಕಟ್ಟಡದ ನವೀಕರಣವಲ್ಲ, ಪೂರ್ವಜರು ಕಟ್ಟಿ ಕೊಟ್ಟ ಸಂಸ್ಕೃತಿ–ಧಾರ್ಮಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಕೊಡುವ ಮಹತ್ವದ ಕಾರ್ಯವಾಗಿದೆ. ಇಂತಹ ಕಾರ್ಯ ಗಳಲ್ಲಿ ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು.
> • ಗುರ್ಮೆ ಸುರೇಶ್ ಶೆಟ್ಟಿ



ಮಾಜಿ ನಗರಸಭಾ ಸದಸ್ಯರು, ದಿವ್ಯಾಂಗ ರಕ್ಷಣಾ ಸಮಿತಿ ಸಂಚಾಲಕರಾದ ವಿಜಯ ಕೊಡವೂರು ಅವರು ಉಡುಪಿ ನಗರ ವ್ಯಾಪ್ತಿಯಲ್ಲಿರುವ ಸುಮಾರು 4,000 ವಿಕಲಚೇತನರಿಗೆ ಸರ್ಕಾರದ ಸವಲತ್ತು, ಅನುದಾನ, ಧನಸಹಾಯ ಸುಲಭವಾಗಿ ತಲುಪುವಂತಾಗಲು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳಿಗೆ ಅಧಿಕೃತವಾಗಿ ಮನವಿ ಪತ್ರ ಸಲ್ಲಿಸಿದರು.



ಕಾಪು ವಿಧಾನಸಭಾ ಹೆಜಮಾಡಿ ಗ್ರಾ.ಪಂ. ವ್ಯಾಪ್ತಿಯ ಹೆಜಮಾಡಿ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣಕ್ಕೆ 20 ಲಕ್ಷ ರೂಪಾಯಿ ಅನುದಾನ ಮಂಜೂರಾಗಿ ಕಾಮಗಾರಿ ಪೂರ್ಣಗೊಂಡಿದ್ದು, ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಶುಕ್ರವಾರ ಉದ್ಘಾಟಿಸಿದರು. ಮಾಜಿ ಅಧ್ಯಕ್ಷ ರೇಷ್ಮಾ ಮೆಂಡನ್, ಮಾಜಿ ಸದಸ್ಯರಾದ ಜನಾರ್ದನ ಕೋಟ್ಯಾನ್, ಪಾಂಡುರಂಗ, ಬಬಿತಾ ಪುರುಷೋತ್ತಮ, ಶರಣ್ ಕುಮಾರ್ ಮಟ್ಟು, ಸುಜಾತಾ, ಪ್ರಾಣೇಶ್ ಹೆಜಮಾಡಿ, ಪವಿತ್ರ ಗಿರೀಶ್ ಮತ್ತಿತರರಿದ್ದರು.

ವಾಹನ ಸವಾರರ ಗೋಳು ಕೇಳೋರು ಯಾರು | ಅಧಿಕಾರಿಗಳ ದಿವ್ಯ ಮೌನಕ್ಕೆ ಬಿಜೆಪಿಯ ಸುರೇಶ್ ಶೆಟ್ಟಿ ಆಕ್ರೋಶ

ಕಾನೂನು ಬಾಹಿರ ರಸ್ತೆ ಅಗೆತದಿಂದ ಶಿವಪುರ –ಮುನಿಯಾಲು ಭಾಗದ ಜನರಿಗೆ ಸಂಕಷ್ಟ

ಕಾರ್ಕಳ: ಮುನಿಯಾಲು–ಪಡುಕುಡೂರು–ಶಿವಪುರ ರಸ್ತೆಯ ಶಿವಪುರ ಮತ್ತು ಮುನಿಯಾಲು ಭಾಗದ ಜನರಿಗೆ ಅತಿ ಪ್ರಮುಖ ಸಂಪರ್ಕ ರಸ್ತೆಯಾಗಿತ್ತು ಲೋಕೋಪಯೋಗಿ ಇಲಾಖೆ ಅಧೀನದಲ್ಲಿದ್ದು ಈ ರಸ್ತೆಯನ್ನು ಕಳೆದ ಬೇಸಿಗೆ ಕಾಲದಲ್ಲಿ ಯಾವುದೇ ಟೆಂಡರ್ ಪಡೆಯದೆ ಏಕಾಏಕಿ ಕಾರ್ಕಳದ ಕಾಂಗ್ರೆಸ್ ಮುಖಂಡ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಮುನಿಯಾಲು ಉದಯ ಕುಮಾರ್ ಶೆಟ್ಟಿ ಅವರು ಕಾನೂನು ಬಾಹಿರ ಇಲಾಖೆಯ ಅನುಮತಿ ಇಲ್ಲದೆ ತನ್ನ ಯಂತ್ರೋಪಕರಣ ಮತ್ತು ವಾಹನ ಉಪಯೋಗಿಸಿ ರಸ್ತೆ ಅಗೆದು ಬಿಟ್ಟಿರುವುದರಿಂದ ಇದೀಗ ಮಳೆಗಾಲ ಆರಂಭವಾಗಿ ರಸ್ತೆಗಳಲ್ಲಿ ದೊಡ್ಡ ದೊಡ್ಡ ಗುಂಡಿಗಳು ನಿರ್ಮಾಣವಾಗಿದ್ದು ವಾಹನ ಸವಾರರು ವಾಹನ ಚಲಾಯಿಸಲಾಗದೆ ಪರದಾಡುತ್ತಿದ್ದಾರೆ ಎಂದು ಕಾರ್ಕಳ ಮಂಡಲ ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿ ಸುರೇಶ್ ಶೆಟ್ಟಿ ಶಿವಪುರ ತಿಳಿಸಿದ್ದಾರೆ
ಯಾರೋ ಮಾಡಿದ ಹೇಯ ಕೃತ್ಯಕ್ಕೆ ಈ ಭಾಗದ ಜನರು ಸಂಕಷ್ಟ ಅನುಭವಿಸುವಂತಾಗಿದೆ. ಈ ರಸ್ತೆಯು ಸಾವಿರಾರು ವಾಹನಗಳು ಸಂಚರಿಸುವ ಪ್ರಮುಖ ರಸ್ತೆಯಾಗಿದ್ದು ಇಂತಹ ಪ್ರಮುಖ ರಸ್ತೆಯನ್ನು ಅಗೆದು ಹಾಳು ಮಾಡಿದರೂ ರಸ್ತೆ ಅಗೆದವರ ಮೇಲೆ ಕಾನೂನು ಕ್ರಮ ಆಗದೇ ಇರುವುದು ಆಶ್ಚರ್ಯ ತಂದಿದೆ. ಇದರ ಹಿಂದೆ ಯಾರ ಕೈವಾಡ ಇದೆ.? ಅಧಿಕಾರಿಗಳ ಮೌನ ಏನನ್ನು ಹೇಳುತ್ತಿದೆ.? ರಾಜ್ಯದಲ್ಲಿ ತನ್ನ ಪಕ್ಷದ ಸರ್ಕಾರ ಇದೆ ಎಂಬ ದರ್ಪದಲ್ಲಿ ರಸ್ತೆ ಅಗೆತ ಮಾಡಿರುವುದು ಎಷ್ಟು ಸರಿ. ಕಾರ್ಕಳ ಕ್ಷೇತ್ರದಲ್ಲಿ ಬೇರೆ ಯಾವುದೇ ಅಭಿವೃದ್ಧಿ ಚಟುವಟಿಕೆಗಳು ನಡೆದರೂ ಅದು ನಾನೆ ಮಾಡಿದ್ದು ಎಂದು ಪೋಸ್ ಕೊಡುವ ಉದಯ ಶೆಟ್ಟಿ ಅಕ್ರಮವಾಗಿ ತನ್ನ ಯಂತ್ರಗಳಿಂದ ಸಾರ್ವಜನಿಕ ರಸ್ತೆ ಅಗೆದು ಸಾರ್ವಜನಿಕರು ಅನುಭವಿಸುವ ತೊಂದರೆ ಕಣ್ಣೆದುರು ಕಂಡರೂ ಕಣ್ಣಿಗೂ ಕಾಣದಂತೆ ವರ್ತಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.
ಕಾನೂನುಬಾಹಿರವಾಗಿ ರಸ್ತೆ ಅಗಿದಿರುವ ಬಗ್ಗೆ ಶಾಸಕರು ಹಾಗೂ ಸ್ಥಳೀಯರೂ ಇಲಾಖೆಗೆ ದೂರು ಕೊಟ್ಟಿದ್ದರೂ ಯಾವುದೇ ಕ್ರಮವಾಗದೇ ಇರುವುದು ಸ್ಥಳೀಯ ಸಾರ್ವಜನಿಕರಲ್ಲಿ ಅಧಿಕಾರಿಗಳ ನಡೆಯ ಮೇಲೆ ಸಂಶಯ ವ್ಯಕ್ತವಾಗುತ್ತದೆ. ಇದೇ ಜಾಗದಲ್ಲಿ ಬೇರೆ ಯಾರಾದರೂ ಒಂದು ಇಂಚು ರಸ್ತೆ ಅಗೆದಿದ್ದರೂ ಕ್ರಮ ಕೈಗೊಳ್ಳುವ ಇಲಾಖೆ ಇಲ್ಲಿ ಇಷ್ಟು ಅಕ್ರಮ ಕೆಲಸ ಮಾಡಿದ್ದರೂ ಮೌನ ವಹಿಸಿರುವುದು ಯಾಕೆ? ಈ ಕೂಡಲೇ ಅಧಿಕಾರಿಗಳು ಇದರ ಕುರಿತು ಗಮನ ಹರಿಸಿ ರಸ್ತೆ ಸಂಚಾರ ಯೋಗ್ಯ ರಸ್ತೆಯನ್ನಾಗಿಸಬೇಕು. ಸುಮಾರು ಒಂದು ಕಿಲೋಮೀಟರ್ ರಸ್ತೆಯಲ್ಲಿ ವಾಹನ ಸಂಚಾರ ಮಾಡುವುದು ಕಷ್ಟವಾಗಿದೆ ಇಲ್ಲಿಯ ಜನರು ಪರ್ಯಾಯ ಮಾರ್ಗ ಹುಡುಕುವ ಅನಿವಾರ್ಯತೆ ಆಗಿದೆ ಅದರಲ್ಲೂ ದ್ವಿಚಕ್ರ ವಾಹನದವರು ಸಂಚರಿಸಲು ಸಾಧ್ಯವೇ ಇಲ್ಲ ಎಂದರು.



> **ರಸ್ತೆ ಸರಿಪಡಿಸದಿದ್ದರೆ ಪ್ರತಿಭಟನೆಯ ಎಚ್ಚರಿಕೆ**
> ಉದಯ ಶೆಟ್ಟಿ ಅವರಿಗೆ ಜನರ ಕುರಿತು ಕಾಳಜಿ ಇದ್ದರೆ ತಾನು ಮಾಡಿದ ತಪ್ಪನ್ನು ಅರಿತುಕೊಂಡು ಈ ಭಾಗದ ಜನರಲ್ಲಿ ಕ್ಷಮೆಯಾಚಿಸಿ ಇಲಾಖೆಗೆ ದಂಡ ಕಟ್ಟಬೇಕು. ನಂತರ ಇಲಾಖೆ ಈ ರಸ್ತೆಯನ್ನು ಸಾರ್ವಜನಿಕ ಸುಗಮ ಸಂಚಾರಕ್ಕೆ ಸಿದ್ಧ ಮಾಡಿ ಕೊಡಬೇಕಾಗಿ ಈ ಭಾಗದ ಜನತೆ ಪರ ನಮ್ಮ ಆಗ್ರಹ. ಇದು ತಪ್ಪಿದಲ್ಲಿ ಈ ಭಾಗದ ಜನತೆ ಅದೇ ರಸ್ತೆ ಯಲ್ಲಿ ಪ್ರತಿಭಟನೆ ನಡೆಸಲಾ ಗುವುದೆಂದು ಸುರೇಶ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.